ಶನಿವಾರ, ಮೇ 3, 2025 | ₹ 7.00

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

prajavani.net prajavani prajavani prajavani

500ರ ಗಡಿ ದಾಟಿದ ಸಾಯಿ

ಗುಜರಾತ್ ಟೈಟನ್ಸ್ ತಂಡದ ಸಾಯಿ ಸುದರ್ಶನ್ ಅವರು ಈ ಸಲದ ಐಪಿಎಲ್ ಟೂರ್ನಿಯಲ್ಲಿ 500 ರನ್ ಗಳಿಸಿದ ಮೊದಲ ಬ್ಯಾಟರ್ ಆದರು. ಅಹಮದಾಬಾದಿನಲ್ಲಿ ಶುಕ್ರವಾರ ನಡೆದ ಸನ್‌ರೈಸರ್ಸ್ ಹೈದರಾಬಾದ್ ಎದುರಿನ ಪಂದ್ಯದಲ್ಲಿ 48 ರನ್ ಗಳಿಸಿದರು.

10	504	5	82
ಪಂದ್ಯ	ರನ್	ಅರ್ಧಶತಕ	ಶ್ರೇಷ್ಠ

SHOWROOMS: KARNATAKA: BENGALURU: RENAULT **BANNERGHATTA ROAD** Ph: 8546820204, RENAULT **MYSORE ROAD** Ph: 8527240549 & 7026666922, RENAULT **SILK BOARD** Ph: 8527240654, RENAULT **WHITEFIELD** Ph: 8527240685, RENAULT **JP NAGAR** Ph: 8527240626 & 7353760555, RENAULT **KALYAN NAGAR** Ph: 8527236137 & 8722866664, RENAULT **SARJAPURA** Ph: 8448481374, 8746811000 & 8496915111, RENAULT **YELAHANKA** Ph: 8527234592, 9071767600 & 8884498993, RENAULT **YESWANTHPUR** Ph: 9311832962 & 9311832968. RENAULT **TUMKUR** Ph: 7353764337.

ಸೆಪ್ಟೆಂಬರ್‌ಗೆ ಸಭಾಧ್ಯಕ್ಷರ ರಾಷ್ಟ್ರೀಯ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘23 ವರ್ಷಗಳ ನಂತರ ಕರ್ನಾಟಕದಲ್ಲಿ ಅಖಿಲ ಭಾರತ ಸಭಾಧ್ಯಕ್ಷರ ಸಮಾವೇಶ ನಡೆಸುವ ಅವಕಾಶ ಒದಗಿ ಬಂದಿದೆ’ ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕರ್ನಾಟಕದಲ್ಲಿ ಸಭಾಧ್ಯಕ್ಷರ ಸಮಾವೇಶವನ್ನು ನಡೆಸಲು ಅವಕಾಶ ನೀಡಿ ಎಂದು ಲೋಕಸಭಾ ಸ್ಪೀಕರ್‌ಗೆ ಹಲವು ಬಾರಿ ಪತ್ರ ಬರೆದಿದ್ದೆವು. ಅವರು ಈಗ ಅನುಮತಿ ನೀಡಿದ್ದಾರೆ’ ಎಂದರು.

‘ಲೋಕಸಭಾ ಸ್ಪೀಕರ್ ಮತ್ತು ಡೆಪ್ಯುಟಿ ಸ್ಪೀಕರ್, ಎಲ್ಲ ರಾಜ್ಯಗಳ ವಿಧಾನ ಸಭಾಧ್ಯಕ್ಷರು, ಉಪ ಸಭಾಧ್ಯಕ್ಷರು, ಕಾರ್ಯದರ್ಶಿಗಳು ಸೇರಿ 500ಕ್ಕೂ ಹೆಚ್ಚು ಮಂದಿ ಸಮಾವೇಶದಲ್ಲಿ ಭಾಗಿಯಾಗಲಿದ್ದಾರೆ’ ಎಂದು ತಿಳಿಸಿದರು.

‘ಬೆಂಗಳೂರಿನಲ್ಲೇ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಸ್ಥಳ ಇನ್ನಷ್ಟೇ ನಿಗದಿ ಆಗಬೇಕು. ಸೆಪ್ಟೆಂಬರ್ 8ರಿಂದ 11ರವರೆಗೆ ನಾಲ್ಕು ದಿನ ಸಮಾವೇಶ ನಡೆಯಲಿದೆ. 8ರಂದು ಎಲ್ಲ ಪ್ರತಿನಿಧಿಗಳು ಇಲ್ಲಿಗೆ ಬರಲಿದ್ದಾರೆ. 9 ಮತ್ತು 10ರಂದು ವೇದಿಕೆ ಕಾರ್ಯಕ್ರಮಗಳು ನಡೆಯಲಿವೆ. 11ರಂದು ಪ್ರತಿನಿಧಿಗಳನ್ನು ಪ್ರೇಕ್ಷಣೀಯ ಸ್ಥಳಕ್ಕೆ ಕರೆದೊಯ್ಯಲು ನಿರ್ಧರಿಸಲಾಗಿದೆ’ ಎಂದು ಮಾಹಿತಿ ನೀಡಿದರು.

ಭಾವಚಿತ್ರ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಂಕರಾಚಾರ್ಯರ ಮತ್ತು ರಾಮಾನುಜಾಚಾರ್ಯರ ಜಯಂತಿಯ ಅಂಗವಾಗಿ ಗಿರಿನಗರ ವಿಪ್ರ ಬಳಗವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಶಂಕರಾಚಾರ್ಯ ಹಾಗೂ ರಾಮಾನುಜಾಚಾರ್ಯರ ಭಾವಚಿತ್ರಗಳನ್ನು ಅನಾವರಣ ಮಾಡಿತು.

ಇದೇ ವೇಳೆ ಸಿಹಿ ವಿತರಿಸುವ ಮೂಲಕ ಶಂಕರಾಚಾರ್ಯರ ಹಾಗೂ ರಾಮಾನುಜಾಚಾರ್ಯರ ಜಯಂತಿಯನ್ನು ಆಚರಿಸಲಾಯಿತು. ಬಳಗದ ಶೇಷಾದ್ರಿ ಅಯ್ಯಂಗಾರ್, ರವಿಶಂಕರ್ ಮೋಹನ್, ಸುಧೀಂದ್ರ ರಾವ್, ಪುಷ್ಪಾ ರಾವ್, ರಾಮಕೃಷ್ಣ ಮತ್ತು ಪಾರ್ಥಸಾರಥಿ ಅಯ್ಯಂಗಾರ್ ಉಪಸ್ಥಿತರಿದ್ದರು.



ಶೇಕಡ 20ರಿಂದ 45ರಷ್ಟು ಹೆಚ್ಚಳ: ಸಾರ್ವಜನಿಕರ ಆಕ್ರೋಶ

ಬಿಡಿಎ ಆಸ್ತಿ ತೆರಿಗೆ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ತನ್ನ ವ್ಯಾಪ್ತಿಯಲ್ಲಿನ ಆಸ್ತಿಗಳ ಮೇಲಿನ ತೆರಿಗೆಯನ್ನು ಪರಿಷ್ಕರಿಸಿದ್ದು, ಶೇಕಡ 20ರಿಂದ 45ರಷ್ಟು ಹೆಚ್ಚಿಸಿದೆ. ವಿವಿಧ ಬಡಾವಣೆಗಳ ನಿವಾಸಿಗಳ ಸಂಘಗಳು ತೆರಿಗೆ ಹೆಚ್ಚಳದ ಕ್ರಮಕ್ಕೆ ವಿರೋಧ ವ್ಯಕ್ತಪಡಿಸಿವೆ.

ಪ್ರಾಧಿಕಾರವು ಅಭಿವೃದ್ಧಿ ಪಡಿಸಿರುವ ಅರ್ಕಾವತಿ, ಬನಶಂಕರಿ, ನಾಡಪ್ರಭು ಕೆಂಪೇಗೌಡ ಸೇರಿ 9 ಬಡಾವಣೆಗಳು, ಬಿಡಿಎ ಅನುಮೋದಿತ ಬಡಾವಣೆ, ಹಂಚಿಕೆ ಮಾಡಿರುವ ವಸತಿ ಸಮುಚ್ಚಯ ಸೇರಿದಂತೆ ಸುಮಾರು 1.22 ಲಕ್ಷಕ್ಕೂ ಹೆಚ್ಚು ಜನರಿಗೆ ತೆರಿಗೆ ಏರಿಕೆಯ ಬಿಸಿ ತಟ್ಟಲಿದೆ.

ಪ್ರತಿ ವರ್ಷ ತನ್ನ ವ್ಯಾಪ್ತಿಯ ಸ್ವತ್ತುಗಳಿಂದ ಸುಮಾರು ₹55 ರಿಂದ ₹60 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಬಿಡಿಎಗೆ, ಹಲವು ವರ್ಷಗಳಿಂದ ಸುಮಾರು ₹40 ಕೋಟಿ ಪಾವತಿಯಾಗದೆ ಬಾಕಿಯಿದೆ.

ಪರಿಷ್ಕೃತ ತೆರಿಗೆಯ ದರಗಳನ್ನು ಏಪ್ರಿಲ್ 28ರಂದು ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. 2025–26ನೇ ಸಾಲಿನಲ್ಲಿ ಸ್ವತ್ತಿನ ಮಾರ್ಗಸೂಚಿ ದರದ ಆಧಾರದ ಮೇಲೆ ಆಸ್ತಿ ತೆರಿಗೆ ನಿರ್ಧಾರವಾಗುತ್ತದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

‘ಆಸ್ತಿ ತೆರಿಗೆಯನ್ನು ಸ್ವತ್ತಿನ ವಾರ್ಷಿಕ ಮೌಲ್ಯದ ಮೇಲೆ ಲೆಕ್ಕಾಚಾರ ಮಾಡಿ ನಿಗದಿ ಮಾಡಲಾಗುತ್ತದೆ. ಆಸ್ತಿ ಇರುವ ಸ್ಥಳ, ವಿಸ್ತೀರ್ಣ, ಆಸ್ತಿಯಿರುವ ಪ್ರದೇಶದಲ್ಲಿ ಮಾಡಿರಬಹುದಾದ ಯಾವುದೇ ಸುಧಾರಣೆ, ಮಾರ್ಪಾಡುಗಳ ಆಧಾರದ ಮೇಲೆ ತೆರಿಗೆ ನಿಗದಿ ಪಡಿಸಲಾಗುತ್ತದೆ.

ಆದರೆ, ಬಿಡಿಎ ಅಭಿವೃದ್ಧಿ ಪಡಿಸಿರುವ ಹಲವು ಬಡಾವಣೆಗಳಲ್ಲಿ ಮೂಲಸೌಕರ್ಯವಿಲ್ಲ. ಅವೈಜ್ಞಾನಿಕವಾಗಿ ಆಸ್ತಿ ತೆರಿಗೆ ಹೆಚ್ಚಳ ಮಾಡಲಾಗಿದೆ’ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಬಡಾವಣೆಗಳಲ್ಲಿ ಮೂಲಸೌಕರ್ಯ ಕಾಮಗಾರಿ ಪೂರ್ಣಗೊಳಿಸುವಲ್ಲಿ ವಿಳಂಬ ಮಾಡುತ್ತಿದೆ. ಇದರಿಂದಾಗಿ ಮನೆ ನಿರ್ಮಾಣ ಕಷ್ಟವಾಗಿದೆ. ಸಾಲ ಮಾಡಿ ನಿವೇಶನ ಖರೀದಿ ಮಾಡಲಾಗಿದೆ. ಇದರ ನಡುವೆ ಆಸ್ತಿ ತೆರಿಗೆ ಹೆಚ್ಚಳ ಮಾಡಲಾಗಿದೆ’ ಎಂದು ವಿವಿಧ ಬಡಾವಣೆಗಳ ಆಸ್ತಿ ಮಾಲೀಕರು ಬೇಸರ ವ್ಯಕ್ತಪಡಿಸಿದರು.

‘ತೆರಿಗೆ ಪಡೆದ ಮೇಲೆ ರಸ್ತೆ, ಒಳಚರಂಡಿ, ನೀರು, ಉದ್ಯಾನ, ವಿದ್ಯುತ್, ಬೀದಿ ದೀಪ ಹಾಗೂ ಇತರೆ ಸೌಕರ್ಯ ಒದಗಿಸಬೇಕು. ಆದರೆ, ನಾಡಪ್ರಭು ಕೆಂಪೇಗೌಡ ಬಡಾವಣೆ (ಎನ್‌ಕೆಪಿಎಲ್)ಯಲ್ಲಿ ಇನ್ನೂ ಕಾಮಗಾರಿಗಳು ನಡೆಯುತ್ತಿವೆ. ಬಡಾವಣೆಯ ವ್ಯಾಪ್ತಿಯ ಆಸ್ತಿಗೆ ಶೇಕಡ 9 ರಿಂದ 50ರಷ್ಟು ತೆರಿಗೆ ಹೆಚ್ಚಳ ಮಾಡಿರುವುದು ಸರಿಯಲ್ಲ. ಮೊದಲು ಪೂರ್ಣ ಪ್ರಮಾಣದ ಸೌಕರ್ಯ ಒದಗಿಸಲಿ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆ ಆಗ್ರಹಿಸಿದೆ.

ಸರ್.ಎಂ.ವಿಶ್ವೇಶ್ವರಯ್ಯ ಹಾಗೂ ಅರ್ಕಾವತಿ ಬಡಾವಣೆಯ ನಿವೇಶನಗಳಿಗೆ ಆಸ್ತಿ ತೆರಿಗೆಯಲ್ಲಿ ಹೆಚ್ಚಳವಾಗಿಲ್ಲ. ಆದರೆ, ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ನಿವೇಶನಗಳ ತೆರಿಗೆ ಹೆಚ್ಚಳವಾಗಿದೆ.

‘ಆಸ್ತಿ ತೆರಿಗೆಯನ್ನು ಹೆಚ್ಚಿಸುವ ಮೊದಲು ಬಿಡಿಎ ಮೂಲಸೌಕರ್ಯಗಳನ್ನು ಒದಗಿಸಬೇಕು. ಮಾರ್ಗಸೂಚಿ ದರದ ಆಧಾರದ ಮೇಲೆ ಆಸ್ತಿ ತೆರಿಗೆಯನ್ನು ಹೆಚ್ಚಿಸುವುದು ಅನ್ಯಾಯ. ಖಾಲಿ ನಿವೇಶನಗಳಿಂದ ಮಾಲೀಕರಿಗೆ ಯಾವುದೇ ಆದಾಯವಿಲ್ಲ, ಆದ್ದರಿಂದ ಹೆಚ್ಚಿನ ಆಸ್ತಿ ತೆರಿಗೆ ಪಾವತಿಸುವುದು ಕಷ್ಟ. ಅಧಿಕಾರಿಗಳು ಇದನ್ನು ಪರಿಗಣಿಸಬೇಕು' ಎಂದು ಸಾರ್ವಜನಿಕರು ಮನವಿ ಮಾಡಿದ್ದಾರೆ.

‘ಬಡಾವಣೆಗೆ ಮೂಲಸೌಕರ್ಯ ಕಲ್ಪಿಸದೇ ಯಾವ ಪುರುಷಾರ್ಥಕ್ಕೆ ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡಿದ್ದಾರೆ. ನೀರು, ರಸ್ತೆ, ದೀಪ, ಒಳಚರಂಡಿ ವ್ಯವಸ್ಥೆ ಸಮರ್ಪಕವಾಗಿಲ್ಲ. ನಮ್ಮಿಂದ 2011ರಲ್ಲಿ ಜಮೀನು ಪಡೆದುಕೊಂಡು, ಪರಿಹಾರವಾಗಿ ನಿವೇಶನ ನೀಡಿದ್ದಾರೆ. ಕೆಲವರು ಸಾಲ ಮಾಡಿ ನಿವೇಶನ ಖರೀದಿಸಿದ್ದಾರೆ. ಅವರು ಮನೆ ನಿರ್ಮಿಸಲು ಆಗುತ್ತಿಲ್ಲ. ಎಲ್ಲಿಂದ ಹಣ ತರುವುದು. ನಿವೇಶನ ಕೊಟ್ಟು ತಲೆ ಮೇಲೆ ಚಪ್ಪಡಿ ಹಾಕಿದ್ದಾರೆ’ ಎಂದು ನಾಡಪ್ರಭು ಕೆಂಪೇಗೌಡ ಬಡಾವಣೆಯ ನಿವೇಶನ ಮಾಲೀಕ ಡಿ.ಎಸ್.ಗೌಡ ಅವರು ಆಕ್ರೋಶ ವ್ಯಕ್ತಪಡಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ಆಸ್ತಿ ತೆರಿಗೆ ವಿವರ

ನಿವೇಶನದ ಅಳತೆ (ಚದರ ಅಡಿ)	2024-25	2025-26
20X30	₹372	₹539
30X40	₹720	₹1,045
40X60	₹3,254	₹4,718
50X80	₹6,361	₹9,223

ಸ್ವಚ್ಛತೆ ಕಾಪಾಡಲು ಖಾಲಿ ನಿವೇಶನಗಳಿಗೆ ನಿರ್ವಹಣಾ ಶುಲ್ಕವೆಂದು ಚದರ ಅಡಿಗೆ ₹1,500 ಶುಲ್ಕ ವಿಧಿಸುತ್ತಾರೆ. ಯಾವ ಮಾನ ದಂಡದಲ್ಲಿ ತೆರಿಗೆ ಹೆಚ್ಚಿಸಿದ್ದಾರೆ ಗೊತ್ತಿಲ್ಲ

ಟಿ.ಎಸ್.ಮಹೇಶ್,
ಅಧ್ಯಕ್ಷ, ಬನಶಂಕರಿ 6ನೇ ಹಂತದ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ

‘ಸರಾಸರಿ ಆಧಾರದಲ್ಲಿ ಹೆಚ್ಚಳ ಮಾಡಿಲ್ಲ’

‘2023ರಲ್ಲಿ ಸ್ಥಿರಾಸ್ತಿಗಳ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಲಾಗಿತ್ತು. ಸ್ಥಿರಾಸ್ತಿ ಮಾರ್ಗಸೂಚಿ ದರದಲ್ಲಿನ ಹೆಚ್ಚಳವನ್ನು ಆಧರಿಸಿ ತೆರಿಗೆಯನ್ನು ಹೆಚ್ಚಿಸಲಾಗಿದೆ. ಸರಾಸರಿ ಆಧಾರದಲ್ಲಿ ಹೆಚ್ಚಳ ಮಾಡಿಲ್ಲ. ಅವೈಜ್ಞಾನಿಕವಾಗಿ ಹೆಚ್ಚಳವಾಗಿದೆ ಎಂದು ಹೇಳುವುದು ತಪ್ಪು. ಆಸ್ತಿ ತೆರಿಗೆ ಹೆಚ್ಚಳ ಮಾಡಿರುವುದು ಸರಿಯಲ್ಲ ಎನಿಸಿದರೆ, ಆಸ್ತಿ ಮಾಲೀಕರು ಪ್ರಾಧಿಕಾರವನ್ನು ಸಂಪರ್ಕಿಸಬಹುದು. ಈ ಬಗ್ಗೆ ಪರಿಶೀಲಿಸಲಾಗುವುದು’ ಎಂದು ಬಿಡಿಎ ಆಯುಕ್ತ ಎನ್.ಜಯರಾಂ ತಿಳಿಸಿದರು.

ವಿಜೃಂಭಣೆಯ ಕಾಟೇರಮ್ಮದೇವಿ ಕುಂಭಾಭಿಷೇಕ ಮಹೋತ್ಸವ

ಪ್ರಜಾವಾಣಿ ವಾರ್ತೆ

ಶ್ರೀಕಾಟೇರಮ್ಮದೇವಿಯ ದೇವಸ್ಥಾನ

ಕೆ.ಆರ್.ಪುರ: ಕಾಡುಗೋಡಿ ಸಮೀಪದ ಸಾದರಮಂಗಲದಲ್ಲಿರುವ ಶ್ರೀಕಾಟೇರಮ್ಮದೇವಿಯ ಪುನರ್ ಪ್ರತಿಷ್ಠಾಪನೆ ಮತ್ತು ಮಹಾ ಕುಂಭಾಭಿಷೇಕ ಮಹೋತ್ಸವ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಸಾದರಮಂಗಲದ ರೈಲ್ವೆ ಹಳಿ ಬಳಿ ಇರುವ ಶ್ರೀಕಾಟೇರಮ್ಮದೇವಿಯ ದೇವಸ್ಥಾನವನ್ನು ಸಾದರಮಂಗಲ ಗ್ರಾಮಸ್ಥರು ಹಾಗೂ ದಾನಿಗಳ ನೆರವಿನಿಂದ ನಿರ್ಮಿಸಲಾಗಿದೆ.

ಮಹೋತ್ಸವದ ಅಂಗವಾಗಿ ಎರಡು ದಿನಗಳಿಂದ ದೇವಾಲಯಕ್ಕೆ ದೀಪಾಲಂಕಾರ ಮಾಡಲಾಗಿತ್ತು. ಕಾಟೇರಮ್ಮದೇವಿಯನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಪ್ರತಿಷ್ಠಾಪನೆ ಅಂಗವಾಗಿ ಹೋಮ, ಹವನ, ವಿಶೇಷ ಪೂಜಾ ಕೈಂಕರ್ಯ, ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ಶಾಸ್ತ್ರೋಕ್ತವಾಗಿ ನೆರವೇರಿತು. ಪಾಂಡವಪುರ ತಾಲ್ಲೂಕು ಕೆಬ್ಬೆಟ್ಟಹಳ್ಳಿಯ ಮಹಾಸಂಸ್ಥಾನ ಮಠದ ಶ್ರೀ ವಿಜಯ ಕಾಳಿಯ ಪವಾಡ ಬಸಪ್ಪ(ಬಸವ) ಪಾಲ್ಗೊಂಡಿತ್ತು. ಈ ವೇಳೆ ಬಸಪ್ಪನಿಗೆ ಭಕ್ತರು ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದರು.

ಸಾದರಮಂಗಲ, ಕಾಡುಗುಡಿ ಬೆಳತ್ತೂರು, ಕೊಡಿಗೇಹಳ್ಳಿ, ಕುಂಬೇನ ಆಗ್ರಹಾರ, ಹೂಡಿ ಸೇರಿದಂತೆ ವಿವಿಧೆಡೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಭಕ್ತರು ದೇವರ ದರ್ಶನ ಪಡೆದರು. ಮಾಜಿ ಸಚಿವ ಹೆಚ್.ನಾಗೇಶ್ ಮಹಾ ಕುಂಭಾಭಿಷೇಕ ಮಹೋತ್ಸವದಲ್ಲಿ ಪಾಲ್ಗೊಂಡು ಪೂಜೆ ಸಲ್ಲಿಸಿದರು. ಸಾವಿರಾರು ಭಕ್ತರಿಗೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು.

ಬಿಡಿಎ ಕಾರ್ಯಾಚರಣೆ ₹3 ಕೋಟಿ ಆಸ್ತಿ ವಶ

ಬನಶಂಕರಿಯಲ್ಲಿ ಅನಧಿಕೃತ ಶೆಡ್‌ಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವು ಮಾಡಲಾಯಿತು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಶುಕ್ರವಾರ ಕಾರ್ಯಾಚರಣೆ ನಡೆಸಿ, ಬನಶಂಕರಿ 6ನೇ ಹಂತ 10ನೇ ಬ್ಲಾಕ್ ಬಡಾವಣೆಯಲ್ಲಿ ₹3.10 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಕೆಂಗೇರಿ ಹೋಬಳಿಯ ಹೆಮ್ಮಿಗೆಪುರ ಗ್ರಾಮದ 2,100 ಚದರ ಅಡಿಯಲ್ಲಿ ಅನಧಿಕೃತವಾಗಿ ನಿರ್ಮಾಣವಾಗಿದ್ದ ಶೆಡ್ ಮತ್ತು ಕಾಂಪೌಂಡ್ ಗೋಡೆಯನ್ನು ತೆರವುಗೊಳಿಸಿ, ಜಾಗವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಕಾರ್ಯಾಚರಣೆಯನ್ನು ಪ್ರಾಧಿಕಾರದ ಕಾರ್ಯನಿರತ ಪಡೆಯ ಎಸ್‌ಪಿ, ದಕ್ಷಿಣ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಒಳಗೊಂಡಂತೆ ಸ್ಥಳೀಯ ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಡೆಸಲಾಯಿತು.

‘ನಗರದಲ್ಲಿ ಐಫಾ ಪ್ರಶಸ್ತಿ ಸಮಾರಂಭ’

ಪ್ರಜಾವಾಣಿ ವಾರ್ತೆ

ಡಿ.ಕೆ. ಶಿವಕುಮಾರ್

ಬೆಂಗಳೂರು: ‘ನಗರದಲ್ಲಿ ಈ ವರ್ಷದ ಡಿಸೆಂಬರ್ ಅಥವಾ ಮುಂದಿನ ವರ್ಷ ಜನವರಿಯಲ್ಲಿ ಬೆಂಗಳೂರು ಹಬ್ಬ, ಐಫಾ ಪ್ರಶಸ್ತಿ ಸಮಾರಂಭ ನಡೆಸಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಂಗಳೂರಿನಲ್ಲಿ ಅಂತಾರಾಷ್ಟ್ರೀಯ ಭಾರತೀಯ ಚಲನಚಿತ್ರ ಅಕಾಡೆಮಿ (ಐಫಾ) ವತಿಯಿಂದ ಉತ್ಸವ ಹಾಗೂ ಅಂತಾರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಸಲು ಐಫಾ ಪ್ರತಿನಿಧಿಗಳೊಂದಿಗೆ ಶುಕ್ರವಾರ ಸಭೆ ನಡೆಸಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

‘ಒಂದಷ್ಟು ಕಾರ್ಯಕ್ರಮಗಳನ್ನು ಸಂಯೋಜಿಸಿ ಬೆಂಗಳೂರಿನಲ್ಲಿ ಒಂದು ವಾರ ಉತ್ತಮ ವಾತಾವರಣ ಸೃಷ್ಟಿ ಮಾಡುವುದು ನಮ್ಮ ಆದ್ಯತೆಯಾಗಿದೆ. ಜೊತೆಗೆ ಬೆಂಗಳೂರಿನ ಮಹತ್ವ ಸಾರಬೇಕು ಎಂಬುದು ನಮ್ಮ ಆಲೋಚನೆ ಯಾಗಿದೆ’ ಎಂದರು.

‘ಇತ್ತೀಚಿನ ದಿನಗಳಲ್ಲಿ ಬಾಲಿವುಡ್‌ಗಿಂತ ನಮ್ಮ ಸ್ಯಾಂಡಲ್‌ವುಡ್ ಎತ್ತರಕ್ಕೆ ಹೋಗಿದೆ. ಇದಕ್ಕೆ ಉತ್ತೇಜನ ಕೊಡಬೇಕು ಎಂಬುದು ನಮ್ಮ ಉದ್ದೇಶ. ಅಕ್ಟೋಬರ್‌ನಲ್ಲಿ ದಸರಾ ಇರುವ ಕಾರಣಕ್ಕೆ ಡಿಸೆಂಬರ್, ಜನವರಿಯಲ್ಲಿ ಐಫಾ ಸಮಾರಂಭ ನಡೆಸಬಹುದು ಎಂದು ತಿಳಿಸಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ಸಂಸ್ಕೃತಿಯನ್ನು ಪರಿಚಯಿಸಲು ಅವಕಾಶ ಸಿಗಲಿದೆ. ಮುಂಬೈ ಬಿಟ್ಟರೆ ಬೆಂಗಳೂರು ಈ ರೀತಿಯ ಕಾರ್ಯಕ್ರಮಗಳಿಗೆ ಸೂಕ್ತ ಎಂದು ಆಯೋಜಕರು ತಿಳಿಸಿದ್ದಾರೆ’ ಎಂದು ಹೇಳಿದರು.

ಹರಿಕಥೆ ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿದ್ದ 87ನೇ ಶ್ರೀ ರಾಮನವಮಿ ಸಂಗೀತೋತ್ಸವದ ಕೊನೆಯ ದಿನವಾದ ಶುಕ್ರವಾರ ವಿಶೇಷ ಹರಿಕಥೆ ಕಛೇರಿಯನ್ನು ವಿಶಾಖ ಹರಿ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಸೋನು ನಿಗಮ್ ವಿರುದ್ಧ ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ

ಕನ್ನಡ ಹಾಡಿಗೆ ಒತ್ತಾಯ; ಪಹಲ್ಗಾಮ್ ದಾಳಿಗೆ ತಳಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ನಗರದ ಖಾಸಗಿ ಸಂಸ್ಥೆಯೊಂದು ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಗಾಯಕ ಸೋನು ನಿಗಮ್ ಕನ್ನಡ ಕುರಿತು ಆಡಿದ ಮಾತು ಇದೀಗ ಸಾಮಾಜಿಕ ಮಾಧ್ಯಮಗಳಲ್ಲಿ ಚರ್ಚೆಗೆ ಗ್ರಾಸವಾಗಿದೆ. ಯುವಕನೊಬ್ಬ ಕನ್ನಡ ಹಾಡಿಗಾಗಿ ಒತ್ತಾಯ ಮಾಡಿದಾಗ ಅದನ್ನು ಪಹಲ್ಗಾಮ್ ದಾಳಿಗೆ ತಳುಕು ಹಾಕಿ ಗಾಯಕ ಮಾತನಾಡಿರುವುದು ಭಾರೀ ಆಕ್ರೋಶಕ್ಕೆ ಕಾರಣವಾಗಿದೆ.

‘ನಾನು ಎಲ್ಲ ಭಾಷೆಗಳಲ್ಲಿ ಹಾಡಿದ್ದೇನೆ. ಆದರೆ ನನ್ನ ಜೀವನದಲ್ಲಿ ಹಾಡಿದ ಅತ್ಯುತ್ತಮ ಹಾಡುಗಳು ಕನ್ನಡದವು. ನಾನು ಪ್ರತಿನಿತ್ಯವೂ ಶೋಗಳನ್ನು ಮಾಡುತ್ತೇನೆ. ಆದರೆ ಕರ್ನಾಟಕಕ್ಕೆ ಬಹಳ ಪ್ರೀತಿಯಿಂದ ಬರುತ್ತೇನೆ. ಕರ್ನಾಟಕಕ್ಕೆ ಬಹಳ ಗೌರವಯುತವಾಗಿ ಬರುತ್ತೇನೆ. ಏಕೆಂದರೆ ನೀವು ನನ್ನನ್ನು ಕುಟುಂಬದವನನ್ನಾಗಿ ಕಂಡಿದ್ದೀರಿ. ಅಲ್ಲೊಬ್ಬ ಹುಡುಗನ ವರ್ತನೆ ನನಗೆ ಸರಿ ಅನಿಸಲಿಲ್ಲ. ನಾನು ಕನ್ನಡ ಹಾಡು ಹಾಡಲು ಪ್ರಾರಂಭಿಸಿದ ವರ್ಷದಷ್ಟು ಆತನಿಗೆ ವಯಸ್ಸು ಆಗಿಲ್ಲ. ಆತ ನನಗೆ ಬಹಳ ಒರಟಾಗಿ ‘ಕನ್ನಡ ಕನ್ನಡ..’ ಎಂದು ಬೆದರಿಸುತ್ತಿದ್ದಾನೆ. ಪಹಲ್ಗಾಮ್‌ನಲ್ಲಿ ಏನು ಘಟನೆ ನಡೆದಿದೆಯೋ ಅದಕ್ಕೆ ಇದೇ ಕಾರಣ. ನೀನು ಈಗ ಮಾಡಿರುವುದೇ ಕಾರಣ. ನಾನು ಕನ್ನಡಿಗರನ್ನು ಪ್ರೀತಿಸುತ್ತೇನೆ. ನಾನು ಇಡೀ ವಿಶ್ವದಲ್ಲಿ ಎಲ್ಲಿಗೇ ಹೋದರೂ ಲಕ್ಷಾಂತರ ಜನರ ನಡುವೆ ಒಬ್ಬರು ‘ಕನ್ನಡ ಕನ್ನಡ’ ಎನ್ನುತ್ತಾರೆ. ನಾನು ಆ ಒಬ್ಬ ವ್ಯಕ್ತಿಗಾಗಿ ಒಂದೆರಡು ಸಾಲು ಕನ್ನಡದಲ್ಲಿ ಹಾಡುತ್ತೇನೆ. ನಾನು ನಿಮ್ಮನ್ನು ಇಷ್ಟು ಗೌರವದಿಂದ, ಪ್ರೀತಿಯಿಂದ ನೋಡುತ್ತೇನೆ. ಹೀಗಾಗಿ ಹೀಗೆ ಮಾಡಬಾರದು’ ಎಂದು ಸೋನು ನಿಗಮ್ ವೇದಿಕೆಯಲ್ಲಿ ಪ್ರದರ್ಶನ ನೀಡುವ ಸಂದರ್ಭದಲ್ಲಿ ಹೇಳಿರುವುದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊದಲ್ಲಿದೆ.

‘ಕನ್ನಡಿಗರನ್ನು ದೇಶದ್ರೋಹಿಗಳೆಂದು ಬಿಂಬಿಸಲಾಗಿದೆ’: ಸೋನು ನಿಗಮ್ ಹೇಳಿಕೆಗೆ ‘ಎಕ್ಸ್’ ಮೂಲಕ ವಿರೋಧ ವ್ಯಕ್ತಪಡಿಸಿರುವ ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಟಿ.ಎ. ನಾರಾಯಣಗೌಡ, ‘ಕನ್ನಡದಲ್ಲಿ ಹಾಡು ಹೇಳಿ ಎಂದು ಕೇಳಿದರೆ ಅದು ಹೇಗೆ ಭಯೋತ್ಪಾದಕ ದಾಳಿಗೆ ಕಾರಣವಾಗಲು ಸಾಧ್ಯ? ಕನ್ನಡದ ಅನ್ನ ತಿಂದು ಕೊಬ್ಬಿರುವ ಈತ ಅದು ಹೇಗೆ ಕರ್ನಾಟಕದಲ್ಲಿ ಇನ್ನು ಮೇಲೆ ಶೋಗಳನ್ನು ನಡೆಸುತ್ತಾನೆ ನೋಡೋಣ. ಕರ್ನಾಟಕದ ಯಾವ ನಿರ್ಮಾಪಕರೂ ಈತನಿಂದ ಹಾಡು ಹಾಡಿಸಬಾರದು. ಯಾವುದೇ ಸಂಸ್ಥೆಗಳು ಇವನ ಶೋ ನಡೆಸಲು ಮುಂದಾಗಬಾರದು. ಒಂದು ವೇಳೆ ಯಾರಾದರೂ ಈ ದುಸ್ಸಾಹಸ ಮಾಡಿದರೆ ಅವರೇ ಬೆಲೆ ತೆರಬೇಕಾಗುತ್ತದೆ. ಸೋನು ನಿಗಮ್ ನೀಡಿರುವ ಹೇಳಿಕೆ ಕನ್ನಡಿಗರನ್ನು ಕೀಳಾಗಿ ಕಂಡಿರುವುದು ಮಾತ್ರವಲ್ಲ, ಕನ್ನಡಿಗರನ್ನು ದೇಶದ್ರೋಹಿಗಳೆಂದು ಬಿಂಬಿಸಿ ಅವರನ್ನು ಖಳನಾಯಕರನ್ನಾಗಿ ಮಾಡುವ ಹುನ್ನಾರ ಹೊಂದಿದೆ’ ಎಂದು ಹೇಳಿದ್ದಾರೆ.

‘ಕನ್ನಡ ಭಾಷೆಗೂ ಪಹಲ್ಗಾಮ್ ಘಟನೆಗೂ ಸಂಬಂಧ ಕಲ್ಪಿಸಿದ ಸೋನು ನಿಗಮ್ ಕನ್ನಡಿಗರ ಕ್ಷಮೆ ಕೇಳಬೇಕು. ಇಲ್ಲವೇ ಕರ್ನಾಟಕಕ್ಕೆ ಬರುವುದನ್ನು ನಿಲ್ಲಿಸಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದ್ದಾರೆ.

ಸೋನು ನಿಗಮ್ ವಿರುದ್ಧ ದೂರು

ಗಾಯಕ ಸೋನು ನಿಗಮ್ ಅವರು ಕನ್ನಡಿಗರಿಗೆ ಅವಮಾನ ಮಾಡಿದ್ದಾರೆ ಎಂದು ಆರೋಪಿಸಿ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ ಬಣ) ಸದಸ್ಯರು ಆವಲಹಳ್ಳಿ ಪೊಲೀಸ್ ಠಾಣೆಗೆ ಶುಕ್ರವಾರ ರಾತ್ರಿ ದೂರು ನೀಡಿದ್ದಾರೆ.

ವೇದಿಕೆಯ ಬೆಂಗಳೂರು ನಗರ ಜಿಲ್ಲಾ ಘಟಕದ ಅಧ್ಯಕ್ಷ ಟಿ.ಎ.ಧರ್ಮರಾಜ ಅವರು ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಾಗಿಲ್ಲ.

ಸೋನು ನಿಗಮ್ ಅವರು ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ಏಪ್ರಿಲ್ 25 ಹಾಗೂ 26ರಂದು ನಡೆದ ಸಂಗೀತ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಭಾವನೆಗಳನ್ನು ಕೆರಳಿಸುವ ಹೇಳಿಕೆ ನೀಡಿದ್ದಾರೆ. ಅವರ ಹೇಳಿಕೆಗಳು ವಿಡಿಯೊದಲ್ಲಿ ದಾಖಲಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಕೋರಿದ್ದಾರೆ.

ಶನಿವಾರ, ಮೇ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 122 | ಪುಟ 26

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಏಟು–ಎದಿರೇಟು

ಬಂದರು ಉದ್ಘಾಟನಾ ಸಮಾರಂಭದಲ್ಲಿ ಶಶಿ ತರೂರ್ (ಕಾಂಗ್ರೆಸ್ ಸಂಸದ) ಭಾಗವಹಿಸಿದ್ದಾರೆ. ಅವರು ಪಾಲ್ಗೊಂಡಿರುವುದು ಇಂಡಿ (ಇಂಡಿಯಾ) ಮೈತ್ರಿಕೂಟದ ಹಲವರ ನಿದ್ದೆಗೆಡಿಸಲಿದೆ

ನರೇಂದ್ರ ಮೋದಿ, ಪ್ರಧಾನಿ

ಪಾಕಿಸ್ತಾನಕ್ಕೆ ತಿರುಗೇಟು ನೀಡಲು ಮತ್ತು ಜಾತಿ ಜನಗಣತಿಗೆ ಸಮಯ ನಿಗದಿಪಡಿಸಲು ಇಂಡಿಯಾ ಮೈತ್ರಿಕೂಟವು ಒತ್ತಡ ಹೇರುತ್ತಿರುವುದರಿಂದ ಪ್ರಧಾನಿ ನಿದ್ದೆಯಿಲ್ಲದ ರಾತ್ರಿಗಳನ್ನು ಕಳೆಯಲಿದ್ದಾರೆ

ಕೆ.ಸಿ.ವೇಣುಗೋಪಾಲ್, ಎಐಸಿಸಿ ಪ್ರಧಾನ ಕಾರ್ಯದರ್ಶಿ

(ತಿರುವನಂತಪುರದ ವಿಝಿಂಜಂ ಬಂದರು ಉದ್ಘಾಟನಾ ಸಮಾರಂಭದಲ್ಲಿ ಶುಕ್ರವಾರ ಶಶಿ ತರೂರ್ ಹೆಸರು ಪ್ರಸ್ತಾಪಿಸಿ ತನ್ನನ್ನು ಕೆಣಕಿದ ಪ್ರಧಾನಿಗೆ ಕಾಂಗ್ರೆಸ್ ತಿರುಗೇಟು ನೀಡಿದೆ)

ವಾರದ ವಿಶೇಷ

‘ಒಳಮೀಸಲಿನಿಂದ ಒಡಕಲ್ಲ, ಒಮ್ಮತ ಮೂಡಲಿದೆ’

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,501 ▲	24,346 ▲	₹99,180 (ಬೆಂಗಳೂರು) ▼	₹1 ಲಕ್ಷ (ಬೆಂಗಳೂರು) ▼	84.57 ▼

22 ವಿದ್ಯಾರ್ಥಿಗಳಿಗೆ 625/625

ಎಸ್‌ಎಸ್‌ಎಲ್‌ಸಿ: ಈ ಬಾರಿ ಶೇ 8 ಫಲಿತಾಂಶ ವೃದ್ಧಿ

8.42 ಲಕ್ಷ	5.24 ಲಕ್ಷ	4,553	2,633 (57.83)
ಪರೀಕ್ಷೆ ಬರೆದವರು	ತೇರ್ಗಡೆಯಾದವರು	ಪರೀಕ್ಷೆ ಬರೆದ ನ್ಯೂನತೆಯ ಮಕ್ಕಳು	ತೇರ್ಗಡೆಯಾದವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು, 22 ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿ, ಗಮನ ಸೆಳೆದಿದ್ದಾರೆ.

2024ರ ಪರೀಕ್ಷೆಯಲ್ಲಿ ಮೊದಲ ಭಾರಿ ಪರಿಚಯಿಸಿದ ವೆಬ್‌ಕಾಸ್ಟಿಂಗ್ ಫಲವಾಗಿ ಫಲಿತಾಂಶದಲ್ಲಿ ಭಾರಿ ಕುಸಿತ (ಶೇ 53) ಕಂಡಿತ್ತು. ದಶಕದ ಇತಿಹಾಸದಲ್ಲೇ ಅತ್ಯಂತ ಕಡಿಮೆ ಫಲಿತಾಂಶ ಮಕ್ಕಳ ಮೇಲೆ ಪರಿಣಾಮ ಬೀರಬಹುದು ಎಂದು ಶೇ 35 ಅರ್ಹ ಅಂಕಗಳನ್ನು 25ಕ್ಕೆ ಇಳಿಸಿ, ಗರಿಷ್ಠ 20 ಕೃಪಾಂಕ ನೀಡಲಾಗಿತ್ತು. ಇದರಿಂದ ಒಟ್ಟಾರೆ ಫಲಿತಾಂಶ ಶೇ 73.40ಕ್ಕೆ ಹಿಗ್ಗಿತ್ತು. 1.69 ಲಕ್ಷ ವಿದ್ಯಾರ್ಥಿಗಳು ಕೃಪಾಂಕದ ಆಧಾರದಲ್ಲಿ ತೇರ್ಗಡೆಯಾಗಿದ್ದರು.

‘ಕೃಪಾಂಕ ನೀಡಿಕೆಯ ಕ್ರಮ ಟೀಕೆಗೆ ಗುರಿಯಾಗಿತ್ತು. ಈ ಬಾರಿ ವೆಬ್‌ಕಾಸ್ಟಿಂಗ್ ಇದ್ದರೂ ಆರಂಭದಿಂದಲೇ ಗುಣಮಟ್ಟದ ಬೋಧನೆ, ಪರೀಕ್ಷಾ ಫಲಿತಾಂಶ ಸುಧಾರಣೆಗೆ ಕೈಗೊಂಡ ಕ್ರಮಗಳು, ಶಾಲಾ ಶಿಕ್ಷಣ ಇಲಾಖೆ ಒಂದು ತಂಡವಾಗಿ ಶ್ರಮಿಸಿದ ಫಲವಾಗಿ ಶೇ 66.14ರಷ್ಟು ಫಲಿತಾಂಶ ದೊರೆತಿದೆ. ಖಾಸಗಿ ಹಾಗೂ ಪುನರಾವರ್ತಿತರ ಫಲಿತಾಂಶವೂ ಸೇರಿದರೆ ಒಟ್ಟು ಫಲಿತಾಂಶ 62.34 ಇದೆ. ಕಳೆದ ಬಾರಿಯ ವಾಸ್ತವ ಫಲಿತಾಂಶಕ್ಕಿಂತ ಶೇ 8.34ರಷ್ಟು ವೃದ್ಧಿಸಿದೆ’ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

2024ರಲ್ಲಿ ಇಬ್ಬರು 625ಕ್ಕೆ 625 ಅಂಕ ಪಡೆದಿದ್ದರು. 2024–25ನೇ ಸಾಲಿನಲ್ಲಿ 22 ವಿದ್ಯಾರ್ಥಿಗಳು ಅಂತಹ ಸಾಧನೆ ಮಾಡಿದ್ದಾರೆ. 970 ವಿದ್ಯಾರ್ಥಿಗಳು 620 ಹಾಗೂ ಅದಕ್ಕಿಂತ ಹೆಚ್ಚು ಅಂಕ, ಶೇ 10.53 ವಿದ್ಯಾರ್ಥಿಗಳು ಶೇ 90ಕ್ಕಿಂತ ಹೆಚ್ಚು, ಶೇ 18.46 ವಿದ್ಯಾರ್ಥಿಗಳು ಶೇ 80ಕ್ಕಿಂತ ಹೆಚ್ಚು ಅಂಕ ಗಳಿಸಿದ್ದಾರೆ. ಶೇ 75 ವಿದ್ಯಾರ್ಥಿಗಳ ಅಂಕ ಶೇ 60ಕ್ಕಿಂತ ಹೆಚ್ಚು ಇದೆ.

8ನೇ ಪುಟ ನೋಡಿ

ಸಾಧನೆ... ಸಂಭ್ರಮ... ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕ ಪಡೆದ ಎಸ್.ಎನ್. ಜಾಹ್ನವಿ ಅವರು ಬೆಂಗಳೂರಿನ ಗಿರಿನಗರದ ವಿಜಯಭಾರತಿ ವಿದ್ಯಾಲಯದಲ್ಲಿ ಶಿಕ್ಷಕರೊಂದಿಗೆ ಸಂಭ್ರಮಿಸಿದ ಕ್ಷಣ ಪ್ರಜಾವಾಣಿ ಚಿತ್ರ

ಗ್ರಾಮೀಣ ಪ್ರದೇಶದ ಸರ್ಕಾರಿ ಶಾಲೆಗಳ ಶಿಕ್ಷಣದ ಗುಣಮಟ್ಟ ಹೆಚ್ಚಳಕ್ಕೆ ನಿರಂತರ ಪರಿಶ್ರಮ ಹಾಕಲಾಗುತ್ತಿದೆ. ಕಲ್ಯಾಣ ಕರ್ನಾಟಕದ ಶಾಲೆಗಳ ಫಲಿತಾಂಶ ವೃದ್ಧಿಗೆ ಒತ್ತು ನೀಡಲಾಗಿದೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಮೊದಲ 10 ಸ್ಥಾನ ಪಡೆದ ಶೈಕ್ಷಣಿಕ ಜಿಲ್ಲೆಗಳು	
ದಕ್ಷಿಣ ಕನ್ನಡ	91.12%
ಉಡುಪಿ	89.96%
ಉತ್ತರ ಕನ್ನಡ	83.19%
ಶಿವಮೊಗ್ಗ	82.29%
ಕೊಡಗು	82.21%
ಹಾಸನ	82.12%
ಶಿರಸಿ	80.47%
ಚಿಕ್ಕಮಗಳೂರು	77.09%
ಬೆಂಗಳೂರು ಗ್ರಾಮಾಂತರ	74.02%
ಬೆಂಗಳೂರು ದಕ್ಷಿಣ	72.03%

144 ಶಾಲೆಗೆ ಶೂನ್ಯ ಫಲಿತಾಂಶ

ರಾಜ್ಯದ 144 ಪ್ರೌಢಶಾಲೆಗಳು ಶೂನ್ಯ ಫಲಿತಾಂಶ ಪಡೆದಿವೆ. ಅವುಗಳಲ್ಲಿ 108 ಖಾಸಗಿ ಶಾಲೆಗಳೇ ಇವೆ. ಆರು ಸರ್ಕಾರಿ, 30 ಅನುದಾನಿತ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ತೇರ್ಗಡೆಯಾಗಿಲ್ಲ.

329 ಸರ್ಕಾರಿ, 539 ಖಾಸಗಿ ಹಾಗೂ 53 ಅನುದಾನಿತ ಶಾಲೆಗಳು ಸೇರಿ 921 ಶಾಲೆಗಳಿಗೆ ಶೇ 100ರಷ್ಟು ಫಲಿತಾಂಶ ಲಭಿಸಿದೆ.

26ರಿಂದ ಪರೀಕ್ಷೆ–2: ಶೂನ್ಯ ಶುಲ್ಕ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–2 ಇದೇ ಮೇ 26ರಿಂದ ಜೂನ್ 2ರವರೆಗೆ ನಡೆಯಲಿದೆ. ಅನುತ್ತೀರ್ಣರಾದವರು, ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರು, ಖಾಸಗಿಯಾಗಿ ಪರೀಕ್ಷೆ ತೆಗೆದುಕೊಳ್ಳುವವರು ಮೇ 10ರ ಒಳಗೆ ನೋಂದಣಿ ಮಾಡಿಕೊಳ್ಳಬೇಕು.

ಪರೀಕ್ಷೆ–1ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಇರುವುದಿಲ್ಲ. ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರು ಶುಲ್ಕ ಪಾವತಿಸಬೇಕು. ಉತ್ತರ ಪತ್ರಿಕೆಗಳ ಛಾಯಾ ಪ್ರತಿಗೆ ಅರ್ಜಿ ಸಲ್ಲಿಸಲು ಮೇ 7, ಶುಲ್ಕ ಪಾವತಿಗೆ ಮೇ 8, ಮರು ಎಣಿಕೆ, ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಲು ಮೇ 11 ಹಾಗೂ ಶುಲ್ಕ ಪಾವತಿಗೆ ಮೇ 12 ಕೊನೆಯ ದಿನ. ಪರೀಕ್ಷೆ–3 ಜೂನ್ 23ರಿಂದ 30ರವರೆಗೆ ನಡೆಸಲು ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿದೆ.

ದಕ್ಷಿಣ ಕನ್ನಡ ಬಂದ್; ಅಂತಿಮ ಯಾತ್ರೆಯುದ್ದಕ್ಕೂ ಕಾರ್ಯಕರ್ತರ ದಂಡು

ಕಾರಿಂಜ: ಸುಹಾಸ್ ಶೆಟ್ಟಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಬಜಪೆಯ ಕಿನ್ನಿಪದವಿನಲ್ಲಿ ಗುರುವಾರ ರಾತ್ರಿ ಹತ್ಯೆಗೀಡಾದ ಹಿಂದುತ್ವವಾದಿ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿ (31) ಪಾರ್ಥಿವ ಶರೀರದ ಅಂತ್ಯಕ್ರಿಯೆ ಹುಟ್ಟೂರಾದ ಬಂಟ್ವಾಳ ತಾಲ್ಲೂಕಿನ ಕಾರಿಂಜದಲ್ಲಿ ಶುಕ್ರವಾರ ನೆರವೇರಿತು.

ಈ ಹತ್ಯೆ ನಡೆದ ಬೆನ್ನಲ್ಲೇ ಶುಕ್ರವಾರ ನಸುಕಿನಲ್ಲಿ ಮಂಗಳೂರು ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಒಂದು ಕಡೆ ಚೂರಿ ಇರಿತ ಹಾಗೂ ಎರಡು ಕಡೆ ಹಲ್ಲೆಗಳು ನಡೆದಿವೆ. ಇದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದೆ.

ಅಂತಿಮಯಾತ್ರೆ: ಸುಹಾಸ್‌ಶೆಟ್ಟಿ ಪಾರ್ಥಿವಶರೀರವನ್ನು ನಗರದ ಎ.ಜೆ ಆಸ್ಪತ್ರೆಯಿಂದ ಅವರ ಹುಟ್ಟೂರಾದ ಬಂಟ್ವಾಳ ತಾಲ್ಲೂಕಿನ ಕಾರಿಂಜಕ್ಕೆ ಹೂವುಗಳಿಂದ ಅಲಂಕರಿಸಿದ ವಾಹನದಲ್ಲಿ ಮೆರವಣಿಗೆಯಲ್ಲಿ ಒಯ್ಯಲಾಯಿತು. ಹಿಂದುತ್ವವಾದಿ ಕಾರ್ಯಕರ್ತರು ಅಂತಿಮ ಯಾತ್ರೆಯ ವಾಹನವನ್ನು ಹಿಂಬಾಲಿಸಿದರು. ಮಾರ್ಗದುದ್ದಕ್ಕೂ ಅಲ್ಲಲ್ಲಿ ಗುಂಪುಗುಂಪಾಗಿ ನಿಂತಿದ್ದ ಹಿಂದುತ್ವ ಪರ ಸಂಘಟನೆಗಳ ಕಾರ್ಯಕರ್ತರು ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು. ಅಂತ್ಯಕ್ರಿಯೆ ನಡೆದ ಕಾರಿಂಜದಲ್ಲಿಯೂ ಭಾರಿ ಸಂಖ್ಯೆಯಲ್ಲಿ ಹಿಂದುತ್ವವಾದಿ ಕಾರ್ಯಕರ್ತರು ಸೇರಿದ್ದರು. ಹಿಂದುತ್ವ ಪರ ಘೋಷಣೆ ಕೂಗಿದರು.

9ನೇ ಪುಟ ನೋಡಿ

‘ಸಂಘಟನೆಗಳ ನಾಯಕರು ತಿರುಗಿಯೂ ನೋಡುವುದಿಲ್ಲ’

‘ಹಿಂದೂ ಹಿಂದೂ ಎಂದು ಯುವಕರು ಹಿಂದುತ್ವದ ಹಿಂದೆ ಹೋಗುತ್ತಾರೆ. ನಾಳೆ ಇಂತಹ ಅನಾಹುತ ಆದಾಗ ಯಾರೂ ಇರುವುದಿಲ್ಲ. ಕೆಲವು ಹಿಂದುತ್ವ ಸಂಘಟನೆಗಳ ಮುಖಂಡರು ನಾವಿದ್ದೇವೆ ಎಂದು ಈಗ ನಾಲ್ಕೈದು ದಿನ ಬಂದು ಹೋಗುತ್ತಾರೆ. ಅದು ಮಾಡುತ್ತೇವೆ ಇದು ಮಾಡುತ್ತೇವೆ ಎನ್ನುತ್ತಾರೆ. ಎಲ್ಲ ಆದ ಮೇಲೆ ಅವರೂ ಇರುವುದಿಲ್ಲ. ಯಾರೂ ಇರುವುದಿಲ್ಲ. ನಮ್ಮ ಮಗನಿಗೆ 31 ವರ್ಷ. ನಮ್ಮ ಕುಟುಂಬಕ್ಕೆ ಅವನೇ ಆಧಾರ ಸ್ತಂಭವಾಗಿದ್ದ. ಜೀವನ ಪೂರ್ತಿ ಕೊರಗುವವರು ನಾವು’ ಎಂದು ಸುಹಾಸ್ ಶೆಟ್ಟಿ ಅವರ ತಂದೆ ಮೋಹನ ಶೆಟ್ಟಿ ಮಾಧ್ಯಮಗಳ ಮುಂದೆ ನೋವು ತೋಡಿಕೊಂಡರು.

‘ನನ್ನ ಮಗನ ಸಾವಿಗೆ ನ್ಯಾಯ ಸಿಗಬೇಕು ನಿಜ. ಈಗ ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೆ. ಹಾಗಾಗಿ ನ್ಯಾಯ ಸಿಗುವ ವಿಶ್ವಾಸ ಇಲ್ಲ. ಹಿಂದೂಗಳಿಗೆ ಭದ್ರತೆ ಇಲ್ಲ’ ಎಂದೂ ಅವರು ಹೇಳಿದರು.

ಮಂಗಳೂರಿನ ಬಜಪೆಯ ಕಿನ್ನಿಪದವಿನಲ್ಲಿ ಗುರುವಾರ ಹತ್ಯೆಗೀಡಾದ ಸುಹಾಸ್ ಶೆಟ್ಟಿ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಲು ಬಿ.ಸಿ ರೋಡ್‌ನಲ್ಲಿ ಸೇರಿದ್ದ ಜನಸ್ತೋಮ ಚಿತ್ರ : ಫಕ್ರುದ್ದೀನ್ ಎಚ್

ಮೈಸೂರು, ಚಾಮರಾಜನಗರ, ರಾಯಚೂರಿನಲ್ಲಿ ಬಂದ ಸಂದೇಶ

ಇ- ಮೇಲ್ ‘ಬಾಂಬ್’: ಆತಂಕ

ಪ್ರಜಾವಾಣಿ ವಾರ್ತೆ

ಮೈಸೂರು/ ಚಾಮರಾಜನಗರ/ ರಾಯಚೂರು: ‘ಬಾಂಬ್ ಇಡಲಾಗಿದೆ’ ಎಂದು ವಿವಿಧ ಸರ್ಕಾರಿ ಕಚೇರಿಗಳಿಗೆ ಬಂದ ‘ಇ–ಮೇಲ್’ ಸಂದೇಶ ಶುಕ್ರವಾರ ಹಲವು ಕಚೇರಿಗಳಲ್ಲಿ ಆತಂಕಕ್ಕೆ ಕಾರಣವಾಗಿದೆ.

ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ, ಚಾಮರಾಜನಗರ ಜಿಲ್ಲಾಡಳಿತ ಕಚೇರಿ ಮತ್ತು ರಾಯಚೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಇ–ಮೇಲ್‌ಗಳು ಆತಂಕ ಮೂಡಿಸಿದವು.

‘ವಿವಿಧ ಸ್ಥಳಗಳಲ್ಲಿ ಬಾಂಬ್ ಇಟ್ಟಿದ್ದೇವೆ ಎಂಬ ಬರವಣಿಗೆಯುಳ್ಳ ಇ–ಮೇಲ್ ಬಂದಿದೆ. ತಕ್ಷಣವೇ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನ ದಳದ ಮೂಲಕ ನಗರದ ಪ್ರಮುಖ ಸ್ಥಳಗಳಲ್ಲಿ ತಪಾಸಣೆ ನಡೆಸಲಾಗಿದೆ. ಆಯಾ ಠಾಣೆ ವ್ಯಾಪ್ತಿಯಲ್ಲಿ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ಪರಿಶೀಲನೆ ನಡೆಸಲಾಗಿದೆ. ಬಾಂಬ್ ಇಟ್ಟಿರುವುದು ಕಂಡುಬಂದಿಲ್ಲ’ ಎಂದು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ‘ಪ್ರಜಾವಾಣಿ’ಗೆ ತಿಳಿಸಿದರು.

10ನೇ ಪುಟ ನೋಡಿ

ನನಗೂ ಬೆದರಿಕೆ ಕರೆ ಬಂದಿದೆ: ಸಿಎಂ

ಸಿದ್ದರಾಮಯ್ಯ

ಮಂಡ್ಯ: ‘ನನಗೂ ಬೆದರಿಕೆ ಕರೆಗಳು ಬಂದಿವೆ. ಈ ಬಗ್ಗೆ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ, ಆರೋಪಿಗಳನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳಲು ಸೂಚಿಸಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರಿಗೆ ಬೆದರಿಕೆ ಕರೆ ಬಂದಿರುವ ಬಗ್ಗೆ ಪತ್ರಕರ್ತರು ಶುಕ್ರವಾರ ತೂಬಿನಕೆರೆ ಹೆಲಿಪ್ಯಾಡ್‌ನಲ್ಲಿ ಕೇಳಿದ ಪ್ರಶ್ನೆಗೆ ಮೇಲಿನಂತೆ ಪ್ರತಿಕ್ರಿಯಿಸಿದರು.

10ನೇ ಪುಟ ನೋಡಿ

ಸಚಿವೆಗೆ ನಿಂದನೆ ಆರೋಪ: ರವಿ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೆಳಗಾವಿಯ ವಿಧಾನಮಂಡಲ ಅಧಿವೇಶನದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರನ್ನು ಅಶ್ಲೀಲ ಪದಬಳಕೆ ಮೂಲಕ ನಿಂದಿಸಲಾಗಿದೆ’ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ ವಿರುದ್ಧ ದಾಖಲಿಸಲಾಗಿರುವ ಕ್ರಿಮಿನಲ್ ಪ್ರಕರಣವನ್ನು ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ಸಿ.ಟಿ.ರವಿ

‘ನನ್ನ ವಿರುದ್ಧದ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಸಿ.ಟಿ.ರವಿ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಶುಕ್ರವಾರ ಪ್ರಕಟಿಸುವ ಮೂಲಕ ರವಿ ಅರ್ಜಿಯನ್ನು ವಜಾಗೊಳಿಸಿದ್ದಾರೆ.

‘ಸದನದಲ್ಲಿ ಬಳಕೆ ಮಾಡಿದ್ದಾರೆ ಎಂಬ ಆರೋಪಿತ ಪದಗಳ ಬಗ್ಗೆ ಅಪರಾಧಿಕ ಪ್ರಾಸಿಕ್ಯೂಷನ್ ಮುಖಾಂತರ; ಶಾಸಕರಿಗೆ ಇರುವ ವಿನಾಯಿತಿಯ ಅಡಿಯಲ್ಲಿ ರಕ್ಷಣೆ ನೀಡಲು ಆಗುವುದಿಲ್ಲ. ಆರೋಪಿತ ಪದವನ್ನು ಬಳಕೆ ಮಾಡಿದ್ದರೆ ಅಥವಾ ಅಂತಹ ನಡತೆ ಪ್ರದರ್ಶಿಸಿದ್ದರೆ ಅದು ಮಹಿಳೆಯ ಘನತೆಗೆ ಹಾನಿ ಉಂಟು ಮಾಡುವಂತಹುದು’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ. ಪ್ರಾಸಿಕ್ಯೂಷನ್ ಪರ ರಾಜ್ಯ ಪ್ರಾಸಿಕ್ಯೂಟರ್ ಬಿ.ಎ.ಬೆಳ್ಳಿಯಪ್ಪ ವಾದ ಮಂಡಿಸಿದ್ದರು.

ಕೆಪಿಎಸ್‌ಸಿ: ಮುಖ್ಯ ಪರೀಕ್ಷೆ ಇಂದು

ಬೆಂಗಳೂರು: 2023-24ನೇ ಸಾಲಿನ ಗೆಜೆಟೆಡ್ ಪ್ರೊಬೆಷನರಿ ಗ್ರೂಪ್ ‘ಎ’ ಮತ್ತು ಗ್ರೂಪ್ ‘ಬಿ’ ವೃಂದದ 384 ಹುದ್ದೆಗಳ ನೇಮಕಕ್ಕೆ ಶನಿವಾರದಿಂದ (ಮೇ 3) ಮುಖ್ಯ ಪರೀಕ್ಷೆ ಆರಂಭವಾಗಲಿದೆ.

ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯದಿದ್ದರೂ ಮುಖ್ಯಪರೀಕ್ಷೆ ಬರೆಯಲು ಕೋರ್ಟ್ ಮೊರೆ ಹೋಗಿದ್ದ ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ.

‘ಅನುಮತಿ ಪಡೆದಿರುವ ಅಭ್ಯರ್ಥಿಗಳಿಗೆ ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಕಸ್ತೂರಬಾ ನಗರದ ಬಿಬಿಎಂಪಿ ಸಂಯೋಜಿತ ಪಿಯು ಕಾಲೇಜಿನಲ್ಲಿ ಪರೀಕ್ಷೆ ಆಯೋಜಿಸಲಾಗಿದೆ. ಅಭ್ಯರ್ಥಿಗಳು ಪರೀಕ್ಷಾ ಕೇಂದ್ರದಲ್ಲಿಯೇ ಬೆಳಿಗ್ಗೆ 8ರ ಒಳಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಪಡೆದುಕೊಳ್ಳಬಹುದು’ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

‘ಮುಖ್ಯ ಪರೀಕ್ಷೆ ಬರೆಯಲು 500ಕ್ಕೂ ಹೆಚ್ಚು ಅಭ್ಯರ್ಥಿಗಳು ಹೈಕೋರ್ಟ್‌ನಿಂದ ಅನುಮತಿ ಪಡೆದುಕೊಂಡಿದ್ದಾರೆ. ಶುಕ್ರವಾರ (ಮೇ 2) ಸಂಜೆಯ ಒಳಗೆ ಶುಲ್ಕ ಪಾವತಿಸಿ, ಪ್ರವೇಶ ಪತ್ರ ಪಡೆಯಲು ಎಲ್ಲರಿಗೂ ಸಾಧ್ಯವಾಗಿಲ್ಲ. ಹೀಗಾಗಿ ಪರೀಕ್ಷಾ ಕೇಂದ್ರದಲ್ಲೇ ಆ ವ್ಯವಸ್ಥೆ ಮಾಡಲಾಗಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

Court Room Quarter Page Ad - Kannada 16 x 25 cms

ಜಾಗೃತರಾಗಿ
ಸಂಘಟಿತರಾಗಿ
ಹೋರಾಡಿ
ದಲಿತ ಸಂಘರ್ಷ ಸಮಿತಿ (ರಿ)
DSS
(ಸಮತಾವಾದ), ರಾಜ್ಯ ಸಮಿತಿ ಬೆಂಗಳೂರು
ಯಲಹಂಕ ಮಿನಿ ವಿಧಾನಸೌಧದ ಮುಂಭಾಗದಲ್ಲಿ ನೂತನವಾಗಿ ನಿರ್ಮಿಸಿರುವ
ಸಂವಿಧಾನಶಿಲ್ಪಿ, ವಿಶ್ವವಿಜ್ಞಾನಿ, ಭಾರತರತ್ನ, ಮಹಾಮಾನವತಾವಾದಿ
ಬಾಬಾಸಾಹೇಬ್ ಡಾ|| ಬಿ.ಆರ್.ಅಂಬೇಡ್ಕರ್ ರವರ
14 ಅಡಿ ಎತ್ತರದ ಕಂಚಿನ ಪ್ರತಿಮೆ ಲೋಕಾರ್ಪಣೆಯ ಸಮಾರಂಭ
ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪಮುಖ್ಯಮಂತ್ರಿಗಳು, ಸಚಿವರುಗಳು
ಹಾಗೂ ಮಾನ್ಯ ಶಾಸಕರುಗಳಿಗೆ ಆದರದ ಸುಸ್ವಾಗತ
ದಿನಾಂಕ: 03-05-2025 ಸ್ಥಳ: ಮಿನಿ ವಿಧಾನಸೌಧ, ಯಲಹಂಕ, ಬೆಂಗಳೂರು
ಹೆಚ್. ಮಾರಪ್ಪ
ರಾಜ್ಯಾಧ್ಯಕ್ಷರು
ಮೊ.9448107607
ಸರ್ವರಿಗೂ ಆದರದ ಸುಸ್ವಾಗತ
ಎಂ.ರಾಜಣ್ಣ ಶೆಟ್ಟಿಗೆರೆ
ಕಾಂಗ್ರೆಸ್ ಮುಖಂಡರು
ಮೊ.9845427108

Reliance
SMART BAZAAR
ನಮ್ಮ ಘೋಷಣೆ, ಇಡೀ ಇಂಡಿಯಾ ಮಾಡಲಿದೆ ಫುಲ್ ಪೈಸಾ ವಸೂಲ್
ಫುಲ್ ಪೈಸಾ ವಸೂಲ್ ಸೇಲ್
ಕೊನೆಯ 2 ದಿನಗಳು
30th APR - 4th MAY
ಗುಡ್ ಲೈಫ್ ಬಾದಾಮ್ ವ್ಯಾಲ್ಯೂ / PL ಕ್ಯಾಶೂ ರೆಗ್ಯುಲರ್ ವ್ಯಾಲ್ಯೂ ಪ್ಯಾಕ್ 500 g
ಸ್ಟಾರ್ಟ್ ಬೆಲೆ ₹389 / ₹419
ಎಮ್‌ಆರ್‌ಪಿ ₹590 / ₹770
ಉಳಿತಾಯ ₹201 / ₹351
ಲೂಸ್ ಸಕ್ಕರೆ S / ಕಚ್ಚಾ ಕಡಲೆಕಾಯಿ ಬೀಜ 1 kg
ಸ್ಟಾರ್ಟ್ ಬೆಲೆ ₹43 / ₹119
ಮಾರುಕಟ್ಟೆ ಬೆಲೆ ₹50 / ₹124
ಎಮ್‌ಆರ್‌ಪಿ ₹1950 / ₹2100
ಉಳಿತಾಯ ₹951 / ₹701
ಸ್ಟಾರ್ಟ್ ಬೆಲೆ ₹999 / ₹1399
ಎಮ್‌ಆರ್‌ಪಿ ₹270 / ₹1900
ಉಳಿತಾಯ ₹71 / ₹801
ಸ್ಟಾರ್ಟ್ ಬೆಲೆ ₹199 / ₹1099
₹42.26 /kg
₹38.42 /kg
₹53.80 /kg
ಚಕ್ಕಿ ಆಟಾ 5 kg / ರಾಯಲ್ ಬುಲೆಟ್ ಕೋಲಂ ಅಕ್ಕಿ 26 kg
ಗುಡ್ ಲೈಫ್ ಡೈಲಿ /ಪ್ರೀಮಿಯಂ ಸೋನಾ ಮಸೂರಿ ಕಚ್ಚಾ ರೈಸ್ 26 kg
ಎಮ್‌ಆರ್‌ಪಿ ₹210 / ₹395
ಉಳಿತಾಯ ₹61 / ₹96
ಸ್ಟಾರ್ಟ್ ಬೆಲೆ ₹149 / ₹299
₹149.50 /L
2 L ಸನ್ ಪ್ಯೂರ್ ಖರೀದಿ ಮೇಲೆ 1 kg ಈರುಳ್ಳಿ ಉಚಿತ
ಗುಡ್ ಲೈಫ್ ಫಿಲ್ಟರ್ ಮಾಡಿದ ಕಡಲೆಕಾಯಿ 1 L / ಸನ್ ಪ್ಯೂರ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 2 L
ಮಿನಿಮಮ್ 25% ಕಡಿತ
ಡೈರಿ / ಫ್ರೋಜನ್ ಮತ್ತು ಬೇಕರಿ (ಆಯ್ದ ಸರಣಿ)
ಎಮ್‌ಆರ್‌ಪಿ ₹25 ರಿಂದ
Scan & Unlock Secret Offers
BUY ANY 3 GET ANY 1 FREE
ತಂಪು ಪಾನೀಯಗಳು ಮತ್ತು ಜ್ಯೂಸ್‌ಗಳು 600 ml ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹40 ರಿಂದ /ಯೂನಿಟ್
BUY ANY 2 GET ANY 1 FREE
ಬಿಸ್ಕಿಟ್ / ಚಾಕೊಲೇಟ್ / ರಸ್ಕ್ 118 g ರಿಂದ (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹100 ರಿಂದ /ಯೂನಿಟ್
ಟಾಟಾ ಚಹಾ ಗೋಲ್ಡ್ 500 g
ಉಳಿತಾಯ ₹85
ಎಮ್‌ಆರ್‌ಪಿ ₹330 ರಿಂದ
ಸ್ಟಾರ್ಟ್ ಬೆಲೆ ₹245 ರಿಂದ
ಹಾರ್ಲಿಕ್ಸ್ / ಬೂಸ್ಟ್ 1 kg
ಉಳಿತಾಯ ₹201
ಎಮ್‌ಆರ್‌ಪಿ ₹600 ರಿಂದ
ಸ್ಟಾರ್ಟ್ ಬೆಲೆ ₹399 ರಿಂದ
ಮಿನಿಮಮ್ 45% ಕಡಿತ
ಸಾಬೂನುಗಳು 125 g ರಿಂದ (ಮಲ್ಟಿಪ್ಯಾಕ್) (ಆಯ್ದ ಪ್ರಕಾರಗಳು)
ಎಮ್‌ಆರ್‌ಪಿ ₹313 ರಿಂದ
ಶಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 55% ಕಡಿತ
ಎಮ್‌ಆರ್‌ಪಿ ₹890 ರಿಂದ
ಎಮ್‌ಆರ್‌ಪಿ ₹208 ರಿಂದ
ಮಿನಿಮಮ್ 40% ಕಡಿತ
ಟೂತ್‌ಪೇಸ್ಟ್ 300 g ರಿಂದ (ಆಯ್ದ ಪ್ರಕಾರಗಳು)
ಸರ್ಫ್ ಎಕ್ಸೆಲ್ 7 kg / ಟೈಡ್ ಡಿಟರ್ಜಂಟ್ ಪೌಡರ್ 8 kg (ಆಯ್ದ ಪ್ರಕಾರಗಳು)
ಫ್ಲ್ಯಾಟ್ 40% ಕಡಿತ
ಎಮ್‌ಆರ್‌ಪಿ ₹985 ರಿಂದ
ಸ್ಟಾರ್ಟ್ ಬೆಲೆ ₹591 ರಿಂದ
ಸ್ಟಾರ್ಟ್ ಬೆಲೆ ₹1099 ರಿಂದ
3 ಬರ್ನರ್ ಗ್ಯಾಸ್ ಸ್ಟವ್
ಎಮ್‌ಆರ್‌ಪಿ ₹7560 ರಿಂದ
2000+ ಫ್ಯಾಷನ್ ಸ್ಟೈಲ್ಸ್ ₹399 ಕ್ಕಿಂತ ಕಡಿಮೆ
ಟಿ-ಶರ್ಟ್ ₹199 | ಶರ್ಟ್ ₹299
ಕುರ್ತಾ ₹299 | ಶಾರ್ಟ್ಸ್ ₹299 | ಜೀನ್ಸ್ ₹399
ಸ್ಟಾರ್ಟ್ ಬೆಲೆ ₹999
ಎಮ್‌ಆರ್‌ಪಿ ₹2095 ರಿಂದ
LA OPALA LARAH
18 ಪೀಸ್ ಓಪಲ್‌ವೇರ್ ಡಿನ್ನರ್ ಸೆಟ್
ಉಚಿತ LED TV ಪಡೆಯಿರಿ 80 cm (32 inch)
ಬ್ರಾಂಡೆಡ್ 1.5 ಟೋನ್ 3 ಸ್ಟಾರ್ ಇನ್ವರ್ಟರ್ ಏರ್ ಕಂಡಿಷನರ್‌ಗಳು (ಆಯ್ದ ಸರಣಿ)
ಎಮ್‌ಆರ್‌ಪಿ ₹55999 ರಿಂದ
ಸ್ಟಾರ್ಟ್ ಬೆಲೆ ₹32990 ರಿಂದ
ಕಾಟನ್ ಡಬಲ್ ಬೆಡ್ ಶೀಟ್ ನೊಂದಿಗೆ ಪಿಲ್ಲೋ ಕವರ್
ಫ್ಲ್ಯಾಟ್ 70% ಕಡಿತ
ಎಮ್‌ಆರ್‌ಪಿ ₹1199 ರಿಂದ
ಸ್ಟಾರ್ಟ್ ಬೆಲೆ ₹360 ರಿಂದ
ಸ್ಟಾರ್ಟ್ ಬೆಲೆ ₹3999
ಉಚಿತ ಡಫಲ್ ಟ್ರಾಲಿ ಬ್ಯಾಗ್ ಅನ್ನು ಪಡೆಯಿರಿ
ಕ್ರೂಸರ್ ಹಾರ್ಡ್ ಟ್ರಾಲಿ 2 ಸೆಟ್
ಎಮ್‌ಆರ್‌ಪಿ ₹12800
ಈಗ ತೆರೆದಿದೆ ಟಿಟಿಎಂಸಿ, ಶಾಂತಿನಗರ ಬಸ್ ಸ್ಟ್ಯಾಂಡ್.
10% INSTANT DISCOUNT SBI card
#Min. Trxn.: ₹3,000; Max. Discount: ₹500 per Credit Card; Validity: 30 Apr - 04 May 2025. T&C Apply.
ನಿಮ್ಮ ಹತ್ತಿರದ ಸ್ಟೋರ್ ಭೇಟಿ ನೀಡಿ
fresh Signature
SMART BAZAAR

ಸುಧಾ, ಮಯೂರ ಓದಿರಿ

ICMAI
THE INSTITUTE OF COST ACCOUNTANTS OF INDIA
Statutory Body under an Act of Parliament
www.icmai.in

iCMA

ದಿ ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟಂಟ್ಸ್ ಆಫ್ ಇಂಡಿಯಾ

ಪ್ರಧಾನ ಕಚೇರಿ: ಸಿಎಂಎ ಭವನ, 3, ಇನ್‌ಸ್ಟಿಟ್ಯೂಷನಲ್ ಏರಿಯಾ, ಲೋಧಿ ರಸ್ತೆ, ನವದೆಹಲಿ – 110003 ದಿನಾಂಕ: 26ನೇ ಏಪ್ರಿಲ್, 2025

ಸಾರ್ವಜನಿಕ ಪ್ರಕಟಣೆ

ವಿಷಯ: ಗೆಜೆಟ್ ಅಧಿಸೂಚನೆ ದಿನಾಂಕ 25.04.2025 – ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟಂಟ್ಸ್ ರೆಗ್ಯುಲೇಶನ್ಸ್, 1959ರ ರೆಗ್ಯುಲೇಶನ್ 89ಕ್ಕೆ ತಿದ್ದುಪಡಿ.

ಸಂಬಂಧಿತ ಎಲ್ಲರಿಗೂ ಈ ಮೂಲಕ ತಿಳಿಸುವುದು ಏನೆಂದರೆ, ದಿ ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟಂಟ್ಸ್ (ಅಮೆಂಡ್‌ಮೆಂಟ್) ರೆಗ್ಯುಲೇಶನ್ಸ್, 2025 ಅನ್ನು ಭಾರತದ ಅಧಿಕೃತ ಗೆಜೆಟಿಯಲ್ಲಿ ಅಧಿಸೂಚಿಸಲಾಗಿದೆ ಮತ್ತು 25ನೇ ಏಪ್ರಿಲ್, 2025 ರಿಂದ ಜಾರಿಗೊಂಡಂತೆ ಇದು ಜಾರಿಯಾಗಿರುತ್ತದೆ.

ಕಾಸ್ಟ್ ಅಂಡ್ ವರ್ಕ್ಸ್ ಅಕೌಂಟಂಟ್ಸ್ (ಅಮೆಂಡ್‌ಮೆಂಟ್) ರೆಗ್ಯುಲೇಶನ್ಸ್, 1959ರ ರೆಗ್ಯುಲೇಶನ್ 89ರ ತಿದ್ದುಪಡಿ ಪ್ರಕಾರ, ಸಂಸ್ಥೆಯ ಪ್ರಧಾನ ಕಚೇರಿಯನ್ನು ದೆಹಲಿಗೆ ವರ್ಗಾಯಿಸಲಾಗಿದೆ.

ಸಂಸ್ಥೆಯ ಎಲ್ಲಾ ಪಾಲುದಾರರು ಸದರಿ ತಿದ್ದುಪಡಿಯನ್ನು ಗಮನಿಸಬೇಕು ಮತ್ತು ತಮ್ಮ ಅಧಿಕೃತ ದಾಖಲಾತಿಯಲ್ಲಿ ಪ್ರಧಾನ ಕಚೇರಿಯ ವಿಳಾಸವನ್ನು ಈ ಕೆಳಗಿನಂತೆ ಅಪ್‌ಡೇಟ್ ಮಾಡಬೇಕೆಂದು ಕೋರಲಾಗಿದೆ:

ದಿ ಇನ್‌ಸ್ಟಿಟ್ಯೂಟ್ ಆಫ್ ಕಾಸ್ಟ್ ಅಕೌಂಟಂಟ್ಸ್ ಆಫ್ ಇಂಡಿಯಾ
ಸಿಎಂಎ ಭವನ, 3, ಇನ್‌ಸ್ಟಿಟ್ಯೂಷನಲ್ ಏರಿಯಾ,
ಲೋಧಿ ರಸ್ತೆ, ನವದೆಹಲಿ–110003

ಸದರಿ ಗೆಜೆಟಿ ಅಧಿಸೂಚನೆಯು ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪರಿಶೀಲನೆಗಾಗಿ ಲಭ್ಯವಿರುತ್ತದೆ: https://icmai.in//upload/Institute/Updates//Gazette250425.pdf

ಸಹಿ/– ಸಿಎಂಎ (ಡಾ.) ಡಿ.ಪಿ.ನಂದಿ
ಕಾರ್ಯದರ್ಶಿ
(ಆಫಿಸಿಯೇಟಿಂಗ್)

CBC-07107/12/0001/2526

ಮಹೇಶ್ವರ ರಾವ್ ಬಿಬಿಎಂಪಿ ಮುಖ್ಯ ಆಯುಕ್ತ

ಬೆಂಗಳೂರು: ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರನ್ನು ಬಿಬಿಎಂಪಿ ಮುಖ್ಯ ಆಯುಕ್ತರ ಹುದ್ದೆಗೆ ವರ್ಗಾಯಿಸಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.

ಮಹೇಶ್ವರರಾವ್

ಮಹೇಶ್ವರ ರಾವ್ ಅವರಿಗೆ ಬಿಬಿಎಂಪಿಯ ಮುಖ್ಯ ಆಯುಕ್ತರ ಹುದ್ದೆಯನ್ನು ಏಪ್ರಿಲ್ 28ರಂದು ಹೆಚ್ಚುವರಿಯಾಗಿ ವಹಿಸಲಾಗಿತ್ತು. ಅದರಂತೆ, ತುಷಾರ್ ಗಿರಿನಾಥ್ ಅವರಿಂದ ಏಪ್ರಿಲ್ 30ರಂದು ಅಧಿಕಾರ ಸ್ವೀಕರಿಸಿದ್ದರು.

ಮಹೇಶ್ವರ ರಾವ್ ಅವರನ್ನು ಬಿಬಿಎಂಪಿ ಮುಖ್ಯ ಆಯುಕ್ತರ ಹುದ್ದೆಗೆ ವರ್ಗಾಯಿಸಿ, ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ವಿಲೇವಾರಿಯಾಗದ ಅರ್ಜಿಗಳು: ಪೂರ್ವ ವಲಯದಲ್ಲಿ ಅತಿಹೆಚ್ಚು ನಿಧಾನ

ಉದ್ದಿಮೆ ಪರವಾನಗಿ ವಿತರಣೆ ವಿಳಂಬ

● ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ ವ್ಯಾಪಾರ ಆರಂಭಿಸುವ ಸಂಸ್ಥೆ ಅಥವಾ ವ್ಯಕ್ತಿಗಳಿಗೆ ಉದ್ದಿಮೆ ಪರವಾನಗಿ (ಟ್ರೇಡ್ ಲೈಸೆನ್ಸ್) ವಿತರಣೆಯಲ್ಲಿ ವಿಳಂಬ ವಾಗುತ್ತಿದೆ. ನಾಲ್ಕೈದು ತಿಂಗಳಾದರೂ ಹಲವು ಅರ್ಜಿಗಳು ವಿಲೇವಾರಿಯಾಗಿಲ್ಲ.

ಉದ್ಯಮ ಪ್ರಾರಂಭಿಸಲು ವ್ಯಾಪಾರ ಪರವಾನಗಿಗೆ 'ಸಕಾಲ' ಕಾಯ್ದೆಯಡಿ ಅರ್ಜಿಗಳನ್ನು ಸಲ್ಲಿಸಲಾಗುತ್ತಿದ್ದರೂ, ಕೆಲವು ಆರೋಗ್ಯ ವೈದ್ಯಾಧಿಕಾರಿಗಳೂ ತಮ್ಮ ಲಾಗಿನ್‌ನಲ್ಲೇ ಅರ್ಜಿಗಳನ್ನು ತಡೆಹಿಡಿದಿಟ್ಟುಕೊಂಡಿದ್ದಾರೆ. ಡಿಸೆಂಬರ್‌ನಲ್ಲಿ ಸಲ್ಲಿಸಲಾಗಿರುವ ಅರ್ಜಿಗಳ ವಿಲೇವಾರಿ ಇನ್ನೂ ಆಗಿಲ್ಲ.

ಹೊಸ ವ್ಯಾಪಾರ ಪರವಾನಗಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬೇಕು. ಇದಾದ ಮೇಲೆ, ಎಲ್ಲ ದಾಖಲೆಗಳನ್ನು ಆರೋಗ್ಯ ವಿಭಾಗದ ಅಧಿಕಾರಿಗಳಿಗೆ ಖುದ್ದಾಗಿ ಸಲ್ಲಿಸಲು ಸೂಚಿಸಲಾಗುತ್ತದೆ. ಅವುಗಳನ್ನು ಪರಿಶೀಲಿಸಿದ ಬಳಿಕ ಸ್ಥಳ ಪರಿಶೀಲನೆ ನಡೆಸುತ್ತಾರೆ. ಎಲ್ಲವೂ ನಿಯಮಬದ್ಧವಾಗಿದ್ದರೆ ಪರವಾನಗಿಯನ್ನು ವಿತರಿಸಲಾಗುತ್ತದೆ.

ಸಕಾಲ ನಿಯಮಗಳ ಪ್ರಕಾರ ಈ ಎಲ್ಲ ಪ್ರಕ್ರಿಯೆಯನ್ನು 10ರಿಂದ 30 ದಿನದ ಒಳಗೆ ಪೂರ್ಣಗೊಳಿಸಬೇಕು. ಆದರೆ, ಕೆಲವು ಆರೋಗ್ಯ ವೈದ್ಯಾಧಿಕಾರಿಗಳು ಅರ್ಜಿಗಳನ್ನು ತಡೆಹಿಡಿಯುತ್ತಿದ್ದಾರೆ ಎಂದು ದೂರಲಾಗುತ್ತಿದೆ.

ಡಿಸೆಂಬರ್‌ನಿಂದ ಮಾರ್ಚ್‌ನಲ್ಲಿ ಸಲ್ಲಿಸಲಾಗಿದ್ದ ಅರ್ಹ ಅರ್ಜಿಗಳಿಗೆ ಏಪ್ರಿಲ್ 1ರೊಳಗೇ ವ್ಯಾಪಾರ ಪರವಾನಗಿಯನ್ನು ನೀಡಿದ್ದರೆ, ಏಪ್ರಿಲ್ 1ರಿಂದ ಪರವಾನಗಿ ನವೀಕರಣದ ಶುಲ್ಕವನ್ನು ಪಾವತಿಸಬೇಕಾಗಿತ್ತು. ಇದಕ್ಕೆ ಅವಕಾಶವಿಲ್ಲದಂತೆ ಹೊಸ ಅರ್ಜಿಗಳನ್ನು ತಡೆಹಿಡಿದಿರುವುದರಿಂದ ಪಾಲಿಕೆಗೆ ಆರ್ಥಿಕವಾಗಿ ನಷ್ಟವಾಗಿದೆ ಎನ್ನುತ್ತವೆ ಮೂಲಗಳು.

'ಜನವರಿಯಲ್ಲಿ ಉದ್ದಿಮೆ ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದೇನೆ. ಆದರೆ, ಈವರೆಗೂ ಸುಮ್ಮನೆ ಅಲೆದಾಡಿಸಲಾಗುತ್ತಿದೆ. ಅಗತ್ಯವಿಲ್ಲದ ದಾಖಲೆ ಕೇಳುತ್ತಿದ್ದಾರೆ. ಅವರಿಗೆ 'ಅಗತ್ಯವಾದದ್ದನ್ನು' ನೀಡಿದವರಿಗೆ ಪರವಾನಗಿ ಬೇಗ ಸಿಗುತ್ತಿದೆ. ವಿಳಂಬದಿಂದ ವ್ಯಾಪಾರ ಆರಂಭಕ್ಕೆ ತೊಡಕಾಗುತ್ತಿದೆ. ಇತರೆ ಪ್ರಕ್ರಿಯೆಗಳನ್ನು ಆರಂಭಿಸಲು ಸಾಧ್ಯವಾಗುತ್ತಿಲ್ಲ' ಎಂದು ನವ ಉದ್ಯಮಿಯೊಬ್ಬರು ಅಳಲು ತೋಡಿಕೊಂಡರು.

'ಉದ್ದಿಮೆ ಪರವಾನಗಿ ವಿತರಣೆ ಪೂರ್ವ ವಲಯದಲ್ಲಿ ಅತಿಹೆಚ್ಚು ನಿಧಾನಗತಿಯಲ್ಲಿದೆ. ಸರ್ವಜ್ಞನಗರ, ಸಿ.ವಿ. ರಾಮನ್ ನಗರ ವಿಭಾಗದಲ್ಲೇ ತಲಾ 50ಕ್ಕೂ ಹೆಚ್ಚು ಅರ್ಜಿಗಳು ಬಾಕಿ ಉಳಿದಿವೆ' ಎಂದರು.

'ಡಿಸೆಂಬರ್‌ನಿಂದ ಮಾರ್ಚ್‌ವರೆಗೆ ಉದ್ದಿಮೆ ಪರವಾನಗಿಗಾಗಿ ಸಲ್ಲಿಸಲಾಗಿದ್ದ ಅರ್ಜಿಗಳಿಗೆ ಆಗಲೇ ಪರವಾನಗಿ ಮಂಜೂರು ಮಾಡಿದ್ದರೆ, 2025ರ ಏಪ್ರಿಲ್‌ನಿಂದ ಅವುಗಳ ನವೀಕರಣ ಮಾಡಬೇಕಾಗಿತ್ತು. ಆದರೆ ಆರೋಗ್ಯ ವಿಭಾಗದ ವೈದ್ಯಾಧಿಕಾರಿಗಳು ಹಣದ ಆಮಿಷಕ್ಕಾಗಿ ಹೊಸ ಪರವಾನಗಿ ಅರ್ಜಿಗಳನ್ನು ವಿಲೇವಾರಿ ಮಾಡದೆ ಅವರ ಲಾಗಿನ್‌ನಲ್ಲೇ ಉಳಿಸಿಕೊಂಡು ಪಾಲಿಕೆಗೆ ಆರ್ಥಿಕ ನಷ್ಟ ಉಂಟು ಮಾಡಿದ್ದಾರೆ' ಎಂದು ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಬಿಬಿಎಂಪಿಯ ಅಧಿಕಾರಿಗಳು ಮಾಹಿತಿ ನೀಡಿದರು.

ಹೆಚ್ಚು ಬಾಕಿ ಇಲ್ಲ: ಸಿಎಚ್‌ಒ

'ಉದ್ದಿಮೆ ಪರವಾನಗಿ ಅರ್ಜಿಗಳನ್ನು ಹೆಚ್ಚು ಸಮಯ ಉಳಿಸಿಕೊಳ್ಳುವುದಿಲ್ಲ. ಸಕಾಲದಲ್ಲಿ ಅರ್ಜಿಗಳು ಬರುವುದರಿಂದ ವಿಳಂಬ ಸಾಧ್ಯವಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿ ಶುಕ್ರವಾರದ ವೇಳೆಗೆ 24 ಅರ್ಜಿಗಳು ಮಾತ್ರ ಬಾಕಿ ಉಳಿದಿವೆ. ಯಾವುದಾದರೂ ಅರ್ಜಿ ಹೆಚ್ಚು ವಿಳಂಬವಾಗಿದ್ದರೆ ದೂರು ನೀಡಬಹುದು' ಎಂದು ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದಿನ್ ಮದನಿ ತಿಳಿಸಿದರು.

'ಉದ್ದಿಮೆ ಪರವಾನಗಿಯನ್ನು ಒಂದೇ ದಿನದಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಕ್ಕಾಗಿ ಹೊಸ ತಂತ್ರಾಂಶವನ್ನು ರೂಪಿಸಲಾಗಿದೆ. ಆನ್‌ಲೈನ್‌ನಲ್ಲಿ ಅರ್ಜಿಯೊಂದಿಗೆ ಎಲ್ಲ ದಾಖಲೆಗಳನ್ನು ಸಲ್ಲಿಸಿದರೆ 'ತಾತ್ಕಾಲಿಕ ಉದ್ದಿಮೆ ಪರವಾನಗಿ'ಯನ್ನು ಅಂದೇ ನೀಡುವ ವ್ಯವಸ್ಥೆ ಜಾರಿಗೆ ಬರಲಿದೆ. ಇದಕ್ಕೆ ಸಂಬಂಧಿಸಿದ ಕಡತವನ್ನು ಮುಖ್ಯ ಆಯುಕ್ತರ ಅನುಮೋದನೆಗೆ ಸಲ್ಲಿಸಲಾಗಿದ್ದು, ಸಮ್ಮತಿ ದೊರೆತ ಕೂಡಲೇ ಅನುಷ್ಠಾನ ಮಾಡಲಾಗುತ್ತದೆ' ಎಂದು ಅವರು ಮಾಹಿತಿ ನೀಡಿದರು.

ಕರ್ತವ್ಯ ಲೋಪ ಪ್ರಕರಣ ಆರೋಗ್ಯಾಧಿಕಾರಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಲಯದಲ್ಲಿ ಆರೋಗ್ಯಾಧಿಕಾರಿಯಾಗಿದ್ದಾಗ ತಮ್ಮ ಮಗನ ಒಡೆತನದ ನಕಲಿ ಸಂಸ್ಥೆಗೆ ಸಾಮಗ್ರಿ ವಿತರಣೆ ಹಾಗೂ ವೈದ್ಯರನ್ನು ಒದಗಿಸಲು ಕಾರ್ಯಾದೇಶ ನೀಡಿ ಕರ್ತವ್ಯಲೋಪ ಎಸಗಿರುವ ಡಾ. ಎಸ್.ಕೆ. ಸವಿತಾ ಅವರಿಗೆ ನಗರಾಭಿವೃದ್ಧಿ ಇಲಾಖೆ ನೋಟಿಸ್ ಜಾರಿ ಮಾಡಿದೆ.

'2022ರ ಜನವರಿ 5ರಿಂದ ಮೇ 23ರವರೆಗೆ ರಾಜರಾಜೇಶ್ವರಿ ನಗರ ವಲಯದಲ್ಲಿ ಆರೋಗ್ಯಾಧಿಕಾರಿಯಾಗಿದ್ದಾಗ ಸವಿತಾ ಅವರು ತಮ್ಮ ಮಗನಾದ ಸಿ. ಸಿದ್ದರಾಜು ಚಿರಾಗ್ ಒಡೆತನದ ಎವಿಎಸ್ ಎಂಟರ್‌ಪ್ರೈಸಸ್ ಎಂಬ ನಕಲಿ ಸಂಸ್ಥೆಗೆ ಕಾನೂನುಬಾಹಿರವಾಗಿ ಕಾರ್ಯಾದೇಶ ನೀಡಿ ಅಕ್ರಮ ಎಸಗಿದ್ದಾರೆ.

ಅಲ್ಲದೆ, ಸಿಬ್ಬಂದಿಗೆ ವೇತನ ಪಾವತಿಸದೆ ಲೋಪ ಎಸಗಿದ್ದಾರೆ. ಕಾರ್ಯಾದೇಶ ನೀಡಿರುವ ಸಂಸ್ಥೆಯ ಮಾಲೀಕರು ತಮ್ಮ ಮಗನಾಗಿರುವ ಬಗ್ಗೆ ಲಿಖಿತ ಹೇಳಿಕೆ ನೀಡಲು ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತರು 2023ರಂದು ಪತ್ರ ನೀಡಿದ್ದರೂ ವಿವರಣೆ ಸಲ್ಲಿಸಿಲ್ಲ' ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

'ನಾಗರಿಕ ಸೇವಾ ನಡತೆ ನಿಯಮಗಳ ಉಲ್ಲಂಘನೆ ಮಾಡಿದ್ದು, ಗಂಭೀರ ಕರ್ತವ್ಯ ಲೋಪ ಎಸಗಿರುವ ನಿಮ್ಮ ವಿರುದ್ಧ ಇಲಾಖೆ ವಿಚಾರಣೆ ನಡೆಸಲು ನಿರ್ಧರಿಸಲಾಗಿದೆ' ಎಂದು ತಿಳಿಸಲಾಗಿದೆ.

'ಡಾ. ಎಸ್.ಕೆ. ಸವಿತಾ ಅವರಿಗೆ ಕಾರಣ ಕೇಳುವ ನೋಟಿಸ್ ಅನ್ನು ನೀಡಿ, ಅವರಿಂದ ದಿನಾಂಕ ಸಹಿತ ಸಹಿ ಪಡೆದು ಕಳುಹಿಸಿ ಕೊಡಬೇಕು' ಎಂದು ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸೂಚಿಸಿದ್ದಾರೆ.

ಸಮಾಜ ಕಲ್ಯಾಣ ಸಚಿವ ಎಚ್‌.ಸಿ.ಮಹದೇವಪ್ಪ ಅಭಿಮತ

'ಬದುಕಲು ಸಂವಿಧಾನ ರಕ್ಷಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಂವಿಧಾನ ರಕ್ಷಣೆ ಮಾಡಿದರೆ ಮಾತ್ರ ಬದುಕಲು ಸಾಧ್ಯ. ಸಂವಿಧಾನ ಬದಲಾಯಿಸಲು ಹೋರಾಟ ಮಾಡಿದವರು, ಅದೇ ಸಂವಿಧಾನ ಗ್ರಂಥವನ್ನು ಹಿಡಿದು ನಮಸ್ಕರಿಸುತ್ತಿದ್ದಾರೆ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ ಹೇಳಿದರು.

ಬಿ.ಆರ್‌.ಅಂಬೇಡ್ಕರ್ ಅವರ ಜಯಂತ್ಯುತ್ಸವದಲ್ಲಿ ಸಚಿವ ಎಚ್‌. ಸಿ. ಮಹದೇವಪ್ಪ ಮಾತನಾಡಿದರು

ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕ್ಷೇಮಾಭಿವೃದ್ಧಿ ಸಂಘವು ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಬಿ.ಆರ್. ಅಂಬೇಡ್ಕರ್ ಅವರ ಜಯಂತ್ಯುತ್ಸವದಲ್ಲಿ ಭಾಗವಹಿಸಿ, ಮಾತನಾಡಿದರು.

'ನಾವು ಸ್ವಾಭಿಮಾನದಿಂದ ಬದಕಲು ಅಂಬೇಡ್ಕರ್ ಅವರು ಸಂವಿಧಾನ ನೀಡಿದ್ದಾರೆ. ಹಿಂದೂ ಧರ್ಮದ ಸುಧಾರಣೆಗೆ ಸಾಕಷ್ಟು ಪ್ರಯತ್ನಗಳನ್ನು ಅವರು ಮಾಡಿದ್ದರು. ಅಸ್ಪೃಶ್ಯತೆ ಹಾಗೂ ಶ್ರೇಣಿಕೃತ ಜಾತಿ ವ್ಯವಸ್ಥೆ ಹೋಗಲಾಡಿಸಲು ಶ್ರಮಿಸಿದ್ದರು. ಶಿಕ್ಷಣ, ಸಂಘಟನೆ ಹಾಗೂ ಹೋರಾಟಕ್ಕೆ ಬುನಾದಿ ಹಾಕಿಕೊಟ್ಟಿದ್ದರು. ಪ್ರಜಾಪ್ರಭುತ್ವದ ಪರಿಕಲ್ಪನೆಯನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಳ್ಳಬೇಕು' ಎಂದರು.

'ರಾಜ್ಯದಲ್ಲಿ ಆರೋಗ್ಯ ಕ್ಷೇತ್ರ ದೊಡ್ಡ ಮಟ್ಟದಲ್ಲಿ ಸುಧಾರಣೆ ಕಂಡಿದೆ. ಕ್ಯಾನ್ಸರ್ ಎಂದೊಡನೆ ಜೀವನವೇ ಅಂತ್ಯ ಎಂಬ ಭಾವನೆ ಮೂಡುವುದು ಸಹಜ. ಆದರೆ, ವೈದ್ಯಕೀಯ ಕ್ಷೇತ್ರದ ಆವಿಷ್ಕಾರಗಳಿಂದ ಚಿಕಿತ್ಸೆಯ ಮೂಲಕ ರೋಗವನ್ನು ವಾಸಿ ಮಾಡಲಾಗುತ್ತಿದೆ. ಕ್ಯಾನ್ಸರ್ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವಲ್ಲಿ ಕಿದ್ವಾಯಿ ಸಂಸ್ಥೆ ಮುಂಚೂಣಿಯಲ್ಲಿದೆ' ಎಂದು ಅಭಿಪ್ರಾಯಪಟ್ಟರು.

ವಿಧಾನ ಪರಿಷತ್ ಮಾಜಿ ಸದಸ್ಯ ಅರವಿಂದಕುಮಾರ ಅರಳಿ, 'ಶಿಕ್ಷಣದಿಂದ ಮಾತ್ರ ಸಂಸ್ಕಾರ ಬರಲು ಸಾಧ್ಯ. ಇತ್ತೀಚೆಗೆ ಶಿಕ್ಷಣಕ್ಕಿಂತ ಸಂಘಟನೆಗೆ ಒತ್ತು ನೀಡುತ್ತಿರುವುದು ಬೇಸರದ ಸಂಗತಿ. ಅಖಂಡ ಭಾರತ ನಿರ್ಮಾಣಕ್ಕೆ ಸಂವಿಧಾನವೇ ಬುನಾದಿ. ಮುಂದಿನ ದಿನಗಳಲ್ಲಿ ಅಂಬೇಡ್ಕರ್ ದಿನಾಚರಣೆಯನ್ನು ರಾಜ್ಯದಲ್ಲಿ ಜ್ಞಾನದ ದಿನವನ್ನಾಗಿ ಆಚರಣೆ ಮಾಡಬೇಕು' ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಸಂಸ್ಥೆಯ ಆಡಳಿತಾಧಿಕಾರಿ ಡಾ.ವೈ. ನವೀನ್ ಭಟ್ ಮಾತನಾಡಿದರು. ದಲಿತ ಸಂಘರ್ಷ ಸಮಿತಿ ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್, ಸಂಸ್ಥೆಯ ನಿರ್ದೇಶಕ ಡಾ.ಟಿ.ನವೀನ್, ಅಕ್ಕ ಐಎಎಸ್ ಅಕಾಡೆಮಿ ಸಂಸ್ಥಾಪಕ ಶಿವಕುಮಾರ್ ಉಪಸ್ಥಿತರಿದ್ದರು.

6ರಿಂದ 12ರವರೆಗೆ ಬೋಧಿ ಸಪ್ತಾಹ

ಬೆಂಗಳೂರು: ಬುದ್ಧ ಪೂರ್ಣಿಮೆಯ ಅಂಗವಾಗಿ ಮಹಾ ಬೋಧಿ ಸೊಸೈಟಿಯು ಇದೇ 6ರಿಂದ 12ರವರೆಗೆ ಮಹಾಬೋಧಿ ಲೋಕ ಶಾಂತಿ ಬುದ್ಧ ವಿಹಾರದಲ್ಲಿ ಬೋಧಿ ಸಪ್ತಾಹ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮತನಾಡಿದ ಸೊಸೈಟಿ ನಿರ್ದೇಶಕ ಬುದ್ಧ ದತ್ತ ಬಂತೇಜಿ, '6ರಂದು ಬೆಳಿಗ್ಗೆ 10 ಗಂಟೆಗೆ ಮಹಾಬೋಧಿ ಸೊಸೈಟಿಯ ಅಧ್ಯಕ್ಷ ಭಿಕ್ಕು ಕಸಪ ಮಹಾಥೇರೊ ಅವರು ಸಪ್ತಾಹಕ್ಕೆ ಚಾಲನೆ ನೀಡಲಿದ್ದಾರೆ. ನಗರದ ವಿವಿಧ ಕಾಲೇಜುಗಳಲ್ಲಿ ಉಪನ್ಯಾಸವನ್ನೂ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದರು.

'12ರಂದು ಬೆಳಿಗ್ಗೆ 9ರಿಂದ ರಾತ್ರಿ 8 ಗಂಟೆಯವರೆಗೆ ಬುದ್ಧ ಜಯಂತಿ ಕಾರ್ಯಕ್ರಮವನ್ನು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸುವರು. ಅಂದು ಬೆಳಿಗ್ಗೆ 10.45ಕ್ಕೆ ಹಳೆ ವಿಹಾರದಿಂದ ಮಹಾಬೋಧಿ ಲೋಕ ಶಾಂತಿ ಬುದ್ಧ ವಿಹಾರದ ವರೆಗೆ ಬೌದ್ಧ ಮೆರವಣಿಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಎಲ್ಲ ಧರ್ಮಗಳ ಗುರುಗಳು ಭಾಗವಹಿಸಲಿದ್ದಾರೆ' ಎಂದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ.ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020

ಬೆಂಅಪ್ರಾ/ನಯೋಸ/CLU-371/2022–23/388/2025–26 ದಿನಾಂಕ:29/04/2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-Aರ ಅಡಿಯಲ್ಲಿ ಈ ಕೆಳಕಂಡ ಜಮೀನನ್ನು ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಚೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೇ ನಂ:	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ:	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಎಸ್.ಪ್ರಭಾಕರ್	ಬೆಂಗಳೂರು ಪೂರ್ವ	ವರ್ತೂರು	ವರ್ತೂರು	152/3	2ಎ–30 ಗುಂ	ವ್ಯವಸಾಯ	ವಸತಿ

ಷರಾ: ಈ ಜಮೀನಿನಲ್ಲಿ ವಸತಿ ಕಟ್ಟಡ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕ ಯೋಗ್ಯ ಬೆಲೆಯಲ್ಲಿ ಮನೆಗಳು ಲಭ್ಯವಾಗುತ್ತದೆ. ವಸತಿ ಕಟ್ಟಡದ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಸತಿ ಕಟ್ಟಡ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ಅರ್ಜಿದಾರರು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ' ವಲಯದಿಂದ 'ವಸತಿ' ಉಪಯೋಗಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಭಾರತೀಯ ಮಾನಕಗಳ ಬ್ಯೂರೋ
ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವಾಲಯ
(ಗ್ರಾಹಕ ವ್ಯವಹಾರಗಳ ಸಚಿವಾಲಯ), ಭಾರತ ಸರ್ಕಾರ
ಮಾನಕ ಭವನ, 9 ಬಹಾದೂರ ಶಾ ಜಫರ್ ಮಾರ್ಗ, ನವದೆಹಲಿ–110002
ಸತ್ಯಮೇವ ಜಯತೆ

ಸಾಂಕೇತಿಕ ಜಾಹೀರಾತು
ಸೈಂಟಿಸ್ಟ್–ಬಿ ಹುದ್ದೆಗೆ ನೇಮಕಾತಿ
ಜಾಹೀರಾತು ಸಂಖ್ಯೆ.–02 (ಎಸ್‌ಸಿಬಿ)/2025/ಎಚ್‌ಆರ್‌ಡಿ

ಭಾರತೀಯ ಮಾನಕಗಳ ಬ್ಯೂರೋ ಭಾರತ ಸರ್ಕಾರದ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಸಚಿವಾಲಯದ ಆಡಳಿತ ನಿಯಂತ್ರಣಕ್ಕೆ ಒಳಪಡುವ ಶಾಸನಬದ್ಧ ಅಂಗಸಂಸ್ಥೆಯಾಗಿರುವ ಭಾರತೀಯ ಮಾನಕಗಳ ಬ್ಯೂರೋ (ಬಿಐಎಸ್) ಎಂಬ ಸಂಸ್ಥೆಯು ಭಾರತದ ರಾಷ್ಟ್ರೀಯ ಮಾನಕಗಳ ಅಂಗವಾಗಿದೆ ಮತ್ತು ದೇಶಾದ್ಯಂತ ಇದು ಸ್ಟಾಂಡರ್ಡೈಸೇಶನ್, ಪ್ರಾಡಕ್ಟ್ ಅಂಡ್ ಸಿಸ್ಟಮ್ ಸರ್ಟಿಫಿಕೇಶನ್, ಚಿನ್ನ/ಬೆಳ್ಳಿ ಆಭರಣಗಳ ಹಾಲ್‌ಮಾರ್ಕಿಂಗ್, ಪ್ರಯೋಗಾಲಯ ಪರೀಕ್ಷೆ ಇತ್ಯಾದಿ ಕ್ಷೇತ್ರಗಳಲ್ಲಿನ ಚಟುವಟಿಕೆಗಳ ಜವಾಬ್ದಾರಿ ಹೊಂದಿರುತ್ತದೆ. ಬಿಐಎಸ್ ಸಂಸ್ಥೆಯು ಅಂತರ್‌ರಾಷ್ಟ್ರೀಯಮಟ್ಟದ ಸ್ಟಾಂಡರ್ಡೈಸೇಶನ್ ಮತ್ತು ಸರ್ಟಿಫಿಕೇಶನ್ ಜವಾಬ್ದಾರಿ ಕೂಡ ಹೊಂದಿದೆ.

ಇಂತಹ ಬಿಐಎಸ್ ಸಂಸ್ಥೆಯು, ಪ್ರತಿಭಾವಂತ, ಯುವ ಚತುರ ವ್ಯಕ್ತಿಗಳಿಗೆ ತನ್ನ ನಿರ್ದಿಷ್ಟ ವಿಭಾಗಗಳಲ್ಲಿ ಮತ್ತು ಪ್ರವರ್ಗಗಳಲ್ಲಿನ ಸೈಂಟಿಸ್ಟ್–'ಬಿ' ಹುದ್ದೆಗಳ ಅದ್ಭುತ ವೃತ್ತಿ ಅವಕಾಶವನ್ನು ನೀಡುತ್ತಲಿದೆ. ಈ ಹುದ್ದೆಗಳಿಗೆ ಏಳನೇ ಕೇಂದ್ರ ವೇತನ ಆಯೋಗದ ಮೇರೆಗಿನ ವೇತನ ಹಂತ 10 ಅನ್ವಯವಾಗುತ್ತದೆ, ಜೊತೆಗೆ ಅನ್ವಯಿಕ ಭತ್ಯೆಗಳು ಕೂಡ ಲಭ್ಯವಿರುತ್ತವೆ. ಪ್ರಸಕ್ತ ದೆಹಲಿಯಲ್ಲಿ, ಈ ಸಂಸ್ಥೆಗೆ ಸೇರಿಕೊಳ್ಳುವ ಸಮಯದಲ್ಲಿನ ಅಂದಾಜು ನಿವ್ವಳ ಸಂಭಾವನೆಯು ರೂ. 1,14,945/– ಆಗಿರುತ್ತದೆ.

1. **ಹುದ್ದೆಗಳ ಸಂಖ್ಯೆ:** ಕೆಳಗಿನ ವಿವರಗಳ ಪ್ರಕಾರ ವಿವಿಧ ವಿಭಾಗಗಳಲ್ಲಿರುವ ಖಾಲಿಹುದ್ದೆಗಳ ಒಟ್ಟು ಸಂಖ್ಯೆ 20 ಆಗಿರುತ್ತದೆ:

ವಿಭಾಗ	ಖಾಲಿಹುದ್ದೆಗಳ ಸಂಖ್ಯೆ (ಬ್ಯಾಕ್‌ಲಾಗ್ ಖಾಲಿಹುದ್ದೆಗಳು ಸೇರಿದಂತೆ)						ಪಿಡಬ್ಲ್ಯುಬಿಡಿ ವರ್ಗಕ್ಕೆ ಸಮನಾಂತರ ಮೀಸಲಾತಿ (ಬ್ಯಾಕ್‌ಲಾಗ್ ಖಾಲಿಹುದ್ದೆಗಳು ಸೇರಿದಂತೆ)
	ಒಟ್ಟು	ಯುಆರ್	ಒಬಿಸಿ	ಎಸ್‌ಸಿ	ಎಸ್‌ಟಿ	ಇಡಬ್ಲ್ಯುಎಸ್	
ಕೆಮಿಸ್ಟ್ರಿ	02	01	01	–	–	–	–
ಸಿವಿಲ್ ಇಂಜಿನಿಯರಿಂಗ್	08	05	–	01	01	01	01 VI
ಕಂಪ್ಯೂಟರ್ ಇಂಜಿನಿಯರಿಂಗ್	04	03	–	01	–	–	01 ID & MI/MD
ಇಲೆಕ್ಟ್ರಿಕಲ್ ಇಂಜಿನಿಯರಿಂಗ್	02	01	–	01	–	–	–
ಇಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಶನ್ ಇಂಜಿನಿಯರಿಂಗ್	02	02	–	–	–	–	–
ಎನ್ವಿರಾನ್‌ಮೆಂಟ್ ಇಂಜಿನಿಯರಿಂಗ್	02	02	–	–	–	–	–
ಒಟ್ಟು	20	14	01	03	01	01	02

ಸಂಕ್ಷಿಪ್ತ ಪದಗಳ ವಿವರ: ಯುಆರ್–ಮೀಸಲುರಹಿತ; ಒಬಿಸಿ–ಇತರೆ ಹಿಂದುಳಿದ ವರ್ಗಗಳು; ಎಸ್‌ಸಿ–ಪರಿಶಿಷ್ಟ ಜಾತಿ; ಎಸ್‌ಟಿ–ಪರಿಶಿಷ್ಟ ಪಂಗಡ; ಇಡಬ್ಲ್ಯುಎಸ್–ಆರ್ಥಿಕ ದುರ್ಬಲ ವರ್ಗಗಳು; ಪಿಡಬಲ್ಯುಬಿಡಿ–ನಿರ್ದಿಷ್ಟ ಪ್ರಮಾಣದ ವೈಕಲ್ಯತೆ ಹೊಂದಿರುವ ವ್ಯಕ್ತಿಗಳು; ಐಡಿ&ಎಂಐ–ಆಟಿಸಂ/ಬುದ್ಧಿಮಾಂದ್ಯತೆ/ನಿರ್ದಿಷ್ಟ ಪ್ರಮಾಣದ ಕಲಿಕಾ ವಿಕಲತೆ/ಮಾನಸಿಕ ಕಾಯಿಲೆ; ಎಚಿಡಿ–ಬಹು ವೈಕಲ್ಯತೆ; ವಿಐ–ದೃಷ್ಟಿಮಾಂದ್ಯತೆ

2. **ಅಗತ್ಯ ವಿದ್ಯಾರ್ಹತೆಗಳು:**

ವಿಭಾಗ	ಅಗತ್ಯವಿರುವ ಅವಶ್ಯಕ ವಿದ್ಯಾರ್ಹತೆ	ಅನುಕ್ರಮ ಗೇಟ್ ಪತ್ರಿಕೆ ಮತ್ತು ಅದರ ಸಂಕೇತ
ಸಿವಿಲ್ ಇಂಜಿನಿಯರಿಂಗ್	1) ಇಂಜಿನಿಯರಿಂಗ್ ಅಥವಾ ಟೆಕ್ನಾಲಜಿ ಅಥವಾ ತತ್ಸಮಾನ ಬ್ಯಾಚಲರ್ ಪದವಿ ಪಡೆದಿರಬೇಕು ಜೊತೆಗೆ ಸರಾಸರಿ ಶೇಕಡ ಅರವತ್ತು ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರಕೂಡದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇಕಡ ಐವತ್ತು) 2) 2023/2024/2025ನೇ ಸಾಲಿನ ಅಧಿಕೃತ ಗೇಟ್* ಸ್ಕೋರ್ ಹೊಂದಿರಬೇಕು.	ಸಿವಿಲ್ ಇಂಜಿನಿಯರಿಂಗ್ (ಸಿಇ)
ಕಂಪ್ಯೂಟರ್ ಇಂಜಿನಿಯರಿಂಗ್		ಕಂಪ್ಯೂಟರ್ ಸೈನ್ಸ್ & ಇನ್ಫಾರ್ಮೇಶನ್ ಟೆಕ್ನಾಲಜಿ (ಸಿಎಸ್)
ಇಲೆಕ್ಟ್ರಿಕಲ್ ಇಂಜಿನಿಯರಿಂಗ್		ಇಲೆಕ್ಟ್ರಿಕಲ್ ಇಂಜಿನಿಯರಿಂಗ್ (ಇಇ)
ಇಲೆಕ್ಟ್ರಾನಿಕ್ಸ್ ಅಂಡ್ ಟೆಲೆಕಮ್ಯುನಿಕೇಶನ್ ಇಂಜಿನಿಯರಿಂಗ್		ಇಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಇಂಜಿನಿಯರಿಂಗ್ (ಇಸಿ)
ಇನ್ವಿರಾನ್‌ಮೆಂಟ್ ಇಂಜಿನಿಯರಿಂಗ್		ಎನ್ವಿರಾನ್‌ಮೆಂಟಲ್ ಸೈನ್ಸ್ & ಇಂಜಿನಿಯರಿಂಗ್ (ಇಎಸ್)
ಕೆಮಿಸ್ಟ್ರಿ	1) ನ್ಯಾಚುರಲ್ ಸೈನ್ಸಸ್ ಅಥವಾ ತತ್ಸಮಾನ ವಿಷಯುದಲ್ಲಿ ಮಾಸ್ಟರ್ಸ್ ಪದವಿ ಪಡೆದಿರಬೇಕು (ಕೆಮಿಸ್ಟ್ರಿ ವಿಭಾಗದಲ್ಲಿ ಮಾತ್ರ) ಜೊತೆಗೆ ಸರಾಸರಿ ಶೇಕಡ ಅರವತ್ತು ಅಂಕಗಳಿಗಿಂತ ಕಡಿಮೆ ಅಂಕಗಳನ್ನು ಪಡೆದಿರಕೂಡದು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಶೇಕಡ ಐವತ್ತು) 2) 2023/2024/2025ನೇ ಸಾಲಿನ ಅಧಿಕೃತ ಗೇಟ್* ಸ್ಕೋರ್ ಹೊಂದಿರಬೇಕು.	ಕೆಮಿಸ್ಟ್ರಿ (ಸಿವೈ)

*ಗೇಟ್–ಗ್ರಾಜುಯೇಟ್ ಆಪ್ಟಿಟ್ಯೂಡ್ ಟೆಸ್ಟ್ ಇನ್ ಇಂಜಿನಿಯರಿಂಗ್

3. **ವಯೋಮಿತಿ:** ಅಭ್ಯರ್ಥಿಗಳ ಅರ್ಹತಾ ವಯೋಮಿತಿ, ಅರ್ಜಿಯ ಕೊನೆಯ ದಿನಾಂಕಕ್ಕೆ 30 ವರ್ಷ. ಅನ್ವಯಿಕ ನಿಯಮಗಳ ಪ್ರಕಾರ ಎಸ್‌ಸಿ, ಎಸ್‌ಟಿ, ಒಬಿಸಿ, ನಿರ್ದಿಷ್ಟ ಪ್ರಮಾಣದ ವೈಕಲ್ಯತೆಗಳನ್ನು ಹೊಂದಿರುವ ವ್ಯಕ್ತಿಗಳಿಗೆ, ಮಾಜಿ ಯೋಧರಿಗೆ ಮತ್ತು ಬಿಐಎಸ್ ಇಲಾಖೆಯ ಅಭ್ಯರ್ಥಿಗಳಿಗೆ ವಯೋಮಿತಿ ಸಡಿಲಿಕೆ ಅನ್ವಯವಾಗುತ್ತದೆ.
4. ವಿವರವಾದ ಜಾಹೀರಾತು ಬಿಐಎಸ್ ಸಂಸ್ಥೆಯ www.bis.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. ಅಭ್ಯರ್ಥಿಗಳು **03.05.2025 ರಿಂದ 23.05.2025** (ಕೊನೆಯ ದಿನಾಂಕ) ರವರೆಗೆ ಬಿಐಎಸ್ ವೆಬ್‌ಸೈಟ್ ಮುಖಾಂತರ ಅರ್ಜಿ ಸಲ್ಲಿಸಬಹುದು. ಇನ್ನಿತರ ಯಾವುದೇ ರೀತಿಯಾಗಿ/ವಿಧಾನದಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
5. **ಅರ್ಜಿ ಶುಲ್ಕ:** ಶೂನ್ಯ

ಯಾವುದೇ ಕಾರಣ ನೀಡದೆಯೆ ಸದರಿ ನೇಮಕಾತಿಯನ್ನು ಪರಿಷ್ಕರಿಸುವ/ಮರು ರೂಪಿಸುವ/ರದ್ದುಪಡಿಸುವ/ಪ್ರಕ್ರಿಯೆಯನ್ನು ಅಮಾನತ್ತುಗೊಳಿಸುವ ಹಕ್ಕನ್ನು ಬಿಐಎಸ್ ಕಾಯ್ದಿರಿಸಿಕೊಂಡಿರುತ್ತದೆ. ಬಿಐಎಸ್ ಸಂಸ್ಥೆಯ ತೀರ್ಮಾನವೇ ಅಂತಿಮವಾಗಿರುತ್ತದೆ ಮತ್ತು ಈ ಕುರಿತಾಗಿ ಯಾವುದೇ ಮನವಿಗಳನ್ನು ಪುರಸ್ಕರಿಸಲಾಗುವುದಿಲ್ಲ.

ದಿನಾಂಕ: 03.05.2025
ಸ್ಥಳ: ನವದೆಹಲಿ
cbc08103/12/0003/2526
ಮುಖ್ಯಸ್ಥರು (ಎಚ್‌ಆರ್‌ಡಿ)
ಭಾರತೀಯ ಮಾನಕಗಳ ಬ್ಯೂರೋ

ಕೇಂದ್ರೀಯ ವಿದ್ಯುತ್ ಸಂಶೋಧನಾ ಸಂಸ್ಥೆ
(ಭಾರತ ಸರ್ಕಾರದ ವಿದ್ಯುತ್ ಸಚಿವಾಲಯದ ಸೊಸೈಟಿ)
ಅಂಚೆ ಪೆಟ್ಟಿಗೆ ಸಂಖ್ಯೆ 8066, ಪ್ರೊ. ಸರ್. ಸಿ.ವಿ.ರಾಮನ್ ರಸ್ತೆ, ಸದಾಶಿವನಗರ ಅಂಚೆ ಕಚೇರಿ, ಬೆಂಗಳೂರು–560080

ಜಾಹೀರಾತು ಸಂಖ್ಯೆ. ಸಿಪಿಆರ್‌ಐ/06/2025

ಸಿಪಿಆರ್‌ಐ ಇವರಿಂದ ಕೆಳಕಂಡ ಹುದ್ದೆಗಳನ್ನು ನೇರ ನೇಮಕಾತಿ ಮುಖಾಂತರ ಭರ್ತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ:

ಹುದ್ದೆಗಳ ಹೆಸರು	ಹುದ್ದೆಗಳ ಸಂಖ್ಯೆ	7ನೇ ಸಿಪಿಸಿ ವೇತನ ಶ್ರೇಡಿಯಲ್ಲಿನ ವೇತನ ಹಂತ	ಗರಿಷ್ಠ ವಯೋಮಿತಿ
ಸೈಂಟಿಫಿಕ್ ಅಸಿಸ್ಟಂಟ್	4	ಹಂತ–6	35
ಇಂಜಿನಿಯರಿಂಗ್ ಅಸಿಸ್ಟಂಟ್	8	ಹಂತ–6	35
ಟೆಕ್ನಿಷಿಯನ್ ಗ್ರೇಡ್ 1	6	ಹಂತ–2	28
ಜೂನಿಯರ್ ಹಿಂದಿ ಟ್ರಾನ್ಸ್‌ಲೇಟರ್	1	ಹಂತ–6	30
ಅಸಿಸ್ಟಂಟ್ ಗ್ರೇಡ್ 2	23	ಹಂತ–4	30
ಅಸಿಸ್ಟಂಟ್ ಲೈಬ್ರರಿಯನ್	2	ಹಂತ–4	30

ಆಸಕ್ತಿಯುಳ್ಳ ಅಭ್ಯರ್ಥಿಗಳು ಸಿಪಿಆರ್‌ಐ'ರವರ https://cpri.res.in ವೆಬ್‌ಸೈಟ್‌ಗೆ ಭೇಟಿ ನೀಡಿ ಕರಿಯರ್ ಪೇಜ್‌ನಲ್ಲಿ ಲಭ್ಯವಿರುವ ವಿವರವಾದ ಜಾಹೀರಾತನ್ನು ಪರಿಶೀಲಿಸಿ, ಅರ್ಹತಾ ಮಾನದಂಡ, ಶೈಕ್ಷಣಿಕ ವಿದ್ಯಾರ್ಹತೆ, ಮೀಸಲಾತಿ, ಅನುಭವ, ಅರ್ಜಿ ನಮೂನೆ, ಮಹತ್ವದ ಸೂಚನೆಗಳು ಇತ್ಯಾದಿ ಮಾಹಿತಿಗಳನ್ನು ಪಡೆದುಕೊಳ್ಳಬಹುದು.

cbc34104/12/0004/2526 ಮುಖ್ಯ ಆಡಳಿತಾಧಿಕಾರಿ

Sahitya Akademi
Ministry of Culture
Government of India
ಸತ್ಯಮೇವ ಜಯತೆ

ಸಾಹಿತ್ಯ ಅಕಾದೆಮಿ ಅನುವಾದ ಪ್ರಶಸ್ತಿ 2025

ಸಾಹಿತ್ಯ ಅಕಾದೆಮಿಯು ತನ್ನಿಂದ ಗುರುತಿಸಲ್ಪಟ್ಟ ಎಲ್ಲಾ 24 ಭಾರತೀಯ ಭಾಷೆಗಳಲ್ಲಿ 2025 ರ ಸಾಲಿನ ಸಾಹಿತ್ಯ ಅಕಾದೆಮಿ ಅನುವಾದ ಪ್ರಶಸ್ತಿಗಾಗಿ ಭಾರತೀಯ ಅನುವಾದಕರು, ಅನುವಾದಕರ ಹಿತೈಷಿಗಳು ಮತ್ತು ಪ್ರಕಾಶಕರಿಂದ ಪುಸ್ತಕಗಳನ್ನು ಆಹ್ವಾನಿಸುತ್ತದೆ. 2019, 2020, 2021, 2022 ಮತ್ತು 2023 ವರ್ಷಗಳಲ್ಲಿ (ಅಂದರೆ, 1 ಜನವರಿ 2019 ಮತ್ತು 31 ಡಿಸೆಂಬರ್ 2023 ರ ನಡುವೆ) ಮೊದಲು ಪ್ರಕಟವಾದ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ ಬಹುಮಾನವು ರೂ. 50,000/- ಮೊತ್ತ ಮತ್ತು ಫಲಕವನ್ನು ಹೊಂದಿರುತ್ತದೆ. ಅರ್ಜಿ ನಮೂನೆಯೊಂದಿಗೆ ಪುಸ್ತಕದ ಪ್ರತಿಯೊಂದನ್ನು ಮೇ 31, 2025 ರೊಳಗೆ ಸಲ್ಲಿಸಬೇಕು. ಬಹುಮಾನದ ಕುರಿತು ಹೆಚ್ಚಿನ ವಿವರಗಳಿಗಾಗಿ, ದಯವಿಟ್ಟು ಅಕಾದೆಮಿಯ ವೆಬ್‌ಸೈಟ್ www.sahitya-akademi.gov.in ನಲ್ಲಿ ಲಭ್ಯವಿರುವ ಸಾಹಿತ್ಯ ಅಕಾದೆಮಿ ಅನುವಾದ ಪ್ರಶಸ್ತಿ ನಿಯಮಗಳನ್ನು ನೋಡಿ.

ಸಹಿ/-
(ಕಾರ್ಯದರ್ಶಿ)
ಸಾಹಿತ್ಯ ಅಕಾದೆಮಿ, ನವದೆಹಲಿ

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು (ಕ್ಲೈಂಟ್) ಕೆಳಗೆ ಷೆಡ್ಯೂಲ್‌ನಲ್ಲಿ ಸಂಪೂರ್ಣವಾಗಿ ವಿವರಿಸಲಾದ ಸ್ಥಿರಾಸ್ತಿಯ ಸಂಬಂಧದಲ್ಲಿ ಕೆಲವು ವಹಿವಾಟುಗಳನ್ನು ಮಾಡಲು ಬಯಸಿದ್ದಾರೆ ಮತ್ತು ಇನ್ನು ಮುಂದೆ ಇದನ್ನು (ಷೆಡ್ಯೂಲ್ ಆಸ್ತಿ) ಎಂದು ಉಲ್ಲೇಖಿಸಲಾಗುತ್ತದೆ: (i) ಮೆ॥ ದಿವ್ಯಶ್ರೀ ಟೆಕ್ನಾಲಜೀಸ್, ಪಾಲುದಾರಿಕೆ ಸಂಸ್ಥೆ, ಇದರ ಕಚೇರಿ ಸಂಖ್ಯೆ 744, ಜೆ.ಪಿ. ನಗರ, 6ನೇ ಹಂತ, ಬೆಂಗಳೂರು, 560 078; ಮತ್ತು (ii) ಮೆ॥ ಶ್ರೀ ವೆಂಚರ್ಸ್, ಪಾಲುದಾರಿಕೆ ಸಂಸ್ಥೆ, ಇದರ ಕಚೇರಿ ಸಂಖ್ಯೆ 82/1, 1ನೇ ಮಹಡಿ, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು, 560 021 (ಮಾಲೀಕರು). ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುವಂತೆ, ಮಾಲೀಕರು ಷೆಡ್ಯೂಲ್ ಆಸ್ತಿಯ ಜಂಟಿ ಮತ್ತು ಸಂಪೂರ್ಣ ಮಾಲೀಕರಾಗಿದ್ದಾರೆ ಮತ್ತು ಅದರ ಮೇಲೆ ಅನಿಯಂತ್ರಿತ ಪರಭಾರೆ ಹಕ್ಕುಗಳನ್ನು ಹೊಂದಿದ್ದಾರೆ.

ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ ಮಾಲೀಕರನ್ನು ಹೊರತುಪಡಿಸಿ ಯಾವುದೇ ವ್ಯಕ್ತಿ/ವ್ಯಕ್ತಿಗಳು ಷೆಡ್ಯೂಲ್ ಆಸ್ತಿಯ ಸಂಬಂಧದಲ್ಲಿ ಯಾವುದೇ ಹಕ್ಕು, ಮಾಲೀಕತ್ವ, ಹೊಣೆಗಾರಿಕೆ, ಧಾರಣೆ, ಕ್ಲೈಮ್/ಕ್ಲೈಮ್‌ಗಳು ಅಥವಾ ಯಾವುದೇ ರೀತಿಯ ಬಾಧ್ಯತೆಯನ್ನು ಹೊಂದಿದ್ದರೆ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳ ಅವಧಿಯೊಳಗೆ ಕೆಳಗೆ ನೀಡಲಾದ ವಿಳಾಸದಲ್ಲಿ ತಮ್ಮ ಕ್ಲೈಮ್/ಕ್ಲೈಮ್‌ಗಳು ಅಥವಾ ಆಕ್ಷೇಪಣೆಗಳನ್ನು ಲಿಖಿತವಾಗಿ, ಅಂತಹ ಕ್ಲೈಮ್/ಕ್ಲೈಮ್‌ಗಳು ಅಥವಾ ಆಕ್ಷೇಪಣೆಗಳ ದಾಖಲಾತಿ ಪುರಾವೆಗಳೊಂದಿಗೆ ಸಲ್ಲಿಸಬೇಕೆಂದು ಈ ಮೂಲಕ ಕೋರಲಾಗಿದೆ. ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಯಾವುದೇ ಕ್ಲೈಮ್/ಕ್ಲೈಮ್‌ಗಳು ಅಥವಾ ಆಕ್ಷೇಪಣೆಗಳು ಸ್ವೀಕರಿಸದಿದ್ದಲ್ಲಿ, ಮಾಲೀಕರನ್ನು ಹೊರತುಪಡಿಸಿ ಬೇರೆ ಯಾರಿಗೂ ಷೆಡ್ಯೂಲ್ ಆಸ್ತಿಯ ಸಂಬಂಧದಲ್ಲಿ ಯಾವುದೇ ಹಕ್ಕು, ಮಾಲೀಕತ್ವ, ಹೊಣೆಗಾರಿಕೆ, ಧಾರಣೆ, ಕ್ಲೈಮ್/ಕ್ಲೈಮ್‌ಗಳು ಅಥವಾ ಯಾವುದೇ ಆಸಕ್ತಿ ಇಲ್ಲ ಎಂದು ಭಾವಿಸಲಾಗುತ್ತದೆ. ಇದಲ್ಲದೆ, ನಿಗದಿತ 15 (ಹದಿನೈದು) ದಿನಗಳ ಅವಧಿಯೊಳಗೆ ಸ್ವೀಕರಿಸದ ಯಾವುದೇ ಕ್ಲೈಮ್‌ಗಳು ಅಥವಾ ಆರೋಪಿತ ಬಾಧ್ಯತೆಗಳನ್ನು ಎಲ್ಲಾ ಉದ್ದೇಶಗಳಿಗಾಗಿ ಮನ್ನಾ ಮಾಡಲಾಗಿದೆ ಮತ್ತು ನಿರ್ಲಕ್ಷಿಸಲಾಗಿದೆ ಎಂದು ಭಾವಿಸಲಾಗುತ್ತದೆ ಮತ್ತು ನಂತರ ಅವು ನಮ್ಮ ಕಕ್ಷಿದಾರರಿಗೆ ಬದ್ಧವಾಗಿರುವುದಿಲ್ಲ ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಆಸ್ತಿಯ ಸಂಬಂಧದಲ್ಲಿ ಸದರಿ ವಹಿವಾಟಿನೊಂದಿಗೆ ಮುಂದುವರಿಯಲು ಸ್ವತಂತ್ರರಾಗಿರುತ್ತಾರೆ.

ಷೆಡ್ಯೂಲ್

ಸ್ಥಿರಾಸ್ತಿ ವಸತಿ ಉದ್ದೇಶಕ್ಕಾಗಿ ಪರಿವರ್ತಿತಗೊಂಡಿದ್ದು, ಇ–ಖಾತಾ ಸಂಖ್ಯೆ 150200302200720006 (ಸರ್ವೆ ಸಂಖ್ಯೆ 131/1 ರಲ್ಲಿ ಒಂದು ಭಾಗ), 12140.57 ಚದರ ಮೀಟರ್ (03 ಎಕರೆ) ವಿಸ್ತೀರ್ಣ ಹೊಂದಿದ್ದು, ಬಿ.ಎಂ. ಕಾವಲು ಗ್ರಾಮ, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇಲ್ಲಿ ನೆಲೆಗೊಂಡಿದೆ ಮತ್ತು ಚಕ್ಕುಬಂದಿ:
ಪೂರ್ವಕ್ಕೆ : ಸರ್ವೆ ಸಂಖ್ಯೆ 135 ರ ಆಸ್ತಿ;
ಪಶ್ಚಿಮಕ್ಕೆ : ಸರ್ವೆ ಸಂಖ್ಯೆ 131 ರ ಉಳಿದ ಭಾಗದ ಆಸ್ತಿ;
ಉತ್ತರಕ್ಕೆ : 40 ಅಡಿ ರಸ್ತೆ; ಮತ್ತು
ದಕ್ಷಿಣಕ್ಕೆ : ಸರ್ವೆ ಸಂಖ್ಯೆ 131 ರ ಉಳಿದ ಭಾಗದ ಆಸ್ತಿ.

ಸ್ಥಳ: ಬೆಂಗಳೂರು
ದಿನಾಂಕ: 03/05/2025

ಶ್ರೀಮತಿ ಬ್ರಿಜಿತಾ ಪ್ರಕಾಶ್, ಪಾಲುದಾರರು
ಜೆ. ಸಾಗರ್ ಅಸೋಸಿಯೇಟ್ಸ್
ನ್ಯಾಯವಾದಿಗಳು ಮತ್ತು ಸಾಲಿಸಿಟರ್‌ಗಳು, 18ನೇ ಮಹಡಿ, ಎಸ್‌ಕೆವಿ 909, ನಂ. 9/1, ರೆಸಿಡೆನ್ಸಿ ರಸ್ತೆ, ರಿಚ್‌ಮಂಡ್ ಸರ್ಕಲ್, ಬೆಂಗಳೂರು – 560025, ಕರ್ನಾಟಕ, ಭಾರತ. ದೂರವಾಣಿ: 080–43503600/080–43503676
ಇಮೇಲ್ – brijita.prakash@jsalaw.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ವಿಶೇಷ ಆಯುಕ್ತರು (ಆ.ಪ.ಹ.ವೈ)ರವರ ಕಚೇರಿ, ಅನೆಕ್ಸ್ ಕಟ್ಟಡ–03, ಎನ್.ಆರ್ ವೃತ್ತ, ಬೆಂಗಳೂರು – 560002
ಸಂಖ್ಯೆ:ವಿ.ಆ(ಎಫ್.ಇ.ಸಿ.ಸಿ)/ಪಿಆರ್/326/2025–26 ದಿನಾಂಕ: 02.05.2025

ಅಧಿಸೂಚನೆ

ಬೆಂಗಳೂರು ಹವಾಮಾನ ಕ್ರಿಯಾ ಕೋಶ (CAC) CSR **ಘಟಕ–ಅರ್ಜಿಗಳ ಆಹ್ವಾನ**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP) ಮುಖ್ಯ ಆಯುಕ್ತರ ಪರವಾಗಿ ಹವಾಮಾನ ಕ್ರಿಯಾ ಕೋಶ(CAC) ಬೆಂಗಳೂರು ನಗರದಲ್ಲಿ ಎದುರಿಸುತ್ತಿರುವ ನೈಜ ಸವಾಲುಗಳಿಗೆ ನವೀನ ಪರಿಹಾರಗಳನ್ನು ನೀಡಲು ಹೊಸ ದೃಷ್ಟಿಕೋನ, ಕೌಶಲ್ಯಗಳು ಮತ್ತು ಹೊಸತನವನ್ನು ಹೊಂದಿರುವ CSR ಕ್ಷೇತ್ರದಲ್ಲಿ ಪರಿಣತಿಯುಳ್ಳ ಹವಾಮಾನ ಬದಲಾವಣೆ ಮತ್ತು ನಗರ ಆಡಳಿತದಲ್ಲಿ ಆಸಕ್ತಿ ಇರುವ ಪ್ರತಿಭಾಶಾಲಿ ವೃತ್ತಿಪರರಿಂದ ಅರ್ಜಿಗಳನ್ನು ಆಹ್ವಾನಿಸುತ್ತದೆ.

ಈ ಹಿನ್ನೆಲೆಯಲ್ಲಿ, ಈ ಕೆಳಕಂಡ ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ:

- CSR **ಘಟಕ ವ್ಯವಸ್ಥಾಪಕ (1 ಹುದ್ದೆ) – ತಿಂಗಳಿಗೆ ರೂ.1,00,000**
- CSR **ಘಟಕ ಫೆಲೋ (1 ಹುದ್ದೆ) – ತಿಂಗಳಿಗೆ ರೂ.50,000**

ಆಸಕ್ತರು ಮತ್ತು ಅರ್ಹ ಅಭ್ಯರ್ಥಿಗಳು https://apps.bbmpgov.in/bcap/ ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ವೆಬ್‌ಪೋರ್ಟಲ್‌ನಲ್ಲಿ ಸಂಪೂರ್ಣ ಮಾಹಿತಿಯು ಮತ್ತು ಮಾರ್ಗಸೂಚಿಗಳು ಲಭ್ಯವಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 2025ರ ಮೇ 25. ಹೆಚ್ಚಿನ ಮಾಹಿತಿಗಾಗಿ ದಯವಿಟ್ಟು bbmpclimateactioncell@gmail.comಗೆ ಸಂಪರ್ಕಿಸಿ

ಸಹಿ/– ವಿಶೇಷ ಆಯುಕ್ತರು (ಅ.ಪ.ಹ.ವೈ)
ಅಧ್ಯಕ್ಷರು–ಹವಾಮಾನ ಕ್ರಿಯಾ ಕೋಶ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

सी डैक CDAC
C-HUK सी-हक
An Initiative by C-DAC Bangalore under NSM
nsm
An Initiative of Government of India

ADMISSION NOTIFICATION
C-DAC ADVANCED LEVEL DIPLOMA COURSE ON HIGH PERFORMANCE COMPUTING AND ITS APPLICATION
For candidates belonging to SC/ST (Any Gender), Women (Any Category), EWS, General Category

HIGHLIGHTS
- Duration: 6 Months
- Mode: Offline (Physical)
- No Registration Fee
- Course Fee: Rs.1,75,000 FREE

BENEFITS
- Industry expert guidance
- Mentoring by C-DAC experts
- A monthly stipend of 10,000/- will be provided to SC/ST/EWS/Women only
- Hands-on training session on latest technology

Last date to Apply May 15, 2025
c-huk@cdac.in
https://c-huk.cdacb.in
cbc06140/12/0002/2526

‘ಶಂಕರಾಚಾರ್ಯ ಪ್ರಶಸ್ತಿ’

ಮುಂದಿನ ವರ್ಷದಿಂದ ಜಾರಿ: ಸಚಿವ ಶಿವರಾಜ್ ತಂಗಡಗಿ

ಪ್ರಜಾವಾಣಿ ವಾರ್ತೆ

ಕಾರ್ಯಕ್ರಮದಲ್ಲಿ ಶಿವರಾಜ್ ತಂಗಡಗಿ, ದಿನೇಶ್ ಗುಂಡೂರಾವ್ ಅವರು ಆದಿ ಶಂಕರಾಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು. ಎಸ್.ದ್ವಾರಕಾನಾಥ್, ಅಸಗೋಡು ಜಯಸಿಂಹ ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ.

ಬೆಂಗಳೂರು: ಶಂಕರಾಚಾರ್ಯರ ಹೆಸರಿನಲ್ಲಿ ಮುಂದಿನ ವರ್ಷದಿಂದ ಪ್ರಶಸ್ತಿ ನೀಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಶುಕ್ರವಾರ ಆಯೋಜಿಸಿದ್ದ ಆದಿ ಶಂಕರಾಚಾರ್ಯರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ‘ಪ್ರಶಸ್ತಿ ಆಯ್ಕೆಗಾಗಿ ಸಮಿತಿಯನ್ನು ರಚಿಸಲಾಗುವುದು. ಅರ್ಹರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ’ ಎಂದರು.

ಆದಿ ಶಂಕರಾಚಾರ್ಯರು ಅದ್ವೈತ ವೇದಾಂತದ ಅಡಿಪಾಯವನ್ನು ಹಾಕುವ ಮೂಲಕ ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು.

ಆಧ್ಯಾತ್ಮಿಕ ಕ್ರಾಂತಿಯ ಹರಿಕಾರರಾಗಿದ್ದ ಶಂಕರಾಚಾರ್ಯರು ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಗಳಲ್ಲಿ ಒಬ್ಬರಾಗಿದ್ದರು. ಎಂಟನೇ ವಯಸ್ಸಿನಲ್ಲೇ ಅಪಾರ ಜ್ಞಾನ ಹೊಂದಿದ್ದರು. ತಮ್ಮ 32ನೇ ವಯಸ್ಸಿನಲ್ಲೇ ಅಪಾರ ಸಾಧನೆ ಮಾಡಿದ್ದರು ಎಂದು ಶ್ಲಾಘಿಸಿದರು.

ಧರ್ಮದ ಹೆಸರಿನಲ್ಲಿ ಹರಡುತ್ತಿರುವ ವಿವಿಧ ರೀತಿಯ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸವನ್ನು ಶಂಕರಾಚಾರ್ಯರು ಮಾಡಿದ್ದರು. ಆದರೆ, ಇವತ್ತು ಧರ್ಮದ ಹೆಸರಿನಲ್ಲಿ ಕೆಲವರು ಯುವ ಸಮುದಾಯವನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಈ ವಿಚಾರವಾಗಿ ಜನ ಜಾಗೃತರಾಗಬೇಕು ಎಂದು ಸಚಿವರು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಅಸಗೋಡು ಜಯಸಿಂಹ, ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಎಸ್.ರಘುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಬಿ.ಎಸ್.ದ್ವಾರಕಾನಾಥ್, ವಿ.ಆರ್.ಗೌರಿಶಂಕರ್ ಹಾಜರಿದ್ದರು.

ಹೈಕೋರ್ಟ್‌ಗೆ ಎಚ್‌ಡಿಕೆ ಅರ್ಜಿ

ಬೆಂಗಳೂರು: ‘ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನಲ್ಲಿ ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್‌ಗೆ 550 ಎಕರೆ ಭೂಮಿಯನ್ನು ಗಣಿ ಗುತ್ತಿಗೆ ನೀಡಿರುವ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ಪ್ರಶ್ನಿಸಿ ಲೋಕಾಯುಕ್ತ ವಿಶೇಷ ತನಿಖಾ ದಳ ಸಲ್ಲಿಸಿರುವ ಅರ್ಜಿಯನ್ನು ಅಮಾನತುಗೊಳಿಸಬೇಕು’ ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಕುಮಾರಸ್ವಾಮಿ ಅವರು ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು. ಕುಮಾರಸ್ವಾಮಿ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಹಷ್ಮತ್ ಪಾಷಾ ಅವರ ಕೋರಿಕೆಯ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಮುಂದೂಡಲಾಗಿದೆ.

ಲೋಕಾಯುಕ್ತ ಪರ ಹಾಜರಿದ್ದ ವೆಂಕಟೇಶ್ ಅರಬಟ್ಟಿ, ‘ವಿಶೇಷ ನ್ಯಾಯಾಲಯವು ತಮ್ಮ ನಿರೀಕ್ಷಣಾ ಜಾಮೀನು ಅರ್ಜಿ ನಿರ್ಧರಿಸುವುದನ್ನು ವಿಳಂಬಗೊಳಿಸುವ ಉದ್ದೇಶದಿಂದ ಕುಮಾರಸ್ವಾಮಿ ಈ ಅರ್ಜಿ ಸಲ್ಲಿಸಿದ್ದಾರೆ. ಹೀಗಾಗಿ, ಈ ಅರ್ಜಿ ಊರ್ಜಿತವಾಗುವುದಿಲ್ಲ. ಆದ್ದರಿಂದ, ಇದನ್ನು ವಜಾಗೊಳಿಸಬೇಕು’ ಎಂದು ಪೀಠಕ್ಕೆ ಮನವಿ ಮಾಡಿದರು.

‘ಗಮನ ಬೇರೆಡೆ ಸೆಳೆಯಲು ಜಾತಿಗಣತಿ’

ಪ್ರಜಾವಾಣಿ ವಾರ್ತೆ

ಪ್ರಿಯಾಂಕ್

ಬೆಂಗಳೂರು: ‘ಪಹಲ್ಗಾಮ್ ದಾಳಿ ವಿಚಾರದಿಂದ ಜನರ ಗಮನವನ್ನು ಬೇರೆಡೆ ಸೆಳೆಯಲು ಪ್ರಧಾನಿ ಮೋದಿ ಅವರು ಜಾತಿಗಣತಿ ವಿಚಾರವನ್ನು ಮುಂದಕ್ಕೆ ತಂದಿದ್ದಾರೆ’ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, ‘11 ವರ್ಷಗಳ ಆಡಳಿತದ ನ್ಯೂನತೆ ಮರೆಮಾಚಲು ಮತ್ತು ಈಗ ಬಿಹಾರದ ಚುನಾವಣೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಜಾತಿಗಣತಿ ಘೋಷಿಸಿದ್ದಾರೆ’ ಎಂದರು.

‘ಇದೊಂದು ಕಣ್ಣೊರೆಸುವ ತಂತ್ರ ಮಾತ್ರ. ಮೋದಿ ಅವರ ಸರ್ಕಾರ ಜಾತಿಗಣತಿಗೆ ಕಾಲಮಿತಿಯನ್ನೂ ಹಾಕಿಕೊಂಡಿಲ್ಲ ಮತ್ತು ಬಜೆಟ್‌ನಲ್ಲಿ ಹಣ ತೆಗೆದಿರಿಸಿಲ್ಲ’ ಎಂದರು.

‘ರಾಹುಲ್ ಗಾಂಧಿ ಅವರು ಜಾತಿಗಣತಿ ಬಗ್ಗೆ ಪದೇ-ಪದೇ ಪ್ರಸ್ತಾಪಿಸಿದ್ದಾಗ ಬಿಜೆಪಿ ನಾಯಕರು ಅದನ್ನು ಲೇವಡಿ ಮಾಡಿದ್ದರು. ಪ್ರಧಾನಿ ನರೇಂದ್ರ ಮೋದಿ ಅವರು ಲೋಕಸಭೆಯಲ್ಲಿ, ‘ನಮ್ಮಲ್ಲಿ ಜಾತಿ ಎಂಬುದೇ ಇಲ್ಲ. ಇರುವುದು ಬಡವರು, ಯುವಕರು, ಮಹಿಳೆಯರು ಮತ್ತು ರೈತರು ಎಂಬ ನಾಲ್ಕು ಜಾತಿ ಮಾತ್ರ’ ಎಂದಿದ್ದರು. ಹಾಗಿದ್ದ ಮೇಲೆ ಈಗ ಜಾತಿಗಣತಿ ಘೋಷಿಸಿದ್ದು ಏಕೆ’ ಎಂದರು.

‘ಯುಪಿಎ ಸರ್ಕಾರದಲ್ಲಿ ಏಕೆ ಮಾಡಿಸಲಿಲ್ಲ?’

ಪಿ.ಸಿ.ಮೋಹನ್

ಬೆಂಗಳೂರು: ‘60 ವರ್ಷಗಳವರೆಗೆ ಆಡಳಿತ ನಡೆಸಿದ ಕಾಂಗ್ರೆಸ್ ಜಾತಿ ಗಣತಿ ಏಕೆ ನಡೆಸಲಿಲ್ಲ’ ಎಂದು ಬಿಜೆಪಿ ಸಂಸದ ಪಿ.ಸಿ.ಮೋಹನ್ ಪ್ರಶ್ನಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಹುಲ್ ಗಾಂಧಿಯವರ ಒತ್ತಡದಿಂದ ನರೇಂದ್ರ ಮೋದಿ ಅವರು ಜಾತಿ ಗಣತಿ ಮಾಡಲು ಮುಂದಾಗಿದ್ದಾರೆಂದು ಸಿದ್ದರಾಮಯ್ಯ ಹೇಳಿದ್ದಾರೆ. 2004ರಿಂದ 2014ರವರೆಗೆ ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇತ್ತು. ಆಗ ರಾಹುಲ್ ಅವರು ಮನಮೋಹನ್ ಸಿಂಗ್ ಅವರ ಮೇಲೆ ಒಂದು ದಿನವಾದರೂ ಜನಗಣತಿಗೆ ಒತ್ತಾಯ ಮಾಡಿದ್ದರೆ? ಆಗ ಒತ್ತಡ ಏಕೆ ಹಾಕಲಿಲ್ಲ ಎಂದು ಸಿದ್ದರಾಮಯ್ಯ ಅವರು ರಾಹುಲ್ ಅವರನ್ನು ಪ್ರಶ್ನಿಸಬೇಕು’ ಎಂದರು.

SESHADRIPURAM INSTITUTIONS

Seshadripuram Educational Trust · SINCE 1930 · INSTITUTIONS

ADMISSIONS OPEN for 1st PUC : 2025-26

SESHADRIPURAM INDEPENDENT PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. V. Manjunath, Principal, Tel: 22955358. website: spucmain.ac.in
COMMERCE: MSBA / MEBA / SEBA / CEBA | SCIENCE: PCMB / PCME / PCMCs

SESHADRIPURAM COMPOSITE PRE-UNIVERSITY COLLEGE
40, Girls' School Street, Seshadripuram, Bengaluru-560 020.
Prof G. K. Manjunath, Principal, Tel: 22955365. website: scpucblr.ac.in
COMMERCE: MSBA / MEBA / SEBA / CEBA | SCIENCE: PCMB / PCME / PCMCs

SESHADRIPURAM PRE-UNIVERSITY COLLEGE
Yelahanka New Town, Bengaluru-560 064.
Prof. T. Doddegowda, Principal, Tel: 22955372. website: www.scpuc.ac.in
COMMERCE: MSBA / MEBA / SEBA / CEBA | SCIENCE: PCMB / PCMCs

SESHADRIPURAM INDEPENDENT PRE-UNIVERSITY COLLEGE
18, 2nd Main, Kengeri Satellite Town, Bengaluru-560 060,
Dr. Manjunath R. Principal, Tel: 22955377. website: www.spuc.ac.in
COMMERCE: MEBA / SEBA / CEBA | SCIENCE: PCMB / PCME / PCMCs

SESHADRIPURAM EVENING PRE-UNIVERSITY COLLEGE
27, Nagappa Street, Seshadripuram, Bengaluru-560 020.
Prof. R. Mahalakshmi, Principal, Tel: 22955359. website: www.sepuc.ac.in
COMMERCE: HEBA / CEBA

N. R. Pandith Aradhya, President — Dr. Wooday P. Krishna, Honorary General Secretary

EAST WEST GROUP OF INSTITUTIONS

1968 EAST WEST
Over 55 Years of Academic Excellence

(Recognised by Govt. of Karnataka) (Approved by AICTE & INC, PCI, New Delhi)
(Affiliated to Bangalore University, Rajiv Gandhi University, Visveshwaraiah Technological University)
4000+ Faculty & Staff | 16000+Students | Students from 15 Countries

NAAC GRADE A ACCREDITED INSTITUTION

ADMISSION IN PROGRESS 2025-26

CAMPUS-1 MAGADI ROAD — 20 Acres Campus
(An Autonomous Institute)
CET CODE: E-106 COMED-K CODE: E-048 | ARCH CET CODE: E-271 ARCH COMED-K CODE: E-196
63, Off Magadi Road, Vishwaneedam P.O. Bengaluru - 560 091 Phone: 080-2328 8245 / 8242 / 6732 / 8899 Mobile: 94482 24779

PROGRAMMES OFFERED

PUC
PCMB-PCMC-HEBA-CEBA
- BE - Computer Science & Engineering
- BE - Computer Science & Engineering (IOT, Cyber Security including Block Chain Technology)
- BE - Computer Science & Engineering (AIML)
- BE - Information Science & Engineering
- BE - Artificial Intelligence & Machine Learning
- BE - Electronics & Communication Engineering
- BE - Electronics & Computer Engineering
- BE - Artificial Intelligence & Data Science
- BE - Electrical & Electronics Engineering
- BE - Civil Engineering
- BE - Mechanical Engineering
- B.Sc / M.Sc - Biotechnology / Biochemistry / Genetics Botany / Chemistry / Microbiology / Forensic Science
- Interior Design & Decoration
- BHM - Bachelor of Hotel Management *
- B.A. - Journalism / Criminology / Psychology

POLYTECHNIC
Information Science - E & C - E & E - CS
Mech - Auto - Mechtronics - Civil
- B.Com
- BBA - Aviation
- BCA
- M.Com
- MBA
- MCA
- Physiotherapy
- Lab Technician
- Nursing (GNM, PB BSc, BSc, MSc)
- Pharmacy - D.Pharma / B.Pharma / M.Pharma / Pharma D
- Paramedical
- M.Tech
- PhD
- R&D
- BEd
- LLB *
- B.Com, LLB *
- BA, LLB *
- BBA, LLB *
- B.Arch

Campus-2 Yelahanka New Town — 5 Acres Campus
CET CODE: E-239
13/A, 'A' Sector, Yelahanka New Town, Bengaluru-560 064, Phone: 080-2856 6116 / 2856 6115 Mobile: +91 98446 71611

PROGRAMMES OFFERED

PUC
PCMB-PCMC-HEBA-CEBA
- BE - Compter Science & Engineering
- BE - Mechanical Engineering
- BE - Electronics & Electrical
- BE - Aeronautical Engineering
- BE - Agricultural Engineering

POLYTECHNIC
Information Science - E & C - E & E - CS
Mech - Auto - Mechtronics - Civil
- BCom
- BBA - Aviation
- BCA
- Nursing (GNM, PB BSc, BSc)
- Physiotherapy (BPT / MPT)

◆ International collaboration for Engineering, Nursing, UG, PG & MBA programmes. ◆ Industry on Campus.
◆ State of the art server driven labs. ◆ Sports collaboration with Shikhar Dhawan Foundation.

www.ewgi.edu.in
Placement assistance for Engineering and other courses
CENTRE FOR EXCELLENCE | IN HOUSE HOSTEL & DINING

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ · ಗಾಂಧಿ ಭಾರತ

ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಬೆಂಗಳೂರು ನಗರ ಜಿಲ್ಲೆ, ತಾಲ್ಲೂಕು ಆಡಳಿತ ಮತ್ತು ತಾಲ್ಲೂಕು ಪಂಚಾಯತ್, ಯಲಹಂಕ ಹಾಗೂ ಸಮಾಜ ಕಲ್ಯಾಣ ಇಲಾಖೆಯ ಸಹಭಾಗಿತ್ವದಲ್ಲಿ

ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು, ಸಂವಿಧಾನ ಮೌಲ್ಯಗಳನ್ನುದ್ದೇಶಿಸಿ ಮಾತನಾಡುತ್ತಿರುವುದು.

ಸಂವಿಧಾನ ಶಿಲ್ಪಿ, ಮಹಾ ಮಾನವತಾವಾದಿ, ಭಾರತ ರತ್ನ
ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ರವರ
14 ಅಡಿ ಎತ್ತರದ ಕಂಚಿನ ಪ್ರತಿಮೆ ಲೋಕಾರ್ಪಣೆ ಸಮಾರಂಭ

ದಿನಾಂಕ: 03.05.2025, ಶನಿವಾರ
ಸ್ಥಳ: ಮಿನಿ ವಿಧಾನಸೌಧದ ಮುಂಭಾಗ, ಯಲಹಂಕ
ಸಮಯ: ಬೆಳಿಗ್ಗೆ 11.00 ಗಂಟೆಗೆ

ಉದ್ಘಾಟನೆ
ಶ್ರೀ ಸಿದ್ದರಾಮಯ್ಯ, ಸನ್ಮಾನ್ಯ ಮುಖ್ಯಮಂತ್ರಿಗಳು

ಗೌರವಾನ್ವಿತ ಆಹ್ವಾನಿತರು
ಶ್ರೀಮತಿ ನಿರ್ಮಲಾ ಸೀತಾರಾಮನ್, ಮಾನ್ಯ ಹಣಕಾಸು ಹಾಗೂ ಕಾರ್ಪೊರೇಟ್ ವ್ಯವಹಾರಗಳ ಸಚಿವರು, ಭಾರತ ಸರ್ಕಾರ
ಸುಶ್ರೀ ಶೋಭಾ ಕರಂದ್ಲಾಜೆ, ಮಾನ್ಯ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಕಾರ್ಮಿಕ ಮತ್ತು ಉದ್ಯೋಗ ರಾಜ್ಯ ಸಚಿವರು, ಭಾರತ ಸರ್ಕಾರ

ಘನ ಉಪಸ್ಥಿತಿ
ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು
ಡಾ. ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು

ಅಧ್ಯಕ್ಷತೆ
ಶ್ರೀ ಎಸ್.ಆರ್. ವಿಶ್ವನಾಥ್, ಮಾನ್ಯ ಶಾಸಕರು, ಯಲಹಂಕ ವಿಧಾನಸಭಾ ಕ್ಷೇತ್ರ

ಮುಖ್ಯ ಅತಿಥಿಗಳು
ಶ್ರೀ ಕೃಷ್ಣ ಬೈರೇಗೌಡ, ಮಾನ್ಯ ಕಂದಾಯ ಸಚಿವರು
ಶ್ರೀ ಸುರೇಶ್ ಬಿ.ಎಸ್., ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು
ಶ್ರೀ ಎನ್.ಎ. ಹ್ಯಾರೀಸ್, ಮಾನ್ಯ ಶಾಸಕರು, ಶಾಂತಿನಗರ ಹಾಗೂ ಅಧ್ಯಕ್ಷರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಡಾ. ಕೆ. ಗೋವಿಂದರಾಜ್, ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳು ಹಾಗೂ ಶಾಸಕರು, ವಿಧಾನ ಪರಿಷತ್ತು

ಮಾನ್ಯ ಲೋಕಸಭೆ ಮತ್ತು ರಾಜ್ಯಸಭೆ ಸಂಸದರು, ವಿಧಾನಸಭೆ ಮತ್ತು ವಿಧಾನ ಪರಿಷತ್ತಿನ ಮಾನ್ಯ ಶಾಸಕರುಗಳು, ವಿವಿಧ ನಿಗಮ ಮಂಡಳಿಗಳ ಅಧ್ಯಕ್ಷರುಗಳು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಸಮಾರಂಭದಲ್ಲಿ ವಿಶೇಷ ಅತಿಥಿಗಳಾಗಿ ಭಾಗವಹಿಸುವರು

“ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ”
CMofKarnataka
https://dipr.karnataka.gov.in/
ಸರ್ವರಿಗೂ ಆದರದ ಸ್ವಾಗತ
ಕರ್ನಾಟಕ ವಾರ್ತೆ

ಶುಕ್ರವಾರ ಸಂಜೆಯಿಂದ ರಾತ್ರಿಯವರೆಗೆ ಸುರಿದ ಮಳೆಗೆ ಪರದಾಡಿದ ವಾಹನ ಸವಾರರು

ಗುಡುಗು, ಮಿಂಚು ಬಿರುಗಾಳಿ ಮಳೆ

ಟೌನ್‌ಹಾಲ್ ಬಳಿ ಶುಕ್ರವಾರ ರಾತ್ರಿ ಆಗಸದಲ್ಲಿ ಮಿಂಚು ಕಂಡುಬಂತು

ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌ಜಿ

ಬಿನ್ನಿಮಿಲ್ಸ್ ರಸ್ತೆಯ ರೈಲ್ವೆ ಅಂಡರ್ ಪಾಸ್‌ನಲ್ಲಿ ತುಂಬಿದ್ದ ಮಳೆ ನೀರಿನಲ್ಲಿ ಸಾಗಲು ಪರದಾಡಿದ ವಾಹನ ಸವಾರರು ಪ್ರಜಾವಾಣಿ ಚಿತ್ರ : ಕಿಶೋರ್ ಕುಮಾರ್ ಬೋಳಾರ್

ಮಳೆಯಿಂದ ರಸ್ತೆಗಳಲ್ಲಿ ನಿಂತು ವಾಹನ ಸಂಚಾರ ಮಂದಗತಿಯಲ್ಲಿ ಸಾಗಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಪ್ರದೇಶಗಳಲ್ಲಿ ಶುಕ್ರವಾರ ಗುಡುಗು– ಮಿಂಚು, ಬಿರುಗಾಳಿಯೊಂದಿಗೆ ಸುರಿದ ಮಳೆಯಿಂದ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು.

ಮಧ್ಯಾಹ್ನದಿಂದ ಮೋಡಕವಿದ ವಾತಾವರಣವಾಗಿದ್ದು, ಸಂಜೆ ವೇಳೆಗೆ ಗುಡುಗು ಸಹಿತ ಮಳೆ ಸುರಿಯಿತು. ಕೆಂಗೇರಿ, ರಾಜರಾಜೇಶ್ವರಿನಗರ, ಹೆಮ್ಮಿಗೆಪುರ, ನಾಯಂಡಹಳ್ಳಿ ಸುತ್ತಮುತ್ತಲ ಪ್ರದೇಶಗಳಲ್ಲಿ ಮಳೆಯ ಆರ್ಭಟ ಹೆಚ್ಚಾಗಿತ್ತು.

ಸಂಜೆ 5 ಗಂಟೆಯ ವೇಳೆಗೆ ಮಳೆ ಆರಂಭವಾಯಿತು. ವಾಹನ ಸವಾರರು ರಸ್ತೆಯಲ್ಲಿ ಮಳೆ ನೀರಿನಲ್ಲೇ ಸಂಚರಿಸುವ ಜೊತೆಗೆ, ಗುಡುಗಿನ ಆರ್ಭಟಕ್ಕೆ ಬೆಚ್ಚಿ ಬಿದ್ದರು. ಸುಮಾರು ಒಂದು ಗಂಟೆ ಸುರಿದ ಮಳೆ ಬಿಡುವು ನೀಡಿತು. ರಾತ್ರಿ 9ರ ನಂತರ ಮಿಂಚಿನೊಂದಿಗೆ ಗುಡುಗಿನ ಆರ್ಭಟ ಹೆಚ್ಚಾಗಿ, ಕೆಲವೆಡೆ ಬಿರುಸಾಗಿ ಮಳೆ ಸುರಿಯಿತು. ಮಧ್ಯ ರಾತ್ರಿಯವರೆಗೂ ಹಲವು ಪ್ರದೇಶಗಳಲ್ಲಿ ತುಂತುರು ಮಳೆಯಾಯಿತು.

> ಗುರುವಾರ ಮತ್ತು ಶುಕ್ರವಾರ ಬಿರುಗಾಳಿಗೆ ನಗರದಲ್ಲಿ **68** ಮರಗಳು ಧರೆಗುರುಳಿವೆ. **93** ಸ್ಥಳಗಳಲ್ಲಿ ಮರಗಳ ಕೊಂಬೆಗಳು ಬಿದ್ದಿವೆ.

ವಿಜಯನಗರದಿಂದ ಪ್ರಸನ್ನ ಜಂಕ್ಷನ್, ಕುವೆಂಪು ವೃತ್ತದಿಂದ ಬಿಇಎಲ್ ವೃತ್ತ, ಪೀಣ್ಯ ಮೇಲ್ಸೇತುವೆಯಿಂದ ಪಾರ್ಲೆ ಟೋಲ್, ವಡ್ಡರಪಾಳ್ಯದಿಂದ ಗೆದ್ದಲಹಳ್ಳಿ, ಆರ್‌.ಟಿ. ನಗರದ ಸಿಬಿಐ ಮೇಲ್ಸೇತುವೆಯಿಂದ ವಿಮಾನ ನಿಲ್ದಾಣ ರಸ್ತೆ, ಹೆಬ್ಬಾಳದಿಂದ ಗೊರಗುಂಟೆಪಾಳ್ಯ, ಬಿನ್ನಿಮಿಲ್ ಜಂಕ್ಷನ್‌ನಿಂದ ರೈಲು ನಿಲ್ದಾಣ, ಮದರ್ ಡೇರಿಯಿಂದ ಎಂ.ಎಸ್. ಪಾಳ್ಯ, ಲುಲು ಮಾಲ್‌ನಿಂದ ಮೆಜೆಸ್ಟಿಕ್, ಯಲಹಂಕ ಕಾಫಿ ಡೇಯಿಂದ ವಿಮಾನ ನಿಲ್ದಾಣ, ಸಂತೆ ವೃತ್ತದಿಂದ ಕೋಗಿಲು ಕ್ರಾಸ್‌ವರೆಗಿನ ರಸ್ತೆಗಳಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಗಿತ್ತು. ಯಶವಂತಪುರದ ಕೂಲಿನಗರ, ಶೇಷಾದ್ರಿಪುರದಲ್ಲಿ ಮರ ರಸ್ತೆಗೆ ಉರುಳಿ, ವಾಹನ ದಟ್ಟಣೆ ಉಂಟಾಗಿತ್ತು.

ಕೆಂಗೇರಿಯಲ್ಲಿ 7.8 ಸೆಂ.ಮೀ, ಆರ್‌.ಆರ್.ನಗರದಲ್ಲಿ 4.35 ಸೆಂ.ಮೀ, ಹೆಮ್ಮಿಗೆಪುರದಲ್ಲಿ 3.6 ಸೆಂ.ಮೀ, ಎಚ್. ಗೊಲ್ಲಹಳ್ಳಿ ಸೆಂ.ಮೀ, ನಾಯಂಡಹಳ್ಳಿ 35 ಸೆಂ.ಮೀ, ಪೀಣ್ಯ ಕೈಗಾರಿಕಾ ಪ್ರದೇಶ 3.2 ಸೆಂ.ಮೀ, ಬಾಗಲಕುಂಟೆ 3.1 ಸೆಂ.ಮೀ, ಹೇರೋಹಳ್ಳಿ 3 ಸೆಂ.ಮೀ, ಹಂಪಿ ನಗರ 2.95 ಸೆಂ.ಮೀ, ಚೊಕ್ಕಸಂದ್ರ 2.9 ಸೆಂ.ಮೀ, ಶೆಟ್ಟಿಹಳ್ಳಿ 2.75 ಸೆಂ.ಮೀ, ದೊಡ್ಡಬಿದಿರುಕಲ್ಲು 2.35, ಬಸವೇಶ್ವರನಗರ 2.3 ಸೆಂ.ಮೀ, ಜಕ್ಕೂರು 2.25 ಸೆಂ.ಮೀ, ವಿದ್ಯಾಪೀಠ 1.9 ಸೆಂ.ಮೀ ಮಳೆಯಾಯಿತು.

ಜೆ.ಸಿ ರಸ್ತೆಯಲ್ಲಿ ಮಳೆಗೆ ಜನರು ಕೊಡೆ ಹಿಡಿದು ರಸ್ತೆ ಗಾಟಿದರು

ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಕೇಂದ್ರ ಕಚೇರಿಯಲ್ಲಿರುವ ನಿಯಂತ್ರಣ ಕೊಠಡಿಗೆ ಶುಕ್ರವಾರ ರಾತ್ರಿ ಭೇಟಿ ನೀಡಿದ್ದರು. ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಉಪಸ್ಥಿತರಿದ್ದರು

ನಿಯಂತ್ರಣ ಕೊಠಡಿಗೆ ಮಹೇಶ್ವರ ರಾವ್

ಮುಖ್ಯ ಆಯುಕ್ತ ಮಹೇಶ್ವರ ರಾವ್ ಅವರು ಕೇಂದ್ರ ಕಚೇರಿಯಲ್ಲಿರುವ ನಿಯಂತ್ರಣ ಕೊಠಡಿ ಹಾಗೂ ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್‌ಗೆ ಭೇಟಿನೀಡಿ, ಮಳೆ ಸುರಿಯುತ್ತಿರುವ ಕಾರಣದಿಂದ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ಎಲ್ಲಾ ವಲಯ ಆಯುಕ್ತರಿಗೆ ಸೂಚಿಸಿದರು.

ಮಳೆ ಹಾಗೂ ಗಾಳಿಗೆ ಧರೆಗುರುಳುವ ಮರಗಳು, ಮರದ ರೆಂಬೆ ಕೊಂಬೆಗಳನ್ನು ತುರ್ತಾಗಿ ತೆರವು-ಗೊಳಿಸುವಂತೆ ಅರಣ್ಯ ವಿಭಾಗದ ಅಧಿಕಾರಿಗಳಿಗೆ ಸೂಚಿಸಿದರು.

ನಿಯಂತ್ರಣ ಕೊಠಡಿಗೆ ಬಂದ ದೂರುಗಳನ್ನು ಕೂಡಲೆ ಇತ್ಯರ್ಥಪಡಿಸಲು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತರಬೇಕು. ರಸ್ತೆಯಲ್ಲಿ ನಿಂತಿರುವ ನೀರನ್ನು ಸೈಡ್ ಡ್ರೈನ್‌ಗಳಿಗೆ ಸರಾಗವಾಗಿ ಹೋಗುವಂತೆ ಮಾಡಲು ಸೂಚಿಸಿದರು.

ವಾಣಿ ವಿಲಾಸ ರಸ್ತೆಯಲ್ಲಿ ವಿದ್ಯುತ್ ತಂತಿಯ ಮೇಲೆ ಮರ ಬಿದ್ದು, ಸಂಚಾರ ದಟ್ಟಣೆ ಉಂಟಾಗಿತ್ತು. ಮುಖ್ಯ ಆಯುಕ್ತರು ದಕ್ಷಿಣ ವಲಯದ ಆಯುಕ್ತರೊಂದಿಗೆ ದೂರವಾಣಿ ಮೂಲಕ ಮಾತನಾಡಿ ತುರ್ತು ಕ್ರಮಕ್ಕೆ ಸೂಚಿಸಿದರು.

ದಕ್ಷಿಣ ವಲಯದಲ್ಲಿ ಎರಡು ಕಾರು ಹಾಗೂ ದಾಸರಹಳ್ಳಿ ವಲಯದಲ್ಲಿ ಒಂದು ಕಾರಿನ ಮೇಲೆ ಮರ ಬಿದ್ದು ಜಖಂಗೊಂಡಿದ್ದು, ಯಾರಿಗೂ ಹಾನಿಯಾಗಿರುವುದಿಲ್ಲ. ನಾಗರಿಕರು ಮಳೆಯಿಂದಾಗಿ ಯಾವುದೇ ಸಮಸ್ಯೆಯಾದರೂ ಪಾಲಿಕೆಯ ಸಹಾಯವಾಣಿ 1533 ಗೆ ಕರೆ ಮಾಡಿ ದೂರು ನೀಡಿ ಎಂದು ಹೇಳಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ನವೀನ್ ಕುಮಾರ್ ರಾಜ್ ಉಪಸ್ಥಿತರಿದ್ದರು.

ಮರಗಳ ಕೆಳಗೆ ನಿಲ್ಲದಂತೆ ಮನವಿ

ನಗರದಲ್ಲಿ ಗಾಳಿ, ಮಳೆ ಸಂದರ್ಭದಲ್ಲಿ ರಸ್ತೆಗಳಲ್ಲಿ ಓಡಾಡುವುದು, ಬೃಹತ್ ಮರಗಳ ಕೆಳಗಡೆ ನಿಲ್ಲದಂತೆ ಮುಂಜಾಗ್ರತೆ ವಹಿಸಬೇಕು ಎಂದು ನಾಗರಿಕರಲ್ಲಿ ಬಿಬಿಎಂಪಿ ಮನವಿ ಮಾಡಿಕೊಂಡಿದೆ.

ಗುರುವಾರ ಸಂಜೆ ಸುರಿದ ಮಳೆಗೆ ದಕ್ಷಿಣ ವಲಯ ವ್ಯಾಪ್ತಿಯಲ್ಲಿನ ಕತ್ರಿಗುಪ್ಪೆ ಗೋ-ಗ್ಯಾಸ್ ಬಂಕ್‌ನ ಸಮೀಪ ನಿಂತಿದ್ದ ಆಟೊ ಹಾಗೂ ಎರಡು ಕಾರುಗಳ ಮೇಲೆ ಬೃಹತ್ ಮರವೊಂದು ಮುರಿದು ಬಿದ್ದು ಮಹೇಶ್ (40) ಎಂಬುವರು ಸ್ಥಳದಲ್ಲೇ ಮೃತಪಟ್ಟಿರುತ್ತಾರೆ.

ಕಾರಿನಲ್ಲಿದ್ದವರಿಗೆ ಸಣ್ಣಪುಟ್ಟ ಗಾಯಗಳಾಗಿ ಅಪಾಯದಿಂದ ಪಾರಾಗಿರುತ್ತಾರೆ. ಗಾಳಿ ಮಳೆಗೆ ಎಲ್ಲಾ ವಲಯಗಳ ವ್ಯಾಪ್ತಿಯಲ್ಲಿ ಸುಮಾರು 23 ಮರಗಳು ಹಾಗೂ 52 ಬೃಹತ್ ರೆಂಬೆಗಳು ಬಿದ್ದಿವೆ. ಅರಣ್ಯ ಘಟಕವು ಆಯಾ ವಲಯಗಳ ಅಧಿಕಾರಿಗಳೊಂದಿಗೆ ಜೊತೆಗೂಡಿ ತೆರವು ಕಾರ್ಯ ನಡೆಸುತ್ತಿದೆ ಎಂದು ಬಿಬಿಎಂಪಿ ತಿಳಿಸಿದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

ರಾಜರಾಜೇಶ್ವರಿನಗರ: ಅಂದ್ರಹಳ್ಳಿ ಕೆರೆ ಅಭಿವೃದ್ಧಿ, ಬಡಾವಣೆಗಳ ರಸ್ತೆ ಡಾಂಬರಿಕರಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು. ನಂತರ ಮಾತನಾಡಿದ ಅವರು, ‘ದೊಡ್ಡಬಿದರಕಲ್ಲು, ಹೇರೋಹಳ್ಳಿ, ವಿದ್ಯಮಾನ್ಯನಗರ, ಅಂದ್ರಹಳ್ಳಿ, ಕರಿಹೋಬನಹಳ್ಳಿ ಸುತ್ತಮುತ್ತ ರಸ್ತೆ, ಒಳಚರಂಡಿ ಸೇರಿದಂತೆ ಮೂಲಸೌಲಭ್ಯ ಕಾಮಗಾರಿಗಳು ಬಹುತೇಕ ಪೂರ್ಣಗೊಂಡಿವೆ’ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆ ಸಾಧಕ ವಿದ್ಯಾರ್ಥಿಗಳು

ಆರ್‌.ಧರಣಿ (ಶೇ 99.04), ವಿಶಾಲ್ ಶಾಲೆ, ನೆಲಮಂಗಲ

ಆರ್‌.ಧರಿತ್ರಿ (ಶೇ 98.4), ವಿಶಾಲ್ ಶಾಲೆ, ನೆಲಮಂಗಲ

ಕುಶಾಲ್‌ಸಂಪತ್ (ಶೇ 98.08), ವಿಶಾಲ್ ಶಾಲೆ, ನೆಲಮಂಗಲ

ತನು ಸಿರ್ವಿ (ಶೇ 95.68), ವಿಶಾಲ್ ಶಾಲೆ, ನೆಲಮಂಗಲ

ಗುರುರಾಜ್ (ಶೇ99.36), ಸರ್ ಎಂ.ವಿಶ್ವೇಶ್ವರಯ್ಯ ವಿದ್ಯಾನಿಕೇತನ ಶಾಲೆ, ಮಲ್ಲಸಂದ್ರ

ಎಸ್ ಕೆ.ಗಗನ್‌ಗೌಡ (ಶೇ 98.08), ವಿಶಾಲ್ ಶಾಲೆ, ನೆಲಮಂಗಲ

ಜೆ.ಲಿಖಿತ್ (ಶೇ 97.6), ವಿಶಾಲ್ ಶಾಲೆ, ನೆಲಮಂಗಲ

ಸುಕನ್ಯಾ ಆಚಾರ್ಯ (ಶೇ 99), ಎಂ.ಎಂ. ಬೈಟ್ ಸ್ಕೂಲ್, ಚೊಕ್ಕಸಂದ್ರ

ದಕ್ಷಿಣ, ಉತ್ತರ ಶೈಕ್ಷಣಿಕ ಜಿಲ್ಲೆಗಳಲ್ಲಿ ಐವರು ವಿದ್ಯಾರ್ಥಿಗಳಿಗೆ 625ಕ್ಕೆ 625 ಅಂಕ

ಬೆಂಗಳೂರು ನಗರ: ಕುಸಿದ ಫಲಿತಾಂಶ, ಏರಿದ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಮತ್ತು ಉತ್ತರ ಶೈಕ್ಷಣಿಕ ಜಿಲ್ಲೆಗಳಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಫಲಿತಾಂಶ ಭಾರಿ ಕುಸಿತವಾಗಿದೆ. ಆದರೆ, ಬೇರೆ ಜಿಲ್ಲೆಗಳಲ್ಲಿಯೂ ಫಲಿತಾಂಶ ಕುಸಿದಿರು-ವುದರಿಂದ ಜಿಲ್ಲೆಗಳ ಪಟ್ಟಿಯಲ್ಲಿ ಸ್ಥಾನ ಮೇಲಕ್ಕೇರಿದೆ. ಎರಡು ಜಿಲ್ಲೆಗಳಲ್ಲಿ ಐವರು ವಿದ್ಯಾರ್ಥಿಗಳು 625ಕ್ಕೆ 625 ಅಂಕ ಗಳಿಸಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯ ಗಿರಿನಗರ ವಿಜಯಭಾರತಿ ವಿದ್ಯಾಲಯದ ಜಾಹ್ನವಿ ಎಸ್.ಎನ್., ಕಲ್ಯಾಣ ನಗರ ಮಾತಾ ನ್ಯಾಷನಲ್ ಇಂಗ್ಲಿಷ್ ಹೈಸ್ಕೂಲ್‌ನ ನಮಿತಾ, ಬನಶಂಕರಿ ಹೋಲಿ ಚೈಲ್ಡ್ ಇಂಗ್ಲಿಷ್ ಹೈಸ್ಕೂಲ್‌ನ ಯುಕ್ತ ಎಸ್. ಹಾಗೂ ಬೆಂಗಳೂರು ಉತ್ತರ ಜಿಲ್ಲೆಯ ಮಾಗಡಿ ಮುಖ್ಯರಸ್ತೆ ಸೇಂಟ್ ಯಶ್ ಪಬ್ಲಿಕ್ ಪ್ರೌಢಶಾಲೆಯ ಧನಲಕ್ಷ್ಮೀ ಎಂ., ಮಲ್ಲೇಶ್ವರ ಎಂಇಎಸ್ ಕಿಶೋರ ಕೇಂದ್ರದ ಮಧುಸೂದನ್ ರಾಜು ಎಸ್. 625ಕ್ಕೆ 625 ಅಂಕ ಗಳಿಸಿದ್ದಾರೆ.

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 56,078 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದು, 40,547 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ದಕ್ಷಿಣ ಜಿಲ್ಲೆಯು ಕಳೆದ ವರ್ಷ ಶೇಕಡ 79ರಷ್ಟು ಫಲಿತಾಂಶ ಪಡೆದು 12ನೇ ಸ್ಥಾನದಲ್ಲಿತ್ತು. ಈ ಬಾರಿ ಶೇ 6.7ರಷ್ಟು ಕಡಿಮೆಯಾಗಿದ್ದು, ಶೇ 72.3ರಷ್ಟು ಫಲಿತಾಂಶ ಪಡೆದಿದೆ. ಆದರೆ, ಉತ್ತಮ ಫಲಿತಾಂಶ ಪಡೆದ ಜಿಲ್ಲೆಗಳ ಪಟ್ಟಿಯಲ್ಲಿ 12ರಿಂದ 10ನೇ ಸ್ಥಾನಕ್ಕೆ ಏರಿದೆ.

ಬೆಂಗಳೂರು ಉತ್ತರ ಜಿಲ್ಲೆಯಲ್ಲಿ 44,392 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 32,082 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಜಿಲ್ಲೆ ಕಳೆದ ವರ್ಷ ಶೇ 77.09ರಷ್ಟು ಫಲಿತಾಂಶ ಪಡೆದಿದ್ದು, ಜಿಲ್ಲೆಗಳ ಪಟ್ಟಿಯಲ್ಲಿ 14ನೇ ಸ್ಥಾನದಲ್ಲಿತ್ತು. ಈ ಬಾರಿ ಶೇ 4.82ರಷ್ಟು ಕಡಿಮೆಯಾಗಿದೆ. ಶೇ 72.27ರಷ್ಟು ಫಲಿತಾಂಶ ಪಡೆದಿದ್ದರೂ ಜಿಲ್ಲೆಗಳ ಪಟ್ಟಿಯಲ್ಲಿ 11ನೇ ಸ್ಥಾನಕ್ಕೇರಿದೆ.

ವಿಜ್ಞಾನಿಯಾಗುವ ಗುರಿ ಇದೆ

ನಾನು ಯಾವುದೇ ಟ್ಯೂಷನ್ ತರಗತಿಗಳಿಗೆ ಹೋಗಿಲ್ಲ. ಅಪ್ಪ ಅಮ್ಮ, ಶಿಕ್ಷಕರ ಪ್ರೋತ್ಸಾಹದಿಂದ 625ಕ್ಕೆ 625 ಅಂಕ ಪಡೆಯಲು ಸಾಧ್ಯವಾಗಿದೆ. ಮುಂದೆ ಪಿಸಿಎಂಬಿ ಆಯ್ಕೆ ಮಾಡಿಕೊಂಡು ವಿಜ್ಞಾನಿಯಾಗಬೇಕು ಎಂಬ ಗುರಿ ಇಟ್ಟುಕೊಂಡಿದ್ದೇನೆ.

ಜಾಹ್ನವಿ ಎಸ್.ಎನ್, ವಿಜಯ ಭಾರತಿ ವಿದ್ಯಾಲಯ ಗಿರಿನಗರ

ಸಮಯ ಸಿಕ್ಕಿದಾಗಲೆಲ್ಲಾ ಓದುತ್ತಿದ್ದೆ

ಓದಲು ನಾನು ವೇಳಾಪಟ್ಟಿ ಮಾಡಿಕೊಂಡಿರಲಿಲ್ಲ. ಸಮಯ ಸಿಕ್ಕಿದಾಗಲೆಲ್ಲ ಓದುತ್ತಿದ್ದೆ. ಸಂಶಯ, ಗೊಂದಲ ಉಂಟಾದಾಗ ಆ ಕ್ಷಣವೇ ಕೇಳುತ್ತಿದ್ದೆ. ತಂದೆ, ತಾಯಿ, ಶಿಕ್ಷಕರು ನನ್ನ ಪ್ರಶ್ನೆಗಳಿಗೆ ಉತ್ತರಿಸಿ ಗೊಂದಲ ನಿವಾ-ರಿಸುತ್ತಿದ್ದರು. ಮುಂದೆ ವಾಣಿಜ್ಯ ವಿಷಯ ಆಯ್ಕೆ ಮಾಡಿಕೊಂಡು ಕಂಪನಿ ಸೆಕ್ರೆಟರಿ ಆಗಬೇಕು.

ನಮಿತಾ, ಮಾತಾ ನ್ಯಾಷನಲ್ ಇಂಗ್ಲಿಷ್ ಹೈಸ್ಕೂಲ್, ಕಲ್ಯಾಣನಗರ

ಹಲವು ಪ್ರದೇಶಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಶುಕ್ರವಾರ ಸಂಜೆ 6.30 ರ ಸುಮಾರಿಗೆ ಸುರಿದ ಧಾರಾಕಾರ ಮಳೆಯಿಂದ ತಕ್ಕಸಂದ್ರ ಕೆರೆ ರಸ್ತೆ, ಶೆಟ್ಟಿಹಳ್ಳಿ ಬಾಬಣ್ಣ ಬಡಾವಣೆ ಕೆಲವು ತಗ್ಗು ಪ್ರದೇಶಗಳು ಜಲಾವೃತವಾಗಿ ವಾಹನ ಸಂಚಾರಿಸಲು ಅಡಚಣೆಯಾಯಿತು.

ಅರ್ಧ ಗಂಟೆ ಬಳಿಕ ನೀರು ಹರಿದು ರಸ್ತೆ ಸಂಚಾರ ಸುಗಮವಾಯಿತು. ಮಲ್ಲಸಂದ್ರ, ಕಲ್ಯಾಣನಗರ ಸೌಂದರ್ಯ ಬಡಾವಣೆ ಸಿಡೇದಹಳ್ಳಿ ಸುಂಕದಕಟ್ಟೆ ಪೀಣ್ಯ 2ನೇ ಹಂತ ಹೆಗ್ಗನಹಳ್ಳಿ ರಾಜ-ಗೋಪಾಲನಗರ ಮುಂತಾದ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಿ ಜನರು ಪರದಾಡುವಂತಾಯಿತು. ಸೌಂದರ್ಯ ಬಡಾವಣೆಯಲ್ಲಿ ಜೋರು ಗಾಳಿ ಮತ್ತು ಸುರಿದ ಮಳೆಗೆ ಮರ ಬಿದ್ದಿದೆ. ಸಿಡೇದಹಳ್ಳಿ ರಸ್ತೆ ಪಿಕೆ ಬೇಕರಿ ಹತ್ತಿರ ಮರದ ಕೊಂಬೆ, ಸಿದ್ದೇಶ್ವರ ಬಡಾವಣೆ ಮರದ ಕೊಂಬೆ ಹಾವನೂರು ಬಡಾವಣೆ ಮರದ ಕೊಂಬೆಗಳು ಬಿದ್ದಿವೆ. ಎಜಿಬಿ ಬಡಾವಣೆ, ಡಿಫೆನ್ಸ್ ಕಾಲೋನಿ ಗೃಹಲಕ್ಷ್ಮಿ ಬಡಾವಣೆ, ಶೆಟ್ಟಿಹಳ್ಳಿ ರಾಘವೇಂದ್ರ ಬಡಾವಣೆಯಲ್ಲಿ ಮರಗಳು ಬಿದ್ದಿದೆ. ಬಿಬಿಎಂಪಿ ಅರಣ್ಯ ಅಧಿಕಾರಿಗಳು ಮರಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಂಡಿದ್ದಾರೆ.

ಪಂಜಾಬ್: 17 ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ಪಾಕಿಸ್ತಾನ ಮೂಲದ ಖಾಲಿಸ್ತಾನಿ ಭಯೋತ್ಪಾದಕ ಹರ್ವಿಂದರ್ ಸಿಂಗ್ ಅಲಿಯಾಸ್ ರಿಂಡಾ ಜತೆ ಸಂಪರ್ಕ ಹೊಂದಿರುವ ಗ್ಯಾಂಗ್‌ಸ್ಟರ್ ಹರ್‌ಪ್ರೀತ್ ಸಿಂಗ್ ಅಲಿಯಾಸ್ ಹ್ಯಾಪಿ ಪಸ್ಸಿಯಾನ್‌ಗೆ ಸಂಬಂಧಿಸಿದ ಹಲವು ಸ್ಥಳಗಳ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಶುಕ್ರವಾರ ಶೋಧ ನಡೆಸಿದೆ.

ಭಯೋತ್ಪಾದಕ ಪಿತೂರಿ ಪ್ರಕರಣದ ತನಿಖೆಯ ಭಾಗವಾಗಿ ಎನ್‌ಐಎ ಈ ಶೋಧ ನಡೆಸಿದೆ ಎಂದು ಪ್ರಕಟಣೆ ತಿಳಿಸಿದೆ.

ಗುರುದಾಸಪುರ, ಬಟಾಲಾ, ಫಿರೋಜ್‌ಪುರ, ಫಜಿಲ್ಕಾ, ತರಣ್ ತರಣ್, ಅಮೃತಸರ ಮತ್ತು ಫರೀದ್‌ಕೋಟ್ ಜಿಲ್ಲೆಗಳಲ್ಲಿನ ಒಟ್ಟು 17 ಸ್ಥಳಗಳ ಮೇಲೆ ಎನ್‌ಐಎ ಪರಿಶೀಲನೆ ನಡೆಸಿದೆ. ಮೊಬೈಲ್ ಫೋನ್‌ಗಳು, ಡಿಜಿಟಲ್ ಸಾಧನಗಳು ಮತ್ತು ದಾಖಲೆಗಳು ಸೇರಿ ಹಲವು ಅಪರಾಧ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪ್ರಕಟಣೆ ಹೇಳಿದೆ.

ಪ್ರಸ್ತುತ ಅಮೆರಿಕದಲ್ಲಿರುವ ಪಸ್ಸಿಯಾನ್ ಅನ್ನು ಅಲ್ಲಿನ ಪೊಲೀಸರು ಕಳೆದ ತಿಂಗಳು ಬಂಧಿಸಿದ್ದಾರೆ. ಈತನು ಪಾಕಿಸ್ತಾನ ಮೂಲದ ಬಬ್ಬರ್ ಖಾಲ್ಸಾ ಇಂಟರ್‌ನ್ಯಾಷನಲ್ (ಬಿಕೆಐ) ಭಯೋತ್ಪಾದಕ ಸಂಘಟನೆಯ ಪ್ರಮುಖ ಕಾರ್ಯಕರ್ತನಾಗಿದ್ದ ಎಂದು ಅದು ಹೇಳಿದೆ. ಪಂಜಾಬ್, ಹರಿಯಾಣಗಳಲ್ಲಿ ಇತ್ತೀಚೆಗೆ ನಡೆದ ಸರಣಿ ಗ್ರೆನೇಡ್ ದಾಳಿಯ ಹಿಂದಿನ ಮಾಸ್ಟರ್ ಮೈಂಡ್ ಹ್ಯಾಪಿ ಎಂದು ನಂಬಲಾಗಿದೆ ಎಂದು ಪ್ರಕಟಣೆ ಹೇಳಿದೆ.

ವಿದ್ಯಾರ್ಥಿಗಳ ಉತ್ತಮ ಸಾಧನೆ

ಪ್ರಣವಿ ಎನ್ ರಾಜ್ (624), ನ್ಯಾಷನಲ್ ಹೈಸ್ಕೂಲ್

ಹರ್ಷಿತಾ ಕೆ.ಎಂ. 597 (ಶೇ 95.52), ಶ್ರೀವಿದ್ಯಾ ನಿಕೇತನ ಹೈಸ್ಕೂಲ್, ಟಿ. ದಾಸರಹಳ್ಳಿ

ನಿಖಿಲ್ ಟಿ. (ಶೇ 98), ಸೇಂಟ್ ಫಿಲೋಮಿನಾ ಪಬ್ಲಿಕ್ ಶಾಲೆ

ಸೋನಿಕಾ (ಶೇ 96), ಸೇಂಟ್ ಫಿಲೋಮಿನಾ ಪಬ್ಲಿಕ್ ಶಾಲೆ

ಚರಣ್ ನಾಯ್ಕ್ (ಶೇ97.28), ಶ್ರೀವಿದ್ಯಾ ನಿಕೇತನ ಹೈಸ್ಕೂಲ್, ಟಿ. ದಾಸರಹಳ್ಳಿ

ರಶ್ಮಿ ಎಸ್ (ಶೇ 99.84) ಲಿಟ್ಲ್ ಲಿಲ್ಲೀಸ್ ಶಾಲೆ, ಮಹಾಲಕ್ಷ್ಮಿ ಲೇಔಟ್

ಯಶಸ್ವಿನಿ (ಶೇ 98), ಸೇಂಟ್ ಫಿಲೋಮಿನಾ ಪಬ್ಲಿಕ್ ಶಾಲೆ



ತೇಜಶ್ರೀ (ಶೇ 99.2), ಹೋಲಿ ಏಂಜಲ್ ಹೈಸ್ಕೂಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ವಿವಿಧ ಪ್ರೌಢಶಾಲೆಗಳ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ್ದಾರೆ.

ನ್ಯಾಷನಲ್ ಹೈಸ್ಕೂಲ್: ಬಸವನಗುಡಿ ನ್ಯಾಷನಲ್ ಹೈ ಸ್ಕೂಲ್ ವಿದ್ಯಾರ್ಥಿನಿ ಪ್ರಣವಿ ಎನ್. ರಾಜ್ 625ಕ್ಕೆ 624 ಅಂಕ ಗಳಿಸಿ ರಾಜ್ಯದಲ್ಲಿ ಎರಡನೇ ಶ್ರೇಯಾಂಕ ಪಡೆದಿದ್ದಾರೆ. ಎನ್‌ಇಎಸ್ ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಚ್.ಎನ್. ಸುಬ್ರಮಣ್ಯ, ಗೌರವ ಕಾರ್ಯದರ್ಶಿ ವಿ. ವೆಂಕಟಶಿವಾ ರೆಡ್ಡಿ, ಪದಾಧಿಕಾರಿಗಳು, ಅಧ್ಯಾಪಕರು, ಸಿಬ್ಬಂದಿ ಅಭಿನಂದಿಸಿದರು.

ಆರ್‌ಟಿಇ– ಶೇ 75.57 ತೇರ್ಗಡೆ: ಕಡ್ಡಾಯ ಶಿಕ್ಷಣ ಕಾಯ್ದೆ (ಆರ್‌ಟಿಇ) ಅಡಿ ಸೌಲಭ್ಯ ಪಡೆದು ಶಾಲೆಗಳಿಗೆ ದಾಖಲಾದ ವಿದ್ಯಾರ್ಥಿಗಳು ಶೇ 75.57ರಷ್ಟು ಫಲಿತಾಂಶ ಪಡೆದಿದ್ದಾರೆ. ಪರೀಕ್ಷೆ ಬರೆದಿದ್ದ 25,423 ವಿದ್ಯಾರ್ಥಿಗಳಲ್ಲಿ 19,235 ತೇರ್ಗಡೆಯಾಗಿದ್ದಾರೆ.

‘ಆರ್ಥಿಕವಾಗಿ ಹಿಂದುಳಿದ, ಬಡತನ ರೇಖೆಗಿಂತ ಕೆಳಗಿರುವ ವರ್ಗದ ವಿದ್ಯಾರ್ಥಿಗಳ ಸಾಧನೆ ಮೆಚ್ಚುವಂತಿದೆ. 50 ವಿದ್ಯಾರ್ಥಿಗಳು 620ಕ್ಕಿಂತ ಹೆಚ್ಚು ಅಂಕ ಪಡೆದಿದ್ದಾರೆ. ಅದರಲ್ಲೂ ಶೇ 83.92ರಷ್ಟು ಬಾಲಕಿಯರು ತೇರ್ಗಡೆಯಾಗಿದ್ದಾ-ರೆ’ ಎಂದು ಆರ್‌ಟಿಇ ವಿದ್ಯಾರ್ಥಿಗಳು ಮತ್ತು ಪೋಷಕರ ಸಂಘದ ಪ್ರಧಾನ ಕಾರ್ಯದರ್ಶಿ ಬಿ.ಎನ್. ಯೋಗಾನಂದ ಶ್ಲಾಘಿಸಿದ್ದಾರೆ.

ಎಚ್‌ಎಸ್‌ಎಲ್‌ಎನ್ ಗ್ಲೋಬಲ್ ಶಾಲೆಗೆ ಶೇ 100: ಹೆಸರಘಟ್ಟದ ಎಚ್‌ಎಸ್‌ಎಲ್‌ಎನ್ ಗ್ಲೋಬಲ್ ಸ್ಮಾರ್ಟ್ ಶಾಲೆಯು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 100 ರಷ್ಟು ಫಲಿತಾಂಶದ ಸಾಧನೆ ಮಾಡಿದೆ.

ಪರೀಕ್ಷೆಗೆ ಹಾಜರಾದ 10 ವಿದ್ಯಾರ್ಥಿಗಳ ಪೈಕಿ ಎಂ. ಸಂಜನಾ (ಶೇ 95), ರಫಿಯಾ ಖಾನ್ (ಶೇ 84.64) ಅಂಕಗಳನ್ನು ಪಡೆದಿದ್ದಾರೆ.

ಎಚ್‌ಎಸ್‌ಎಲ್‌ಎನ್ ಶಾಲೆಯಲ್ಲಿ ಬರ್ಲಿಂಗ್‌ಟನ್ ಇಂಗ್ಲಿಷ್ ಪಠ್ಯಕ್ರಮ ಅನುಷ್ಠಾನ ಮಾಡಲಾಗಿತ್ತು. ಪೂರ್ವ ಪ್ರಾಥಮಿಕದಿಂದ ಪ್ರೌಢ ಶಾಲೆವರೆಗೂ ಗುಣಮಟ್ಟದ ಶಿಕ್ಷಣ ನೀಡಲಾಗುತ್ತಿದೆ. ಈ ಬಾರಿ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳ ಪೈಕಿ ಎಲ್ಲರೂ ಉನ್ನತ ಶ್ರೇಣಿ ಮತ್ತು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿ ಸಂಸ್ಥೆಗೆ ಹೆಮ್ಮೆ ತಂದಿದ್ದಾರೆ ಎಂದು ಶಾಲೆಯ ಪ್ರಾಂಶುಪಾಲರಾದ ಲಿಖಿತಾ ಗೌಡ ಹೇಳಿದ್ದಾರೆ.

ಲೇಖನ ಎನ್ (622) ಸೌಂದರ್ಯ ಸ್ಕೂಲ್

ಸೌಂದರ್ಯ ಸ್ಕೂಲ್: ನಗರದ ಸೌಂದರ್ಯ ಸ್ಕೂಲ್‌ನ ಲೇಖನ ಎನ್. 622 ಅಂಕ ಪಡೆದು ಉತ್ತಮ ಸಾಧನೆ ಮಾಡಿದ್ದಾರೆ. ಭರತ್ ಎನ್. ಯು, ಸಂಯಮ ಎಚ್.ಪಿ., ಪ್ರತೀಕ್ಷಾ ಸಿ. ಅವರು 620 ಅಂಕ ಪಡೆದಿದ್ದಾರೆ. ಗಾನವಿ ಎಚ್.ಡಿ. 619 ಅಂಕಗಳಿಸಿದ್ದಾರೆ ಎಂದು ಸೌಂದರ್ಯ ಸಮೂಹ ಸಂಸ್ಥೆಗಳ ಸಿಇಒ ಕೀರ್ತನ್ ಕುಮಾರ್ ಎಂ. ತಿಳಿಸಿದ್ದಾರೆ.

ಶೇ 95ಕ್ಕೂ ಹೆಚ್ಚು ಅಂಕ ಗಳಿಸಿದ ಮೂವರು ವಿದ್ಯಾರ್ಥಿನಿಯರು

ಬಿಬಿಎಂಪಿ ಶಾಲೆಗಳು: ಶೇ 55.78ರಷ್ಟು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 33 ಪ್ರೌಢಶಾಲೆಗಳಲ್ಲಿ 78 ವಿದ್ಯಾರ್ಥಿಗಳು 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿ ಗಳಿಸಿದ್ದಾರೆ. ಮೂವರು ವಿದ್ಯಾರ್ಥಿನಿಯರು ಶೇಕಡ 95ಕ್ಕೂ ಹೆಚ್ಚು ಅಂಕ ಪಡೆದುಕೊಂಡಿದ್ದಾರೆ.

ಬಸವನಗುಡಿ ಪ್ರೌಢಶಾಲೆಯು ಶೇ 100ರಷ್ಟು ಫಲಿತಾಂಶ ಸಾಧಿಸಿದ್ದು, ಪರೀಕ್ಷೆ ಬರೆದ 19 ವಿದ್ಯಾರ್ಥಿಗಳೂ ಉತ್ತೀರ್ಣರಾಗಿದ್ದಾರೆ. ಶಾಂತಿನಗರ ಪ್ರೌಢಶಾಲೆಯಲ್ಲಿ 9 ವಿದ್ಯಾರ್ಥಿಗಳಲ್ಲಿ ಎಂಟು ವಿದ್ಯಾರ್ಥಿಗಳು ಉತ್ತೀರ್ಣ-ರಾಗಿದ್ದು ಶೇ 88.89ರಷ್ಟು ಫಲಿತಾಂಶ ದಾಖಲಾಗಿದೆ.

ಶ್ರೀರಾಮಪುರ ಪ್ರೌಢಶಾಲೆ ಶೇ 86.21, ಭೈರವೇಶ್ವರನಗರ ಪ್ರೌಢಶಾಲೆ ಶೇ 85.53, ಮತ್ತಿಕೆರೆ ಪ್ರೌಢಶಾಲೆ ಶೇ 80.37ರಷ್ಟು ಫಲಿತಾಂಶ ಪಡೆದುಕೊಂಡಿದೆ. ಕಾಕ್ಸ್‌ಟೌನ್ ಪ್ರೌಢಶಾಲೆಯ 10 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದು, ಶೂನ್ಯ ಫಲಿತಾಂಶ ದಾಖಲಿಸಿದೆ.

ಮುಖ್ಯಾಂಶಗಳು

- 2,257; ಪರೀಕ್ಷೆಗೆ ಹಾಜರಾದ ಒಟ್ಟು ವಿದ್ಯಾರ್ಥಿಗಳು
- 1,259; ಉತ್ತೀರ್ಣರಾದ ವಿದ್ಯಾರ್ಥಿಗಳು
- 78; ಉನ್ನತ ಶ್ರೇಣಿ ಪಡೆದವರು
- 55.78%; 33 ಬಿಬಿಎಂಪಿ ಶಾಲೆಗಳ ಫಲಿತಾಂಶ ಪ್ರಮಾಣ

ಹೇರೋಹಳ್ಳಿ ಪ್ರೌಢಶಾಲೆಯಲ್ಲಿ ಅತಿಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. 266 ವಿದ್ಯಾರ್ಥಿಗಳ-ಲ್ಲಿ 161 ವಿದ್ಯಾರ್ಥಿಗಳು ಉತ್ತೀರ್ಣರಾಗಿರಿದ್ದಾರೆ. ಭೈರವೇಶ್ವರನಗರ ಪ್ರೌಢಶಾಲೆಯಲ್ಲಿ 235ರಲ್ಲಿ 201, ಶಕ್ತಿಗಣಪತಿ ನಗರ ಪ್ರೌಢಶಾಲೆಯಲ್ಲಿ 206ರಲ್ಲಿ 127 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಭೈರವೇಶ್ವರ ನಗರ ಪ್ರೌಢಶಾಲೆಯ 17, ಶಕ್ತಿಗಣಪತಿ ನಗರ ಪ್ರೌಢಶಾಲೆಯ 12, ಮತ್ತಿಕೆರೆ ಪ್ರೌಢಶಾಲೆಯ 10, ವಿಜಯನಗರ, ಹೇರೋಹಳ್ಳಿ ಪ್ರೌಢಶಾಲೆಯ ತಲಾ ಏಳು, ಗಂಗಾನಗರ, ಲಗ್ಗೆರೆ ಪ್ರೌಢಶಾಲೆಯ ತಲಾ ಆರು, ಶ್ರೀರಾಮಪುರ ಪ್ರೌಢಶಾಲೆಯ ನಾಲ್ಕು, ಪಾದರಾಯನಪುರ ಪ್ರೌಢಶಾಲೆಯ ಮೂರು, ಕಾಟನ್‌ಪೇಟೆ ಪ್ರೌಢಶಾಲೆಯ ಇಬ್ಬರು, ಬಸವನಗುಡಿ, ಕಸ್ತೂರಬಾ ನಗರ, ಜಯಮಹಲ್, ಜೋಗುಪಾಳ್ಯ ಪ್ರೌಢಶಾಲೆಯ ತಲಾ ಒಬ್ಬ ವಿದ್ಯಾರ್ಥಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿ-ದ್ದಾರೆ.

ಶಾಲಿನಿ ಬಿ.ಆರ್

ರಾಜೇಶ್ವರಿ ಡಿ

ಜೈನಬ್ ಫಿರ್‌ದೋಸ್ ಖಾನಂ

ಹೇರೋಹಳ್ಳಿ ಪ್ರೌಢಶಾಲೆಯ ಶಾಲಿನಿ ಬಿ.ಆರ್ ಅವರು 625ಕ್ಕೆ 614 ಅಂಕಗಳನ್ನು (ಶೇ 98.24ರಷ್ಟು) ಪಡೆದು, ಬಿಬಿಎಂಪಿ ಶಾಲೆಗಳಲ್ಲಿ ಅಗ್ರಸ್ಥಾನ ಗಳಿಸಿದ್ದಾರೆ. ಶ್ರೀರಾಮಪುರ ಪ್ರೌಢಶಾಲೆಯ ರಾಜೇಶ್ವರಿ ಡಿ. ಅವರು 610 ಅಂಕ (ಶೇ 97.60), ಜಯಮಹಲ್ ಪ್ರೌಢಶಾಲೆಯ ಜೈನಬ್ ಫಿರ್‌ದೋಸ್ ಖಾನಂ ಅವರು 606 (ಶೇ 96.96) ಅಂಕ ಪಡೆದಿದ್ದಾರೆ.

ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 78 ವಿದ್ಯಾರ್ಥಿಗಳಿಗೆ ಪಾಲಿಕೆ ವತಿಯಿಂದ ₹25 ಸಾವಿರ ಪ್ರೋತ್ಸಾಹ ಧನ ನೀಡಿ ಗೌರವಿಸಲಾಗುವುದು ಎಂದು ಬಿಬಿಎಂಪಿಯ ಶಿಕ್ಷಣ ವಿಭಾಗದ ಹಿರಿಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಹೆಚ್ಚಿನ ಲಾಭದ ಆಮಿಷ: ₹57 ಲಕ್ಷ ಕಳೆದುಕೊಂಡ ನಗರದ ಬಸಪ್ಪ ಗಾರ್ಡನ್ ನಿವಾಸಿ

ರಿವ್ಯೂ ಹೆಸರಿನಲ್ಲಿ ವಂಚನೆ ಜಾಲ ಸಕ್ರಿಯ

• ಆದಿತ್ಯ ಕೆ.ಎ.

ಬೆಂಗಳೂರು: ಸಾರ್ವಜನಿಕರ ಹಣವನ್ನು ಸುಲಭವಾಗಿ ಲಪಟಾಯಿಸಲು ಸೈಬರ್ ವಂಚಕರು ದಿನಕ್ಕೊಂದು ಹೊಸ ಮಾರ್ಗ ಹುಡುಕುತ್ತಿದ್ದಾರೆ. ಇದೀಗ ಸಾಮಾಜಿಕ ಮಾಧ್ಯಮದಲ್ಲಿ ಕಂಪನಿಗಳ ಕುರಿತು ರಿವ್ಯೂ ನೀಡಿದರೆ ಹಣ ನೀಡುವುದಾಗಿ ನಂಬಿಸಿ ಮೋಸ ಮಾಡುತ್ತಿರುವ ಪ್ರಕರಣಗಳು ವರದಿ ಆಗುತ್ತಿವೆ. ಅದರಲ್ಲೂ ಸಾವಿರಾರು ಕಂಪನಿಗಳ ನೆಲೆ ಆಗಿರುವ ಬೆಂಗಳೂರಿನಲ್ಲಿ ರಿವ್ಯೂ ಹೆಸರಿನಲ್ಲಿ ವಂಚಿಸುವ ಜಾಲ ಸಕ್ರಿಯವಾಗಿದೆ.

ಹೂಡಿಕೆ ಮಾಡುವಂತೆ ಪ್ರಚೋದನೆ ನೀಡಿ ಮೋಸ ಮಾಡುವುದು, ನಕಲಿ ಸಹಾಯವಾಣಿ, ಆನ್‌ಲೈನ್ ಹಣ ವರ್ಗಾವಣೆ, ವೈರಸ್ ದಾಳಿ, ಅಶ್ಲೀಲ ವಿಡಿಯೊ ಅಪ್‌ಲೋಡ್ ಮಾಡುವ ಮೂಲಕ ವಂಚನೆ ನಡೆಸುತ್ತಿದ್ದ ಸೈಬರ್ ವಂಚಕರು ಈಗ ರಿವ್ಯೂ ಹೆಸರಿನಲ್ಲೂ ವಂಚನೆಗೆ ಇಳಿದಿದ್ದಾರೆ.

ವಂಚನೆಯ ಹೊಸ ಹೊಸ ವಿಧಾನಗಳನ್ನು ಪತ್ತೆಹಚ್ಚಿ ನಾಗರಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಅಷ್ಟರಲ್ಲಿ ಸೈಬರ್ ವಂಚನೆಗೆ ಮತ್ತೊಂದು ವಿಧಾನ ಕಂಡುಕೊಂಡಿರುತ್ತಾರೆ. ರಿವ್ಯೂ ಹೆಸರಿನಲ್ಲಿ ವಂಚನೆಗೆ ಒಳಗಾದವರು ನಗರದ ಹಲವು ಪೊಲೀಸ್ ಠಾಣೆಗಳಲ್ಲಿ ದೂರು ದಾಖಲಿಸುತ್ತಿದ್ದಾರೆ ಎಂದು ಸೈಬರ್ ಠಾಣೆಯ ಪೊಲೀಸರು ಹೇಳಿದರು.

₹57 ಲಕ್ಷ ಕಳೆದುಕೊಂಡ ವ್ಯಕ್ತಿ: ಗೂಗಲ್ ರಿವ್ಯೂ ಹೆಸರಿನಲ್ಲಿ ವಂಚನೆ ಒಳಗಾಗಿರುವ ಬಸಪ್ಪ ಗಾರ್ಡನ್ ನಿವಾಸಿ ಜಗದೀಶನ್ ಅವರು ₹57 ಲಕ್ಷ ಕಳೆದುಕೊಂಡಿದ್ದಾರೆ. ಹಲಸೂರು ಉಪ ವಿಭಾಗದ ಕೇಂದ್ರ ಸೈಬರ್ ಠಾಣೆಗೆ ದೂರು ನೀಡಿದ್ದು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

'ಜಗದೀಶನ್ ಅವರ ವಾಟ್ಸ್‌ಆ್ಯಪ್‌ಗೆ ಬ್ರ್ಯಾಂಡ್ ಮಾರ್ಕ್ ಅಸೋಸಿಯೇಟ್ಸ್ ಕಂಪನಿಯ ಹೆಸರಿನಲ್ಲಿ ಸಂದೇಶ ಬಂದಿತ್ತು. ಗೂಗಲ್ ರಿವ್ಯೂ ನೀಡಿದರೆ ಹಣ ನೀಡುವುದಾಗಿ ವಂಚಕರು ನಂಬಿಸಿದ್ದರು. ಜಗದೀಶನ್ ಅವರು ರಿವ್ಯೂ ನೀಡಿದ್ದಕ್ಕೆ ಆರಂಭದಲ್ಲಿ ₹2 ಸಾವಿರ ನೀಡಿದ್ದರು. ನಂತರ, ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ನೀಡುವುದಾಗಿ ನಂಬಿಸಿದ್ದರು. ಟೆಲಿಗ್ರಾಂ ಮೂಲಕ ಸೈಬರ್ ವಂಚಕರು ಕಳುಹಿಸಿದ್ದ ಬ್ಯಾಂಕ್ ಖಾತೆಗಳಿಗೆ ದೂರುದಾರ ಹಣ ಜಮೆ ಮಾಡಿದ್ದರು' ಎಂದು ಪೊಲೀಸರು ಹೇಳಿದರು.

ರೆಸ್ಟೋರೆಂಟ್ ರಿವ್ಯೂ ಕೆಲಸಕ್ಕೆ ಸೇರಿಸಿಕೊಂಡು ಮೋಸ: 'ಈಜೀಪುರದ ಖಾಸಗಿ ಕಂಪನಿ ಉದ್ಯೋಗಿ ಎಸ್.ರಮ್ಯಾ ಅವರಿಗೆ ಪ್ರಿಯಾ ಎಂಬುವರು ಕರೆ ಮಾಡಿ ಸೀ ವ್ಯಾಲಿ ಕಂಪನಿಯಲ್ಲಿ ರೆಸ್ಟೋರೆಂಟ್ ರಿವ್ಯೂ ಕೆಲಸ ಮಾಡುವಂತೆ ಕೇಳಿಕೊಂಡಿದ್ದರು. ಆಕೆಯ ಮಾತು ನಂಬಿದ್ದ ದೂರುದಾರೆ, ಟೆಲಿಗ್ರಾಂ ಗ್ರೂಪ್‌ಗೆ ಸೇರಿದ್ದರು. ಆರೋಪಿಗಳು ನೀಡಿದ್ದ ಟಾಸ್ಕ್ ಪೂರ್ಣಗೊಳಿಸಿ ಕೆಲಸ ಆರಂಭಿಸಿದ್ದರು. ಅದಾದ ಮೇಲೆ ದೂರುದಾರೆಯಿಂದ ₹12 ಲಕ್ಷ ಪಡೆದು ವಂಚಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ. ಈ ಪ್ರಕರಣದ ತನಿಖೆಯನ್ನೂ ಕೇಂದ್ರ ಸೈಬರ್ ಠಾಣೆಯ ಪೊಲೀಸರು ಆರಂಭಿಸಿದ್ದಾರೆ.

ಕೊಡುಗೆಯ ನೆಪ...

ಎಲೆಕ್ಟ್ರಾನಿಕ್ ಉಪಕರಣಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲಾಗುವುದು ಎಂದು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಜಾಹೀರಾತು ಪ್ರಕಟಿಸಿ ವಂಚನೆ ನಡೆಸಲಾಗುತ್ತಿದೆ.

ಸ್ವದೇಶಿ ಇ–ಕಾಮರ್ಸ್ ಸಂಸ್ಥೆಗಳ ಹೆಸರಿನಲ್ಲೇ ಕಡಿಮೆ ಬೆಲೆಗೆ ವಸ್ತುಗಳನ್ನು ನೀಡಲಾಗುವುದು ಎಂಬುದಾಗಿ ವಂಚಕರು ಜಾಹೀರಾತು ನೀಡುತ್ತಾರೆ. ಸಾಮಾಜಿಕ ಜಾಲತಾಣಗಳ ಬಳಕೆದಾರರು ಜಾಹೀರಾತನ್ನು ನೈಜವೆಂದು ಭಾವಿಸಿ, ಅದರ ಮೇಲೆ ಕ್ಲಿಕ್ಕಿಸಿದರೆ ವಿಳಾಸ ನಮೂದಿಸುವಂತೆ ಕೇಳುತ್ತದೆ. ಅದಾದ ಮೇಲೆ ಫೋನ್ ಪೇ, ಗೂಗಲ್ ಪೇ ಮೂಲಕ ಮಾತ್ರವೇ ಹಣ ಪಾವತಿಸಬೇಕು. 'ಕ್ಯಾಶ್ ಆನ್ ಡೆಲಿವರಿ' ವ್ಯವಸ್ಥೆ ಇರುವುದಿಲ್ಲ. ಗೂಗಲ್ ಪೇ ಅಥವಾ ಫೋನ್ ಪೇ ಮೂಲಕ ಹಣ ಪಾವತಿಸಿದರೆ ಗ್ರಾಹಕರ ಬ್ಯಾಂಕ್ ಖಾತೆಯಿಂದ ಹಣ ಕಡಿತಗೊಳ್ಳುತ್ತದೆ. ಬುಕಿಂಗ್‌ಗೆ ಸಂಬಂಧಿಸಿದಂತೆ ಯಾವುದೇ ಸಂದೇಶ ಬರುವುದಿಲ್ಲ. ವಾರ, ತಿಂಗಳು ಕಳೆದರೂ ಮನೆಗೂ ವಸ್ತುಗಳು ತಲುಪುತ್ತಿಲ್ಲ ಎಂದು ಹಣ ಕಳೆದುಕೊಂಡವರು ನೋವು ತೋಡಿಕೊಂಡಿದ್ದಾರೆ.

'ಸ್ವದೇಶಿ ಇ–ಕಾಮರ್ಸ್ ಸಂಸ್ಥೆಗಳ ಹೆಸರಿನಲ್ಲಿ ವಂಚನೆ ಪ್ರಕರಣಗಳು ಹೆಚ್ಚಾಗಿವೆ. ಸೈಬರ್ ವಂಚಕರು ₹1,350 ಬೆಲೆಯ ವಸ್ತುವನ್ನು ಕೇವಲ ₹299ಕ್ಕೆ, ₹1,500 ಬೆಲೆ ವಸ್ತುವನ್ನು ₹350ಕ್ಕೆ ನೀಡುವುದಾಗಿ ಜಾಹೀರಾತು ಪ್ರಕಟಿಸಿ ಸಾವಿರಾರು ಮಂದಿಗೆ ವಂಚಿಸಿದ್ದಾರೆ. ಸಣ್ಣ ಮೊತ್ತ ಕಳೆದುಕೊಂಡ ಕಾರಣಕ್ಕೆ ಗ್ರಾಹಕರೂ ದೂರು ದಾಖಲಿಸಲು ಹಿಂದೇಟು ಹಾಕುತ್ತಿದ್ದಾರೆ' ಎಂದು ಸೈಬರ್ ಠಾಣೆಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

63 ಖಾತೆಗಳಿಗೆ ಹಣ ವರ್ಗ

'ಸೈಬರ್ ವಂಚಕರು ಕಳಹಿಸಿದ್ದ ವಿವಿಧ ಬ್ಯಾಂಕ್‌ಗಳ 63 ಖಾತೆಗಳಿಗೆ ಜಗದೀಶನ್ ಅವರು ಹಣ ಜಮೆ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ವಂಚಕರು ₹36 ಸಾವಿರ ಮಾತ್ರ ವಾಪಸ್ ನೀಡಿ ವಂಚಿಸಿದ್ದಾರೆ' ಎಂದು ಪೊಲೀಸರು ಹೇಳಿದರು.

ಮರಣ ಪತ್ರದಲ್ಲಿ ಉಲ್ಲೇಖಿಸಿದ್ದ ಆರೋಪ ಸಾಬೀತು

ಪ್ರಜಾವಾಣಿ ವಾರ್ತೆ

ಜೀವಾ ಆತ್ಮಹತ್ಯೆ ಪ್ರಕರಣ

ಬೆಂಗಳೂರು: ರಾಜ್ಯ ಭೋವಿ ಅಭಿವೃದ್ಧಿ ನಿಗಮದಲ್ಲಿ ನಡೆದಿದ್ದ ಅಕ್ರಮ ಪ್ರಕರಣದ ಆರೋಪಿ, ವಕೀಲೆ ಜೀವಾ ಆತ್ಮಹತ್ಯೆ ಪ್ರಕರಣದ ತನಿಖೆ ನಡೆಸಿದ್ದ ವಿಶೇಷ ತನಿಖಾ ದಳದ(ಎಸ್‌ಐಟಿ) ಅಧಿಕಾರಿಗಳು, ನಗರದ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಕನಕಲಕ್ಷ್ಮಿ

ಹೈಕೋರ್ಟ್ ರಚಿಸಿದ್ದ ಎಸ್‌ಐಟಿ, ಏಪ್ರಿಲ್ 12ರಂದು ಹೈಕೋರ್ಟ್‌ಗೆ ಅಂತಿಮ ವರದಿಯನ್ನು ಸಲ್ಲಿಸಿತ್ತು. ಇದೀಗ 2,300 ಪುಟಗಳ ದೋಷಾರೋಪ ಪಟ್ಟಿಯನ್ನು ನಗರದ 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿದೆ.

'ಸಾಕ್ಷಿದಾರರ ಹೇಳಿಕೆ, ವಿಡಿಯೊ ಸಾಕ್ಷ್ಯ, ವಿಧಿ ವಿಜ್ಞಾನ ಪ್ರಯೋಗಾಯಲದ ವರದಿ ಆಧರಿಸಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಸಿಐಡಿ ಡಿವೈಎಸ್‌ಪಿಯಾಗಿದ್ದ ಕನಕಲಕ್ಷ್ಮಿ ಅವರು ಜೀವಾ ಅವರಿಗೆ ಕಿರುಕುಳ, ಚಿತ್ರಹಿಂಸೆ ನೀಡಿರುವುದು ಸಾಬೀತಾಗಿದೆ. ಜೀವಾ ಬರೆದಿದ್ದ 13 ಪುಟಗಳ ಮರಣಪತ್ರದಲ್ಲಿ ಉಲ್ಲೇಖಿಸಿದ್ದ ಎಲ್ಲ ಆರೋಪಗಳೂ ದೃಢಪಟ್ಟಿವೆ' ಎಂದು ಉಲ್ಲೇಖಿಸಲಾಗಿದೆ.

'ಕನಕಲಕ್ಷ್ಮಿ ಅವರು ನಕಲಿ ದಾಖಲೆ ಸೃಷ್ಟಿಸಿ ಮಾನಸಿಕ ಹಿಂಸೆ ನೀಡಿರುವುದು ಸಾಬೀತಾಗಿದೆ. ವಿಚಾರಣೆ ವೇಳೆ ಚಿತ್ರೀಕರಿಸಲಾಗಿದ್ದ ವಿಡಿಯೊದ ಕೆಲವೊಂದು ತುಣುಕುಗಳನ್ನು ತನಿಖಾಧಿಕಾರಿ ಡಿಲಿಟ್ ಮಾಡಿಸಿರುವುದು ಸಾಬೀತಾಗಿದೆ. ಜೀವಾ ಅವರನ್ನು ವಿವಸ್ತ್ರಗೊಳಿಸಿರುವುದು, ಪ್ರಕರಣದಿಂದ ಹೆಸರು ಕೈಬಿಡುವುದಕ್ಕೆ ಹಣಕ್ಕೆ ಬೇಡಿಕೆ ಇಟ್ಟಿರುವುದು ತನಿಖೆಯಲ್ಲಿ ಗೊತ್ತಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಬನಶಂಕರಿ ಠಾಣಾ ವ್ಯಾಪ್ತಿಯ ರಾಘವೇಂದ್ರ ಲೇಔಟ್‌ನ ಮನೆಯಲ್ಲಿ ಮರಣ ಪತ್ರ ಬರೆದಿಟ್ಟು 2024ರ ನವೆಂಬರ್ 22ರಂದು ಜೀವಾ ಆತ್ಮಹತ್ಯೆ ಮಾಡಿಕೊಂಡಿದ್ದರು. ವಿಚಾರಣೆ ವೇಳೆ ಕನಕಲಕ್ಷ್ಮಿ ಅವರು ನೀಡಿದ್ದ ಕಿರುಕುಳದಿಂದಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಮರಣ ಪತ್ರದಲ್ಲಿ ಜೀವಾ ಉಲ್ಲೇಖಿಸಿದ್ದರು. ಅವರ ಸಹೋದರಿ ಸಂಗೀತಾ ನೀಡಿದ ದೂರು ಆಧರಿಸಿ, ಬನಶಂಕರಿ ಠಾಣೆ ಪೊಲೀಸರು ತನಿಖೆ ಆರಂಭಿಸಿದ್ದರು. ನಂತರ, ಸಿಬಿಐ ಅಧಿಕಾರಿಗಳನ್ನೂ ಒಳಗೊಂಡ ಎಸ್‌ಐಟಿಯನ್ನು ಹೈಕೋರ್ಟ್ ರಚಿಸಿತ್ತು. ಕನಕಲಕ್ಷ್ಮಿ ಅವರನ್ನು ಎಸ್‌ಐಟಿ ಅಧಿಕಾರಿಗಳು ಬಂಧಿಸಿದ್ದರು.

ಮನಸ್ಥಿತಿ ಅಧ್ಯಯನ

ಜೀವಾ

ಜೀವಾ ಅವರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೂ ಮುನ್ನ ಅವರ ಮನಸ್ಥಿತಿ ಹೇಗಿತ್ತು ಎಂಬುದನ್ನು ಈ ಪ್ರಕರಣದ ತನಿಖೆಯ ಭಾಗವಾಗಿ ಅಧ್ಯಯನ ಮಾಡಲಾಗಿತ್ತು. ಇದಕ್ಕೆ 'ಫೊರೆನ್ಸಿಕ್ ಸೈಕಾಲಜಿಕಲ್ ಅಟಾಪ್ಸಿ' ವಿಧಾನವನ್ನು ಅನುಸರಿಸಲಾಗಿತ್ತು. ನಿಮ್ಹಾನ್ಸ್‌ನ ವೈದ್ಯರಾದ ಡಾ.ರಾಜಕುಮಾರಿ ನೇತೃತ್ವದ ತಂಡವು ಜೀವಾ ಅವರ ಮನಸ್ಥಿತಿ, ಖಿನ್ನತೆ, ಮಾನಸಿಕ ಸ್ಥಿರತೆ ಮತ್ತು ಕಿರುಕುಳದ ಪರಿಣಾಮವನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿತ್ತು. ಕನಕಲಕ್ಷ್ಮಿ ಅವರ ಬಳಿಯಿದ್ದ 30 ವಿಡಿಯೊ ತುಣುಕುಗಳನ್ನು ಪರಿಶೀಲಿಸಿ, ಜೀವಾ ಅವರ ಮುಖಭಾವ, ಒತ್ತಡ ಮತ್ತು ಖಿನ್ನತೆಯ ಮಟ್ಟವನ್ನು ಅಧ್ಯಯನ ಮಾಡಲಾಗಿತ್ತು. ಜೀವಾ ಬರೆದಿದ್ದ ಮರಣ ಪತ್ರ ಹಾಗೂ ಅವರು ನೀಡಿದ್ದ ವಿಡಿಯೊ ಹೇಳಿಕೆ ಆಧರಿಸಿ, ಮಾನಸಿಕ ಸ್ಥಿತಿಯನ್ನು ವಿಶ್ಲೇಷಿಸಲಾಗಿತ್ತು. ವಿಚಾರಣೆಗಾಗಿ ಸಿಐಡಿ ಕಚೇರಿಗೆ ಬಂದಾಗ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾದ ದೃಶ್ಯವನ್ನೂ ಪಡೆದು ತಂಡವು ವಿಶ್ಲೇಷಣೆಗೆ ಒಳಪಡಿಸಿತ್ತು. ಈ ಅಧ್ಯಯನದಿಂದ ಜೀವಾ ಅವರು ಆತ್ಮಹತ್ಯೆಗೆ ಮುನ್ನ ಖಿನ್ನತೆ ಮತ್ತು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು ಎಂಬುದು ಗೊತ್ತಾಗಿತ್ತು ಎಂದು ಮೂಲಗಳು ತಿಳಿಸಿವೆ.

ಮೆಚ್ಚುಗೆ ವ್ಯಕ್ತಪಡಿಸಿದ್ದ ಹೈಕೋರ್ಟ್

ಸಿಬಿಐ ಎಸ್‌ಪಿ ವಿನಾಯಕ್ ವರ್ಮಾ, ಸಿಸಿಬಿ ಡಿಸಿಪಿ ಅಕ್ಷಯ್ ಮಚ್ಚೀಂದ್ರ, ಆಂತರಿಕ ಭದ್ರತಾ ವಿಭಾಗದ ಎಸ್‌ಪಿ ನಿಶಾ ಜೇಮ್ಸ್ ಅವರ ನೇತೃತ್ವದ ತಂಡವು ತನಿಖೆ ನಡೆಸಿ 90 ದಿನಗಳ ಒಳಗೆ ಹೈಕೋರ್ಟ್‌ಗೆ ಅಂತಿಮ ವರದಿ ಸಲ್ಲಿಸಿತ್ತು. ನಿಗದಿತ ಅವಧಿಯ ಒಳಗೆ ತಂಡವು ತನಿಖೆ ನಡೆಸಿ ಅಂತಿಮ ವರದಿ ಸಲ್ಲಿಸಿದ್ದಕ್ಕೆ ಹೈಕೋರ್ಟ್ ಮೆಚ್ಚುಗೆ ವ್ಯಕ್ತಪಡಿಸಿತ್ತು ಎಂದು ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

ಇನ್‌ಸ್ಟಾಗ್ರಾಂ ಐ.ಡಿ ನೀಡುವಂತೆ ಯುವತಿಗೆ ಕಿರುಕುಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆಯಲ್ಲಿ ಯುವತಿಯನ್ನು ಅಡ್ಡಗಟ್ಟಿ ಇನ್‌ಸ್ಟಾಗ್ರಾಂ ಐ.ಡಿ ನೀಡುವಂತೆ ಒತ್ತಾಯಿಸಿ ಕಿರುಕುಳ ನೀಡಿದ್ದ ಯುವಕನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಯುವತಿಯ ತಾಯಿ ನೀಡಿದ ದೂರಿನ ಅನ್ವಯ ವಿನೋದ್ ಎಂಬಾತನನ್ನು ಬಂಧಿಸಲಾಗಿದೆ.

ಯುವತಿ ಕೆಲಸ ಮುಗಿಸಿಕೊಂಡು ಏಪ್ರಿಲ್ 29ರಂದು ರಾತ್ರಿ 10.30ರ ಸುಮಾರಿಗೆ ಟಿ.ದಾಸರಹಳ್ಳಿ ಬಳಿ ರಸ್ತೆಯಲ್ಲಿ ನಡೆದು ಮನೆಗೆ ತೆರಳುತ್ತಿದ್ದರು. ಆಗ ಯುವತಿಯನ್ನು ಅಡ್ಡಗಟ್ಟಿದ್ದ ವಿನೋದ್, ಆಕೆಯ ಇನ್‌ಸ್ಟಾಗ್ರಾಂ ಐ.ಡಿ ನೀಡುವಂತೆ ಒತ್ತಾಯಿಸಿದ್ದ ಎಂದು ಮೂಲಗಳು ತಿಳಿಸಿದೆ.

'ಆತಂಕಗೊಂಡ ಯುವತಿ, ತಾಯಿಗೆ ಕರೆ ಮಾಡಿ ವಿಚಾರ ತಿಳಿಸಿದ್ದರು. ಆಗ ಆರೋಪಿ ಯುವತಿಯನ್ನು ರಸ್ತೆಯಲ್ಲಿ ಎಳೆದಾಡಿ ಕಿರುಕುಳ ಕೊಟ್ಟಿದ್ದ. ಯುವತಿಯ ತಾಯಿ ಸ್ಥಳಕ್ಕೆ ಬಂದಾಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆದರಿಕೆ ಹಾಕಿದ್ದ. ಬಳಿಕ ಸ್ಥಳೀಯರು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು' ಎಂದು ಮೂಲಗಳು ತಿಳಿಸಿವೆ.

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಉದ್ಯಮಿ ಸೆರೆ

ವೇಶ್ಯಾವಾಟಿಕೆ ನಡೆಯುತ್ತಿದ್ದ ಸ್ಥಳಗಳ ಮೇಲೆ ದಾಳಿ ಮಾಡಿದ್ದ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದ ಆರೋಪದ ಅಡಿ ಉದ್ಯಮಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಕಿರಣ್ ಜೈನ್

ಬಳ್ಳಾರಿಯ ಕಿರಣ್ ಜೈನ್ ಬಂಧಿತ ಆರೋಪಿ.

ನಗರದ ವಿವಿಧೆಡೆ ವೇಶ್ಯಾವಾಟಿಕೆ ನಡೆಯುತ್ತಿದ್ದ ಸ್ಥಳಗಳ ಮೇಲೆ ಸಿಸಿಬಿ ಪೊಲೀಸರು ಇತ್ತೀಚೆಗೆ ದಾಳಿ ನಡೆಸಿದ್ದರು. ದಾಳಿ ವೇಳೆ ಎಂಟು ಯುವತಿಯರನ್ನು ಪೊಲೀಸರು ರಕ್ಷಿಸಿದ್ದಾರೆ. ಅಲ್ಲೇ ಎಂಟು ಮಧ್ಯವರ್ತಿಗಳನ್ನು ಬಂಧಿಸಿದ್ದರು. ರಕ್ಷಣೆಯಾದ ಯುವತಿಯರ ಪೈಕಿ ಒಬ್ಬ ಬಾಲಕಿಯಿದ್ದಳು. ಈ ಸಂಬಂಧ ಹೆಚ್ಚಿನ ತನಿಖೆ ಕೈಗೊಂಡಾಗ ಆರೋಪಿ ಕಿರಣ್ ಜೈನ್ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವುದು ಗೊತ್ತಾಗಿತ್ತು. ಆರೋಪಿ ವಿರುದ್ಧ ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಿನಿಮಾ, ಧಾರಾವಾಹಿ, ಪಬ್ ಹಾಗೂ ರೆಸ್ಟೋರೆಂಟ್‌ಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಹೆಣ್ಣು ಮಕ್ಕಳನ್ನು ನಗರಕ್ಕೆ ಕರೆತಂದು ವೇಶ್ಯಾವಾಟಿಕೆ ದೂಡಲಾಗುತ್ತಿತ್ತು ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಯುವತಿಗೆ ಲೈಂಗಿಕ ಕಿರುಕುಳ: ಆರೋಪಿಗಾಗಿ ಶೋಧ

ಬೆಂಗಳೂರು: ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಇಕೊ ವರ್ಲ್ಡ್ ಟೆಕ್‌ಪಾರ್ಕ್ ಗೇಟ್ ಬಳಿ ಹೊರ ರಾಜ್ಯದ 20 ವರ್ಷದ ಯುವತಿಗೆ ಕಿರುಕುಳ ನೀಡಿ ಪರಾರಿ ಆಗಿರುವ ಆರೋಪಿ ಪತ್ತೆ ಕಾರ್ಯವನ್ನು ಪೊಲೀಸರು ಚುರುಕುಗೊಳಿಸಿದ್ದಾರೆ.

ಬುಧವಾರ ರಾತ್ರಿ 11.30ರ ಸುಮಾರಿಗೆ ನಡೆದು ತೆರಳುತ್ತಿದ್ದ ಯುವತಿಗೆ ಬೈಕ್‌ನಲ್ಲಿ ಬಂದಿದ್ದ ಆರೋಪಿ ಕಿರುಕುಳ ನೀಡಿ ಪರಾರಿ ಆಗಿದ್ದ.

'ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿದೆ. ಆರೋಪಿ ಟಿ–ಶರ್ಟ್ ಧರಿಸಿದ್ದ. ಹಿಂದಿನಿಂದ ಬಂದು ಯುವತಿಯ ಪೃಷ್ಠದ ಭಾಗಕ್ಕೆ ಹೊಡೆದು ಹೋಗಿದ್ದ. ಸ್ವಲ್ಪ ದೂರ ಹೋಗಿ ಮತ್ತೆ ವಾಪಸ್ ಬಂದು ಕಿರುಕುಳ ನೀಡಿರುವುದು ದೃಶ್ಯದಲ್ಲಿ ಸೆರೆಯಾಗಿದೆ' ಎಂದು ಮೂಲಗಳು ತಿಳಿಸಿವೆ. ಆರೋಪಿಯ ಪತ್ತೆಗೆ ಮೂರು ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ. ಆರೋಪಿಯ ಬೈಕ್‌ನ ನೋಂದಣಿ ಸಂಖ್ಯೆಯ ವಿವರ ಕಲೆಹಾಕಲಾಗಿದೆ ಎಂದು ಪೊಲೀಸರು ಹೇಳಿದರು.

ಸಿ.ಸಿ.ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ 300ಕ್ಕೂ ಹೆಚ್ಚು ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ. 'ಅನಿರೀಕ್ಷಿತ ಘಟನೆಯಿಂದ ಆಘಾತಗೊಂಡ ನಾನು ಸಹಾಯಕ್ಕಾಗಿ ಕೂಗಿಕೊಂಡೆ. ಆಗ ಆ ವ್ಯಕ್ತಿ ಪರಾರಿಯಾದ. ಘಟನೆ ವೇಳೆ ಸಮೀಪದಲ್ಲೇ ನಡೆದು ಹೋಗುತ್ತಿದ್ದವರು ನೆರವಿಗೆ ಬರಲಿಲ್ಲ. ಸಾರ್ವಜನಿಕವಾಗಿ ನನ್ನ ಜತೆ ಅಸಭ್ಯವಾಗಿ ವರ್ತಿಸಿ, ಘನತೆಗೆ ಧಕ್ಕೆ ತಂದಿರುವ ಬೈಕ್ ಸವಾರನ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಸಂತ್ರಸ್ತೆ ಮನವಿ ಮಾಡಿದ್ದಾರೆ' ಎಂದು ಪೊಲೀಸರು ಹೇಳಿದರು.

ವಿಡಿಯೊ ಹಂಚಿಕೊಂಡಿದ್ದ ವ್ಯಕ್ತಿಯ ವಿರುದ್ಧ ಎಫ್‌ಐಆರ್

ಬೆಂಗಳೂರು: ಭಾರತಿ ಲೇಔಟ್‌ನ ಒಂದನೇ ಅಡ್ಡ ರಸ್ತೆಯಲ್ಲಿ ಏಪ್ರಿಲ್ 3ರಂದು ಯುವತಿಯ ಮೇಲೆ ನಡೆದಿದ್ದ ಲೈಂಗಿಕ ಕಿರುಕುಳದ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದ ವ್ಯಕ್ತಿಯ ವಿರುದ್ಧ ಸುದ್ದಗುಂಟೆಪಾಳ್ಯ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಭಾರತಿ ಲೇಔಟ್‌ನ ಒಂದನೇ ಅಡ್ಡ ರಸ್ತೆಯ ನಿವಾಸಿ ಲೋಕೇಶ್ ಗೌಡ (55) ಅವರ ವಿರುದ್ಧ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66–'ಇ' ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಪೇಯಿಂಗ್ ಗೆಸ್ಟ್ ಒಂದರಲ್ಲಿ ನೆಲಸಿದ್ದ ಯುವತಿ ನೀಡಿದ ದೂರು ಆಧರಿಸಿ ಲೋಕೇಶ್ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 'ಲೋಕೇಶ್ ಅವರನ್ನು ಇನ್ನೂ ಬಂಧಿಸಿಲ್ಲ. ವಿಚಾರಣೆಗೆ ಬರುವಂತೆ ಸೂಚಿಸಿ ನೋಟಿಸ್ ಜಾರಿ ಮಾಡಲಾಗುವುದು' ಎಂದು ಪೊಲೀಸರು ಹೇಳಿದರು.

ಏಪ್ರಿಲ್ 3ರಂದು ತಡರಾತ್ರಿ ಯುವತಿ ತನ್ನ ಸ್ನೇಹಿತೆಯ ಜತೆಗೆ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಅದೇ ವೇಳೆ ಬೈಕ್‌ನಲ್ಲಿ ಬಂದಿದ್ದ ಆರೋಪಿ ಯುವತಿಯನ್ನು ತಬ್ಬಿಕೊಂಡು ಲೈಂಗಿಕ ಕಿರುಕುಳ ನೀಡಿ ಪರಾರಿ ಆಗಿದ್ದ. ಆ ದೃಶ್ಯವು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯವುಳ್ಳ ವಿಡಿಯೊ ತುಣುಕನ್ನು ಲೋಕೇಶ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು ಎಂಬ ಆರೋಪವಿದೆ.

ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪಿ ಸಂತೋಷ್ ಡೇನಿಯಲ್ ಎಂಬಾತನನ್ನು ಕೇರಳದಲ್ಲಿ ಬಂಧಿಸಲಾಗಿತ್ತು.

ಹಣದ ವಿಚಾರಕ್ಕಾಗಿ ವಿದೇಶಿ ಮಹಿಳೆಯ ಕೊಲೆ ಮಾಡಿದ್ದ ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನೆಲಸಿದ್ದ ನೈಜೀರಿಯಾ ದೇಶದ ಮಹಿಳೆ ಲೋವಿತಾ (28) ಎಂಬುವರನ್ನು ಕೊಲೆ ಮಾಡಿ ನಿರ್ಜನ ಪ್ರದೇಶದಲ್ಲಿ ಮೃತದೇಹ ಎಸೆದು ಪರಾರಿಯಾಗಿದ್ದ ಆರೋಪಿಯನ್ನು ಚಿಕ್ಕಜಾಲ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸ್ಯಾಮನ್ಸ್ ಬಪುಂಗಾ

ಘಾನಾ ದೇಶದ ಸ್ಯಾಮನ್ಸ್ ಬಪುಂಗಾ ಬಂಧಿತ ಆರೋಪಿ.

ಏಪ್ರಿಲ್ 30ರಂದು ಬೆಟ್ಟಹಲಸೂರು ಮುಖ್ಯರಸ್ತೆಯ ತರಹುಣಸೆ ಗ್ರಾಮದ ನಿರ್ಜನ ಪ್ರದೇಶದಲ್ಲಿ ಮಹಿಳೆಯ ಶವ ಪತ್ತೆಯಾಗಿತ್ತು. ಮೃತದೇಹದ ಮೇಲಿದ್ದ ಗಾಯದ ಗುರುತುಗಳನ್ನು ಗಮನಿಸಿ ಕೊಲೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ಆರಂಭಿಸಿದ್ದರು.

ಸ್ಯಾಮನ್ಸ್ ಬಪುಂಗಾ ಐದು ವರ್ಷದ ಹಿಂದೆ ನಗರಕ್ಕೆ ಬಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ. ಆಗ ಲೋವಿತಾ ಪರಿಚಯವಾಗಿತ್ತು. ಇಬ್ಬರೂ ಸ್ನೇಹಿತರಾಗಿದ್ದರು. ಬೈಕ್‌ನಲ್ಲಿ ಇಬ್ಬರೂ ಒಟ್ಟಿಗೆ ಓಡಾಟ ನಡೆಸುತ್ತಿದ್ದರು. ಇದೇ ಸಲುಗೆಯಿಂದ ಸ್ನೇಹಿತೆಗೆ ಹಲವು ಬಾರಿ ಆರೋಪಿ ಸಾಲ ಕೊಟ್ಟಿದ್ದ. ಅವರು ವಾಪಸ್ ನೀಡಿರಲಿಲ್ಲ. ಸಾಲ ವಾಪಸ್ ನೀಡುವಂತೆ ಕೇಳಿದಾಗ ಬೆದರಿಕೆ ಹಾಕುತ್ತಿದ್ದರು. ಇದರಿಂದ ಆಕ್ರೋಶಗೊಂಡ ಆರೋಪಿಯು ಲೋವಿತಾ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದ ಎಂದು ಪೊಲೀಸರು ಹೇಳಿದರು.

ಏಪ್ರಿಲ್ 30ರಂದು ಮಾತುಕತೆಯ ನೆಪದಲ್ಲಿ ಲೋವಿತಾ ಅವರನ್ನು ಕರೆಸಿಕೊಂಡಿದ್ದ. ಕಾರಿನಲ್ಲಿ ಕರೆದುಕೊಂಡು ಹೋಗಿ ಮಾರ್ಗಮಧ್ಯೆ ಹಲ್ಲೆ ನಡೆಸಿದ್ದ ಆರೋಪಿ ನಂತರ ಕುತ್ತು ಹಿಸುಕಿ ಕೊಲೆ ಮಾಡಿದ್ದ ಎಂದು ಪೊಲೀಸರು ಹೇಳಿದರು.

ಶವದ ಜತೆಗೆ ಸುತ್ತಾಟ: ಕಾರಿನಲ್ಲಿ ಮೃತದೇಹ ಇರಿಸಿಕೊಂಡು ರಾತ್ರಿಯಿಡೀ ಸುತ್ತಾಟ ನಡೆಸಿದ್ದ. ಕೊನೆಗೆ ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟಹಲಸೂರು ಮುಖ್ಯರಸ್ತೆಯ ತರಹುಣಸೆ ಗ್ರಾಮದ ನಿರ್ಜನ ಪ್ರದೇಶದಲ್ಲಿ ಮೃತದೇಹ ಎಸೆದು ಪರಾರಿ ಆಗಿದ್ದ ಎಂದು ಮೂಲಗಳು ತಿಳಿಸಿವೆ.

'ಲೋವಿತಾ ಅವರ ಮೊಬೈಲ್ ಕರೆಗಳನ್ನು ಪರಿಶೀಲಿಸಿದಾಗ ಆರೋಪಿಯ ಸುಳಿವು ಲಭಿಸಿತ್ತು. ನಗರದಲ್ಲೇ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ಬಿಸಿಯು ವಿದ್ಯಾರ್ಥಿಗಳು 'ರನ್ನರ್ ಅಪ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆಯಲ್ಲಿ ಇತ್ತೀಚೆಗೆ ನಡೆದ ಎರಡು ದಿನಗಳ ರಾಷ್ಟ್ರೀಯ ಸಮ್ಮೇಳನ ಮತ್ತು ವಿಚಾರ ಸಂಕಿರಣದ ಅಂಗವಾಗಿ ಏರ್ಪಡಿಸಲಾಗಿದ್ದ ವಿವಿಧ ಸ್ಪರ್ಧೆಗಳಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ತಂಡ 'ರನ್ನರ್ ಅಪ್' ಸ್ಥಾನ ಪಡೆದುಕೊಂಡಿದೆ.

ವಿಶ್ವವಿದ್ಯಾಲಯದ ಸಮಾಜ ಕಾರ್ಯ ವಿಭಾಗದ ವಿದ್ಯಾರ್ಥಿಗಳಾದ ಅಜಯ್ ಕುಮಾರ್ 'ಪೋಸ್ಟರ್ ಮೇಕಿಂಗ್' ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಮೈತ್ರಿ ಮತ್ತು ತಂಡದವರು 'ಸಮೂಹ ನೃತ್ಯ'ದಲ್ಲಿ ಹಾಗೂ ರೂಪಾರಾಣಿ ಮತ್ತು ತಂಡದವರು ಫ್ಯಾಷನ್ ಷೋನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ರನ್ನರ್ ಅಪ್ ಬಹುಮಾನ ಪಡೆದ ಬೆಂಗಳೂರು ನಗರ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಸ್ನಾತಕೋತ್ತರ ಕೇಂದ್ರದ ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥೆ ಸ್ವಾತಿ ಹಾಗೂ ಬಿಸಿಯು ಸಮಾಜ ಕಾರ್ಯ ವಿಭಾಗದ ಉಪನ್ಯಾಸಕ ವಿಕ್ರಮ್. ಕೆ. ಉಪಸ್ಥಿತರಿದ್ದರು. ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ ಮತ್ತು ಸಮ್ಮೇಳನದಲ್ಲಿ ದೇಶದ ಹಲವಾರು ವಿಶ್ವವಿದ್ಯಾಲಯಗಳ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಜಾಲ ಹಾಗೂ ವಿಲ್ಸನ್ ಗಾರ್ಡನ್ ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ವಿಲ್ಸನ್ ಗಾರ್ಡನ್ ಪೊಲೀಸ್ ಠಾಣಾ ವ್ಯಾಪ್ತಿಯ ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದ ಬಳಿ ಗುರುವಾರ ಬೆಳಿಗ್ಗೆ ಆಂಬುಲೆನ್ಸ್, ಆಟೊ ರಿಕ್ಷಾ ಹಾಗೂ ಸ್ಕೂಟರ್ ಮಧ್ಯೆ ಸರಣಿ ಅಪಘಾತ ಸಂಭವಿಸಿ, ಪಾದಚಾರಿ ನಾಗರಾಜ್ (57) ಎಂಬುವರು ಮೃತಪಟ್ಟಿದ್ದಾರೆ.

ಈ ಅಪಘಾತದಲ್ಲಿ ರಾಘವೇಂದ್ರ ಕಾಲೊನಿಯ ನಿವಾಸಿ ಸಿ.ರಮೇಶ್, ಮಾಚೋಹಳ್ಳಿಯ ಶಿವರಾಂ ಸ್ವಾಮಿ, ಕೆ.ಕೆ.ಪುರದ ಸೋಮಸುಂದರಂ, ಕೆ.ಎಸ್. ಗಾರ್ಡನ್ ನಿವಾಸಿ ಪ್ರವೀಣ್ ಕುಮಾರ್ ಹಾಗೂ ಬ್ರಹ್ಮಾನಂದ ಕುಮಾರ್, ಮೂಕಾಂಬಿಕ ನಗರದ ಪವನ್ ಅವರು ಗಾಯಗೊಂಡಿದ್ದಾರೆ.

ಗುರುವಾರ ಬೆಳಿಗ್ಗೆ 8.30ರ ಸುಮಾರಿಗೆ ಅಪಘಾತ ಸಂಭವಿಸಿದೆ. ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದ ಕಡೆಯಿಂದ ವೇಗವಾಗಿ ಬಂದ ಆಂಬುಲೆನ್ಸ್‌ವೊಂದು ಆಟೊ ಹಾಗೂ ಸ್ಕೂಟರ್‌ಗೆ ಡಿಕ್ಕಿ ಹೊಡೆದಿದೆ. ನಂತರ, ರಸ್ತೆಯ ಬದಿಯಲ್ಲಿ ಹಣ್ಣು ವ್ಯಾಪಾರ ಮಾಡುತ್ತಿದ್ದವರಿಗೂ ಗುದ್ದಿದೆ. ಇದರಿಂದ ಪಾದಚಾರಿಗಳು ಹಾಗೂ ಹಣ್ಣಿನ ವ್ಯಾಪಾರಿಗಳು ಗಾಯಗೊಂಡಿದ್ದಾರೆ ಎಂದು ಸಂಚಾರ ಪೊಲೀಸರು ತಿಳಿಸಿದರು.

ಘಟನೆಯಲ್ಲಿ ಹಣ್ಣಿನ ಗಾಡಿಗಳು, ಆಟೊ ಹಾಗೂ ಸ್ಕೂಟರ್ ಜಖಂಗೊಂಡಿದೆ.

ಆಂಬುಲೆನ್ಸ್ ಚಾಲಕ ವಶಕ್ಕೆ: ಘಟನೆ ನಡೆದ ಬಳಿಕ ಸ್ಥಳಕ್ಕೆ ಬಂದ ವಿಲ್ಸನ್ ಗಾರ್ಡನ್ ಸಂಚಾರ ಠಾಣೆಯ ಪೊಲೀಸರು, ಆಂಬುಲೆನ್ಸ್ ಚಾಲಕ ಚಿರಂಜೀವಿ ಎಂಬಾತನನ್ನು ವಶಕ್ಕೆ ಪಡೆದುಕೊಂಡರು. ಇದಕ್ಕೂ ಮೊದಲು ಆಂಬುಲೆನ್ಸ್ ಚಾಲಕನಿಗೆ ಸಾರ್ವಜನಿಕರು ಥಳಿಸಿದ್ದರು.

'ಚಾಲಕ ಮದ್ಯ ಸೇವಿಸಿ ಆಂಬುಲೆನ್ಸ್ ಚಾಲನೆ ಮಾಡುತ್ತಿದ್ದ ಎಂದು ಸಾರ್ವಜನಿಕರು ಹೇಳಿದ್ದಾರೆ. ಆ ಕುರಿತು ಪರಿಶೀಲನೆ ನಡೆಸಲಾಗುತ್ತಿದೆ. ಅತಿವೇಗ ಹಾಗೂ ಅಜಾಗರೂಕತೆಯ ಚಾಲನೆಯಿಂದ ಅಪಘಾತ ಸಂಭವಿಸಿದೆ ಎಂಬುದು ಕಂಡುಬಂದಿದೆ' ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಚಿಕ್ಕಜಾಲ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ರಸ್ತೆ ದಾಟುತ್ತಿದ್ದ ವೇಳೆ ಬೈಕ್ ಡಿಕ್ಕಿಯಾಗಿ ತೀವ್ರವಾಗಿ ಗಾಯಗೊಂಡಿದ್ದ ಮಹಾರಾಷ್ಟ್ರದ ವರ್ಷಾ ಹಾವನೂರು(70) ಮೃತಪಟ್ಟಿದ್ದಾರೆ.

ವರ್ಷಾ ಅವರು ಮಹಾರಾಷ್ಟ್ರದಲ್ಲಿ ನೆಲಸಿದ್ದರು. ನಗರದ ಎಂವಿಐಟಿ ಬಳಿಯ ಮಹಾವೀರ ಅಪಾರ್ಟ್‌ಮೆಂಟ್‌ನಲ್ಲಿ ನೆಲಸಿರುವ ಮಗಳ ಮನೆಗೆ 15 ದಿನಗಳ ಹಿಂದೆ ಬಂದಿದ್ದರು. ಗುರುವಾರ ಸಂಜೆ 6.45ರ ಸುಮಾರಿಗೆ ಮನೆಕೆಲಸದಾಕೆಯ ಜತೆಗೆ ಹೊರಗೆ ತಿರುಗಾಡಿಕೊಂಡು ಬರಲು ತೆರಳಿದ್ದರು. ಬೆಂಗಳೂರು–ಬಳ್ಳಾರಿ ರಸ್ತೆಯ ಎಂವಿಐಟಿ ಜಂಕ್ಷನ್ ಬಳಿ ರಸ್ತೆ ದಾಟುತ್ತಿದ್ದ ವೇಳೆ ಅತಿವೇಗವಾಗಿ ಬಂದ ಬೈಕ್ ವರ್ಷಾ ಅವರಿಗೆ ಡಿಕ್ಕಿಯಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಡ್ರಗ್ಸ್ ಮಾರಾಟ ಮೂವರ ಬಂಧನ

ಬೆಂಗಳೂರು: ಕಾರಿನಲ್ಲಿ ಡ್ರಗ್ಸ್ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದ ಮೂವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೂವರು ಬಂಧಿತರಿಂದ ₹7.25 ಲಕ್ಷ ಮೌಲ್ಯದ ಗಾಂಜಾ, ಕಾರು ಮತ್ತು ಎರಡು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಕನಕನಗರದ ಐದನೇ ಮುಖ್ಯರಸ್ತೆಯಲ್ಲಿ ಕಾರು ನಿಲ್ಲಿಸಿಕೊಂಡು ಮೂವರು ಆರೋಪಿಗಳು ಡ್ರಗ್ಸ್ ಮಾರಾಟ ಮಾಡುತ್ತಿದ್ದರು. ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಮೈಸೂರಿನಿಂದ ಕಡಿಮೆ ಬೆಲೆಗೆ ಡ್ರಗ್ಸ್ ಅನ್ನು ತಂದು ನಗರದಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಇಂದು

ಬಸವ ಜಯಂತಿ ಹಾಗೂ 'ಬಸವಶ್ರೀ' ಮತ್ತು 'ವಚನ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ಜಿ. ಪರಮೇಶ್ವರ, ವಿ. ಸೋಮಣ್ಣ, ಅಧ್ಯಕ್ಷತೆ: ಬಸವರಾಜ ಬೊಮ್ಮಾಯಿ, 'ಬಸವಜ್ಯೋತಿ' ಸಂಚಿಕೆ ಬಿಡುಗಡೆ: ಎಂ.ಬಿ. ಪಾಟೀಲ, ಪ್ರಶಸ್ತಿ ಪುರಸ್ಕೃತರು: ಗೊ.ರು. ಚನ್ನಬಸಪ್ಪ, ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರ, ಎಂ.ಡಿ. ಪಲ್ಲವಿ, ಉಪಸ್ಥಿತಿ: ಸಿ.ಸೋಮಶೇಖರ, ಆಯೋಜನೆ: ಬಸವ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

ಗೊ.ರು. ಚನ್ನಬಸಪ್ಪ

ಜಿ.ಬಿ. ಪಾಟೀಲ ಅವರ 'ಲಿಂಗಾಯತ ಚಳುವಳಿ' ಪುಸ್ತಕ ಬಿಡುಗಡೆ: ಎಚ್. ಎನ್. ನಾಗಮೋಹನ ದಾಸ್, ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಗುರುಮಹಾಂತ ಸ್ವಾಮೀಜಿ, ಅತಿಥಿಗಳು: ಬಸವರಾಜ ಹೊರಟ್ಟಿ, ಎಂ.ಬಿ. ಪಾಟೀಲ, ಬಿ.ಆರ್. ಪಾಟೀಲ, ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಎ.ಬಿ. ಪಾಟೀಲ, ಕೃತಿ ಬಗ್ಗೆ ಮಾತು: ಪ್ರಶಾಂತ ನಾಯಕ, ಆಯೋಜನೆ: ಬಸವಪರ ಸಂಘಟನೆಗಳು, ಉತ್ತರ ಕರ್ನಾಟಕ ನಾಗರಿಕರ ಅಭಿವೃದ್ಧಿ ಸಂಘಗಳು, ಆಕೃತಿ ಪುಸ್ತಕ, ಸ್ಥಳ: ಮಹಾದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಗೌರವಾಭಿನಂದನೆ: ತಾಜ್ ಅಲಿ ಮೌಲಾಸಾಬ್ ನದಾಫ್, ಸಿ.ಎಸ್. ಗಿರೀಶ್ ಕುಮಾರ್, ಅತಿಥಿಗಳು: ಬಿ.ಎಂ. ಶ್ಯಾಮ್ ಪ್ರಸಾದ್, ಎಚ್. ಬಿಲ್ಲಪ್ಪ, ಎಸ್. ಟಿ. ನಾರಾಯಣಗೌಡ, ಎಂ.ಆರ್. ಲಕ್ಷ್ಮಿ ಮನೋಹರ್, ಅಧ್ಯಕ್ಷತೆ: ಎಚ್. ಜಿ. ಬಾಲಗೋಪಾಲ್, ಆಯೋಜನೆ ಹಾಗೂ ಸ್ಥಳ: ಎಸ್.ಟಿ. ನಾರಾಯಣ ಗೌಡ ಸಭಾಂಗಣ, ವಿವೇಕಾನಂದ ಕಾಲೇಜ್ ಆಫ್ ಲಾ, ಗಾಯತ್ರಿನಗರ, ಬೆಳಿಗ್ಗೆ 10.30

ಸಂಗೀತೋತ್ಸವ ಸಮಾರಂಭ: ಪಿಟೀಲು: ವಿ. ನಳಿನಾ ಮೋಹನ್, ಹೃಷಿತಾ ಕೇದಗೆ, ಮೃದಂಗ: ಫಣೀಂದ್ರ ಭಾಸ್ಕರ್, ಘಟ: ಟಿ.ಎನ್. ರಮೇಶ್, ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6

ಬಿ. ಶ್ರೀಪಾದ ಭಟ್ ಅವರ 'ಒಕ್ಕೂಟವೋ ತಿಕ್ಕಾಟವೋ' ಪುಸ್ತಕ ಬಿಡುಗಡೆ: ಡಿ. ಉಮಾಪತಿ, ಅಧ್ಯಕ್ಷತೆ: ಮಾವಳ್ಳಿ ಶಂಕರ್, ವಿಷಯ ಮಂಡನೆ: ಕೆ. ಪ್ರಕಾಶ್, ಸ್ವಾತಿ ಶಿವಾನಂದ, ಆಯೋಜನೆ: ಕ್ರಿಯಾ ಮಾಧ್ಯಮ, ಸ್ಥಳ: ಬಿ.ಎಂ.ಶ್ರೀ. ಕಲಾ ಭವನ, ಎನ್.ಆರ್. ಕಾಲೊನಿ, ಸಂಜೆ 4

25ನೇ ವರ್ಷದ ಪ್ರವಚನ ವಾಹಿನಿ: ಸಂಗೀತ: ವೆಂಕಟರಮಣ ಶಾಸ್ತ್ರಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಶಂಕರ ಜಯಂತಿ ಮತ್ತು 53ನೇ ವರ್ಷದ ಸುವರ್ಣ ಮಹೋತ್ಸವ 'ಬಾಯ್ಬಡ್ಕಿ' ಸಾಂಸಾರಿಕ ನಗೆ ನಾಟಕ ಪ್ರದರ್ಶನ: ರಚನೆ ಮತ್ತು ನಿರ್ದೇಶನ: ಭೀಷ್ಮ ರಾಮಯ್ಯ, ತಂಡ: ಅಂತರಂಗ ಬಹಿರಂಗ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಆದಿ ಜಾಂಬವ ಜನಸಂಘದಿಂದ ಜನಜಾಗೃತಿ ಸಭೆ

'ಒಳ ಮೀಸಲಾತಿ ಸಮೀಕ್ಷೆ: ಮಾದಿಗ ಎಂದು ಬರೆಸಿ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸರ್ಕಾರದಿಂದ ಜಾತಿ ಜನಗಣತಿ ನಡೆಸಲು ತೀರ್ಮಾನಿಸಿದ್ದು ಮನೆಮನೆಗೆ ಬರುವ ಅಧಿಕಾರಿಗಳಿಗೆ ಮೂಲ ಜಾತಿ ಮಾದಿಗ ಎಂದು ನಮೂದಿಸುವಂತೆ ಆದಿ ಜಾಂಬವ ಜನಸಂಘದ ಬೆಂಗಳೂರು ಪೂರ್ವ ತಾಲ್ಲೂಕು ಅಧ್ಯಕ್ಷ ವಿ.ಕೃಷ್ಣಮೂರ್ತಿ ಮಾದಿಗ ಕರೆ ನೀಡಿದರು.

ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಜಾತಿಯ ಗೊಂದಲ ಪರಿಹರಿಸಲು ಆದಿ ಜಾಂಬವ ಜನಸಂಘದಿಂದ ಹಮ್ಮಿಕೊಂಡಿದ್ದ ಜನಜಾಗೃತಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್ ಅಧ್ಯಕ್ಷತೆಯ ಆಯೋಗವು ಮೇ 5 ರಿಂದ 17 ರವರೆಗೆ ಜಾತಿ ಸಮೀಕ್ಷೆ ನಡೆಸಲು ಮುಂದಾಗಿದೆ. ಈ ಸಮೀಕ್ಷೆ ವೇಳೆ ಸಮುದಾಯದವರು ಆದಿ ಕರ್ನಾಟಕ, ಆದಿ ಆಂಧ್ರ, ಆದಿ ದ್ರಾವಿಡ ಎಂದು ಬರೆಸದೆ ಮೂಲ ಜಾತಿ ಮಾದಿಗ ಎಂದು ಬರೆಸಬೇಕು ಎಂದು ಸಲಹೆ ನೀಡಿದರು.

ಡಾ.ಬಿ.ಆರ್.ಅಂಬೇಡ್ಕರ್, ಬಾಬು ಜಗಜೀವನ್ ರಾಂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಜನಜಾಗೃತಿ ಸಭೆಗೆ ಚಾಲನೆ ನೀಡಲಾಯಿತು

'ನಾವು ನೀಡುವ ಈ ನಿಖರವಾದ ಮಾಹಿತಿಯಿಂದ ನಮ್ಮ ಸಮುದಾಯಕ್ಕೆ ಶಿಕ್ಷಣ, ಉದ್ಯೋಗ, ರಾಜಕೀಯವಾಗಿ ಪ್ರತ್ಯೇಕ ಮೀಸಲಾತಿ ದೊರೆಯುತ್ತದೆ. ನಮ್ಮ ಸಮುದಾಯ ಅಭಿವೃದ್ಧಿ ಹೊಂದಲು ಸಹಕಾರಿಯಾಗುತ್ತದೆ' ಎಂದು ಹೇಳಿದರು.

ಪ್ರಧಾನ ಕಾರ್ಯದರ್ಶಿ ಬಿ.ಆರ್. ಮಾದೇಶ್ ಮಾತನಾಡಿದರು. ಸಂಘದ ಗೌರವಾಧ್ಯಕ್ಷ ಎಂ.ಮಾದೇಶ್, ಮುನೇಂದ್ರ, ಮಂಜುನಾಥ್.ಪಿ, ಮಂಜುನಾಥ್.ಎಲ್, ಲೋಕೇಶ್, ಮುನಿರಾಜು, ವಿಮಲಾಮ್ಮ, ಮಧು, ನಂದಿನಿ, ನಾರಾಯಣಸ್ವಾಮಿ, ಗೋಪಾಲ್, ನಾಗರಾಜ್, ಚಂದ್ರಶೇಖರ್, ಮುನಾಂಜನಿ, ಮೂರ್ತಿ ಎಂ ಇದ್ದರು.

ಅಲೆಮಾರಿ ಜನಾಂಗ ಸಮೀಕ್ಷೆಯಲ್ಲಿ ಭಾಗಿಯಾಗಿ: ಎಂ. ವೆಂಕಟೇಶ ಮನವಿ

ಬೆಂಗಳೂರು: 'ಒಳ ಮೀಸಲಾತಿ ಹಂಚಿಕೆಗೆ ಸಂಬಂಧಿಸಿದಂತೆ ಇದೇ 5ರಿಂದ ದತ್ತಾಂಶ ಸಂಗ್ರಹಿಸಲಾಗುತ್ತಿದ್ದು, ಪರಿಶಿಷ್ಟ ಜಾತಿಯ ಕೊರಮ, ಕೊರಚ, ಕುರುವನ್ ಮತ್ತು ಕೇಪ್‌ಮಾರಿಸ್ ಸಮುದಾಯದ ಕುಟುಂಬಗಳು ಕಡ್ಡಾಯವಾಗಿ ಈ ಸಮೀಕ್ಷೆಯಲ್ಲಿ ಭಾಗಿಯಾಗಬೇಕು' ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಂ. ವೆಂಕಟೇಶ ಮನವಿ ಮಾಡಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಿಶಿಷ್ಟ ಜಾತಿಯಡಿ 20 ಲಕ್ಷಕ್ಕೂ ಅಧಿಕ ಅಲೆಮಾರಿ ಜನಾಂಗದವರು 28 ಜಿಲ್ಲೆಗಳಲ್ಲಿದ್ದಾರೆ. ಈ ಸಮುದಾಯದವರೆಲ್ಲರೂ ಸಮೀಕ್ಷೆಯಲ್ಲಿ ಭಾಗಿಯಾಗಿ, ಸಮುದಾಯದ ಅಸ್ತಿತ್ವ ಉಳಿಸಬೇಕು. ಈ ಬಗ್ಗೆ ಸಮುದಾಯದವರಿಗೆ ಅರಿವು ಮೂಡಿಸಲು ರಾಜ್ಯದಾದ್ಯಂತ 15 ದಿನಗಳ ಕಾಲ ಪ್ರವಾಸವನ್ನು ಹಮ್ಮಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ಸಮುದಾಯದ ಬಹುತೇಕರ ಬಳಿ ಯಾವುದೇ ಅಧಿಕೃತ ದಾಖಲೆಗಳು ಇಲ್ಲವಾದ್ದರಿಂದ, ಅವರ ಜನಗಣತಿಗಾಗಿ ಪ್ರತ್ಯೇಕ ತಂಡ ರಚನೆಯಾಗಬೇಕು. ಈ ತಂಡವು ಸಮುದಾಯದ ಮುಖಂಡರೊಂದಿಗೆ ಕೆಲಸ ಮಾಡಿದಾಗ ಮಾತ್ರ ವೈಜ್ಞಾನಿಕ ದತ್ತಾಂಶ ಲಭ್ಯವಾಗುತ್ತದೆ. ಪಾರದರ್ಶಕ ಸಮೀಕ್ಷೆಗೆ ಸರ್ಕಾರ ಅನುವು ಮಾಡಿಕೊಡಬೇಕು. ಆಯಾ ಜಿಲ್ಲಾಡಳಿತ ಹಾಗೂ ಜನಗಣತಿ ಉಸ್ತುವಾರಿ ಅಧಿಕಾರಿಗಳು ಇದಕ್ಕಾಗಿ ಶ್ರಮವಹಿಸಬೇಕು' ಎಂದು ಒತ್ತಾಯಿಸಿದರು.

ಸುಭಾಷಿತ
ನಮ್ಮ ನಂಬಿಕೆಯಿಂದ ನಮಗಷ್ಟೇ ಒಳ್ಳೆಯದಾದರೆ ಸಾಲದು, ಅದು ಸಕಲರಿಗೂ ಹಿತವಾಗಿ ಇರಬೇಕು.
–ಅ.ನ.ಕೃಷ್ಣರಾಯ

ಜಾತಿ ಜನಗಣತಿಗೆ ನಿರ್ಧಾರ: ಕೇಂದ್ರದ ನಿಲುವಿನಲ್ಲಿ ಬಹುದೊಡ್ಡ ಪಲ್ಲಟ

ವಿರೋಧ ಪಕ್ಷಗಳ ತೀವ್ರ ಒತ್ತಡದ ನಡುವೆ ಜಾತಿ ಜನಗಣತಿ ನಡೆಸುವ ನಿರ್ಧಾರವನ್ನು ಕೇಂದ್ರ ಸರ್ಕಾರವು ತೆಗೆದುಕೊಂಡಿದೆ. ದಶಕಕ್ಕೆ ಒಮ್ಮೆ ನಡೆಸಲಾಗುವ ಜನಗಣತಿಯ ಜೊತೆಗೆ ಜಾತಿ ಜನಗಣತಿಯೂ ನಡೆಯಲಿದೆ ಮತ್ತು ಇದು ದೇಶದ ಸಾಮಾಜಿಕ ಮತ್ತು ರಾಜಕೀಯ ಸ್ಥಿತಿಯ ಮೇಲೆ ವ್ಯಾಪಕವಾದ ಪರಿಣಾಮಗಳನ್ನು ಬೀರಲಿದೆ. ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿಯು ಜಾತಿ ಜನಗಣತಿ ನಡೆಸುವುದಕ್ಕೆ ಅನುಮೋದನೆ ನೀಡಿದೆ. 'ಇದು ನೀತಿಗೆ ಸಂಬಂಧಿಸಿದ ವಿಚಾರ' ಎಂದು ಬಹುದೀರ್ಘ ಕಾಲದಿಂದ ಜಾತಿ ಜನಗಣತಿಯ ಚಿಂತನೆಯನ್ನೇ ವಿರೋಧಿಸಿಕೊಂಡು ಬಂದಿದ್ದ ಬಿಜೆಪಿ, ಈಗ ಗಣತಿ ನಡೆಸಲು ಮುಂದಾಗಿದೆ. ಬಿಜೆಪಿ ಮಾತ್ರವಲ್ಲದೆ ಆರ್‌ಎಸ್‌ಎಸ್ ಕೂಡ ಜಾತಿ ಜನಗಣತಿಯನ್ನು ನಿರಂತರವಾಗಿ ವಿರೋಧಿಸಿಕೊಂಡೇ ಬಂದಿದೆ. ಜಾತಿ ಗುಂಪುಗಳು ಧ್ರುವೀಕರಣಗೊಂಡು ಹಿಂದೂ ಅಸ್ಮಿತೆಗೆ ಹೊಡೆತ ಕೊಟ್ಟರೆ, ರಾಜಕೀಯವಾಗಿ ಅದು ಬಿಜೆಪಿಗೆ ನಷ್ಟ ಉಂಟುಮಾಡಬಹುದು ಎಂಬುದು ಈ ವಿರೋಧಕ್ಕೆ ಕಾರಣ. ಜಾತಿ ಜನಗಣತಿಯನ್ನು ಬಿಜೆಪಿ ಈ ಹಿಂದೆ ಬಣ್ಣಿಸಿತ್ತು. ಲೋಕಸಭೆಗೆ 2024ರಲ್ಲಿ ನಡೆದ ಚುನಾವಣೆಯ ಪ್ರಚಾರದಲ್ಲಿ ಜಾತಿ ಜನಗಣತಿಯ ಪ್ರಸ್ತಾವವನ್ನು ಕಾಂಗ್ರೆಸ್ ಸೇರಿಸಿತ್ತು, ಪ್ರಧಾನಿ ನರೇಂದ್ರ ಮೋದಿ ಅದನ್ನು ಬಲವಾಗಿ ವಿರೋಧಿಸಿದ್ದರು.

ಜಾತಿ ಜನಗಣತಿಯನ್ನು ದಕ್ಷವಾಗಿ, ಪ್ರಾಮಾಣಿಕವಾಗಿ ನಡೆಸಿ, ವರದಿಯನ್ನು ಬಿಡುಗಡೆ ಮಾಡುವ ಗುರುತರ ಹೊಣೆಗಾರಿಕೆ ಕೇಂದ್ರ ಸರ್ಕಾರದ ಮೇಲೆ ಇದೆ

ಈಗ, ಮೋದಿ ನೇತೃತ್ವದ ಸಂಪುಟ ಸಮಿತಿಯು ಜಾತಿ ಜನಗಣತಿಗೆ ಅನುಮೋದನೆ ಕೊಡುವುದರೊಂದಿಗೆ ಸರ್ಕಾರದ ನೀತಿಯಲ್ಲಿ ಭಾರಿ ಪಲ್ಲಟ ಕಂಡುಬಂದಿದೆ. ಸಾಮಾಜಿಕ ನ್ಯಾಯ ಒದಗಿಸುವ ದಿಸೆಯಲ್ಲಿ ಇದೊಂದು ಮಹತ್ವದ ಹೆಜ್ಜೆ ಎಂದು ಬಿಂಬಿಸಲು ಸರ್ಕಾರ ಯತ್ನಿಸುತ್ತಿದೆ. ಆದರೆ, ರಾಜಕೀಯ ಒತ್ತಡಗಳೇ ಇದರ ಹಿಂದೆ ಇರುವುದು ಎಂಬುದು ಬಹಳ ಸ್ಪಷ್ಟ. ಜಾತಿ ಜನಗಣತಿ ನಡೆಸಲೇಬೇಕು ಎಂಬ ಸ್ಪಷ್ಟವಾದ ನಿಲುವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೃಢವಾಗಿ ಪ್ರತಿಪಾದಿಸಿಕೊಂಡು ಬಂದಿದ್ದಾರೆ. ಹಾಗಾಗಿ, 'ಇದು ತನ್ನದೇ ನಿರ್ಧಾರ' ಎಂದು ಬಿಜೆಪಿ ಹೇಳಿದರೂ ರಾಹುಲ್ ಅವರ ಸಂಕಥನದ ಜೊತೆಗೆ ಅನಿವಾರ್ಯವಾಗಿ ರಾಜಿ ಮಾಡಿಕೊಂಡಿದೆ ಎಂದು ಬಿಂಬಿತವಾಗುತ್ತಿದೆ. ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕನೂ ಆಗಿರುವ ರಾಹುಲ್ ಅವರು ಜಾತಿ ಜನಗಣತಿಯನ್ನು ಪರಿಣಾಮಕಾರಿಯಾದ ಚುನಾವಣಾ ವಿಷಯ ಆಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಜಾತಿ ಜನಗಣತಿಯ ಸಂಕಥನವನ್ನು ಬೇರೆಯವರು ಕಸಿದುಕೊಳ್ಳುವುದನ್ನು ತಡೆಯಲು ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟದಲ್ಲಿರುವ ಮಿತ್ರಪಕ್ಷಗಳು ಎಲ್ಲ ಪ್ರಯತ್ನಗಳನ್ನೂ ನಡೆಸಲಿವೆ. ಜಾತಿ ಜನಗಣತಿಯಿಂದಾಗಿ ಒಬಿಸಿಯ ಪ್ರಭಾವಿ ಗುಂಪುಗಳ ಸಂಘಟನೆ ಗೊಳ್ಳಬಹುದು. ಹಿಂದೂ ರಾಷ್ಟ್ರೀಯವಾದಿ ಸಂಕಥನವನ್ನೇ ಆಧಾರವಾಗಿಟ್ಟುಕೊಂಡು ಬೆಳೆದ ಬಿಜೆಪಿಗೆ ಇದು ಪಥ್ಯವಾಗುವುದು ಕಷ್ಟ. ಆ ಕಾರಣಕ್ಕಾಗಿಯೇ ಜಾತಿ ಜನಗಣತಿ ಚಿಂತನೆಯನ್ನು ಬಿಜೆಪಿ ತಿರಸ್ಕರಿಸುತ್ತಲೇ ಬಂದಿತ್ತು. ಒಬಿಸಿ-ಪರಿಶಿಷ್ಟ ಜಾತಿ- ಪರಿಶಿಷ್ಟ ಪಂಗಡಗಳ ಒಗ್ಗೂಡುವಿಕೆಯನ್ನು ತಡೆಯಲು ಈಗಿನ ಜಾತಿ ಜನಗಣತಿಯನ್ನು ಬಿಜೆಪಿ ಬಳಸಿಕೊಳ್ಳಬಹುದು. ಏತನ್ಮಧ್ಯೆ, ಲೋಕಸಭೆಗೆ 2024ರಲ್ಲಿ ನಡೆದ ಚುನಾವಣೆಯಲ್ಲಿ ಈ ಸಮೀಕರಣವು ಬಿಜೆಪಿಗೆ ಹಲವು ಸ್ಥಾನ ಗಳಿಕೆಯ ಮೇಲೆ ಪ್ರಭಾವ ಬೀರಿರುವ ಸಾಧ್ಯತೆ ಇದೆ. ಬಿಹಾರ ವಿಧಾನಸಭೆಗೆ ಈ ವರ್ಷ ನಡೆಯಲಿರುವ ಚುನಾವಣೆಯಲ್ಲಿ ಜಾತಿ ಅಸ್ಮಿತೆಯ ಸುತ್ತ ನಿರ್ಮಾಣವಾಗಿರುವ ಅಭಿಯಾನವನ್ನು ಪರಿಣಕ್ಕೆ ಒಡ್ಡಲಿದೆ. ಕಾಂಗ್ರೆಸ್ ಆಳ್ವಿಕೆ ಇರುವ ಕರ್ನಾಟಕ ಮತ್ತು ತೆಲಂಗಾಣದಲ್ಲಿ ಜಾತಿ ಜನಗಣತಿ ಈಗಾಗಲೇ ನಡೆದಿದೆ. ಹಾಗಾಗಿ, ಜಾತಿ ಜನಗಣತಿ ಆರಂಭಿಸಿದ ಹಿರಿಮೆ ತಮ್ಮದು ಎಂಬ ಭಾವನೆ ಕಾಂಗ್ರೆಸ್‌ಗೆ ಇದೆ. ರಾಷ್ಟ್ರ ಮಟ್ಟದಲ್ಲಿ ಗಣತಿ ಆರಂಭಿಸುವ ಮೂಲಕ ಈ ಹಿರಿಮೆಯನ್ನು ಕಸಿದುಕೊಳ್ಳಲು ಉದ್ದೇಶಿಸಿರುವ ಕೇಂದ್ರ ಸರ್ಕಾರ ಹೊಂದಿರಬಹುದು.

ಜಾತಿ ಜನಗಣತಿ ನಡೆಸುವುದಾಗಿ ಸರ್ಕಾರ ಘೋಷಣೆ ಮಾಡಿದ್ದರೂ ಅದಕ್ಕೆ ಕಾಲಮಿತಿಯನ್ನು ಹಾಕಿಕೊಂಡಿಲ್ಲ. ಒಬಿಸಿ ಸಮುದಾಯಗಳಿಗೆ ಸಂಬಂಧಿಸಿದ ನೀತಿ ನಿರೂಪಣೆ ಮತ್ತು ಸಂಪನ್ಮೂಲ ಹಂಚಿಕೆಗೆ ಜಾತಿ ಜನಗಣತಿಯು ನಿರ್ಣಾಯಕ. ಆದರೆ ಹಲವು ಪ್ರಶ್ನೆಗಳು ಇವೆ: ಶೇ 50ಕ್ಕಿಂತ ಹೆಚ್ಚು ಮೀಸಲಾತಿ ನೀಡಲು ಅವಕಾಶ ಇದೆಯೇ? ಗಣತಿಗೆ ಬಳಸುವ ವಿಧಾನ ಯಾವುದು? ಪರಿಣಾಮಕಾರಿ ಅನುಷ್ಠಾನ ಸಾಧ್ಯವೇ? 2021ರಲ್ಲಿ ನಡೆಸಬೇಕಿದ್ದ ಜನಗಣತಿ ಪ್ರಕ್ರಿಯೆ ಇನ್ನೂ ಆರಂಭ ಆಗಿಲ್ಲ. ಹಾಗಿರುವಾಗ, ಜಾತಿ ಜನಗಣತಿ ಯಾವಾಗ ನಡೆಯಬಹುದು? 2011ರ ಜನಗಣತಿಯೊಂದಿಗೆ ಸಾಮಾಜಿಕ-ಆರ್ಥಿಕ ಮತ್ತು ಜಾತಿಯ ಮಾಹಿತಿ ಸಂಗ್ರಹಿಸಲಾಗಿತ್ತು. ಆದರೆ, ಸಮೀಕ್ಷೆಯ ವರದಿ ಇನ್ನೂ ಬಹಿರಂಗ ಆಗಿಲ್ಲ. ಹಾಗಿರುವಾಗ, ಹೊಸ ಜಾತಿ ಜನಗಣತಿಯನ್ನು ದಕ್ಷವಾಗಿ, ಪ್ರಾಮಾಣಿಕವಾಗಿ ನಡೆಸಿ, ವರದಿಯನ್ನು ಬಿಡುಗಡೆ ಮಾಡುವ ಗುರುತರ ಹೊಣೆಗಾರಿಕೆ ಸರ್ಕಾರದ ಮೇಲೆ ಇದೆ.

ನದಿಗೆ ಆರತಿಗಿಂತ ಹೆಚ್ಚಾಗಿ ಆಗಬೇಕಾಗಿರುವುದು ಅದರ ಒಡಲಿನ ಮಾಲಿನ್ಯ ನಿವಾರಣೆ

ನಮ್ಮ ಕಾವೇರಿ ನಮ್ಮ ಹೆಮ್ಮೆ

ವಿಶ್ಲೇಷಣೆ

ಅ.ನ.ಯಲ್ಲಪ್ಪ ರೆಡ್ಡಿ

ಕಾವೇರಿ ನಮ್ಮ ಪವಿತ್ರ ನದಿಗಳಲ್ಲಿ ಒಂದು. 'ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ, ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು' ಎಂಬ ಶ್ಲೋಕ ಅನಾದಿ ಕಾಲದಿಂದಲೂ ಜನಪ್ರಿಯ. ಇಲ್ಲಿ ಪ್ರಸ್ತಾಪವಾಗಿರುವ ಸಪ್ತ ನದಿಗಳು ಅತ್ಯಂತ ಪವಿತ್ರ ಎಂದು ಹೆಸರಾಗಿವೆ. ಆದರೆ ಬಹುತೇಕ ಈ ಎಲ್ಲವೂ ಇಂದು ಕಲುಷಿತವಾಗಿವೆ. ಇದು ಈ ನದಿಗಳಿಗೆ ಬಂದಿರುವ ದುರ್ದೆಸೆ.

ಈಗ ಕಾವೇರಿಯ ವಿಚಾರಕ್ಕೆ ಬರೋಣ. ತನ್ನ ಇಕ್ಕೆಲಗಳಲ್ಲೂ ಗುಡ್ಡ, ಬೆಟ್ಟ, ಪರ್ವತಗಳಿಂದ ಆವೃತವಾಗಿರುವ ಕಾವೇರಿ ನದಿಯ ಪರಿಸರ ರಮ್ಯ ಮನೋಹರವಾದದ್ದು. ನದಿಯ ಪಕ್ಕದ ಬೆಟ್ಟಗುಡ್ಡಗಳು ಪ್ರಕೃತಿದೇವಿಯ ಸೊಬಗಿಗೆ ಕಳಶಪ್ರಾಯದಂತಿವೆ. ಅವು ಯಥಾಸ್ಥಿತಿಯಲ್ಲಿ ಇದ್ದರೆ ಅಲ್ಲಿ ಜೈವಿಕ ವೈವಿಧ್ಯ ರೂಪುಗೊಳ್ಳುತ್ತದೆ. ಮುಂಗಾರು ಮಳೆ ಕಾಲಕಾಲಕ್ಕೆ ಇಳೆಯನ್ನು ತಣಿಸುತ್ತದೆ, ನದಿಯ ಹರಿವನ್ನು ಏಕತ್ರವಾಗಿಸುತ್ತದೆ. ನದಿಯ ಸುತ್ತಲಿನ ಪರಿಸರವು ಮಳೆಕಾಡು ಎಂದೇ ಸುಪ್ರಸಿದ್ಧ. ಪಶ್ಚಿಮಘಟ್ಟ ಪ್ರದೇಶದ ಜೀವನಾಡಿಯಾಗಿರುವ ಕಾವೇರಿ ನದಿ ಕೋಟ್ಯಂತರ ಜನರಿಗೆ ನೀರುಣಿಸುವ, ಕೃಷಿ, ನೀರಾವರಿಗೆ ಒದಗುವ ಮಹಾತಾಯಿ. ಹಾಗಾಗಿಯೇ ಜನಮಾನಸದಲ್ಲಿ ಆಕೆಗೆ ಪೂಜನೀಯ ಸ್ಥಾನವಿದೆ.

ಆದರೆ ನಾವೇನು ಮಾಡುತ್ತಿದ್ದೇವೆ? ನದಿಯ ಇಕ್ಕೆಲದ ಬೆಟ್ಟಗುಡ್ಡಗಳನ್ನು ಬಗೆಯುತ್ತಿದ್ದೇವೆ. ಕಲ್ಲುಕ್ವಾರಿ ಸೇರಿದಂತೆ ವಿವಿಧ ಬಗೆಯ ಗಣಿಗಾರಿಕೆ ನಡೆಸುತ್ತಿದ್ದೇವೆ. ನದಿಯ ಸ್ವಚ್ಛಂದ ಹರಿವಿಗೆ ಅಡ್ಡಿ ಮಾಡಿ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಿದ್ದೇವೆ. ವಿದ್ಯುತ್ ಉತ್ಪಾದನೆಗೂ ಬಳಸಿಕೊಳ್ಳುತ್ತಲೇ ಬಂದಿದ್ದೇವೆ. ಕೆಆರ್‌ಎಸ್, ಹೇಮಾವತಿ, ಕಬಿನಿ, ಹಾರಂಗಿ, ತಾರಕ ಹೀಗೆ ಅನೇಕ ಅಣೆಕಟ್ಟೆಗಳ ಮೂಲಕ ನದಿಯ ಸರಾಗ ಹರಿವಿನ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದ್ದೇವೆ. ಉದ್ದಿಮೆಗಳಿಂದ ಹೊರಬರುವ ವಿಷಕಾರಿ ತ್ಯಾಜ್ಯವನ್ನೂ ಪರಿಷ್ಕರಿಸದೆ ನೇರವಾಗಿ ನದಿಗೆ ಹರಿಯಬಿಟ್ಟು ಆಕೆಯ ಒಡಲನ್ನು ಮಲಿನಗೊಳಿಸುತ್ತಿದ್ದೇವೆ. ಇಂದು ಎಲ್ಲ ಅಣೆಕಟ್ಟುಗಳಲ್ಲೂ ಹೂಳು ತುಂಬಿಕೊಂಡಿದೆ. ಶತಮಾನಗಳಿಂದಲೂ ಕಾವೇರಿ ನದಿಯ ಬಗ್ಗೆ, ಕಾವೇರಿ ನೀರಿನ ಬಗ್ಗೆ ಜನಮಾನಸದಲ್ಲಿ ಪೂಜ್ಯಭಾವವಿದೆ. ಕಾವೇರಿ ನದಿಯ ಮಹತ್ವವನ್ನು ಸಂಭ್ರಮಿಸುತ್ತಲೇ ಖುಷಿಪಟ್ಟ ಪೀಳಿಗೆ ನಮ್ಮದು. ಹೀಗಿರುವಾಗ, ಅದರ ಪಾವಿತ್ರ್ಯವನ್ನು ಉಳಿಸಿಕೊಳ್ಳಬೇಕಾದ ಆದ್ಯ ಕರ್ತವ್ಯ ನಮ್ಮದು.

ಅಣೆಕಟ್ಟುಗಳ ನಿರ್ಮಾಣದಿಂದ ಕಾಡಾನೆಗಳ ಹಾವಳಿ ಹೆಚ್ಚಾಗಿದೆ ಎಂಬುದನ್ನು ರಾಜ್ಯ ಅರಣ್ಯ ಸಚಿವರು ಒಪ್ಪಿಕೊಂಡಿದ್ದಾರೆ. ಇತ್ತೀಚಿನ ಎತ್ತಿನಹೊಳೆ ಯೋಜನೆಯ ಕಾರಣದಿಂದ ಸಕಲೇಶಪುರ, ಆಲೂರು ತಾಲ್ಲೂಕುಗಳಲ್ಲಿ ಕಾಡಾನೆಗಳು ನಾಡಿಗೆ ನುಗ್ಗಿ ಮಾಡುತ್ತಿರುವ ಹಾವಳಿ, ದಾಂದಲೆ ಆ ಭಾಗದ ರೈತಾಪಿ ಜನರ ಬದುಕನ್ನು ಕಸಿದುಕೊಂಡಿದೆ. ಆದರೆ ಇದೆಲ್ಲವನ್ನೂ ಬದಿಗಿಟ್ಟು ₹ 26,000 ಕೋಟಿ ವೆಚ್ಚದ ಎತ್ತಿನಹೊಳೆ ಯೋಜನೆಗೆ ಚಾಲನೆ ಕೊಟ್ಟು, ಹಸಿರು ಕಾಡನ್ನು ನಾಶ ಮಾಡುತ್ತಿದೆ ನಮ್ಮ ಸರ್ಕಾರ. ಇದಿಷ್ಟೇ ಸಾಲದು ಎಂಬಂತೆ, ಮೇಕೆದಾಟುವಿನ ಸಮೃದ್ಧ ಹಸಿರು ಪರಿಸರದಲ್ಲಿ ಇನ್ನೊಂದು ಅಣೆಕಟ್ಟು ಕಟ್ಟುವುದಕ್ಕೂ ಮುಂದಾಗಿದೆ. ಜೊತೆಜೊತೆಗೆ ಆನೆ ಕಾರಿಡಾರ್ ಹೆಸರಿನಲ್ಲೂ ಸರ್ಕಾರ ಕೋಟಿಗಟ್ಟಲೆ ಖರ್ಚು ಮಾಡುತ್ತಿದೆ. ಇವೆಲ್ಲವೂ ಒಂದಕ್ಕೊಂದು ವಿರೋಧಾಭಾಸದ ಸಂಗತಿಗಳು.

ಜೌಗು ಪ್ರದೇಶಗಳ ಅಭಿವೃದ್ಧಿಯಲ್ಲಿ ಬಹಳಷ್ಟು ಯಶಸ್ಸು ಸಾಧಿಸಿದ್ದೇವೆ ಎಂದು ನಮ್ಮ ಅರಣ್ಯ ಇಲಾಖೆ ಹೆಮ್ಮೆಯಿಂದ ಹೇಳಿಕೊಂಡಿದೆ. 'ರಾಮ್‌ಸಾರ್ ಒಪ್ಪಂದ'ದ ಪ್ರಕಾರ, ಜೌಗು ಪ್ರದೇಶಗಳ ಅಭಿವೃದ್ಧಿಗೆ ಹೆಚ್ಚಿನ ಒತ್ತು ಕೊಡಲಾಗಿದೆ ಎಂದೂ ಹೇಳಿದೆ. ಹೌದು, ಈ ಜೌಗು ಪ್ರದೇಶಗಳ ವ್ಯಾಪ್ತಿ ಹೆಚ್ಚಿದರೆ ಅಲ್ಲಿ ನೀರಿನ ಸೆಲೆ ಇರುತ್ತದೆ, ಅಂತರ್ಜಲ ಹೆಚ್ಚುತ್ತದೆ, ಜಲಚರಗಳ ಸಂಖ್ಯೆ ವೃದ್ಧಿಸುತ್ತದೆ, ವಲಸೆ ಪಕ್ಷಿಗಳೂ ದೂರದೂರದ ಊರುಗಳಿಂದ ಬಂದು ಇಲ್ಲಿ ನೆಲೆಗೊಳ್ಳುತ್ತವೆ, ಸಂತಾನೋತ್ಪತ್ತಿ ಮಾಡುತ್ತವೆ, ಸುತ್ತಲ ಕೃಷಿಪರಿಸರದ ಕೀಟಗಳ ಭಕ್ಷಣೆ ಮಾಡುತ್ತವೆ. ಜೊತೆಗೆ ಪರಿಸರ ವ್ಯವಸ್ಥೆಗೆ ಮತ್ತು ಮಣ್ಣಿಗೆ ಹೇರಳ ಪ್ರಮಾಣದಲ್ಲಿ ಪೊಟ್ಯಾಷ್ ಒದಗುವಂತೆ ಮಾಡುತ್ತವೆ. ಇದರಿಂದ ಭತ್ತ, ಕಬ್ಬಿನಂತಹ ತೋಟಗಾರಿಕಾ ಬೆಳೆಗಳು ಸಮೃದ್ಧ ಫಸಲು ಕೊಡುವುದೂ ಸಾಧ್ಯವಾಗುತ್ತದೆ.

ಜೌಗು ಪ್ರದೇಶಗಳಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಹೊರಡಿಸಿರುವ 2021ರ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ 14,930 ಜೌಗು ತಾಣಗಳಿವೆ. ಇದು ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣದ ಶೇ 4.1ರಷ್ಟು ಎಂದೂ ಪ್ರಕಟಿಸಲಾಗಿದೆ. ಈ ಹಿಂದೆ ಹೈಕೋರ್ಟ್‌ನ ಲೋಕ್ ಅದಾಲತ್, ಎನ್ವಿರಾನ್ಮೆಂಟಲ್ ಮ್ಯಾನೇಜ್‌ಮೆಂಟ್ ಆ್ಯಂಡ್ ಪಾಲಿಸಿ ರಿಸರ್ಚ್ ಇನ್‌ಸ್ಟಿಟ್ಯೂಟ್ (ಇಎಂಪಿಆರ್‌ಐ) ಎಂಬ ಸಂಸ್ಥೆಗೆ ಕೆಲವು ನಿರ್ದೇಶನಗಳನ್ನು ನೀಡಿತ್ತು. ನದಿಗಳಿಗೆ ಮಲಿನ ಹರಿವನ್ನು ತಡೆಯುವ ದಿಸೆಯಲ್ಲಿ, ನದಿಪಾತ್ರದ 1,000 ಅಡಿ ವಿಸ್ತಾರದ ಪ್ರದೇಶವನ್ನು ಬಫರ್ ಜೋನ್ ಎಂದು ಪರಿಗಣಿಸಲು, ಅಲ್ಲಲ್ಲಿ ತ್ಯಾಜ್ಯ ಸಂಸ್ಕರಣಾ ಕೇಂದ್ರಗಳು ಇರುವಂತೆ ನೋಡಿಕೊಳ್ಳಲು ಮಾರ್ಗದರ್ಶನ ಕೊಟ್ಟಿತ್ತು. ಹೀಗೆ ಮಾಡುವುದರಿಂದ ನದಿ ನೀರು ಕಲುಷಿತವಾಗುವುದನ್ನು ತಪ್ಪಿಸಬಹುದು ಎಂಬುದು ಲೋಕ್ ಅದಾಲತ್ತಿನ ಉದ್ದೇಶವಾಗಿತ್ತು. ವೃಷಭಾವತಿ ನದಿಯ ನೀರು ಹೇಗೆ ಕಲುಷಿತವಾಗುತ್ತಿದೆ ಎಂಬ ಜ್ವಲಂತ ಉದಾಹರಣೆಯೇ ನಮ್ಮ ಮುಂದಿದೆ. ಇಂತಹ ಎಲ್ಲ ನದಿಗಳ ನೀರು ಬಂಗಾಳಕೊಲ್ಲಿಯನ್ನು ತಲುಪುವ ತನಕವೂ ಮಾಲಿನ್ಯವನ್ನೇ ಹೊತ್ತುಕೊಂಡು ಸಾಗುತ್ತಿದೆ ಎಂಬ ವಿಚಾರವೂ ನಿತ್ಯಸತ್ಯ.



ಇಲ್ಲೊಂದು ಮಾತು ಹೇಳಲೇಬೇಕು. ತ್ಯಾಗರಾಜರು, ಮುತ್ತುಸ್ವಾಮಿ ದೀಕ್ಷಿತರು ಮತ್ತು ಶಾಮಾಶಾಸ್ತ್ರಿಗಳೆಂಬ ತ್ರಿಮೂರ್ತಿಗಳು ನಮ್ಮ ನಾಡಿನ ಮಹಾನ್ ಸಂತರು. ಅವರು ಕಾವೇರಿಯ ಪರಿಶುದ್ಧ ನೀರನ್ನು ಸೇವಿಸಿ ಬದುಕು ಸವೆಸಿದವರು ಮತ್ತು ದೈವಿಕವಾದ ಮಹತ್ಸಾಧನೆ ಮಾಡಿದ ಮಹನೀಯರು. ಮುತ್ತುಸ್ವಾಮಿ ದೀಕ್ಷಿತರು ಯೋಗಿ ಚಿದಂಬರನಾಥರನ್ನು ತಮಿಳುನಾಡಿನ ತಿರುವಯ್ಯಾರಿನಲ್ಲಿ ಭೇಟಿಯಾಗುತ್ತಾರೆ. ಮುತ್ತುಸ್ವಾಮಿ ದೀಕ್ಷಿತರ ತಂದೆಯವರು ಯೋಗಿಗಳೊಂದಿಗೆ ತಮ್ಮ ಮಗನನ್ನೂ ಕಾಶಿಗೆ ಕಳುಹಿಸುತ್ತಾರೆ. ಅಲ್ಲಿ ತರಬೇತಿ ಪಡೆದ ನಂತರದಲ್ಲಿ ದೀಕ್ಷಿತರು ಸರಸ್ವತಿ ವೀಣೆಯನ್ನು ಪಡೆಯುತ್ತಾರೆ. ಮುತ್ತುಸ್ವಾಮಿ ದೀಕ್ಷಿತರು ಮಹಾವಿಷ್ಣುವಿನ ಪರಮ ಆರಾಧಕರು. ಶಾಮಾಶಾಸ್ತ್ರಿಗಳು ದೇವಿ ರಾಜರಾಜೇಶ್ವರಿಯ ಆರಾಧಕರು. ತ್ಯಾಗರಾಜರು ಶ್ರೀರಾಮನ ಪರಮಭಕ್ತರು. ಇವರೆಲ್ಲರ ಸಾಧನೆಗೆ ಒಂದಿಲ್ಲೊಂದು ವಿಧದಲ್ಲಿ ಕಾವೇರಿ ನದಿ ಕಾರಣಳಾಗಿದ್ದಾಳೆ. ಆ ಕಾಲಘಟ್ಟದಲ್ಲಿ ಕಾವೇರಿ ನದಿಯ ಪಾವಿತ್ರ್ಯ ಹಾಗಿತ್ತು. ಆದರೆ ಇಂದಿನ ಸ್ಥಿತಿ ಅಯೋಮಯವಾಗಿದೆ.

ನಾನು ಕೊಡಗು ಅರಣ್ಯ ವೃತ್ತದಲ್ಲಿ ಅರಣ್ಯಾಧಿಕಾರಿ ಆಗಿದ್ದ ಅವಧಿಯಲ್ಲೇ ಕಬಿನಿ, ಹಾರಂಗಿಯಂತಹ ಕೆಲವು ಅಣೆಕಟ್ಟುಗಳ ನಿರ್ಮಾಣವಾಯಿತು, ಅನೇಕ ಬಗೆಯಲ್ಲಿ ಅರಣ್ಯ ನಾಶವಾಯಿತು. ಇದನ್ನೆಲ್ಲ ನೋಡಿ ನಾನು ಮೂಕಪ್ರೇಕ್ಷಕನಂತೆ ಇರಬೇಕಾಯಿತು. ಅದರ ಬಗ್ಗೆ ನನ್ನಲ್ಲಿ ಅಪರಾಧಿ ಭಾವ ಇಂದಿಗೂ ಇದೆ, ಮನಸ್ಸಿನಲ್ಲೊಂದು ವಿಷಾದ ಆವರಿಸಿಕೊಂಡಿದೆ. ಹಾಗಾಗಿಯೇ ನಾನು ನದಿಗಳ ಬಗ್ಗೆ, ಪರಿಸರದ ಉಳಿವಿನ ಬಗ್ಗೆ ನನ್ನ ಇಳಿವಯಸ್ಸಿನಲ್ಲೂ ಚಿಂತೆ-ಚಿಂತನೆ ಮಾಡುತ್ತಲೇ ಇದ್ದೇನೆ.

ಕೊನೆಯದಾಗಿ ಒಂದು ಮಾತು. ಗಂಗಾ ನದಿಗೆ ವಾರಾಣಸಿಯಲ್ಲಿ ಗಂಗಾರತಿ ಹೇಗೆ ಮಾಡಲಾಗುತ್ತಿದೆಯೋ ಅದೇ ರೀತಿ ಕಾವೇರಿ ನದಿಗೂ ಆರತಿ ಮಾಡುವ ಯೋಜನೆಗೆ ರಾಜ್ಯ ಸರ್ಕಾರ ಚಾಲನೆ ಕೊಟ್ಟಿದೆ. ಅದಕ್ಕಾಗಿ ₹ 92 ಕೋಟಿ ಅನುದಾನವನ್ನು ಮೀಸಲಿಟ್ಟಿರುವುದಾಗಿ ಪತ್ರಿಕೆಗಳು ವರದಿ ಮಾಡಿವೆ. ಇದು ಬೇಕೇ? ಕಲುಷಿತವಾಗಿರುವ ನದಿಯ ಒಡಲನ್ನು ಶುದ್ಧೀಕರಣ ಮಾಡುವುದರ ಬದಲಿಗೆ ಆರತಿ ಮಾಡುವುದರಿಂದ ಏನು ಫಲ ಸಿಕ್ಕೀತು? ಗಂಗಾರತಿಯಿಂದ ಎಂದಾದರೂ ಗಂಗೆ ಪವಿತ್ರಳಾಗಿದ್ದಾಳೆಯೇ? ಇಲ್ಲ, ಇನ್ನಷ್ಟು ಮಲಿನಗೊಂಡಿದ್ದಾಳೆ. ಅಂತೆಯೇ ಕಾವೇರಿಗೆ ಆರತಿ ಮಾಡಲು ಇಂತಹದ್ದೊಂದು ಬೃಹತ್ ಮೊತ್ತವನ್ನು ಖರ್ಚು ಮಾಡುವುದು ವ್ಯರ್ಥ, ಅರ್ಥಹೀನ ವಿಚಾರ. ಜನರ ತೆರಿಗೆಯ ದುಡ್ಡನ್ನು ಹೀಗೆ ಬೇಕಾಬಿಟ್ಟಿ ಖರ್ಚು ಮಾಡುವುದೆಂದರೆ ಅದು ಹೊಸ ರೀತಿಯಲ್ಲಿ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಡುವ ಸಂಗತಿ. ಇದೇ ಹಣವನ್ನು ರಾಜ್ಯದಲ್ಲಿ ಜೌಗು ಪ್ರದೇಶಗಳ ಅಭಿವೃದ್ಧಿಗೆ ವಿನಿಯೋಗಿಸಬಹುದು. ₹ 92 ಕೋಟಿಯಲ್ಲಿ ಸರಿಸುಮಾರು ಹತ್ತು ಸಾವಿರ ಹೆಕ್ಟೇರ್ ಜೌಗು ಪ್ರದೇಶದ ಅಭಿವೃದ್ಧಿ ಸಾಧ್ಯವಿದೆ.

ಇಂತಹ ಕ್ರಿಯಾತ್ಮಕ ಯೋಜನೆಗಳಿಗೆ ಕೈಹಾಕುವುದರ ಬದಲು, ಕಾವೇರಿಗೆ ಆರತಿ ಮಾಡುವುದರಿಂದ ಸಿಗುವ ಫಲವಾದರೂ ಏನು? ಅದರಿಂದ ಕಾವೇರಿ ಒಡಲಿನ ಮಾಲಿನ್ಯ ನಿವಾರಣೆಯಾಗುವುದೇ?

ಚುರುಮುರಿ

ಗಡಿಯಾಚೆ ಸಂಡಿಗೆ!

• ತುರುವೇಕೆರೆ ಪ್ರಸಾದ್

ಪರ್ಮೇಶಿ ಬೆಳಿಗ್ಗೆ ಪೇಪರ್ ಓದುತ್ತಾ ಕುಳಿತಿದ್ದಾಗ ಭಾರಿ ಎತ್ತರದ ಧ್ವನಿಯಲ್ಲಿ ಯಾರೋ ಜಗಳ ಆಡುತ್ತಿರುವುದು ಕೇಳಿಸಿತು. 'ಏನೇ ಅದು ಗಲಾಟೆ?' ಹೆಂಡತಿ ಪದ್ದುವನ್ನು ವಿಚಾರಿಸಿದ.

'ಇನ್ನೇನು, ಮಾಮೂಲಿ ಎಣ್ಣೆ ಯುದ್ಧ. ಯಾರಿಗೋ ರಾತ್ರಿ ಎಣ್ಣೆ ಜಾಸ್ತಿಯಾಗಿ ಬೆಳಗ್ಗೆ ಜಗಳ ತೆಗೆದಿರ್ಬೇಕು' ಅಂದ್ಲು ಪದ್ದು.

'ಇಲ್ಲ ಕಣೆ, ಗಂಡಸರ ಜೊತೆ ಹೆಂಗಸರ ವಾಯ್ಸೂ ಇದೆ. ಇದು ಎಣ್ಣೆ ಯುದ್ಧ ಅಲ್ಲ, ಗಡಿರೇಖೆಗೆ ಸಂಬಂಧಿಸಿದ್ದು ಇರ್ಬೇಕು'.

'ಗಡಿರೇಖೆ ಇಲ್ಯಾಕೆ ಬರುತ್ತೆ?'

'ಅಯ್ಯೋ! ಸಿಟೀಲಿ ಕನ್ಸರ್ವೆನ್ಸಿ ಗಲ್ಲಿಗಳು, ಹಿತ್ತಲು, ಸೈಟು, ಹಳ್ಳೀಲಿ ತೋಟ, ಹೊಲ, ಗದ್ದೆ, ಗುಂಡುತೋಪು ಒತ್ತುವರಿ ಅಂತ ಬೆಳಿಗ್ಗೆ ಎದ್ರೆ ಗಡಿ ಜಗಳ ಇದ್ದದ್ದೇ ಅಲ್ವೇನೆ?'

'ಹ್ಞೂಂಕಣ್ರೀ, ಇಲ್ಲಂತೂ ಇನ್ನೂ ಅತಿರೇಕಕ್ಕೆ ಹೋಗಿದೆ. ಕೇಬಲ್ ವೈರ್, ಬಟ್ಟೆ ಒಣಹಾಕೋ ತಂತಿ ವಿಷಯದಲ್ಲಿ, ನಿಮ್ ಗಡಿ ಟ್ರೆಸ್‌ಪಾಸ್ ಮಾಡಿ ನಮ್ ಕಿಟಕಿಗೆ ಕಟ್ಟಿದೀರಿ ಅಂತ ಜುಜುಬಿ ಜಗಳಗಳೇ ಆಗೋಗಿವೆ... ಒಂದ್ನಿಮಿಷ ಇರಿ, ಇದೇನು ಜಗಳ ಅಂತ ನೋಡ್ತೀನಿ' ಎಂದು ಕಿಟಕಿ ತೆಗೆದು ಕತ್ತು ಚಾಚಿ ನೋಡಿದಳು ಪದ್ದು.

'ಅಯ್ಯೋ! ಟೆರೇಸ್‌ನಲ್ಲಿ ಲಕ್ಷ್ಮಣರೇಖೆಯ ಗಡಿ ದಾಟಿ ಬಂದು ಸಂಡಿಗೆ ಹಾಕಿದಾರೆ ಅನ್ನೋದಕ್ಕೆ ಜಗಳ, ಅದೂ ಗಂಡಸರದ್ದೇ ಜೋರು'.

'ಓಹ್! ಹೌದಾ? ಗಡಿಯಲ್ಲಿ ಯೋಧರು ಎದೆ ಒಡ್ಡುತ್ತಿದ್ದಾರೆ ಗುಂಡಿಗೆ, ಇಲ್ಲಿ ಗಂಡಸರು ಟೆರೇಸ್ ಏರಿದ್ದಾರೆ ಇಡಲು ಸಂಡಿಗೆ'.

'ರೀ, ಇನ್ನೂ ಒಂದು ತಿಂಗಳು ಯುದ್ಧ ಶುರುವಾಗದಿದ್ರೆ ಸಾಕು! ನಾನೂ ಸಂಡಿಗೆ ಹಾಕಬೇಕು'.

'ಯುದ್ಧಕ್ಕೂ, ಸಂಡಿಗೆಗೂ ಏನೇ ಸಂಬಂಧ?'

'ಯುದ್ಧ ಶುರುವಾಗಿ ಆ ಬಾಂಬ್ ಹೊಗೆ ಮೋಡದ ತರ ಕವಿದುಕೊಂಡ್ರೆ ಅರಳು ಸಂಡಿಗೆ ಹೇಗ್ರೀ ಒಣಗುತ್ತೆ?'

'ಅದೂ ನಿಜಾನೆ ಬಿಡು. ಹೇಗಾದ್ರೂ ಆಗಲಿ, ಅರಳು ಸಂಡಿಗೆ ಮಾಡ್ಬೇಡ. ಮೇಲಿಂದ ಅದು ಬಾಂಬ್ ತರ ಕಂಡ್ರೆ ನಮ್ ಮನೆಮೇಲೆ ಕ್ಷಿಪಣಿ ಬಿದ್ದಾತು' ಎಚ್ಚರಿಸಿದ ಪರ್ಮೇಶಿ.

ಪದ್ದಮ್ಮ ಕಣ್‌ಕಣ್ ಬಿಟ್ಟರು.

ದಿನದ ಟ್ವೀಟ್

ಪ್ರಥಮ ಭಾಷೆ: ತಾರತಮ್ಯ ಸರಿಯಲ್ಲ

ಮೊದಲ ಭಾಷೆ ಸಂಸ್ಕೃತ, ಹಿಂದಿಯ ಪ್ರಶ್ನೆಪತ್ರಿಕೆ, ಉತ್ತರ ಈ ಎರಡರ ಗುಣಮಟ್ಟವನ್ನೂ ಪ್ರಥಮ ಭಾಷೆ ಕನ್ನಡದ ಮಟ್ಟಕ್ಕಿಂತ ಕಡಿಮೆ ಇಡುವುದು ಅನ್ಯಾಯ.

ಆನಂದ್ ಜಿ., ಬರಹಗಾರ

ಕಿಡಿನುಡಿ

ಶೂದ್ರರು ಮತ್ತು ದಲಿತರ ಮೀಸಲಾತಿಯನ್ನು ಆರ್‌ಎಸ್‌ಎಸ್ ನಿರಂತರವಾಗಿ ವಿರೋಧಿಸುತ್ತಾ ಬಂದಿದೆ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ಗೆ ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಲ್ಲ. ಈ ಬಗ್ಗೆ ಅವರಿಗೆ ಬದ್ಧತೆಯೂ ಇಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಬುಧವಾರ, 3-5-2000

• ಮೋಸದಾಟ: ಸಿಬಿಐ ಪ್ರಾಥಮಿಕ ತನಿಖೆ ಆರಂಭ

ನವದೆಹಲಿ, ಮೇ 2 (ಪಿಟಿಐ): ಕ್ರಿಕೆಟ್ ಮೋಸದಾಟದ ಪ್ರಕರಣಕ್ಕೆ ಸಂಬಂಧಿಸಿ ವಿವರವಾದ ತನಿಖೆ ನಡೆಸುವಂತೆ ಕ್ರೀಡಾ ಸಚಿವಾಲಯದಿಂದ ಅಧಿಕೃತ ಪತ್ರ ಬಂದ ಹಿನ್ನೆಲೆಯಲ್ಲಿ, ಪ್ರಕರಣದ ಕುರಿತು ಸಿಬಿಐ ಇಂದು ಪ್ರಾಥಮಿಕ ತನಿಖೆ ಪ್ರಾರಂಭಿಸಿತು.

• ದೂರವಾಣಿಗೆ ವಿದ್ಯುತ್: ದಂಪತಿ ಸಾವು

ಮಂಡ್ಯ, ಮೇ 2– ತಾಲ್ಲೂಕಿನ ಸಂಪಳ್ಳಿ ಗ್ರಾಮದಲ್ಲಿ ನಿನ್ನೆ ರಾತ್ರಿ ದೂರವಾಣಿ ಮೂಲಕ ಪಸರಿಸಿದ ವಿದ್ಯುತ್, ಗಂಡ– ಹೆಂಡತಿಯನ್ನು 17ನೇ ವಿವಾಹ ವಾರ್ಷಿಕೋತ್ಸವದಂದು ಬಲಿ ತೆಗೆದುಕೊಂಡಿರುವ ದುರ್ಘಟನೆ ಸಂಭವಿಸಿದೆ.

ಮೃತ ದುರ್ದೈವಿಗಳು ಎಸ್.ಕೆ.ತಮ್ಮಣ್ಣ (40) ಮತ್ತು ಪತ್ನಿ ಮಂಜುಳಾ (32). ಇವರ ಹಿರಿಯ ಪುತ್ರ ಗಿರೀಶನ (15) ಕೈಗೆ ಸುಟ್ಟ ಗಾಯಗಳಾಗಿವೆ.

ದಂಪತಿ ರಾತ್ರಿ 8.15ರಲ್ಲಿ ವಿವಾಹ ವಾರ್ಷಿಕೋತ್ಸವ ಆಚರಿಸಿ ಭೋಜನ ಮುಗಿಸಿದ್ದಾಗ ದೂರವಾಣಿ ಕರೆ ಬಂದ ಶಬ್ದ ಕೇಳಿ ಗಿರೀಶ್ ಅದನ್ನೆತ್ತಲು ಹೋದ. ಆಗ ಶಾಕ್ ಹೊಡೆದು ಸ್ವಲ್ಪ ದೂರಕ್ಕೆ ಎಸೆಯಲ್ಪಟ್ಟ. ಆಗ ತಮ್ಮಣ್ಣನವರೇ ರಿಸೀವರ್ ಎತ್ತಿಕೊಂಡಾಗ ಅವರಿಗೂ ಶಾಕ್ ತಗುಲಿ ಕೆಳಗೆ ಬಿದ್ದರು. ಅವರ ಮೈಮೇಲೆ ದೂರವಾಣಿ ಸಲಕರಣೆ ಮತ್ತು ವೈರ್ ಬಿದ್ದು ಕೂಗಾಡಿ ಪ್ರಜ್ಞೆ ಕಳೆದುಕೊಂಡರು. ಮಂಜುಳಾ ಪತಿಯನ್ನು ಹಿಡಿದು ಮೇಲೆತ್ತಲು ಮುಂದಾದಾಗ ಅವರಿಗೂ ವಿದ್ಯುತ್ ಶಾಕ್ ತಗುಲಿತು.

50 ವರ್ಷಗಳ ಹಿಂದೆ

ಶನಿವಾರ, 3-5-1975

• 'ಚಾನ್ಸ್‌ಗಾಗಿ' ಕಾದವರು

ಬೆಂಗಳೂರು, ಮೇ 2– ಅದು ಉದ್ಯೋಗ ವಿನಿಮಯ ಕಚೇರಿಯಲ್ಲ. ಆ ಗುಂಪು ನಿರುದ್ಯೋಗಿಗಳದೂ ಅಲ್ಲ. ಆದರೂ ಸೇರಿದ್ದವರು ಕೇಳಿದ್ದು 'ಕೆಲಸ'. ಕೇವಲ ಹತ್ತು ದಿನದ ಕೆಲಸ. ಈ ಕೆಲಸಕ್ಕಾಗಿ ನೂರಾರು ಮೈಲಿಗಳಿಂದ ಬಂದಿದ್ದರು. 'ಚಾನ್ಸ್‌ಗಾಗಿ' ಕಾದಿದ್ದರು.

ಪಿ.ಯು.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳ ಮೌಲ್ಯಮಾಪನವು ಶಿಕ್ಷಕರಿಗೆ ಸಾಕಷ್ಟು ಆದಾಯ ನೀಡುವ ಕೆಲಸ. ಕೇಳುವವರ ಸಂಖ್ಯೆ ಹೆಚ್ಚು, ಇರುವ ಅವಕಾಶ ಕಡಿಮೆ. 'ಇನ್ನೂ ಹೆಚ್ಚಿನ ಸಂಖ್ಯೆಯ ಮೌಲ್ಯಮಾಪಕರ ನೇಮಕ ಇಲ್ಲ'. ಪಿ.ಯು.ಸಿ. ಡೈರೆಕ್ಟರ್‌ರವರ ಕಾರ್ಯಾಲಯದ ಮುಂದೆ ಕಣ್ಣುಕುಕ್ಕುವ ಈ ನೋಟಿಸ್ ಹಾಕಿದ ನಂತರವೂ ಗಂಟೆಗಟ್ಟಲೆ ಕಾದರು.

750 ಕಿ.ಮೀ. ದೂರದ ಬಿಜಾಪುರದಿಂದ ವ್ಯಕ್ತಿಯೊಬ್ಬರು ಬಂದಿದ್ದರು. ಎರಡು ದಿನದಿಂದ ಕಾದಿದ್ದರು. ಇಪ್ಪತ್ತು ವರ್ಷ ಪದವಿ ತರಗತಿಗೆ, ಮೂರು ವರ್ಷ ಪಿ.ಯು.ಸಿ.ಗೆ ಪಾಠ ಹೇಳಿದವರು. ಎರಡು ವರ್ಷದ ಹಿಂದೆ ಅವರಿಗೆ ಒಂದು ಅವಕಾಶ ಸಿಕ್ಕಿತ್ತಷ್ಟೆ.

• ಜನತೆಗೆ ಬೇಕಾದ್ದು ಫಲ, ಕೇವಲ ಭರವಸೆಗಳಲ್ಲ: ರಾಜಕಾರಣಿಗಳಿಗೆ ಜೆ.ಪಿ. ಹಿತೋಕ್ತಿ

ಹೈದರಾಬಾದ್, ಮೇ 2– ರಾಜಕಾರಣಿಗಳು ಭರವಸೆ ಕೊಡುವುದನ್ನು ಕಡಿಮೆ ಮಾಡಿ ಹೆಚ್ಚು ಕೆಲಸ ಮಾಡಬೇಕೆಂದು ಜಯಪ್ರಕಾಶ ನಾರಾಯಣ್ ಇಂದು ಕರೆ ನೀಡಿದರು.

'ತೀವ್ರವಾದ ಘೋಷಣೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ರಾಜಕಾರಣಿಗಳ ಸಾರ್ವಜನಿಕ ಜೀವನದಲ್ಲಿ ಇನ್ನೂ ಸ್ವಲ್ಪ ಪ್ರಾಮಾಣಿಕತೆ ಇರಬೇಕೆಂದು ಜನ ಬಯಸುತ್ತಾರೆ. ಅವರಿಗೆ ಭರವಸೆಗಳು ಬೇಡ; ಫಲಿತಾಂಶಗಳು ಬೇಕು' ಎಂದು ಗಾಂಧಿ ಭವನದಲ್ಲಿ ಕಾರ್ಯಕರ್ತರ ಸಭೆ ಉದ್ದೇಶಿಸಿ ಜೆ.ಪಿ. ನುಡಿದರು.

ಸಂಗತ

ಆಮ್ಲಜನಕ ದುರಂತ: ಸಿಗಬೇಕಿದೆ ನ್ಯಾಯ

ಚಾಮರಾಜನಗರದ ದುರ್ಘಟನೆಗೆ ನಾಲ್ಕು ವರ್ಷವಾದರೂ ತಪ್ಪಿತಸ್ಥರ ವಿರುದ್ಧ ಇನ್ನೂ ಯಾವುದೇ ಕ್ರಮ ಜರುಗಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ

• ಸೂರ್ಯನಾರಾಯಣ ವಿ.

ಇಂದಿಗೆ ಸರಿಯಾಗಿ ನಾಲ್ಕು ವರ್ಷಗಳ ಹಿಂದೆ, ಗಡಿ ಜಿಲ್ಲೆ ಚಾಮರಾಜನಗರದ ಜಿಲ್ಲಾ ಕೋವಿಡ್ ಆಸ್ಪತ್ರೆಯಲ್ಲಿ ರೋಗಿಗಳಿಗೆ ಸಕಾಲದಲ್ಲಿ ಆಮ್ಲಜನಕ ಪೂರೈಕೆಯಾಗದೆ ಡಜನ್‌ಗಟ್ಟಲೆ ಜನ ಜೀವ ಕಳೆದುಕೊಂಡರು. ಕೋವಿಡ್ ಮಹಾಮಾರಿಗೆ ತುತ್ತಾಗಿ, ಪ್ರಾಣ ಉಳಿಸಿಕೊಳ್ಳಲು ಚಿಕಿತ್ಸೆಗಾಗಿ ಬಂದ ಬಡವರು ಜಿಲ್ಲಾ ಆಡಳಿತದ ನಿರ್ಲಕ್ಷ್ಯದಿಂದಾಗಿ 'ಪ್ರಾಣವಾಯು' ಸಿಗದೆ ಪ್ರಾಣ ಕಳೆದುಕೊಳ್ಳಬೇಕಾಯಿತು. 2021ರ ಮೇ 2ರ ರಾತ್ರಿ 10.30ರಿಂದ ನಸುಕಿನ 2.30ರ ನಡುವೆ ಆಮ್ಲಜನಕ ಖಾಲಿಯಾಗಿದ್ದರಿಂದ, ವೆಂಟಿಲೇಟರ್ ಅವಲಂಬಿಸಿದ್ದ ಹಾಗೂ ತೀವ್ರ ನಿಗಾ ಘಟಕದಲ್ಲಿದ್ದ ಹಲವು ರೋಗಿಗಳು ನರಳಾಡಿದ್ದರು. ಮೃತರ ಕುಟುಂಬಸ್ಥರು ಮರುದಿನ ಆಸ್ಪತ್ರೆಯ ಮುಂದೆ ರೋದಿಸುತ್ತಿದ್ದ ದೃಶ್ಯಗಳು ಈಗಲೂ ಕಣ್ಣಿಗೆ ಕಟ್ಟಿದ ಹಾಗಿವೆ. ಮನೆಯ ಆಧಾರಸ್ತಂಭ ಆಗಿದ್ದವರನ್ನು ಕಳೆದುಕೊಂಡಿದ್ದವರ ಆರ್ತನಾದ ಇನ್ನೂ ಕಿವಿಯಲ್ಲಿ ಗುಂಯ್‌ಗುಡುತ್ತಿದೆ.

ದುರಂತ ನಡೆದ ಈ ನಾಲ್ಕು ವರ್ಷಗಳಲ್ಲಿ ಆಡಳಿತ ನಡೆಸುವ ಪಕ್ಷಗಳು ಬದಲಾಗಿವೆ. ಆದರೆ ಸಂತ್ರಸ್ತರ ಕುಟುಂಬಗಳಿಗೆ ಮಾತ್ರ ನ್ಯಾಯ ಸಿಕ್ಕಿಲ್ಲ. ಇಂಥ ದೊಡ್ಡ ದುರ್ಘಟನೆಗೆ ಕಾರಣರಾದವರಿಗೂ ಶಿಕ್ಷೆಯಾಗಿಲ್ಲ. ಹೈಕೋರ್ಟ್ ನೇಮಿಸಿದ್ದ ನಿವೃತ್ತ ನ್ಯಾಯಮೂರ್ತಿ ಎ.ಎನ್.ವೇಣುಗೋಪಾಲ ಗೌಡ ನೇತೃತ್ವದ ಸಮಿತಿಯು ಜಿಲ್ಲಾಡಳಿತ, ಆಸ್ಪತ್ರೆ ಆಡಳಿತದ ನಿರ್ಲಕ್ಷ್ಯದಿಂದ ಈ ದುರಂತ ನಡೆದಿದೆ ಎಂದು ವರದಿಯಲ್ಲಿ ಹೇಳಿದ್ದರೂ ಈವರೆಗೆ ಯಾರೊಬ್ಬರ ವಿರುದ್ಧವೂ ಕ್ರಮ ಆಗಿಲ್ಲ.

ಆಗ ಆಡಳಿತದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರವು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ, ಸೂಕ್ತ ಪರಿಹಾರ ನೀಡುವ ಮೂಲಕ ಸಂತ್ರಸ್ತರಿಗೆ ನ್ಯಾಯ ಒದಗಿಸುವ ಪ್ರಯತ್ನ ಮಾಡುವುದಿರಲಿ, ಕನಿಷ್ಠಪಕ್ಷ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳುವ ಸೌಜನ್ಯವನ್ನೂ ತೋರಲಿಲ್ಲ. ಜನರಿಂದಲೇ ಆಯ್ಕೆಯಾದ ಸರ್ಕಾರವೊಂದು ಇದಕ್ಕಿಂತ ಸಂವೇದನಾರಹಿತವಾಗಿ ವರ್ತಿಸಲು ಬಹುಶಃ ಸಾಧ್ಯವೇ ಇಲ್ಲವೇನೊ. ಸಮಾಜ ಕೂಡ ಸಂವೇದನಾಶೂನ್ಯ ನಡೆಯನ್ನು ಪ್ರದರ್ಶಿಸಿತ್ತು. ಹೋರಾಟ, ಚಳವಳಿಗೆ ಹೆಸರಾಗಿರುವ ಚಾಮರಾಜನಗರದ ದಲಿತ–ಪ್ರಗತಿಪರ, ಕನ್ನಡಪರ ಸಂಘಟನೆಗಳು ಈ ವಿಚಾರದಲ್ಲಿ ಮೌನವಾಗಿದ್ದವು. ಎಸ್‌ಡಿಪಿಐ ಬಿಟ್ಟರೆ ಸಂತ್ರಸ್ತರ ಪರವಾಗಿ ಯಾರೂ ಮಾತನಾಡಲಿಲ್ಲ, ನ್ಯಾಯಕ್ಕಾಗಿ ಆಗ್ರಹಿಸಲಿಲ್ಲ.

ಈ ದುರಂತದಲ್ಲಿ ಮೃತಪಟ್ಟವರು ಒಬ್ಬಿಬ್ಬರಲ್ಲ, ಬರೋಬ್ಬರಿ 36 ಮಂದಿ. ಅವರಲ್ಲಿ ಹೆಚ್ಚಿನವರು ದಲಿತರು ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದವರು. ಹೈಕೋರ್ಟ್ ನೇಮಿಸಿದ್ದ ಸಮಿತಿಯು 24 ಜನ ಮೃತಪಟ್ಟಿದ್ದಾಗಿ ಪ್ರಾಥಮಿಕ ತನಿಖಾ ವರದಿಯಲ್ಲಿ ಹೇಳಿತ್ತು. ಕೋವಿಡ್ ದೃಢಪಟ್ಟು ಮೃತರಾದ ರೋಗಿಗಳನ್ನು ಮಾತ್ರ ವರದಿ ಪರಿಗಣಿಸಿತ್ತು. ಆದರೆ, ಕೋವಿಡ್ ದೃಢಪಡದೆ ಅದರ ರೋಗಲಕ್ಷಣಗಳನ್ನು ಹೊಂದಿದ್ದವರೂ ಚಿಕಿತ್ಸೆ ಪಡೆಯುತ್ತಿದ್ದರು. ಉಸಿರಾಟಕ್ಕೆ ಕಷ್ಟಪಡುತ್ತಿದ್ದ ಅವರೂ ಆಮ್ಲಜನಕದ ಕೊರತೆಯಿಂದ ಅಸುನೀಗಿದ್ದರು. ಆಗ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸುರೇಶ್ ಕುಮಾರ್, ಆರೋಗ್ಯ ಸಚಿವರಾಗಿದ್ದ ಕೆ.ಸುಧಾಕರ್ ಬರೀ ಮೂರು ಮಂದಿ ಮೃತಪಟ್ಟಿದ್ದಾರೆ ಎಂದು ಹೇಳಿ ಪ್ರಕರಣಕ್ಕೆ ತೇಪೆ ಹಚ್ಚಲು ಯತ್ನಿಸಿದ್ದರು. ಸರ್ಕಾರ ಪರಿಹಾರವನ್ನೂ ಘೋಷಿಸಿರಲಿಲ್ಲ. ಹೈಕೋರ್ಟ್ ತಾನು ನೇಮಿಸಿದ್ದ ಸಮಿತಿಯ ವರದಿ ಆಧರಿಸಿ, 13 ಕುಟುಂಬಗಳಿಗೆ ತಲಾ ₹ 5 ಲಕ್ಷ ಮತ್ತು 11 ಕುಟುಂಬಗಳಿಗೆ ತಲಾ ₹ 2 ಲಕ್ಷ ಪರಿಹಾರ ನೀಡುವಂತೆ ಸೂಚಿಸಿದ ಬಳಿಕವಷ್ಟೇ ಸರ್ಕಾರ ಪರಿಹಾರ ನೀಡಿತ್ತು. ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎ.ಪಾಟೀಲ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿತ್ತು. ಆದರೆ ಅವರು ನೀಡಿದ್ದ ವರದಿಯಲ್ಲಿ ಏನಿದೆ ಎನ್ನುವುದು ಮಾತ್ರ ಈವರೆಗೂ ಬಹಿರಂಗವಾಗಿಲ್ಲ.

ಆಗ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್, ಮೃತರ ಮನೆಗಳಿಗೆ ಭೇಟಿ ನೀಡಿ ಕುಟುಂಬದವರಿಗೆ ಸಾಂತ್ವನ ಹೇಳಿ ತಲಾ ₹ 1 ಲಕ್ಷ ಪರಿಹಾರ ನೀಡಿತ್ತು. 'ಭಾರತ್ ಜೋಡೊ' ಯಾತ್ರೆ ಸಂದರ್ಭದಲ್ಲಿ ರಾಹುಲ್ ಗಾಂಧಿ ಈ ಕುಟುಂಬಗಳ ಸದಸ್ಯರೊಂದಿಗೆ ಮಾತನಾಡಿದ್ದರು. ಕಾಂಗ್ರೆಸ್ ನೇತೃತ್ವದ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದರೆ ಪ್ರತಿ ಕುಟುಂಬದ ಒಬ್ಬರಿಗೆ ಸರ್ಕಾರಿ ಕೆಲಸ ನೀಡುವ ಭರವಸೆಯನ್ನು ನೀಡಿದ್ದರು. ಹಿಂದಿನ ಚುನಾವಣೆಯಲ್ಲಿ ಈ ಪ್ರಕರಣವನ್ನು ಕಾಂಗ್ರೆಸ್ ಚುನಾವಣಾ ವಿಷಯವನ್ನಾಗಿ ಮಾಡಿತ್ತು. ಅಧಿಕಾರಕ್ಕೆ ಏರಿರುವ ಪಕ್ಷ ತಪ್ಪಿತಸ್ಥರ ವಿರುದ್ಧ ಈವರೆಗೆ ಶಿಸ್ತುಕ್ರಮ ಕೈಗೊಳ್ಳಲು ಮುಂದಾಗಿಲ್ಲ. ಕುಟುಂಬದ ಸದಸ್ಯರಿಗೆ ಸರ್ಕಾರಿ ಉದ್ಯೋಗ ನೀಡುವ ಭರವಸೆಯನ್ನೂ ಪೂರ್ಣವಾಗಿ ಈಡೇರಿಸಿಲ್ಲ. ಹೋದ ವರ್ಷ ಗುತ್ತಿಗೆ ಆಧಾರದಲ್ಲಿ ಆಸ್ಪತ್ರೆಯಲ್ಲಿ 'ಡಿ' ಗ್ರೂಪ್ ನೌಕರಿಯನ್ನು ನೀಡಿತ್ತು. ಆದರೆ, ತಮ್ಮ ಶೈಕ್ಷಣಿಕ ಅರ್ಹತೆಗೆ ಸಮನಾದ ಕಾಯಂ ಹುದ್ದೆ ನೀಡಬೇಕು ಎಂದು ಕುಟುಂಬದ ಸದಸ್ಯರು ಒತ್ತಾಯಿಸಿದ್ದರು. ಸದ್ಯ ನಾಲ್ಕು ಮಂದಿ ಮಾತ್ರ ಈ ಕೆಲಸ ಮಾಡುತ್ತಿದ್ದಾರೆ.

ಮಹದೇಶ್ವರ ಬೆಟ್ಟದಲ್ಲಿ ಇತ್ತೀಚೆಗೆ ನಡೆದ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸರ್ಕಾರ ತಮ್ಮ ಪರವಾಗಿ ನಿರ್ಧಾರ ಕೈಗೊಳ್ಳಬಹುದು ಎಂಬ ನಿರೀಕ್ಷೆಯಲ್ಲಿದ್ದ ಅವರಿಗೆ ಆಗಲೂ ಆಗಿದ್ದು ನಿರಾಸೆ. ಪ್ರಕರಣದ ಮರು ತನಿಖೆಗಾಗಿ ನೇಮಿಸಿರುವ ನ್ಯಾಯಮೂರ್ತಿ ಮೈಕಲ್ ಡಿ ಕುನ್ಹಾ ನೇತೃತ್ವದ ಸಮಿತಿಯ ಅವಧಿಯನ್ನು ಜೂನ್‌ವರೆಗೆ ವಿಸ್ತರಿಸಲಾಗಿದೆ. ಮೃತರ ಕುಟುಂಬಸ್ಥರಿಗೆ ನ್ಯಾಯ ಸಿಗಬೇಕಾದರೆ, ಸರ್ಕಾರ ನೀಡಿದ ಭರವಸೆಯಂತೆ ಅವರ ಜೀವನ ನಿರ್ವಹಣೆಗೆ ಮಾರ್ಗೋಪಾಯ ಕಲ್ಪಿಸಬೇಕು, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಬೇಕು.

ವಾಚಕರ ವಾಣಿ

ಮದುವೆ ನೋಂದಣಿ ಸರ್ವರಿಗೂ ಕಡ್ಡಾಯಗೊಳಿಸಿ

ಇತ್ತೀಚಿನ ಬೆಳವಣಿಗೆಗಳಲ್ಲಿ, ಪಾಕಿಸ್ತಾನದ ಅನೇಕರು ಇನ್ನೂ ತವರಿಗೆ ಹಿಂದಿರುಗದೆ ಭಾರತದಲ್ಲೇ ಬೇರು ಬಿಟ್ಟಿರುವುದು ಗಮನಕ್ಕೆ ಬಂದಿದೆ. ಅವರಲ್ಲಿ ಹಲವು ಮಹಿಳೆಯರು ಭಾರತದ ಪುರುಷರನ್ನು ವಿವಾಹ ಕೂಡಾ ಆಗಿದ್ದಾರೆ. 'ನಾವು ಇಲ್ಲಿನವರನ್ನು ಮದುವೆ ಆಗಿರುವುದರಿಂದ ಭಾರತ ನಮ್ಮ ಅತ್ತೆ ಮನೆಯಾಗಿದೆ' ಎಂದು ಹೇಳಿರುವ ಅವರು, ದೇಶವನ್ನು ತೊರೆಯಲು ಒಪ್ಪುತ್ತಿಲ್ಲ. ಇದು ಆತಂಕಕಾರಿ ವಿಚಾರ. ಹಾಗಾಗಿ, ಯಾವುದೇ ಧರ್ಮ, ಜಾತಿ, ಮತದ ವಿವಾಹಗಳನ್ನು ನೋಂದಣಿ ಮಾಡಿಸುವುದನ್ನು ಕಡ್ಡಾಯಗೊಳಿಸಲಿ. ವಧು– ವರ ಇಬ್ಬರೂ ಆಧಾರ್ ಕಾರ್ಡ್ ಹೊಂದಿರಬೇಕು ಎಂಬ ನಿಯಮ ರೂಪಿಸಲಿ.

ಈ ಕ್ರಮ ಜಾರಿಯಾದರೆ ದಂಪತಿಗಳಿಗೂ ದೇಶಕ್ಕೂ ಭದ್ರತೆ ಒದಗುತ್ತದೆ. ಇಲ್ಲೇ ಇರುವ ಪಾಕಿಸ್ತಾನದ ನಾಗರಿಕರಿಂದ ಭಾರತಕ್ಕೆ ಅಪಾಯ ಆಗಬಹುದಾದ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಹಾಗಾಗಿ, ಈ ಕುರಿತು ಸರ್ಕಾರ ತಕ್ಷಣವೇ ಕ್ರಮ ತೆಗೆದುಕೊಳ್ಳಲಿ. ಪಾಕಿಸ್ತಾನದ ಜನರಷ್ಟೇ ಅಲ್ಲದೆ ವೀಸಾ ಅವಧಿ ಮುಗಿದರೂ ಇಲ್ಲೇ ಬೀಡುಬಿಟ್ಟಿರುವ ಅನ್ಯ ದೇಶಗಳ ಅಷ್ಟೂ ಜನರನ್ನೂ ಪತ್ತೆಹಚ್ಚಿ ದೇಶದಿಂದ ಹೊರಗೆ ಕಳಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಟೋಲ್ ಎಂಬ ಹಗಲು ದರೋಡೆ

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ವಿಶ್ವವಿಖ್ಯಾತ ಕೆಆರ್‌ಎಸ್ ಅಣೆಕಟ್ಟೆಯ ಬೃಂದಾವನದ ಪ್ರವೇಶ ಶುಲ್ಕ, ವಾಹನಗಳ ಪಾರ್ಕಿಂಗ್ ಶುಲ್ಕ ಮತ್ತು ಮುಖ್ಯವಾಗಿ ತಳಭಾಗದ ಅಣೆಕಟ್ಟೆಯ ಟೋಲ್ ಅನ್ನು ಇದೇ ಒಂದರಿಂದ ಎರಡು ಪಟ್ಟು ಹೆಚ್ಚು ಮಾಡಿರುವುದು ಪ್ರವಾಸೋದ್ಯಮ ಇಲಾಖೆಯ 'ಹಗಲು ದರೋಡೆ'ಯಂತಿದೆ. 20 ವರ್ಷಗಳ ಹಿಂದೆ, ಒಂದು ಫರ್ಲಾಂಗ್ ದೂರ ಇರುವ ಈ ಕೆಳಗಿನ ಅಣೆಕಟ್ಟನ್ನು ನಿರ್ಮಿಸಲು ಹೆಚ್ಚೆಂದರೆ ₹ 10 ಕೋಟಿ ವೆಚ್ಚವಾಗಿರಬಹುದು. ಆದರೆ ಇಲ್ಲಿನ ಟೋಲ್ ಸಂಗ್ರಹ ಪ್ರತಿವರ್ಷ ₹ 5 ಕೋಟಿಗೂ ಹೆಚ್ಚು. ಅಂದರೆ ಈ 20 ವರ್ಷಗಳಲ್ಲಿ ಟೋಲ್ ಸಂಗ್ರಹವೇ ಸುಮಾರು ₹ 100 ಕೋಟಿ ದಾಟಿದೆ. ಇದಕ್ಕೆ ಮುಖ್ಯ ಕಾರಣ, ಕೆಆರ್‌ಎಸ್ ಹಿನ್ನೀರಿನಲ್ಲಿ ಇರುವ, ಪುನರ್ನಿರ್ಮಾಣ ಮಾಡಲಾಗಿರುವ ವೇಣುಗೋಪಾಲಸ್ವಾಮಿ ದೇವಸ್ಥಾನ ಮತ್ತು ಕಲ್ಲಹಳ್ಳಿಯ ಭೂವರಾಹ ಸ್ವಾಮಿ ದೇವಸ್ಥಾನಕ್ಕೆ ಪ್ರತಿದಿನ ಸಾವಿರಾರು ಭಕ್ತರು ಭೇಟಿ ನೀಡುವುದೇ ಆಗಿದೆ. ವಿಶೇಷವಾಗಿ ಶನಿವಾರ, ಭಾನುವಾರ ಹಾಗೂ ಸರ್ಕಾರಿ ರಜಾ ದಿನಗಳಲ್ಲಿ ಸಾವಿರಾರು ಜನ ದೇಶದ ಮೂಲೆ ಮೂಲೆಗಳಿಂದ ಕಾರು, ಟೆಂಪೊ, ಟ್ಯಾಕ್ಸಿಗಳಲ್ಲಿ ಬರುತ್ತಾರೆ. ಇವರೆಲ್ಲ ಈ ಅಣೆಕಟ್ಟಿನ ಟೋಲ್ ಕಟ್ಟಿಯೇ ಬರಬೇಕು.

ಈಗ ದುಪ್ಪಟ್ಟು ಲಾಭ ಪಡೆಯಲು ಅಥವಾ ಯಾರೋ ಗುತ್ತಿಗೆದಾರರನ್ನು ಉದ್ಧಾರ ಮಾಡಲು ಈ ರೀತಿ ಟೋಲ್ ದರ ಏರಿಕೆ ಮಾಡಿರುವುದು ತೀರಾ ಅವೈಜ್ಞಾನಿಕವಾಗಿದೆ. ಈ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಗೊಂಡು ಇಲ್ಲಿನ ಟೋಲ್ ವ್ಯವಸ್ಥೆಯನ್ನು ತೆಗೆದುಹಾಕಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಶಿಕ್ಷಣ ಪದ್ಧತಿ: ಗುರಿ ಈಡೇರಿದೆಯೇ?

'ಪ್ರಥಮ ಭಾಷೆ: ಕನ್ನಡ ಬೇಡವೇಕೆ?' ಎಂಬ ಲೇಖನ (ಸಂಗತ, ಮೇ 1) ನನ್ನನ್ನು ಸುಮಾರು ಐವತ್ತು ವರ್ಷಗಳ ಹಿಂದಿನ ಕಾಲಕ್ಕೆ ಕರೆದೊಯ್ದಿತು. ನಿಜ, ಆಗ ಪುಟಗಟ್ಟಲೆ ಬರೆದರೂ ಕನ್ನಡದಲ್ಲಿ ಅಂಕ ನೀಡುತ್ತಿರಲಿಲ್ಲವಂತೆ. ಹಾಗಾಗಿ, ನನ್ನ ತಂದೆ ನನಗೆ ಎಂಟನೆಯ ತರಗತಿಯಲ್ಲಿ ಸಂಸ್ಕೃತ ಕೊಡಿಸಿದರು. ಪ್ರಥಮ ಪಿಯುಸಿಯಲ್ಲೂ ಅದನ್ನೇ ಮುಂದುವರಿಸಬೇಕಾಯಿತು. ಎಸ್‌ಎಸ್‌ಎಲ್‌ಸಿಯಲ್ಲಿ ಕೇಂದ್ರಕ್ಕೇ ಮೊದಲಿಗನಾದೆ. ಪಿಯುಸಿಯಲ್ಲಿ ಸಂಸ್ಕೃತ ಅಂಕ ಗಳಿಕೆಗೆ ಒಂದು ಬಹುಮಾನವೂ ಸಿಕ್ಕಿತು. ಶಿಕ್ಷಣ ಮಾಧ್ಯಮ ಮೊದಲ ಏಳು ವರ್ಷ ಕನ್ನಡ, ಆಮೇಲಿನ ಒಂಬತ್ತು ವರ್ಷ ಇಂಗ್ಲಿಷ್. ಇದರ ಪರಿಣಾಮವೆಂದರೆ, ಕನ್ನಡ ಉಳಿಸಿಕೊಳ್ಳಲು ನಾನು ಈ ಶಿಕ್ಷಣದ ಆಚೆ ವಿಶೇಷ ಪ್ರಯತ್ನ ಪಡಬೇಕಾಯಿತು. 'ಸಂಸ್ಕೃತದಲ್ಲಿ ಗಣಿತದಂತೆ ಅಂಕ ಗಳಿಸಬಹುದಾದರೆ ಕನ್ನಡ ಏಕೆ ತೆಗೆದುಕೊಂಡು ಒದ್ದಾಡಬೇಕು?' ಎನ್ನುತ್ತಿದ್ದರು ಆಗಿನ ನನ್ನ ಸಹಪಾಠಿಗಳು.

ಒಂದು ಸಮಾಧಾನಕರ ಅಂಶವೆಂದರೆ, ಸಂಸ್ಕೃತ, ಹಿಂದಿಯನ್ನು ಕನ್ನಡದ ಮೂಲಕ ಕಲಿತು ಉತ್ತರಿಸುವ ಅವಕಾಶ ಇದ್ದುದು. ಲೇಖಕರು ಪರಿಣತಿಯ ಮಟ್ಟ ಒಂದೇ ಇಡಬೇಕೆಂದು ಪ್ರತಿಪಾದಿಸಿದ್ದಾರೆ. ಇದನ್ನು ಅನುಷ್ಠಾನಗೊಳಿಸುವುದು ಸುಲಭದ ಕೆಲಸವಲ್ಲ. ಭಾಷಾ ಕಲಿಕೆಯ ಮುಂದಿನ ಉಪಯೋಗ ಹೇಗೆ ಎನ್ನುವುದೂ ಮುಖ್ಯ. ಉದಾಹರಣೆಗೆ, ಕೃಷಿ ವಿಸ್ತರಣೆ ಎಂಬ ವಿಷಯಕ್ಕೆ ಸಂಬಂಧಿಸಿದ ಪೋಸ್ಟರ್ ಕನ್ನಡದಲ್ಲಿ ಸಿದ್ಧವಾದರೆ ರೈತರಿಗಾಗಿ ಬಳಸಬಹುದು, ಅದೇ ಇಂಗ್ಲಿಷ್‌ನಲ್ಲಿ ಕಲಿತದ್ದು ಗ್ರಹಿಕೆಗಷ್ಟೇ ಸೀಮಿತವಾಗಬಹುದು. ಶಿಕ್ಷಣ ಪದ್ಧತಿ ಎನ್‌ಇಪಿ ಅಥವಾ ಎಸ್‌ಇಪಿ ಏನೇ ಇರಲಿ ಅದರ ಅಂತಿಮ ಉದ್ದೇಶ, ಗುರಿ ಇಂದು ಏನಾಗಿದೆ ಎಂದು ನಾವು ಅರ್ಥಮಾಡಿಕೊಳ್ಳಬೇಕಾಗಿದೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಪೌರಕಾರ್ಮಿಕ ಕೆಲಸಕ್ಕೆ ಉತ್ತೇಜನ

ಕಾಯಂ ನೇಮಕಾತಿ ಸೌಲಭ್ಯ ಪಡೆದಿರುವ 12,692 ಪೌರಕಾರ್ಮಿಕರಿಗೆ ತಿಂಗಳಿಗೆ ₹ 39,000 ವೇತನ ಹಾಗೂ ಇತರ ಸೌಲಭ್ಯ ನೀಡುವ ಸರ್ಕಾರದ ಕ್ರಮ ಸ್ವಾಗತಾರ್ಹ. ಸೂರ್ಯೋದಯ ಆಗುತ್ತಿದ್ದಂತೆಯೇ ಕಸಪೊರಕೆ ಹಿಡಿದು ಬೀದಿ ಬೀದಿ ಸುತ್ತಿ ರಸ್ತೆಗಳನ್ನು ಸ್ವಚ್ಛಗೊಳಿಸುವ ಪೌರಕಾರ್ಮಿಕರದು ಶ್ರಮದ ದುಡಿಮೆ. ತಮ್ಮ ಆರೋಗ್ಯವನ್ನೂ ಲೆಕ್ಕಿಸದೆ ಸ್ವಚ್ಛತಾ ಕಾರ್ಯದಲ್ಲಿ ತೊಡಗುವ ಇವರು ಸಾಮಾನ್ಯವಾಗಿ ಬಡತನದಲ್ಲೇ ಬದುಕು ಕಟ್ಟಿಕೊಂಡಿರುತ್ತಾರೆ. ಅನಿವಾರ್ಯವಾಗಿ ಅಲ್ಪ ಸ್ವಲ್ಪ ಹಣಕ್ಕೆ ದುಡಿಯುವ ಇವರ ಕುಟುಂಬಗಳ ನಿರ್ವಹಣೆ ತೀರಾ ಕಷ್ಟ. ಈ ದಿಸೆಯಲ್ಲಿ ಸರ್ಕಾರವು ಅವರ ಸೇವೆಯನ್ನು ಕಾಯಂಗೊಳಿಸಿರುವುದರಿಂದ ಅವರಿಗೆ ಧೈರ್ಯ ತುಂಬಿದಂತೆ ಆಗಿದೆ. ಇದು ಅಲ್ಪ ವೇತನದ ದುಡಿಮೆ ಎಂದು ಹಿಂದೆ ಸರಿಯುವವರು, ಈ ಕೆಲಸ ಕೀಳು ಎಂದುಕೊಳ್ಳುವವರು ಇನ್ನುಮುಂದೆ ಅಂತಹ ಭಾವನೆಯನ್ನು ಬದಿಗೊತ್ತಿ ಈ ಕೆಲಸದಲ್ಲಿ ತೊಡಗಲು ಸರ್ಕಾರದ ಕ್ರಮ ಉತ್ತೇಜನ ನೀಡುವಂತಿದೆ.

ಬಿ.ಮೊಹಿದ್ದೀನ್ ಖಾನ್, ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜ್ಯದಲ್ಲಿ ಪರಿಶಿಷ್ಟ ಜಾತಿಗಳ ಮಧ್ಯೆ ಒಳ ಮೀಸಲಾತಿ ಹಂಚಿಕೆಗೆ ನಿಖರ ದತ್ತಾಂಶ ಸಂಗ್ರಹಿಸಿ, ಆಯಾ ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲು ಇದೇ ಸೋಮವಾರದಿಂದ (ಮೇ 5) ಪರಿಶಿಷ್ಟ ಜಾತಿಯ ಕುಟುಂಬಗಳ ಮನೆ ಮನೆ ಗಣತಿ ನಡೆಯಲಿದೆ. ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಸಮುದಾಯಗಳ ಮಧ್ಯೆ ಮೀಸಲಾತಿಯ ಮರು ಹಂಚಿಕೆಗೆ ದಿಕ್ಸೂಚಿಯಾಗಲಿರುವ ಈ ಸಮೀಕ್ಷೆಯ ಕುರಿತು 'ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ'ಕ್ಕೆ ಅಧ್ಯಯನ ನಡೆಸಿ, ವರದಿ ಸಲ್ಲಿಸಲು ನೇಮಕಗೊಂಡಿರುವ ಏಕಸದಸ್ಯ ಆಯೋಗದ ಅಧ್ಯಕ್ಷ, ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅವರು 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ

ಒಳಮೀಸಲಿನಿಂದ ಒಡಕಲ್ಲ, ಒಮ್ಮತ ಮೂಡಲಿದೆ

● ವಿ.ಎಸ್. ಸುಬ್ರಹ್ಮಣ್ಯ



ಪ್ರಜಾವಾಣಿ ಸಂದರ್ಶನ

ಪ್ರಶ್ನೆ: ಪರಿಶಿಷ್ಟ ಜಾತಿಗಳಲ್ಲಿ ಒಳ ಮೀಸಲಾತಿ ಹಂಚಿಕೆಗೆ ಪೂರಕವಾದ ಸಮೀಕ್ಷೆಗೆ ಏನೆಲ್ಲಾ ಸಿದ್ಧತೆಗಳು ನಡೆದಿವೆ?

ಆಯೋಗದ ಮಧ್ಯಂತರ ವರದಿಯ ಶಿಫಾರಸುಗಳನ್ನು ಮಾರ್ಚ್ 27ರಂದು ನಡೆದ ಸಂಪುಟ ಸಭೆಯಲ್ಲಿ ಅಂಗೀಕರಿಸಿದ್ದ ರಾಜ್ಯ ಸರ್ಕಾರ, ಪರಿಶಿಷ್ಟ ಜಾತಿಯ ಎಲ್ಲ ಕುಟುಂಬಗಳ ಸಮೀಕ್ಷೆಗೆ ಆದೇಶ ಹೊರಡಿಸಿತ್ತು. ಆ ಬಳಿಕ ಸರಣಿ ಸಭೆಗಳನ್ನು ನಡೆಸಿದ್ದೇವೆ. ವಿಷಯ ತಜ್ಞರ ಜೊತೆ ಸಮಾಲೋಚಿಸಿ 46 ಪ್ರಶ್ನೆಗಳು ಮತ್ತು ಉಪ ಪ್ರಶ್ನೆಗಳನ್ನು ಒಳಗೊಂಡ ಪ್ರಶ್ನಾವಳಿಯನ್ನು ಸಿದ್ಧಪಡಿಸಲಾಗಿದೆ. ಮೊಬೈಲ್ ಆ್ಯಪ್ ತಯಾರಿಸಿ, ತಾಂತ್ರಿಕ ಪರಿಶೀಲನೆ ಪೂರ್ಣಗೊಳಿಸಲಾಗಿದೆ. ಗಣತಿದಾರರು ಮತ್ತು ಮೇಲ್ವಿಚಾರಕರಿಗೆ ತರಬೇತಿ ನೀಡಲಾಗಿದೆ. ಸದ್ಯ ಎಲ್ಲ ಸಿದ್ಧತೆಗಳೂ ಪೂರ್ಣಗೊಂಡಿದ್ದು, ಮನೆ ಮನೆ ಗಣತಿ ಮೂಲಕ ಮಾಹಿತಿ ಸಂಗ್ರಹಿಸಿ, ದಾಖಲಿಸುವುದಷ್ಟೇ ಬಾಕಿ ಉಳಿದಿದೆ.

ಪ್ರಶ್ನೆ: ಗಣತಿಗೆ ಎಷ್ಟು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ?

ರಾಜ್ಯದಾದ್ಯಂತ 58,932 ಗಣತಿದಾರರನ್ನು ನಿಯೋಜಿಸಲಾಗಿದೆ. ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತೆಯರು ಗಣತಿದಾರರಾಗಿ ಕಾರ್ಯನಿರ್ವಹಿಸಲಿದ್ದಾರೆ. ಪ್ರತಿ ಹತ್ತು ಗಣತಿದಾರರಿಗೆ ಒಬ್ಬ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳು ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಲಿದ್ದಾರೆ. ಒಟ್ಟು 5,894 ಮೇಲ್ವಿಚಾರಕರನ್ನು ನೇಮಿಸಲಾಗಿದೆ.

ಪ್ರಶ್ನೆ: ಸಮೀಕ್ಷೆಯು ಪ್ರತಿ ಕುಟುಂಬವನ್ನೂ ಒಳಗೊಳ್ಳುವುದನ್ನು ಖಾತರಿಪಡಿಸಿಕೊಳ್ಳುವುದು ಹೇಗೆ?

ಪ್ರತಿ ಗಣತಿದಾರರಿಗೆ 100ರಿಂದ 120 ಮನೆಗಳನ್ನು ನಿಗದಿಪಡಿಸಲಾಗಿದೆ. ರಾಜ್ಯದ ಎಲ್ಲ ಮನೆಗಳಿಗೂ ಗಣತಿದಾರರು ಭೇಟಿ ನೀಡಲೇಬೇಕು. ಆ ಕುಟುಂಬದವರು ಪರಿಶಿಷ್ಟ ಜಾತಿಗೆ ಸೇರಿದ್ದಾರೆಯೆ ಎಂಬ ಪ್ರಶ್ನೆಯನ್ನು ಕೇಳಬೇಕು. ಹೌದು ಎಂದಾದಲ್ಲಿ ಆ ಕುಟುಂಬದ ಮಾಹಿತಿಯನ್ನು ಮೊಬೈಲ್ ಆ್ಯಪ್ ಮೂಲಕ ದಾಖಲು ಮಾಡಿಕೊಳ್ಳಬೇಕು. ಒಟ್ಟು 23–24 ಲಕ್ಷ ಕುಟುಂಬಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ.

ಪ್ರಶ್ನೆ: ಸಮೀಕ್ಷೆಯ ವಿಧಾನ ಹೇಗಿರಲಿದೆ?

ಗಣತಿದಾರರು ಮನೆಗೆ ಬಂದಾಗ ಆ ಕುಟುಂಬದ ಸದಸ್ಯರ ಜಾತಿ ಪ್ರಮಾಣಪತ್ರ, ಪಡಿತರ ಚೀಟಿ ಮತ್ತು ಆಧಾರ್ ಸಂಖ್ಯೆಗಳನ್ನು ನೀಡಬೇಕಾಗುತ್ತದೆ. ಮೂರೂ ದಾಖಲೆಗಳನ್ನು ಒದಗಿಸಿದರೆ ಉತ್ತಮ. ಮೂರರ ಪೈಕಿ ಒಂದು ದಾಖಲೆ ಒದಗಿಸುವುದಕ್ಕೂ ಅವಕಾಶವಿದೆ. ಪ್ರಶ್ನಾವಳಿಯನ್ನು ಭರ್ತಿ ಮಾಡಿ, ದಾಖಲೆಗಳನ್ನು ಅಪ್‌ಲೋಡ್ ಮಾಡಿದ ಬಳಿಕ ಕುಟುಂಬದ ಸದಸ್ಯರೊಬ್ಬರ ಸಹಿ ಪಡೆಯಲಾಗುತ್ತದೆ. ಅವರ ಭಾವಚಿತ್ರವನ್ನು ಸೆರೆಹಿಡಿದು ಅಪ್‌ಲೋಡ್ ಮಾಡಿ, ಲಾಕ್ ಮಾಡಲಾಗುತ್ತದೆ.

ಪ್ರಶ್ನೆ: ಹಿಂದುಳಿದಿರುವಿಕೆಯನ್ನು ಗುರುತಿಸಲು ಈ ಗಣತಿಯಲ್ಲಿ ಬಳಸುವ ಪ್ರಮುಖ ಮಾನದಂಡಗಳು ಯಾವುವು?

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಪಟ್ಟಿಯಲ್ಲಿರುವ ಜಾತಿಗಳ ಮಧ್ಯೆ ಒಳ ಮೀಸಲಾತಿ ಕಲ್ಪಿಸುವ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನುಸಾರವೇ ನಾವು ಕೆಲಸ ಮಾಡಬೇಕು. ಶೈಕ್ಷಣಿಕ ಹಿಂದುಳಿದಿರುವಿಕೆ, ಸರ್ಕಾರಿ ನೌಕರಿಯಲ್ಲಿನ ಪ್ರಾತಿನಿಧ್ಯದಲ್ಲಿ ಹಿಂದುಳಿದಿರುವಿಕೆ ಮತ್ತು ಸಾಮಾಜಿಕ ಹಿಂದುಳಿದಿರುವಿಕೆಯನ್ನು ಗುರುತಿಸುವುದೇ ಗಣತಿಯ ಮುಖ್ಯ ಉದ್ದೇಶ. ಅದರ ಜೊತೆಯಲ್ಲೇ ಭೂ ಒಡೆತನ, ವಸತಿ ವ್ಯವಸ್ಥೆ, ಕಸುಬು, ವರಮಾನ, ರಾಜಕೀಯ ಪ್ರಾತಿನಿಧ್ಯ ಸೇರಿದಂತೆ ಕೆಲವು ಅಂಶಗಳ ಕುರಿತು ಹೆಚ್ಚುವರಿ ಮಾಹಿತಿಯನ್ನೂ ಸಂಗ್ರಹಿಸಲಾಗುವುದು.

ಪ್ರಶ್ನೆ: ಸಮೀಕ್ಷೆಯ ವೇಳಾಪಟ್ಟಿ ಹೇಗಿದೆ?

ಮೇ 5ರಿಂದ 17ರವರೆಗೆ ಮನೆ ಮನೆ ಗಣತಿ ನಡೆಯಲಿದೆ. ಮೇ 19ರಿಂದ 21ರವರೆಗೆ ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಶಿಬಿರ ನಡೆಸಿ ಮಾಹಿತಿ ಸಂಗ್ರಹಿಸಲಾಗುವುದು. ಮೇ 19ರಿಂದ 23ರವರೆಗೆ ಮೊಬೈಲ್ ಆ್ಯಪ್‌ನಲ್ಲಿ ಸ್ವಯಂ ಮಾಹಿತಿ ದಾಖಲಿಸಲು ಅವಕಾಶ ನೀಡಲಾಗುವುದು.

ಪ್ರಶ್ನೆ: ಸಮೀಕ್ಷೆಯಲ್ಲಿ ಸಂಗ್ರಹಿಸಿದ ಮಾಹಿತಿಯನ್ನು ಮರುಪರಿಶೀಲಿಸಲು ಅವಕಾಶ ಇದೆಯೆ?

ಒಂದು ಕುಟುಂಬಕ್ಕೆ ಸಂಬಂಧಿಸಿದ ಮಾಹಿತಿಯನ್ನು ಆ ಕುಟುಂಬದ ಸದಸ್ಯರಷ್ಟೇ ಮೊಬೈಲ್ ಆ್ಯಪ್ ಮೂಲಕ ಮರುಪರಿಶೀಲಿಸಲು ಅವಕಾಶ ನೀಡಲಾಗುವುದು. ದಾಖಲಿಸಲಾದ ಮಾಹಿತಿಯಲ್ಲಿ ತಪ್ಪುಗಳಿರುವುದು ಕಂಡುಬಂದಲ್ಲಿ ಆ ಕುಟುಂಬದವರು ತಕರಾರು ಸಲ್ಲಿಸಬಹುದು. ಆಯೋಗದ ಹಂತದಲ್ಲೇ ತಕರಾರುಗಳನ್ನು ಪರಿಶೀಲಿಸಿ, ವಿಲೇವಾರಿ ಮಾಡಲಾಗುತ್ತದೆ. ಸಂಗ್ರಹಿಸುವ ಮಾಹಿತಿಯಲ್ಲಿ ಕಿಂಚಿತ್ತೂ ದೋಷ ಇರಬಾರದು ಎಂಬ ಎಚ್ಚರಿಕೆಯಿಂದ ಈ ವ್ಯವಸ್ಥೆಯನ್ನು ಆಯೋಗ ರೂಪಿಸಿದೆ.

ಪ್ರಶ್ನೆ: ಗಣತಿಗೆ ಸರ್ಕಾರದ ಸಹಕಾರ ಹೇಗಿದೆ?

ಸರ್ಕಾರ ಎಲ್ಲ ಹಂತಗಳಲ್ಲಿ ಸಂಪೂರ್ಣವಾದ ಸಹಕಾರ ನೀಡುತ್ತಿದೆ. ಸಮಾಜ ಕಲ್ಯಾಣ ಇಲಾಖೆಯನ್ನು ನೋಡಲ್ ಇಲಾಖೆಯನ್ನಾಗಿ ನೇಮಿಸಲಾಗಿದೆ. ಗಣತಿಗೆ ಶಿಕ್ಷಕರು ಮತ್ತು ಅಂಗನವಾಡಿ ಕಾರ್ಯಕರ್ತರನ್ನು ನಿಯೋಜಿಸಬೇಕೆಂಬ ಕೋರಿಕೆಗೆ ತಕ್ಷಣ ಸಮ್ಮತಿ ಸಿಕ್ಕಿದೆ. ಇ–ಆಡಳಿತ ಇಲಾಖೆಯು ನಿರೀಕ್ಷೆಗೆ ಮೀರಿದ ರೀತಿಯಲ್ಲಿ ಆಯೋಗಕ್ಕೆ ಸಹಕರಿಸುತ್ತಿದೆ. ಗಣತಿಗೆ ಸಂಬಂಧಿಸಿದ ಯಾವ ಕೆಲಸಕ್ಕೂ ತೊಡಕಾಗಿಲ್ಲ.

ಪ್ರಶ್ನೆ: ಆಯೋಗಕ್ಕೆ ಅಗತ್ಯ ಅನುದಾನವನ್ನು ಸರ್ಕಾರ ಒದಗಿಸಿದೆಯೆ?

ಹಣಕಾಸಿನ ವಿಷಯವನ್ನು ನಾವು ಸೀಮಿತ ಪ್ರಮಾಣದಲ್ಲಷ್ಟೇ ನಿರ್ವಹಣೆ ಮಾಡುತ್ತಿದ್ದೇವೆ. ಆಯೋಗದ ದೈನಂದಿನ ಕೆಲಸಗಳ ವೆಚ್ಚಕ್ಕೆ ಮಾತ್ರ ನೇರ ಅನುದಾನ ಪಡೆಯಲಾಗುತ್ತಿದೆ. ಗಣತಿಗೆ ಸಂಬಂಧಿಸಿದ ವೆಚ್ಚಗಳನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕವೇ ಮಾಡಲಾಗುತ್ತಿದೆ. ಗಣತಿಗೆ ಆಗುವ ವೆಚ್ಚಕ್ಕೆ ಅನುಗುಣವಾಗಿ ಇಲಾಖೆಯೇ ಅನುದಾನ ಪಡೆದುಕೊಂಡು, ಬಳಕೆ ಮಾಡಲಿದೆ.

ಪ್ರಶ್ನೆ: ಒಳ ಮೀಸಲು ಹಂಚಿಕೆಯ ಶಿಫಾರಸಿನೊಂದಿಗೆ ವರದಿ ಸಲ್ಲಿಸಲು ಎಷ್ಟು ಸಮಯ ಬೇಕಾಗಬಹುದು?

ಯಾವ ದಿನಾಂಕದಂದು ವರದಿ ಸಲ್ಲಿಸಲಾಗುವುದು ಎಂದು ಈಗಲೇ ಹೇಳುವುದು ಕಷ್ಟ. ಆದರೆ, ವಿಳಂಬಕ್ಕೆ ಅವಕಾಶ ಇಲ್ಲದಂತೆ ವರದಿ ಸಲ್ಲಿಸುತ್ತೇವೆ. ಗಣತಿಯಲ್ಲಿ ಸಂಗ್ರಹಿಸುವ ದತ್ತಾಂಶವನ್ನು ವಿಶ್ಲೇಷಿಸಿ, ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಸಮುದಾಯಗಳಲ್ಲಿನ ಹಿಂದುಳಿದಿರುವಿಕೆಯನ್ನು ಗುರುತಿಸಬೇಕಾಗುತ್ತದೆ. ಆ ಬಳಿಕವೇ ನಾವು ಶಿಫಾರಸು ನೀಡಲು ಸಾಧ್ಯ.

ಪ್ರಶ್ನೆ: ದತ್ತಾಂಶ ವಿಶ್ಲೇಷಣೆ ಹೇಗೆ ನಡೆಯಲಿದೆ?

ದತ್ತಾಂಶಗಳನ್ನು ನಾನೇ ವಿಶ್ಲೇಷಣೆ ಮಾಡಲು ಆಗುವುದಿಲ್ಲ. ಈ ಪ್ರಕ್ರಿಯೆ ಅತ್ಯಂತ ವೈಜ್ಞಾನಿಕವಾಗಿ ನಡೆಯಬೇಕು. ಕುಲಶಾಸ್ತ್ರೀಯ ಅಧ್ಯಯನ ತಜ್ಞರು, ಸಮಾಜ ಶಾಸ್ತ್ರಜ್ಞರು ಸೇರಿದಂತೆ ತಜ್ಞರ ಸಮಿತಿಯೊಂದನ್ನು ದತ್ತಾಂಶಗಳ ವಿಶ್ಲೇಷಣೆಗಾಗಿ ರಚಿಸಲಾಗುವುದು. ತಜ್ಞರ ತಂಡ ನೀಡುವ ವರದಿಯ ಆಧಾರದಲ್ಲಿ ವಿವಿಧ ಜಾತಿಗಳ ಹಿಂದುಳಿದಿರುವಿಕೆಯನ್ನು ಗುರುತಿಸಲಾಗುವುದು.

ಪ್ರಶ್ನೆ: ಸಮೀಕ್ಷೆಯ ಭಾಗವಾಗಿ ದ್ವಿತೀಯ ಮೂಲದ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆಯೆ?

ದ್ವಿತೀಯ ಮೂಲದ ಮಾಹಿತಿ ಸಂಗ್ರಹಿಸುವ ಕೆಲಸವನ್ನೂ ಆಯೋಗವು ಈಗಾಗಲೇ ಆರಂಭಿಸಿದೆ. ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಿಗೂ ಪತ್ರ ಬರೆದಿದ್ದು, ಹಾಲಿ ಮತ್ತು ಹಿಂದಿನ ವಿದ್ಯಾರ್ಥಿಗಳಲ್ಲಿ ಪರಿಶಿಷ್ಟ ಜಾತಿಗಳಿಗೆ ಸೇರಿದವರ ಮಾಹಿತಿ ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯಲ್ಲಿನ ಪರಿಶಿಷ್ಟರ ವಿವರವನ್ನು ಜಾತಿ, ಉಪ ಜಾತಿಗಳ ವಿವರಗಳೊಂದಿಗೆ ಒದಗಿಸುವಂತೆ ಕೋರಲಾಗಿದೆ. ರಾಜ್ಯ ಸರ್ಕಾರದ 43 ಇಲಾಖೆಗಳು, ನಿಗಮ, ಮಂಡಳಿಗಳು, ನಗರ ಸ್ಥಳೀಯ ಸಂಸ್ಥೆಗಳು, ಗ್ರಾಮೀಣ ಸ್ಥಳೀಯ ಸಂಸ್ಥೆಗಳಲ್ಲಿ ವಿವಿಧ ಗುಂಪಿನ ನೌಕರರಲ್ಲಿರುವ ಪರಿಶಿಷ್ಟ ಜಾತಿಯವರ ವಿವರ ಕೋರಲಾಗಿದೆ.

ಪ್ರಶ್ನೆ: ಸಮೀಕ್ಷೆ ಕುರಿತು ಪರಿಶಿಷ್ಟ ಜಾತಿಯಲ್ಲಿನ ಎಡಗೈ ಮತ್ತು ಬಲಗೈ ಬಣದವರಲ್ಲಿ ಇರುವ ಶಂಕೆಯನ್ನು ಆಯೋಗ ಹೇಗೆ ನಿವಾರಿಸಲಿದೆ?

ರಾಷ್ಟ್ರಪತಿಯವರ ಅನುಮೋದನೆಯೊಂದಿಗೆ ರಾಜ್ಯದಲ್ಲಿ ಅಧಿಸೂಚಿಸಿರುವ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ 101 ಜಾತಿಗಳ ಹೆಸರಿವೆ. ಪಟ್ಟಿಗೆ ಯಾವುದೇ ಹೊಸ ಜಾತಿಯನ್ನು ಸೇರಿಸಲು ಅಥವಾ ಯಾವುದನ್ನಾದರೂ ಕೈಬಿಡಲು ಅವಕಾಶವಿಲ್ಲ. ಒಳ ಮೀಸಲಾತಿಗೆ ಬೇಡಿಕೆ ಇಟ್ಟವರು ಮತ್ತು ಹಿಂದೆ ವಿರೋಧಿಸುತ್ತಿದ್ದವರ ಮಧ್ಯೆ ಈಗ ಸಹಮತ ಮೂಡಿದೆ. ಎಲ್ಲರೂ ಸಮೀಕ್ಷೆಯ ಪರವಾಗಿ ಇದ್ದಾರೆ. ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಎಲ್ಲ ಸಮುದಾಯಗಳಿಗೂ ಮೀಸಲಾತಿಯ ಫಲ ದೊರಕಬೇಕು. ಆ ದಿಸೆಯಲ್ಲಿ ಆಯೋಗ ಕೆಲಸ ಮಾಡಲಿದೆ. ಈ ಗಣತಿಯು ಪರಿಶಿಷ್ಟ ಜಾತಿಗಳಲ್ಲಿನ ಒಡಕನ್ನು ಕೊನೆಗಾಣಿಸಿ, ಒಮ್ಮತ ಮೂಡಿಸಲಿದೆ ಎಂಬ ವಿಶ್ವಾಸ ನನಗಿದೆ.

ಪ್ರಶ್ನೆ: ಒಳ ಮೀಸಲಾತಿ ಹಂಚಿಕೆಗೆ ಈಗ ಇರುವ ಪ್ರಮುಖ ತೊಡಕು ಯಾವುದು?

ಆದಿ ಕರ್ನಾಟಕ, ಆದಿ ಆಂಧ್ರ ಮತ್ತು ಆದಿ ದ್ರಾವಿಡ ಗುಂಪುಗಳಿಗೆ ಸಂಬಂಧಿಸಿದಂತೆ ಗೊಂದಲಗಳಿವೆ. ನೂರು ವರ್ಷಗಳ ಹಿಂದೆ ಮೈಸೂರಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಹೊರಡಿಸಿದ್ದ ಆದೇಶದಂತೆ ಈ ಜಾತಿಗಳನ್ನು ನಮೂದಿಸಲು ಅವಕಾಶ ನೀಡಲಾಗಿತ್ತು. ಅದು ಹಾಗೆಯೇ ಮುಂದುವರಿದಿದೆ. ಈ ಜಾತಿಗಳ ಉಪ ಜಾತಿಗಳ ಜನಸಂಖ್ಯೆಯನ್ನು ತಿಳಿಯಬೇಕಿದೆ. ಹೀಗಾಗಿ ಎಲ್ಲರೂ ಉಪ ಜಾತಿಗಳನ್ನು ದಾಖಲಿಸುವಂತೆ ಮನವಿ ಮಾಡಲಾಗುವುದು. ಉಪ ಜಾತಿ ಹೇಳಲು ನಿರಾಕರಿಸಿದರೆ ಜಾತಿಯ ಹೆಸರನ್ನಷ್ಟೇ ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗುವುದು. ಈ ತೊಡಕು ನಿವಾರಣೆಯಾದರೆ ಒಳ ಮೀಸಲಾತಿ ಹಂಚಿಕೆಗೆ ದೊಡ್ಡ ತೊಡಕುಗಳಿರುವುದಿಲ್ಲ.

ತ್ರಿವಿಕ್ರಮ ಹೆಜ್ಜೆಯ 'ಬೇಬಿ ಬಾಸ್'

ವ್ಯಕ್ತಿ

● ಪ್ರವೀಣ ಕುಲಕರ್ಣಿ

'ಹದಿನಾಲ್ಕು ವರ್ಷದವನಿದ್ದಾಗ ನಾನೇನು ಮಾಡುತ್ತಿದ್ದೆ?'

ಹಲವು ಮಂದಿ ಕ್ರಿಕೆಟಿಗರು ಈಗ ಇಂಥದ್ದೊಂದು ಪ್ರಶ್ನೆ ಹಾಕಿಕೊಳ್ಳುತ್ತಿದ್ದಾರಂತೆ. ಇಂಗ್ಲೆಂಡ್ ತಂಡದ ಮಾಜಿ ನಾಯಕ ನಾಸಿರ್ ಹುಸೇನ್ ಕೂಡ ಈ ಪ್ರಶ್ನೆ ಹಾಕಿಕೊಂಡು, 'ನಾನು, ಆಗ ಹದಿನೈದು ವರ್ಷದೊಳಗಿನವರ ತಂಡದಲ್ಲಿ ಸ್ಥಾನ ಉಳಿಸಿಕೊಳ್ಳಲು ಹೆಣಗಾಡುತ್ತಿದ್ದೆ. ಆದರೆ, ಭಾರತದ ವೈಭವ್ ಸೂರ್ಯವಂಶಿಯನ್ನು ನೋಡಿ, ಆ ವಯಸ್ಸಲ್ಲಿ ಘಟಾನುಘಟಿ ಬೌಲರ್‌ಗಳ ಎದುರು ಶತಕ ಬಾರಿಸಿದ್ದಾನೆ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಜೈವಿಕ ನಿಯಮದ ಶಿಲಾಶಾಸನ ಅಲ್ಲವಾದರೂ ಹದಿನಾಲ್ಕು ವರ್ಷದ ಹುಡುಗನ ಶರೀರವೆಂದರೆ ಅದಿನ್ನೂ ಮಕ್ಕಳದು ಎಂಬುದು ಸಾಮಾನ್ಯ ಗ್ರಹಿಕೆ. ಶರೀರದಲ್ಲಿ ಮಾಂಸ–ಖಂಡಗಳು ಒಂದು ಸ್ವರೂಪ ಪಡೆಯುತ್ತಿರುವಂತಹ ವಯೋಮಾನ ಅದು. ವೈಭವ್‌ನ ಮುಂದೆ ಇದನ್ನೆಲ್ಲ ವಿವರಿಸಲು ಹೋದರೆ, ಆತ ನಕ್ಕು ಬಿಟ್ಟಾನು. ಏಕೆಂದರೆ, ಪ್ರಚಲಿತ ಕ್ರಿಕೆಟ್ ಜಗತ್ತಿನ ಕೆಲವು ಶ್ರೇಷ್ಠ ಬೌಲರ್‌ಗಳ ಎದುರು ಶತಕ ಸಿಡಿಸಿ, ಐಪಿಎಲ್‌ನಲ್ಲಿ ಈ ಸಾಧನೆ ಮಾಡಿದ ಅತ್ಯಂತ ಕಿರಿಯ ಆಟಗಾರ ಎಂಬ ಶ್ರೇಯಕ್ಕೆ ಪಾತ್ರನಾದ ದಿಟ್ಟ ಬಾಲಕ ಆತ.

ಹದಿನೆಂಟು ವರ್ಷಗಳ ಹಿಂದೆ ಐಪಿಎಲ್ ಶುರುವಾದಾಗ ವೈಭವ್ ಇನ್ನೂ ಜನಿಸಿರಲೇ ಇಲ್ಲ. ಆದರೆ, ಬಿಹಾರದ ಸಮಷ್ಟಿಪುರ ಹತ್ತಿರದ ತಾಜಪುರದ ಈ ಹುಡುಗ, ಐಪಿಎಲ್‌ನಲ್ಲಿ ಇದುವರೆಗೆ ಯಾರೂ ಮಾಡದ ಸಾಧನೆ ಮಾಡಿದ್ದಾನೆ. ರಾಜಸ್ಥಾನ ರಾಯಲ್ಸ್ ತಂಡದ ಈ ಆಟಗಾರ, ಗುಜರಾತ್ ಟೈಟನ್ಸ್ ತಂಡದ ಎದುರು ಕೇವಲ 38 ಎಸೆತಗಳಲ್ಲಿ 101 ರನ್‌ಗಳ ಮಹಾಪೂರ ಹರಿಸಿದಾಗ ಆತನ ಎರಡು ಅಸಾಧಾರಣ ಗುಣಗಳು ಕ್ರಿಕೆಟ್ ಜಗತ್ತಿನ ಕಣ್ಣು ಸೆಳೆದವು. ಅವುಗಳೇ ಆತನ ಅತ್ಯದ್ಭುತ ಎನಿಸುವಂತಹ ತೋಳ್ಬಲ ಮತ್ತು ಬೆರಗು ಮೂಡಿಸುವಂತಹ ಆತ್ಮವಿಶ್ವಾಸ. ಭಾರತದ ಇಂದಿನ ಹದಿಹರೆಯದ ಪೀಳಿಗೆಯಲ್ಲಿ, ಯಾರೇ ಆಗಲಿ, ಒಂದು ವ್ಯತ್ಯಾಸವನ್ನು ಸ್ಪಷ್ಟವಾಗಿ ಗುರುತಿಸಬಹುದು. ಅದೆಂದರೆ, ಹಿಂದಿನವರ ಹಾಗೆ ಇಂದಿನ ಮಕ್ಕಳು ಸಂಕೋಚ ಇಲ್ಲವೆ ಹಿಂಜರಿಕೆ ಮನೋಭಾವದವರಲ್ಲ. ಎಂತಹ ಸನ್ನಿವೇಶದಲ್ಲೂ ಅವರು ಮುನ್ನುಗ್ಗುವ ಛಾತಿ ಉಳ್ಳವರು. ವೈಭವ್, ಅಂತಹ ಪೀಳಿಗೆಯ ಪ್ರತಿನಿಧಿ. 'ಯಾವುದೇ ಎಸೆತದಿಂದ ನಾನು ಸಿಕ್ಸರ್ ಎತ್ತಲು ಸಾಧ್ಯವಿರುವಾಗ ಅದರಿಂದ ಒಂದು ರನ್ ಏಕೆ ಹೊಡೆಯಬೇಕು' ಎಂದು ತನ್ನ ಮೊದಲ ಕೋಚ್ ಮನೀಶ್ ಓಝಾ ಅವರನ್ನು ಪ್ರಶ್ನಿಸಿದ್ದ ಪೋರನೀತ. ಐಪಿಎಲ್‌ನಲ್ಲಿ ತಾನು ಎದುರಿಸಿದ ಮೊದಲ ಎಸೆತವನ್ನೇ (ಶಾರ್ದೂಲ್ ಠಾಕೂರ್ ಬೌಲರ್) ಸಿಕ್ಸರ್‌ಗೆ ಅಟ್ಟಿ, ಅಂತಹ ಛಾತಿಯನ್ನು ಢಾಳಾಗಿ ಪ್ರದರ್ಶಿಸಿದ ದಾಂಡಿಗನೂ ಹೌದು.

2017ರಲ್ಲಿ ಆರು ವರ್ಷದವನಾಗಿದ್ದಾಗ ವೈಭವ್ ಸೂರ್ಯವಂಶಿ ತಂದೆಯೊಂದಿಗೆ ಐಪಿಎಲ್ ಪಂದ್ಯವೊಂದರ ವೀಕ್ಷಣೆಗೆ ಬಂದಿದ್ದ ಈ ಚಿತ್ರ ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲೀಕ ಸಂಜೀವ್ ಗೋಯೆಂಕಾ ಅವರು ಈ ಚಿತ್ರವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದಾರೆ

ತಾಂತ್ರಿಕವಾಗಿ ಹೇಳುವುದಾದರೆ, ಆಡುವ ಹನ್ನೊಂದರ ತಂಡದಲ್ಲಿ ಆತ ಸ್ಥಾನ ಪಡೆದಿದ್ದೇ ಗಾಯಗೊಂಡ ಸಂಜು ಸ್ಯಾಮ್ಸನ್ ಅವರ ಬದಲಿ ಆಟಗಾರನಾಗಿ. ಮತ್ತೆ, ಎದುರಿನ ಬೌಲಿಂಗ್ ದಾಳಿಯ ಅನುಭವ ಹೇಗಿತ್ತೆಂದರೆ ಆ ಎಲ್ಲ ಬೌಲರ್‌ಗಳು ಒಟ್ಟಾರೆಯಾಗಿ 697 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದವರಾಗಿದ್ದರು. ಪಂದ್ಯ ನಡೆದ ಸವಾಯಿ ಮಾನ್‌ಸಿಂಗ್ ಕ್ರೀಡಾಂಗಣ ಪ್ರೇಕ್ಷಕರಿಂದ ಖಚಾಖಚ್ ಭರ್ತಿಯಾಗಿತ್ತು. ಈ ಯಾವ ಸಂಗತಿಯೂ ವೈಭವ್‌ನ ಪಟಾಕಿ ಸಿಡಿಸಾಟದಂತಹ ಸ್ಫೋಟಕ ಬ್ಯಾಟಿಂಗ್‌ಗೆ ಅಡ್ಡಿಯಾಗಲಿಲ್ಲ. ಆತನಿಗೆ ತಾನು ಮುಂದೆ ಎದುರಿಸಲಿರುವ ಎಸೆತ ಮಾತ್ರ ಮುಖ್ಯವಾಗಿತ್ತು. ಗಟ್ಟಿಯಾದ ಮತ್ತು ಸಮತಟ್ಟಾದ ನಿರ್ಜೀವ ಪಿಚ್ ಬೇರೆ 'ನಿನಗೆ ಬೇಕಾದ ಹೊಡೆತಗಳನ್ನು ಹೊಡೆದುಕೊ' ಎಂಬ ಪರವಾನಗಿಯನ್ನು ಆತನಿಗೆ ಕೊಟ್ಟಂತಿತ್ತು. ಆತನ ಬೀಸಾಟದಲ್ಲಿ ಅಂಜಿಕೆ, ಅಳುಕು ಎನ್ನುವ ಪದಗಳು ಸಹ ಬೌಂಡರಿ ಗೆರೆಯನ್ನು ದಾಟಿ ಆಚೆಗೆ ಹೋಗಿ ಬಿದ್ದಿದ್ದವು. ರಶೀದ್ ಖಾನ್ ಅವರ ಎಸೆತದಲ್ಲಿ ಮಿಡ್ ವಿಕೆಟ್‌ನಲ್ಲಿ ಸೊಗಸಾದ ಸಿಕ್ಸರ್ ಎತ್ತಿ, ಶತಕ ಪೂರೈಸಿದಾಗ ವೈಭವ್, ಬ್ಯಾಟ್‌ನೊಂದಿಗೆ ಒಂದು ಸೆಲ್ಯೂಟ್ ಮಾಡಿ ಗಹನವಾಗಿಯೇ ಸಂಭ್ರಮಾಚರಣೆ ಮಾಡಿದ್ದ.

ಬಿಹಾರದ ಈ ಪುಟಾಣಿಗೆ ಬ್ಯಾಟ್ ಹಿಡಿದ ದಿನದಿಂದಲೂ ವೆಸ್ಟ್ ಇಂಡೀಸ್‌ನ ಬ್ರಯಾನ್ ಲಾರಾ ಅವರ ಜಪವಂತೆ. ಲಾರಾ ಅವರಂತೆಯೇ ವೈಭವ್ ಕೂಡ ಎಡಗೈ ಬ್ಯಾಟ್ಸ್‌ಮನ್. ಲಾರಾ ಅವರಂತೆಯೇ ಚೆಂಡಿನ ಗತಿಯನ್ನು ಕ್ಷಣಮಾತ್ರದಲ್ಲಿ ಅಳೆದು, ಸರ್ರನೆ ಹಿಂದೆ ಸರಿದು ಬ್ಯಾಟ್ ಬೀಸುವ ಕಲೆ ವೈಭವ್‌ಗೆ ಸಿದ್ಧಿಸಿದೆ. ಹೆದರಿಕೆಯಾಗಲಿ, ದಣಿವಾಗಲಿ ಆತನ ಆಂಗಿಕ 'ಭಾಷೆ'ಯಲ್ಲಿ ಗೋಚರಿಸದೇ ಇರುವುದನ್ನು ತಜ್ಞರು ಗುರುತಿಸಿದ್ದಾರೆ.

'ನಾನು ಇಂದು ಏನಾಗಿದ್ದೇನೆಯೋ ಅದಕ್ಕೆ ನನ್ನ ತಂದೆ–ತಾಯಿಯೇ ಕಾರಣ' ಎಂದು ವೈಭವ್ ಹೇಳಿದ್ದಾನೆ. ಹೌದು, ವೈಭವ್‌ನ ಕೌಶಲ ಹೀಗೆ ಹರಳುಗಟ್ಟುವಲ್ಲಿ ಆತನ ತಂದೆ–ತಾಯಿಯ ಪಾತ್ರ ದೊಡ್ಡದಿದೆ. ಇಂತಹ ಪ್ರತಿಭೆಯನ್ನು ಶೋಧಿಸಿ, ₹ 1.1 ಕೋಟಿ ಕೊಟ್ಟು ಖರೀದಿಸಿ, ತರಬೇತಿ ನೀಡಿದ ರಾಜಸ್ಥಾನ ರಾಯಲ್ಸ್ ತಂಡದ ಕೊಡುಗೆಯೂ ಇದೆ. ವರ್ಷಗಳ ಹಿಂದೆ ಮಗನನ್ನು ತೋಳಲ್ಲಿ ಹೊತ್ತುಕೊಂಡು ಐಪಿಎಲ್ ಪಂದ್ಯ ತೋರಿಸಿದ್ದ ಸಂಜೀವ್ ಸೂರ್ಯವಂಶಿ, ಆತನ ಭವಿಷ್ಯವನ್ನು ರೂಪಿಸುವುದಕ್ಕಾಗಿ ತಮ್ಮ ಕೃಷಿಭೂಮಿಯನ್ನೇ ಮಾರಿದ್ದರು. ತನ್ನ ತಾಯಿ ತನಗಾಗಿ ಎಷ್ಟು ಕಷ್ಟ ಪಟ್ಟಿದ್ದಾರೆ ಎಂಬುದನ್ನೂ ವೈಭವ್ ಹೇಳಿಕೊಂಡಿದ್ದಾನೆ. ಈಗ ಕೋಟಿ, ಕೋಟಿ ರೂಪಾಯಿಯ ಹಣದ ಹೊಳೆ ಈ ಕ್ರಿಕೆಟ್ ವಾಮನನ ಮನೆ ಹುಡುಕಿಕೊಂಡು ಬರುತ್ತಿದೆ. ಹಣ ಮತ್ತು ಜನಪ್ರಿಯತೆಯಿಂದ ಕೂಡಿದ ವೈಭವದ ಆಕಾಶದಲ್ಲಿ ಈ ಹುಡುಗ ತೇಲದಿರಲಿ ಎಂದು ಸೂಕ್ಷ್ಮ ಮನಸ್ಸಿನ ಹಲವು ಕ್ರಿಕೆಟಿಗರು ಎಚ್ಚರಿಸಿದ್ದಾರೆ.

ಬೀಸಾಟಕ್ಕೆ ಹೆಸರಾಗಿದ್ದ ಕ್ರಿಸ್ ಗೇಲ್ ಅವರನ್ನು ಅಭಿಮಾನಿಗಳು ಬಾಸ್ ಎಂದು ಕರೆಯುತ್ತಿದ್ದರು. ಈಗ ವೈಭವ್‌ನನ್ನು 'ದಿ ಬಾಸ್ ಬೇಬಿ'/ 'ಬೇಬಿ ಬಾಸ್' ಎಂದು ಕೊಂಡಾಡುತ್ತಿದ್ದಾರೆ. ಶತಕ ಸಿಡಿಸಿದ ಮರು ಪಂದ್ಯದಲ್ಲಿ 'ದಿ ಬಾಸ್ ಬೇಬಿ' ಮುಂಬೈ ಇಂಡಿಯನ್ಸ್ ವಿರುದ್ಧ ಮಾಡಿದ್ದು ಶೂನ್ಯ ಸಂಪಾದನೆ. ಲಾಂಗ್ ಆನ್‌ನಲ್ಲಿ ಚೆಂಡು ದಾಟಿಸಲಾಗದೆ ಸುಲಭದ ಕ್ಯಾಚಿತ್ತು ಆತ ನಿರಾಸೆ ಅನುಭವಿಸಿದ್ದ. 'ವೈಭವ್‌ನ ಹೋಮ್ ವರ್ಕ್ ಪೂರ್ಣಗೊಳಿಸಿದ್ದ ಮುಖ್ಯ ಕೋಚ್ ರಾಹುಲ್ ದ್ರಾವಿಡ್, ಆತ ಶೂನ್ಯದೊಂದಿಗೆ ವಾಪಸ್ ಆಗಿದ್ದರಿಂದ ತಾವು ಪೂರ್ಣಗೊಳಿಸಿದ್ದ ಹೋಮ್ ವರ್ಕ್ ಅಳಿಸಿಹಾಕಿದರು' ಎಂದು ನೆಟ್ಟಿಗರು ಕುಹಕವಾಡಿದ್ದರು. ಶತಕ ಬಾರಿಸಿದಾಗ ಹೊಗಳಿ ಅಟ್ಟಕ್ಕೆ ಏರಿಸುವುದು, ಸೋತಾಗ ಆಳಿಗೊಂದು ಕಲ್ಲು ಎಸೆಯುವುದು ಇಂದಿನ ಅಭಿಮಾನದ ಪರಿ. ಎರಡು ದಶಕಗಳ ಹಿಂದೆ ಅಮೆರಿಕದ ಫ್ರೆಡಿ ಅಡು ಎಂಬ ಬಾಲಕನ ಕಾಲ್ಚಳಕ ಕಂಡವರು ಆತನನ್ನು ಫುಟ್‌ಬಾಲ್ ದಂತಕಥೆ ಪೀಲೆಗೆ ಹೋಲಿಸಿದ್ದರು. ಆದರೆ, ಮುಂದೆ ಪೀಲೆ ಅವರ ಸಾಧನೆಯ ಹತ್ತಿರಕ್ಕೂ ಫ್ರೆಡಿ ಸುಳಿಯಲಿಲ್ಲ. ದೊಡ್ಡ ತಾರೆಗಳ ಜತೆ ಹೋಲಿಕೆಗೆ ಒಳಗಾಗುತ್ತಿರುವ ಸೂರ್ಯವಂಶಿಯ ಕ್ರಿಕೆಟ್ ವೈಭವ ಆ ರೀತಿ ಮುಕ್ಕಾಗದಿರಲಿ ಎಂಬುದಷ್ಟೇ ಸದ್ಯದ ಹಾರೈಕೆ.

ಪದಬಂಧ 6030

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗಿದ್ದ ಜನರು ನೀಡಿದ ಪ್ರೋತ್ಸಾಹ (4)
3.ಮದವಣಗಿತ್ತಿ ಹಚ್ಚಿಕೊಂಡಿರುವ ಮೆಹೆಂದಿ (4)
5.ಕಾಣದಂತಾಗಿರುವ ಉದ್ದೇಶ! (3)
6.ಖಗದ ಹತ್ತಿರ ನಿಂತಿರುವ ಕಾಡುಕೋಣ (4)
7.ನದಿ ಸಮುದ್ರಕ್ಕೆ ಸೇರುವಡೆಯ ಮೆಕ್ಕಲು ಭೂಮಿ (7)
10.ಅಂಗೈಯಿಂದ ಕೆನ್ನೆಗೆ ಕೊಡುವ ಏಟು (4)
11.ಜನರಿಗೆ ಕೇಳಿಸಿದ ಹಕ್ಕಿಗಳ ಧ್ವನಿ (3)
14.ಅದೃಷ್ಟಹೀನ ವ್ಯಕ್ತಿ (4)
15.ನಡುವೆ ಕಸವಿದ್ದರೂ ಅರಳುವಿಕೆ (4)

ಮೇಲಿಂದ ಕೆಳಕ್ಕೆ

1.ಕುಯುಕ್ತಿಯಿಂದ ಹೇಳಿದ ಮಾತು! (2)
2.ಹೊಟ್ಟೆ ಇಲ್ಲಿ ಕಾಣುತ್ತಿದ (3)
4.ಗಿಡದ ಬಳಿಯಿರುವ ಡೇಗೆ (3)
5.ಅರಣ್ಯವನ್ನು ಹೀಗೂ ಹೇಳುವರು (3)
6.ಖನಿಯಲ್ಲಿ ಸಿಕ್ಕಿದುದು (3)
8.ಆವರಣ ಅಥವಾ ತೆರೆ ಎಂದರೂ ಸರಿ (3)
9.ಜ್ಯೋತಿಶ್ಚಕ್ರ ರಾಶಿಯಲ್ಲಿರುವ ಜೋಡಿ (3)
10.ಒಂದೇ ವಿಷಯದಲ್ಲಿ ಆಸಕ್ತನಾದವನು (3)
12.ಟಕ ಟಕ ಸದ್ದು ಮಾಡುತ್ತಿರುವ ಕುದುರೆ ಬಂಡಿ (3)
13.ಮಾತಿಲ್ಲದ ನೀರವತೆ (2)



6029ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಭವಿ 3.ದಿಗ್ಬಂಧನ
5.ಪ್ರಕಟ 7.ರಸ
9.ಮಂಕ 10.ಉಮೇದು
11.ಧನ 12.ನೆಪ
14.ವಾರಸು 16.ಯಮಸುತ
17.ರತ್ನಾಕರ

ಮೇಲಿಂದ ಕೆಳಕ್ಕೆ:
1.ಅಸುರ 2.ವಿಪ್ರ
3.ದಿಟ 4.ನಡುಕ
6.ಕಲಸುಮೇಲೊಗರ
8.ಸಮಕಾಲೀನ
9.ಮಂತ್ರಾಲೋಚನೆ
11.ಧನಿಯ 13.ಪಗಾರ
14.ವಾತ 15.ಸುರ

ಸುಡೊಕು 6415

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9	6		5		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6414 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಮೇ 3, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಷಷ್ಠಿ ಗಂ. 7-52 ನಕ್ಷತ್ರ: ಪುನರ್ವಸು ಗಂ. 12-34 ಯೋಗ: ಶೂಲ ಗಂ. 25-41 ಕರಣ: ತೈತಿಲ ಗಂ. 07-52, ಮೇಷ ಮಾಸದ 20 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-12 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 04 ಜುಲ್ಖಾಯದ್
ಅದೃಷ್ಟ ಸಂಖ್ಯೆ : 5, 8

ಮೇಷ: ಸಂಬಂಧಿಕರಲ್ಲಿ ಹಾಗೂ ಸ್ನೇಹಿತರಲ್ಲಿ ಸಂಪರ್ಕದಲ್ಲಿರುವುದು ಆನಂದ ನೀಡಲಿದೆ. ಭೂಮಿ ಬಿಟ್ಟು ಎತ್ತರದಲ್ಲಿ ಕೆಲಸ ಮಾಡುವವರು ಜಾಗ್ರತೆಯಿಂದಿರಿ. ರೇಷ್ಮೆ ವ್ಯಾಪಾರಿಗಳಿಗೆ ಆದಾಯ ಇರುವುದು.

ವೃಷಭ: ಅಧ್ಯಾಪನ ವೃಂದಕ್ಕೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಕುಟುಂಬದೊಂದಿಗೆ ಸಮಯ ಕಳೆಯಲು ಸಾಧ್ಯವಾಗುತ್ತದೆ. ತಾಳ್ಮೆಯು ಜೀವನದ ಮೂಲಮಂತ್ರವಾಗಿರಲಿ. ಸಂಗಾತಿಯ ಆಯ್ಕೆ ವಿಚಾರದಲ್ಲಿ ಗಮನ ಕೊಡಿ.

ಮಿಥುನ: ಖರ್ಚು ವೆಚ್ಚಗಳನ್ನು ಸಮತೋಲನದಲ್ಲಿ ಇರಿಸಿಕೊಳ್ಳುವಿರಿ. ಮಿತ ಮತ್ತು ಶುಚಿಯ ಆಹಾರ ಸೇವನೆಯಿಂದ ಆರೋಗ್ಯ ಉತ್ತಮ. ಸಂಸಾರದಲ್ಲಿ ನೆಮ್ಮದಿ ವೃದ್ಧಿ. ಶ್ರೀಸುಬ್ರಹ್ಮಣ್ಯನನ್ನು ಪೂಜಿಸಿ.

ಕರ್ಕಾಟಕ: ವಿಶ್ವಾಸವನ್ನು ಉಳಿಸಿಕೊಳ್ಳಲು ಕಷ್ಟವಾಗಬಹುದು. ಮಕ್ಕಳನ್ನು ಶಿಕ್ಷಿಸುವ ಬದಲಾಗಿ ನಯವಾಗಿ ತಿಳಿಹೇಳಿ. ಕೃಷಿಗೆ ಸಂಬಂಧಿಸಿದ ಆರ್ಥಿಕತೆಯಲ್ಲಿ ಪಡೆದ ಸಾಲವನ್ನು ಹಿಂದಿರುಗಿಸುವ ಶಕ್ತಿ ದೊರಕಲಿದೆ.

ಸಿಂಹ: ಲಾಭ ತರುವಂಥ ಮತ್ತು ಅನಿವಾರ್ಯದ ಕೆಲಸಗಳಿಗೆ ಮಾತ್ರ ಗಮನ ಕೊಡಿ. ಅವಿವಾಹಿತ ಯೋಗ್ಯ ವಯಸ್ಕರಿಗೆ ಹೊಸ ಸಂಬಂಧಗಳು ಹುಡುಕಿಕೊಂಡು ಬರುವ ಸಾಧ್ಯತೆಗಳಿವೆ.

ಕನ್ಯಾ: ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ಪೂರ್ಣಗೊಳಿಸುವ ಬಗ್ಗೆ ಹೆಚ್ಚಿನ ಗಮನವಿರಲಿ. ಹೊಸ ವ್ಯಕ್ತಿಗಳ ಪರಿಚಯದಿಂದ ಹಣಕಾಸಿನಲ್ಲಿ ಮೋಸ ಹೋಗುವ ಸಂಭವವಿದೆ.

ತುಲಾ: ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ. ಚಿತ್ರನಟ ನಟಿಯರು ಮತ್ತು ಸಂಗೀತಗಾರರಿಗೆ ಉತ್ತಮ ದಿನ. ಗಣಿಗಾರಿಕೆಯಲ್ಲಿ ಉತ್ತಮ ಲಾಭ.

ವೃಶ್ಚಿಕ: ಬಹುಕಾಲದಿಂದ ಅನುಭವಿಸುತ್ತಿರುವ ರೋಗಬಾಧೆ ಹಂತಹಂತವಾಗಿ ಚೇತರಿಕೆಯ ಮೆಟ್ಟಿಲನ್ನು ಹತ್ತಲಿದೆ. ಸ್ವಯಂ ನಿರ್ಧಾರದಿಂದ ತೆಗೆದುಕೊಳ್ಳುವ ಔಷಧಿಯು ಅಡ್ಡಪರಿಣಾಮ ಬೀರಬಹುದು. ಎಚ್ಚರದಿಂದಿರಿ.

ಧನು: ಹಾಸ್ಯ ಮನೋಭಾವಕ್ಕೆ ಹೊಂದಿಕೊಳ್ಳುವ ಸ್ನೇಹಿತರು ಸಿಗಲಿದ್ದಾರೆ. ಹಳ್ಳಿಯ ಭೇಟಿ ಖುಷಿ ತರುವುದು. ಅಪರೂಪಕ್ಕೆ ಖುಷಿಯಿಂದ ಆಡಿದ ಕ್ರೀಡೆಯು ಕೈಕಾಲು ನೋವಿಗೆ, ದೇಹಾಯಾಸಕ್ಕೆ ಕಾರಣವಾಗಬಹುದು.

ಮಕರ: ಇನ್ನೊಬ್ಬರಿಗೆ ಸಹಾಯ ಮಾಡಲು ಯೋಚಿಸುವ ನೀವು ಸಮಯದ ಬಗ್ಗೆಯೂ ಗಮನಹರಿಸಿ. ಜಗತ್ತೆ ಶೂನ್ಯ ಎಂದು ಕಾಣುತ್ತಿರುವವರಿಗೆ ಜೀವನವನ್ನು ಬೆಳಗಿಸುವ ವ್ಯಕ್ತಿಯ ಪರಿಚಯವಾಗುವುದು.

ಕುಂಭ: ವೃತ್ತಿಯಲ್ಲಿ ಜವಾಬ್ದಾರಿ ಹೆಚ್ಚಿ ಉತ್ತಮ ಆದಾಯ ತೋರಿಬಂದು ಅಭಿವೃದ್ಧಿಗೆ ಕಾರಣವಾಗುವುದು. ವಿಶೇಷ ಅವಕಾಶಕ್ಕಾಗಿ ಅಥವಾ ಅವಿಸ್ಮರಣೀಯ ಕ್ಷಣವನ್ನು ಎದುರುನೋಡುವ ಚಡಪಡಿಕೆ ನಿಮ್ಮದಾಗಿರುತ್ತದೆ.

ಮೀನ: ವ್ಯಾಪಾರ ವಹಿವಾಟಿನಲ್ಲಿ ಚಾಕಚಕ್ಯತೆ ತೋರಿದರೆ ವ್ಯವಹಾರ ಸಾಧ್ಯ. ವಾಹನ ಮಾರಾಟಗಾರರಿಗೆ ಉದ್ಯೋಗದಲ್ಲಿ ಬಿಡುವಿಲ್ಲದ ಕಾರ್ಯ ಇರಲಿದೆ. ಶ್ರೀ ವಿಷ್ಣುಸಹಸ್ರನಾಮವನ್ನು ಪಠಿಸಿರಿ.

ಹೆತ್ತವರೊಂದಿಗೆ ಧನಲಕ್ಷ್ಮೀ ಎಂ.

ಹೆತ್ತವರೊಂದಿಗೆ ಮಧುಸೂದನ್ ರಾಜು ಎಸ್.

ಶ್ರಮಿಕರ ಮಕ್ಕಳ ಸಾಧನಾ ಸಂಭ್ರಮ

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಪುಟ್ಟ ಪಾನ್ ಶಾಪ್ ಇಟ್ಟುಕೊಂಡು ದುಡಿಯುವ ದಂಪತಿಯ ಮಗಳು, ಬಡಗಿಯೊಬ್ಬರ ಮಗ ಈ ಬಾರಿ ಎಸ್ಎಸ್ಎಲ್‌ಸಿಯಲ್ಲಿ 625ಕ್ಕೆ 625 ಅಂಕ ಗಳಿಸಿದ್ದಾರೆ.

ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಸಂಕನಹಳ್ಳಿಯ ಎಸ್. ಆರ್. ಮೋಹನ್– ವೀಣಾ ಬಿ. ದಂಪತಿ 20 ವರ್ಷಗಳ ಹಿಂದೆ ಊರು ಬಿಟ್ಟು ಬೆಂಗಳೂರಿಗೆ ಬಂದಿದ್ದರು. ಬ್ಯಾಡರಹಳ್ಳಿಯಲ್ಲಿ ಪಾನ್ ಶಾಪ್ ಇಟ್ಟುಕೊಂಡು ದುಡಿಯುತ್ತಿದ್ದಾರೆ. ಅವರ ಒಬ್ಬಳೇ ಮಗಳು ಧನಲಕ್ಷ್ಮೀ ಎಂ. 625 ಅಂಕ ಗಳಿಸಿದವಳು.

ಮಾಗಡಿ ಮುಖ್ಯರಸ್ತೆಯ ಕೆಂಪೇಗೌಡ ನಗರದ ಸೇಂಟ್ ಯಶ್ ಪಬ್ಲಿಕ್ ಹೈಸ್ಕೂಲ್‌ನಲ್ಲಿ ಓದುತ್ತಿರುವ ಧನಲಕ್ಷ್ಮೀ 'ಪ್ರಜಾವಾಣಿ'ಜೊತೆಗೆ ಸಂತಸ ಹಂಚಿಕೊಂಡಳು. 'ನಾನು ಯಾವುದೇ ಟ್ಯೂಷನ್‌ಗೆ ಹೋಗಿಲ್ಲ. ಅಪ್ಪ ಅಮ್ಮನ ಬೆಂಬಲ, ಶಿಕ್ಷಕರ ಪ್ರೋತ್ಸಾಹ, ಶಾಲೆಯಲ್ಲಿದ್ದ ಉತ್ತಮ ವಾತಾವರಣದಿಂದ ಹೆಚ್ಚು ಅಂಕ ಪಡೆಯಲು ಸಾಧ್ಯವಾಯಿತು. ಚಾರ್ಟರ್ಡ್ ಅಕೌಂಟೆಂಟ್ ಆಗಬೇಕು. ಉತ್ತಮ ಉದ್ಯೋಗ ಹಿಡಿದು ಸ್ವಂತ ಮನೆ ಕಟ್ಟಬೇಕು' ಎಂದು ಕನಸು ಹಂಚಿಕೊಂಡಳು.

ತುಮಕೂರು ಜಿಲ್ಲೆ ಮಧುಗಿರಿಯ ಶ್ರೀನಿವಾಸರಾಜು–ರಾಜಲಕ್ಷ್ಮೀ ದಂಪತಿಗೆ ಇಬ್ಬರು ಮಕ್ಕಳು. ಅವರಿಗೆ ಉತ್ತಮ ವಿದ್ಯಾಭ್ಯಾಸ ಕೊಡಿಸುವುದಕ್ಕಾಗಿಯೇ 10 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದರು. ಶ್ರೀನಿವಾಸರಾಜು ಅವರು ಮರದ ಕೆತ್ತನೆಯ ಅಂಗಡಿಯಲ್ಲಿ ಕೆಲಸ ಮಾಡುತ್ತಾ, ಬಾಡಿಗೆ ಮನೆಯಲ್ಲಿದ್ದುಕೊಂಡು ಮಕ್ಕಳಿಬ್ಬರನ್ನು ಓದಿಸುತ್ತಿದ್ದಾರೆ. ಮೊದಲ ಮಗ ನವೀನ್‌ರಾಜು ಎಂಜಿನಿಯರಿಂಗ್ ಓದುತ್ತಿದ್ದು, ಎರಡನೇ ಮಗ ಮಧುಸೂದನ್ ರಾಜು ಎಸ್. ಮಲ್ಲೇಶ್ವರ 10ನೇ ಮುಖ್ಯರಸ್ತೆಯಲ್ಲಿರುವ ಎಂಇಎಸ್ ಕಿಶೋರ ಕೇಂದ್ರ ಪ್ರೌಢಶಾಲೆಯ ವಿದ್ಯಾರ್ಥಿ.ಈ ಬಾರಿ ಎಸ್ಎಸ್ಎಲ್‌ಸಿಯಲ್ಲಿ 625 ಅಂಕ ಗಳಿಸಿದ್ದಾನೆ.

'ಪರೀಕ್ಷೆಗಿಂತ ನಾಲ್ಕು ತಿಂಗಳ ಹಿಂದೆಯೇ ವೇಳಾಪಟ್ಟಿ ತಯಾರಿಸಿಕೊಂಡು ಅದರಂತೆ ನಿತ್ಯ ಓದುತ್ತಿದ್ದೆ. ಮುಂದೆ ಏನು ಮಾಡಬೇಕು ಎಂದು ಇನ್ನೂ ನಿರ್ಧರಿಸಿಲ್ಲ. ವಾಣಿಜ್ಯ ವಿಷಯ ಆಯ್ಕೆ ಮಾಡಿಕೊಂಡು ಸಿಎ, ಎಂಬಿಎ ಮಾಡುವುದು ಇಲ್ಲವೇ ವಿಜ್ಞಾನ ಆಯ್ಕೆ ಮಾಡಿಕೊಂಡು ಎಂಜಿನಿಯರಿಂಗ್ ಮಾಡುವುದು ಸದ್ಯ ಮನಸ್ಸಿನಲ್ಲಿದೆ' ಎಂದು ಮಧುಸೂದನ್ ರಾಜು ಅಭಿಪ್ರಾಯ ಹಂಚಿಕೊಂಡಿದ್ದಾನೆ.

ಎಸ್ಎಸ್ಎಲ್‌ಸಿ: ಶೇ 100ರ ಸಾಧಕರು



1. ಧೃತಿ ಜೆ., ಸಾಹುಕಾರ್ ಚಿಕ್ಕಣ್ಣಗೌಡ ಇಂಗ್ಲಿಷ್ ಮಾಧ್ಯಮ ಪ್ರೌಢಶಾಲೆ ಕೆ.ಆರ್.ಪೇಟೆ ಮಂಡ್ಯ **2.** ಅಖೀಲ್‌ಅಹ್ಮದ್ ನದಾಫ್ , ಆಕ್ಸಫರ್ಡ್ ಪಾಟೀಲ್ಸ್ ಶಿಕ್ಷಣ ಸಂಸ್ಥೆ, ನಾಗರಬೆಟ್ಟ, ಮುದ್ದೇಬಿಹಾಳ, ವಿಜಯಪುರ ಜಿಲ್ಲೆ **3.** ಉತ್ಸವ ಪಟೇಲ್, ವಿಜಯ ಸ್ಕೂಲ್, ಹಾಸನ **4.** ಕೆ.ಬಿ.ಯಶ್ವಿತ, ಚಿರೆಕ್ ಪಬ್ಲಿಕ್ ಶಾಲೆ, ಮಧುಗಿರಿ **5.** ಮೊಹಮದ್ ಮಸ್ತೂರ್ ಆದಿಲ್, ಚೇತನ ವಿದ್ಯಾಮಂದಿರ ಶಾಲೆ, ತುಮಕೂರು **6.** ಯುಕ್ತ ಎಸ್., ಹೋಲಿ ಚೈಲ್ಡ್ ಇಂಗ್ಲಿಷ್ ಹೈಸ್ಕೂಲ್, ಬನಶಂಕರಿ **7.** ಎಚ್.ಬಿ.ನಂದನ್, ರಾಷ್ಟ್ರೀಯ ಅಕಾಡೆಮಿ ಶಾಲೆ, ಹಿರಿಯೂರು **8.** ಮೌಲ್ಯಾ ದೇವರಾಜ್, ರಾಷ್ಟ್ರೀಯ ಅಕಾಡೆಮಿ ಶಾಲೆ, ಹಿರಿಯೂರು **9.** ಸಿ.ಭಾವನಾ, ನೀಲಗಿರೇಶ್ವರ ಪ್ರೌಢಶಾಲೆ, ವಿಜಯಪುರ, ದೇವನಹಳ್ಳಿ **10.** ಎ.ಸಿ.ರಂಜಿತ, ಜಗದ್ಗುರು ಶ್ರೀಚಂದ್ರಶೇಖರನಾಥ ಸ್ವಾಮೀಜಿ ಗ್ರಾಮೀಣ ಶಾಲೆ, ಮೆಳೆಕೋಟೆ ಕ್ರಾಸ್, ದೊಡ್ಡಬಳ್ಳಾಪುರ **11.** ಆರ್.ಎನ್.ತಾನ್ಯಾ, ಭಾರತೀಯ ವಿದ್ಯಾಭವನ ಶಾಲೆ, ಮೈಸೂರು **12.** ಸ್ವಸ್ತಿ ಕಾಮತ್, ಜ್ಞಾನಸುಧಾ ಆಂಗ್ಲ ಮಾಧ್ಯಮ ಶಾಲೆ, ಕಾರ್ಕಳ **13.** ರೂಪಾ ಪಾಟೀಲ, ಸರ್ಕಾರಿ ಪ್ರೌಢಶಾಲೆ, ದೇವಲಾಪುರ, ಬೈಲಹೊಂಗಲ **14.** ಧನಲಕ್ಷ್ಮೀ ಎಂ., ಸೇಂಟ್ ಯಶ್ ಪಬ್ಲಿಕ್ ಹೈಸ್ಕೂಲ್, ಕೆಂಪೇಗೌಡನಗರ, ಬೆಂಗಳೂರು **15.** ಕೆ.ನಮನಾ, ಪ್ರಿಯದರ್ಶಿನಿ ಹೈಸ್ಕೂಲ್, ಶಿವಮೊಗ್ಗ **16.** ನಿತ್ಯಾ ಕುಲಕರ್ಣಿ, ರಾಮಕೃಷ್ಣ ಇಂಗ್ಲಿಷ್ ಮಾಧ್ಯಮ ವಸತಿಯುತ ಶಾಲೆ,ಶಿವಮೊಗ್ಗ **17.** ಎನ್.ಸಹಿಷ್ಣು, ಆದಿಚುಂಚನಗಿರಿ ಪ್ರೌಢಶಾಲೆ, ಶಿವಮೊಗ್ಗ **18.** ಎಸ್.ಧನುಷ್, ಮರಿಮಲ್ಲಪ್ಪ ಪ್ರೌಢಶಾಲೆ, ಮೈಸೂರು **19.** ಜಾಹ್ನವಿ ಎಸ್.ಎನ್., ವಿಜಯ ಭಾರತಿ ವಿದ್ಯಾಲಯ, ಗಿರಿನಗರ, ಬೆಂಗಳೂರು **20.** ಮಧುಸೂದನ್ ರಾಜು ಎಸ್., ಎಂಇಎಸ್ ಕಿಶೋರ ಕೇಂದ್ರ ಪ್ರೌಢಶಾಲೆ, ಮಲ್ಲೇಶ್ವರ **21.** ನಮಿತಾ, ಮಾತಾ ನ್ಯಾಷನಲ್ ಇಂಗ್ಲಿಷ್ ಹೈಸ್ಕೂಲ್, ಕಲ್ಯಾಣನಗರ **22.** ಶಗುಫ್ತಾ ಅಂಜುಮ್ ಸರ್ಕಾರಿ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿನಿ ಶಿರಸಿ

ಶಕ್ತಿ ಕಾಲೇಜಿನಲ್ಲಿ ಉಚಿತ ಪ್ರವೇಶಾವಕಾಶ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಶಕ್ತಿ ಪದವಿಪೂರ್ವ ಕಾಲೇಜಿನಲ್ಲಿ ರಾಜ್ಯದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶಾವಕಾಶ ಕಲ್ಪಿಸಲಾಗಿದೆ ಎಂದು ಪ್ರಧಾನ ಸಲಹೆಗಾರ ರಮೇಶ ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2025–26ನೇ ಸಾಲಿಗೆ ಪ್ರಥಮ ಪಿಯುಸಿಗೆ ದಾಖಲಾಗಲು ಇಚ್ಛಿಸುವ, ರಾಜ್ಯ ಪಠ್ಯಕ್ರಮದ ಎಸ್ಎಸ್ಎಲ್‌ಸಿಯಲ್ಲಿ ಶೇಕಡ 99ಕ್ಕಿಂತ ಹೆಚ್ಚು ಅಂಕ ಪಡೆದವರು ಈ ಸೌಲಭ್ಯಕ್ಕೆ ಅರ್ಹರು. ಆಸಕ್ತರು Shakthi.edu.in ಅಥವಾ 9686000046 ಸಂಪರ್ಕಿಸಬಹುದು ಎಂದು ಅವರು ತಿಳಿಸಿದ್ದಾರೆ.

ಆಳ್ವಾಸ್: 81 ಮಕ್ಕಳಿಗೆ 600ಕ್ಕೂ ಹೆಚ್ಚು ಅಂಕ

ಪ್ರಜಾವಾಣಿ ವಾರ್ತೆ


ಮಾನ್ಯ (622) ಕ್ಷೀರಜಾ (621) ರಿಯಾ (621) ಹರೀಶ್(621) ಪವನ್(621) ಪ್ರಜ್ಞಾ (620) ಸಿಂಧೂ (620) ಆದಿತ್ಯ (620) ಸುಪ್ರೀತಾ (620) ಸಮೀಕ್ಷಾ (620) ಚಿನ್ಮಯ್ (620)

ಮೂಡುಬಿದಿರೆ (ದಕ್ಷಿಣ ಕನ್ನಡ): ಇಲ್ಲಿನ ಆಳ್ವಾಸ್ ಶಾಲೆಯ 81 ವಿದ್ಯಾರ್ಥಿಗಳು ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ 600ಕ್ಕೂ ಹೆಚ್ಚು ಅಂಕ ಪಡೆದು ಸಾಧನೆ ಮಾಡಿದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಂಸ್ಥೆಯ ವಿದ್ಯಾರ್ಥಿಗಳಾದ ಮಾನ್ಯ (622), ಕ್ಷೀರಜಾ (621), ಹರೀಶ್ ಬಡಿಗೇರ (621), ಪವನ ಶರಣಬಸಪ್ಪ ಮೇಗೂರ (621), ರಿಯಾ ವಿದ್ಯಾಧರ ಕಮಟೆ (621), ಪ್ರಜ್ಞಾ ಶೀತಲ್ ಪಾಟೀಲ (620), ಸಮೀಕ್ಷಾ ಸಂದೀಪ್ ಸಮಾಜನ್ನವರ (620), ಸಿಂಧೂ ಶೀತಲ್ ಚೌಗಲೆ (620), ಸುಪ್ರೀತಾ ಲಕ್ಷ್ಮಣ್ ನಾಯ್ಕ್ (620), ಆದಿತ್ಯ (620), ಚಿನ್ಮಯ್ (620) ಅಂಕಗಳನ್ನು ಪಡೆದಿದ್ದಾರೆ ಎಂದರು.

91 ಮಂದಿ ಶೇ 95ಕ್ಕೂ ಅಧಿಕ, 161 ಮಂದಿ ಶೇ 90ಕ್ಕೂ ಅಧಿಕ, 211 ಮಂದಿ ಶೇ 85ಕ್ಕೂ ಅಧಿಕ ಅಂಕ ಪಡೆದಿದ್ದಾರೆ. ಇಬ್ಬರು ಐದು ವಿಷಯಗಳಲ್ಲಿ, ಆರು ಮಂದಿ ನಾಲ್ಕು ವಿಷಯಗಳಲ್ಲಿ, 12 ಮಂದಿ ಮೂರು ವಿಷಯಗಳಲ್ಲಿ, 25 ಮಂದಿ ಎರಡು ವಿಷಯಗಳಲ್ಲಿ, 46 ಮಂದಿ 1 ವಿಷಯದಲ್ಲಿ ಪೂರ್ಣ ಅಂಕ ಗಳಿಸಿದ್ದಾರೆ. ಪ್ರಥಮ ಭಾಷೆ ಕನ್ನಡದಲ್ಲಿ 14, ದ್ವಿತೀಯ ಭಾಷೆ ಕನ್ನಡದಲ್ಲಿ 15, ತೃತೀಯ ಭಾಷೆ ಕನ್ನಡದಲ್ಲಿ 7, ಪ್ರಥಮ ಭಾಷೆ ಇಂಗ್ಲಿಷ್‌ನಲ್ಲಿ ಇಬ್ಬರು, ದ್ವಿತೀಯ ಭಾಷೆ ಇಂಗ್ಲಿಷ್‌ನಲ್ಲಿ 4, ಪ್ರಥಮ ಭಾಷೆ ಸಂಸ್ಕೃತದಲ್ಲಿ 8, ತೃತೀಯ ಭಾಷೆ ಹಿಂದಿಯಲ್ಲಿ 42, ತೃತೀಯ ಭಾಷೆ ಸಂಸ್ಕೃತದಲ್ಲಿ 10, ಗಣಿತದಲ್ಲಿ 15, ಸಾಮಾನ್ಯ ವಿಜ್ಞಾನದಲ್ಲಿ 19, ಸಮಾಜ ವಿಜ್ಞಾನದಲ್ಲಿ 40 ವಿದ್ಯಾರ್ಥಿಗಳು ಶೇ 100 ಅಂಕ ಪಡೆದಿದ್ದಾರೆ ಎಂದು ಹೇಳಿದರು.

ಆಳ್ವಾಸ್ ಕನ್ನಡ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕ ಪ್ರಶಾಂತ್ ಬಿ., ಆಳ್ವಾಸ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯ ಶಿಕ್ಷಕಿ ವಿಜಯಾ ಟಿ. ಮೂರ್ತಿ, ಆಡಳಿತಾಧಿಕಾರಿ ಪ್ರೀತಂ ಕುಂದರ್, ಸಹಾಯಕ ಆಡಳಿತಾಧಿಕಾರಿ ರಾಜೇಶ್ ಕುಮಾರ್ ಶೆಟ್ಟಿ ಸುದ್ದಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ಉರ್ದು ಶಾಲೆಯ ಶಗುಫ್ತಾಗೆ ಕನ್ನಡದಲ್ಲಿ ಪೂರ್ಣಾಂಕ

ಪ್ರಜಾವಾಣಿ ವಾರ್ತೆ

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಪೂರ್ಣಾಂಕ ಪಡೆದ ಶಿರಸಿಯ ಶಗುಫ್ತಾ ಅಂಜುಮ್‌ಗೆ ತಾಯಿ ಸಾಹಿರಾಬಾನು ಸಿಹಿ ತಿನ್ನಿಸಿದರು

ಶಿರಸಿ: ನಗರದ ಸರ್ಕಾರಿ ಉರ್ದು ಪ್ರೌಢಶಾಲೆಯ ವಿದ್ಯಾರ್ಥಿನಿ, ಬಿಹಾರ ಮೂಲದ ಶಗುಫ್ತಾ ಅಂಜುಮ್ (625) ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಪೂರ್ಣಾಂಕ ಪಡೆದು, ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾಳೆ. ಮನೆಯಲ್ಲಿ ಹಿಂದಿ, ಉರ್ದು ಮಾತನಾಡುವ ಈಕೆ ಕನ್ನಡ ಭಾಷಾ ವಿಷಯದಲ್ಲೂ ಪೂರ್ಣಾಂಕ ಪಡೆದಿರುವುದು ವಿಶೇಷ.

ತಾಲ್ಲೂಕಿನ ಕುಳವೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಟಿಪ್ಪುನಗರದ ನಿವಾಸಿ ಮೌಲಾನಾ ಮಹಮ್ಮದ್ ಮಂಜರುಲ್ ಇಸ್ಲಾಂ ಮತ್ತು ಸಾಹಿರಾಬಾನು ದಂಪತಿಯ ಪುತ್ರಿ ಶಗುಫ್ತಾ, ಇಂಗ್ಲಿಷ್ ಮಾಧ್ಯಮದಲ್ಲಿ ಓದಿದ್ದಾಳೆ.

'ಶಾಲಾ ಶಿಕ್ಷಕರು ಸಾಕಷ್ಟು ಬೆಂಬಲಿಸಿದರು. ರಂಜಾನ್ ಮಾಸಾಚರಣೆ ವೇಳೆ ವಿಶೇಷ ತರಗತಿ ನಡೆಸಿ, ಮಾರ್ಗದರ್ಶನ ನೀಡಿದರು. ಕಠಿಣ ಪರಿಶ್ರಮವೇ ಸಾಧನೆಗೆ ಮೂಲ. ವೈದ್ಯೆಯಾಗುವ ಗುರಿಯಿದೆ' ಎಂದು ಶಗುಫ್ತಾ ತಿಳಿಸಿದರು.

'ಶಗುಫ್ತಾ ಸಾಧನೆ ಖುಷಿ ತಂದಿದೆ. ನಾವು ಆರ್ಥಿಕವಾಗಿ ಅಷ್ಟು ಸಬಲರಲ್ಲ. ಆಕೆಯ ಶೈಕ್ಷಣಿಕ ಜಾವಾಬ್ದಾರಿಯನ್ನು ಸರ್ಕಾರವು ನೋಡಿಕೊಂಡರೆ, ಹೆಚ್ಚು ಅನುಕೂಲ ಆಗುವುದು' ಎಂದು ಶಗುಫ್ತಾ ತಾಯಿ ಸಾಹಿರಾಬಾನು ತಿಳಿಸಿದರು.

ಮರು ಮೌಲ್ಯಮಾಪನ ಆ್ಯಪ್‌ನಲ್ಲೇ ಅರ್ಜಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ಇನ್ನು ಮುಂದೆ ಮನೆಯಲ್ಲೇ ಕುಳಿತು ಮರು ಮೌಲ್ಯಮಾಪನ ಹಾಗೂ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಬಹುದು.

ಫಲಿತಾಂಶದ ನಂತರ ವಿದ್ಯಾರ್ಥಿಗಳು ತಾವು ಕಲಿತ ಶಾಲೆಗೆ ತೆರಳಿ, ಮರು ಮೌಲ್ಯಮಾಪನ ಹಾಗೂ ಅಂಕಗಳ ಮರು ಎಣಿಕೆಗೆ ಅರ್ಜಿ ಸಲ್ಲಿಸಬೇಕಿತ್ತು. ಅತ್ಯಂತ ಕಡಿಮೆ ಸಮಯದಲ್ಲಿ ವಿದ್ಯಾರ್ಥಿಗಳು ಈ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಬೇಕಿರುವ ಕಾರಣ, ಮೊಬೈಲ್‌ನಲ್ಲೇ ಈ ಕಾರ್ಯ ಕೈಗೊಳ್ಳಲು ಅನುಕೂಲವಾಗುವಂತೆ ಶಾಲಾ ಶಿಕ್ಷಣ ಇಲಾಖೆ ಕರ್ನಾಟಕ ಒನ್ ಆ್ಯಪ್ ಮೂಲಕ ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಲು ಅವಕಾಶ ಮಾಡಿಕೊಟ್ಟಿದೆ.

ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶುಕ್ರವಾರ ಆ್ಯಪ್ ಬಿಡುಗಡೆ ಮಾಡಿದ ಕೆಲ ಗಂಟೆಗಳಲ್ಲೇ 500 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿ, ಶುಲ್ಕ ಪಾವತಿಸಿದ್ದಾರೆ.

ಶಾಸಕ ಯತ್ನಾಳರಿಗೆ ಮರು ಸವಾಲು ಹಾಕಿದ ಸಚಿವ

ಶಿವಾನಂದ ಪಾಟೀಲ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಶಿವಾನಂದ ಪಾಟೀಲ

ಬೆಂಗಳೂರು: ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಅವರು, ಬಿಜೆಪಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೂ ರಾಜೀನಾಮೆ ನೀಡುವಂತೆ ಸವಾಲು ಹಾಕಿದ್ದಾರೆ.

ಸಭಾಧ್ಯಕ್ಷ ಯು.ಟಿ.ಖಾದರ್ ಅವರನ್ನು ಶುಕ್ರವಾರ ಭೇಟಿ ಮಾಡಿದ ಶಿವಾನಂದ ಪಾಟೀಲ ಅವರು ರಾಜೀನಾಮೆ ಪತ್ರ ಸಲ್ಲಿಸಿದರು.

'ಬಸನಗೌಡ ಪಾಟೀಲ ಯತ್ನಾಳ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ನನ್ನ ವಿರುದ್ಧ ಬಸವನ ಬಾಗೇವಾಡಿ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧೆ ಮಾಡುವುದಾಗಿ ಸವಾಲು ಹಾಕಿದ್ದಾರೆ. ನಾನು ಆ ಸವಾಲನ್ನು ಸ್ವೀಕರಿಸಿ, ಅವರ ವಿರುದ್ಧ ಸ್ಪರ್ಧಿಸಲು ತೀರ್ಮಾನಿಸಿದ್ದೇನೆ. ಆದ ಕಾರಣ ನಾನು ಬಸವನ ಬಾಗೇವಾಡಿ ವಿಧಾನಸಭಾ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುತ್ತಿದ್ದೇನೆ. ಅದೇ ರೀತಿ ಬಸನಗೌಡ ಪಾಟೀಲ ಯತ್ನಾಳ ಅವರೂ ವಿಜಯಪುರ ನಗರ ಕ್ಷೇತ್ರದ ಶಾಸಕ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು. ಅವರ ರಾಜೀನಾಮೆ ಅಂಗೀಕಾರವಾದರೆ ಮಾತ್ರ ನನ್ನ ರಾಜೀನಾಮೆಯನ್ನು ಅಂಗೀಕರಿಸಬೇಕು' ಎಂದು ಶಿವಾನಂದ ಪಾಟೀಲ ಅವರು ತಮ್ಮ ರಾಜೀನಾಮೆಗೆ ಕಾರಣ ನೀಡಿದ್ದಾರೆ.

ಸಭಾಧ್ಯಕ್ಷರ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಿವಾನಂದ ಪಾಟೀಲ ಅವರು, 'ಯತ್ನಾಳ ಅವರು ನನ್ನ ಬಗ್ಗೆ ಮತ್ತು ನನ್ನ ತಂದೆಯವರ ಬಗ್ಗೆ ವೈಯಕ್ತಿಕವಾಗಿ ನಿಂದನೆ ಮಾಡಿದ್ದಾರೆ. ಇಂತಹ ಮಾತುಗಳನ್ನು ಸಹಿಸುವುದಕ್ಕೆ ಆಗುವುದಿಲ್ಲ. ಆದ್ದರಿಂದ ರಾಜೀನಾಮೆ ನೀಡುವ ಮೂಲಕ ಅವರ ಸವಾಲು ಸ್ವೀಕರಿಸಿದ್ದೇನೆ. ಯತ್ನಾಳ ಅವರೂ ರಾಜೀನಾಮೆ ನೀಡಲಿ. ನಾನು ವಿಜಯಪುರದಿಂದ ಚುನಾವಣೆ ಎದುರಿಸಲು ಸಿದ್ಧನಿದ್ದೇನೆ. ಇಲ್ಲವೇ ಅವರೇ ಬಸವನ ಬಾಗೇವಾಡಿಯಿಂದ ಸ್ಪರ್ಧಿಸಲಿ ಎಂದು ಸವಾಲು ಹಾಕಿದರು.

'ರಾಜೀನಾಮೆ ನೀಡುವಂತೆ ಶುಕ್ರವಾರದವರೆಗೆ ಗಡುವು ನೀಡಿದ್ದರು. ಅದರಂತೆ ನಾನು ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಿದ್ದೇನೆ. ಅವರು ರಾಜೀನಾಮೆ ನೀಡುವುದಿದ್ದರೆ, ಅವರಿಗಿಂತ ಒಂದು ದಿನ ಮೊದಲೇ ನನ್ನ ರಾಜೀನಾಮೆ ಸ್ವೀಕರಿಸುವಂತೆ ಸಭಾಧ್ಯಕ್ಷರಿಗೆ ಮನವಿ ಮಾಡಿದ್ದೇನೆ' ಎಂದು ಶಿವಾನಂದ ಪಾಟೀಲ ಹೇಳಿದರು.

'ರಾಜೀನಾಮೆ ನೀಡುವುದು ನನ್ನ ವೈಯಕ್ತಿಕ ನಿರ್ಧಾರ. ಈ ಬಗ್ಗೆ ಮುಖ್ಯಮಂತ್ರಿ ಆಗಲಿ, ಪಕ್ಷದ ಜತೆಗಾಗಲಿ ಚರ್ಚಿಸಿಲ್ಲ. ಯತ್ನಾಳ ಅವರಿಗೆ ರಾಜೀನಾಮೆಗೆ ಗಡುವು ನೀಡುವುದಿಲ್ಲ' ಎಂದರು.

ಅಂಗೀಕಾರ ಅಸಾಧ್ಯ: ಖಾದರ್

'ಶಿವಾನಂದ ಪಾಟೀಲರು ತಮ್ಮ ಶಾಸಕ ಸ್ಥಾನಕ್ಕೆ ನೀಡಿರುವ ಷರತ್ತುಬದ್ಧ ರಾಜೀನಾಮೆಯನ್ನು ಅಂಗೀಕರಿಸಲು ಸಾಧ್ಯವಿಲ್ಲ ಎಂಬುದನ್ನು ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ. ಅವರ ರಾಜೀನಾಮೆಯನ್ನು ಅಂಗೀಕರಿಸಿಲ್ಲ' ಎಂದು ವಿಧಾನ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನನ್ನನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸಿದ್ದ ಶಿವಾನಂದ ಪಾಟೀಲರು, ಯತ್ನಾಳ ಅವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರೆ ಮಾತ್ರ, ತಮ್ಮ ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಿದ್ದರು. ಆದರೆ ಯತ್ನಾಳ ಅವರು ರಾಜೀನಾಮೆ ಸಲ್ಲಿಸುವ ಸಂಬಂಧ ನನ್ನನ್ನು ಭೇಟಿಯಾಗಿಲ್ಲ ಹಾಗೂ ವಿಧಾನಸಭಾ ಸಚಿವಾಲಯಕ್ಕೂ ಅವರು ರಾಜೀನಾಮೆ ಪತ್ರ ಸಲ್ಲಿಸಿಲ್ಲ' ಎಂದರು.

'ವಿಧಾನಸಭೆಯ ನಿಯಮಗಳ ಪ್ರಕಾರ ಶಿವಾನಂದ ಪಾಟೀಲ ಅವರ ಷರತ್ತುಬದ್ಧ ರಾಜೀನಾಮೆಯನ್ನು ಅಂಗೀಕರಿಸಲು ಸಾಧ್ಯವಿಲ್ಲ. ಹೀಗಾಗಿ ಅದನ್ನು ಅಂಗೀಕರಿಸಿಲ್ಲ' ಎಂದು ತಿಳಿಸಿದರು.

ಎಸ್ಎಸ್ಎಲ್‌ಸಿ 22 ವಿದ್ಯಾರ್ಥಿಗಳಿಗೆ 625/625

ಒಂದನೇ ಪುಟದಿಂದ...

ಕನ್ನಡ ಭಾಷೆಯಲ್ಲಿ 9,573 ವಿದ್ಯಾರ್ಥಿಗಳು 125ಕ್ಕೆ 125 ಅಂಕ, ದ್ವಿತೀಯ ಭಾಷೆಯಲ್ಲಿ 7,057, ತೃತೀಯ ಭಾಷೆಯಲ್ಲಿ 17,909, ಗಣಿತದಲ್ಲಿ 3,252, ವಿಜ್ಞಾನದಲ್ಲಿ 2,451 ಸಮಾಜ ವಿಜ್ಞಾನದಲ್ಲಿ 7,974 ವಿದ್ಯಾರ್ಥಿಗಳು 100ಕ್ಕೆ 100 ಅಂಕ ಪಡೆದಿದ್ದಾರೆ.

ಬಾಲಕಿಯರೇ ಮೇಲುಗೈ: ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆ ಬರೆದಿದ್ದ 4.04 ಲಕ್ಷ ಬಾಲಕಿಯರಲ್ಲಿ 2.96 ಲಕ್ಷ (ಶೇ 74) ತೇರ್ಗಡೆಯಾಗಿದ್ದಾರೆ. 3.90 ಲಕ್ಷ ವಿದ್ಯಾರ್ಥಿಗಳಲ್ಲಿ 2.26 ಲಕ್ಷ (ಶೇ 58.07) ತೇರ್ಗಡೆಯಾಗಿದ್ದಾರೆ.

ನಗರ-ಗ್ರಾಮೀಣ ಸಮಬಲ: ನಗರ ಪ್ರದೇಶ ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ಫಲಿತಾಂಶದಲ್ಲಿ ಹೆಚ್ಚು ಕಡಿಮೆ ಸಮಬಲ ಸಾಧಿಸಿದ್ದಾರೆ. ನಗರ ಪ್ರದೇಶದ 3.35 ಲಕ್ಷ ವಿದ್ಯಾರ್ಥಿಗಳಲ್ಲಿ 2.24 ಲಕ್ಷ (67.05) ಹಾಗೂ 4.55 ಲಕ್ಷ ಗ್ರಾಮೀಣ ವಿದ್ಯಾರ್ಥಿಗಳಲ್ಲಿ 2.98 ಲಕ್ಷ (ಶೇ 65.47) ಉತ್ತೀರ್ಣರಾಗಿದ್ದಾರೆ. ಗ್ರಾಮೀಣರಿಗಿಂತ ನಗರದ ವಿದ್ಯಾರ್ಥಿಗಳು ಶೇ 1.58ರಷ್ಟು ಹೆಚ್ಚು ಯಶಸ್ಸು ಕಂಡಿದ್ದಾರೆ.

ಯಾರೂ ಅನುತ್ತೀರ್ಣರಲ್ಲ

ಎಸ್ಎಸ್ಎಲ್‌ಸಿ ಪರೀಕ್ಷೆ–1 ಮತ್ತು ಪರೀಕ್ಷೆ–2ರಲ್ಲಿ ಅನುತ್ತೀರ್ಣರಾದವರನ್ನು ಫಲಿತಾಂಶ ಪೂರ್ಣಗೊಳ್ಳದ ವಿದ್ಯಾರ್ಥಿಗಳು ಎಂದು ಪರಿಗಣಿಸಲಾಗುತ್ತದೆ. ಎಸ್ಎಸ್ಎಲ್‌ಸಿ ಮೂರು ವಾರ್ಷಿಕ ಪರೀಕ್ಷೆಗಳನ್ನು ಬರೆಯಲು ವಿದ್ಯಾರ್ಥಿಗಳಿಗೆ ಅವಕಾಶ ಇರುವ ಕಾರಣ, ಅನುತ್ತೀರ್ಣರಾದ 3.17 ಲಕ್ಷ ವಿದ್ಯಾರ್ಥಿಗಳು ಹಾಗೂ ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರಿಗೆ ಮೂರು ಪರೀಕ್ಷೆಗಳ ನಂತರವೇ ಅಂಕಪಟ್ಟಿ ಪಡೆಯಲು ಅವಕಾಶ ನೀಡಲಾಗಿದೆ.

ಪ್ರವರ್ಗವಾರು ಫಲಿತಾಂಶ

ಪ್ರವರ್ಗ	ಫಲಿತಾಂಶ (ಶೇಕಡವಾರು)
ಪರಿಶಿಷ್ಟ ಜಾತಿ	59.11
ಪರಿಶಿಷ್ಟ ಪಂಗಡ	58.4
ಪ್ರವರ್ಗ–1	63.01
ಪ್ರವರ್ಗ 2 ಎ	70.86
ಪ್ರವರ್ಗ 2 ಬಿ	57.27
ಪ್ರವರ್ಗ 3 ಎ	78.97
ಪ್ರವರ್ಗ 3 ಬಿ	73.59
ಇತರೆ	78.78

ಅಂಕ	ವಿದ್ಯಾರ್ಥಿಗಳ ಸಂಖ್ಯೆ
625	22
624	65
623	108
622	189
621	259
620	327

ಸರ್ಕಾರಿ ಶಾಲೆ	ಅನುದಾನಿತ	ಖಾಸಗಿ
62.07%	58.97%	75.59%

'ಜಾತಿ ಗುರುತಿಸಿಕೊಳ್ಳದೇ ಮೀಸಲು ಸೌಲಭ್ಯ ಸಿಗದು'

ಒಳಮೀಸಲಾತಿ ಸಮೀಕ್ಷೆ: ನಾಗಮೋಹನದಾಸ್ ಜತೆ ಬಿಜೆಪಿ ನಿಯೋಗ ಚರ್ಚೆ, ಮನವಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿಗಾಗಿ ಇದೇ 5 ರಿಂದ ಆರಂಭವಾಗುವ ಪರಿಶಿಷ್ಟ ಜಾತಿಗಳ ಸಮೀಕ್ಷೆಗೆ ಸಂಬಂಧಿಸಿದಂತೆ ಚಿತ್ರದುರ್ಗ ಸಂಸದ ಗೋವಿಂದ ಕಾರಜೋಳ ಮತ್ತು ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ ನೇತೃತ್ವದ ನಿಯೋಗವು ನ್ಯಾಯಮೂರ್ತಿ ಎಚ್. ಎನ್. ನಾಗಮೋಹನದಾಸ್ ಅವರನ್ನು ಶುಕ್ರವಾರ ಭೇಟಿ ಮಾಡಿ ಚರ್ಚೆ ನಡೆಸಿತು.

ಈ ಸಂದರ್ಭದಲ್ಲಿ ನಿಯೋಗ ಕೆಲವು ಸಂದೇಹಗಳಿಗೆ ಸ್ಪಷ್ಟೀಕರಣವನ್ನು ಬಯಸಿತು ಮತ್ತು ಕೆಲ ಸಲಹೆ ನೀಡಿತು ಎಂದು ಬಿಜೆಪಿ ಪ್ರಕಟಣೆ ತಿಳಿಸಿದೆ.

ನ್ಯಾಯಮೂರ್ತಿ ನಾಗಮೋಹನದಾಸ್ ಅವರಿಗೆ ಸಂಸದ ಗೋವಿಂದ ಕಾರಜೋಳ ಮನವಿ ಅರ್ಪಿಸಿದರು. ಮುಖಂಡ ಎ.ನಾರಾಯಣಸ್ವಾಮಿ, ಇತರರು ಇದ್ದರು

'ನನಗೆ ಜಾತಿ ಗೊತ್ತಿಲ್ಲ' ಎಂಬ ಕಲಂ ಉದ್ದೇಶವೇನು? ಜಾತಿ ಗುರುತಿಸಿಕೊಳ್ಳಲು ಬಯಸದ ಜನರಸಂಖ್ಯೆ ಲಕ್ಷಗಟ್ಟಲೆ ಆದಾಗ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ, 'ಜಾತಿ ಗುರುತಿಸಿಕೊಳ್ಳಲು ಬಯಸದವರೂ ಇದ್ದಾರೆ. ಅದಕ್ಕಾಗಿ ಈ ಕಲಂ ಸೇರಿಸಲಾಗಿದೆ. ಜಾತಿ ಗುರುತಿಕೊಳ್ಳದೇ ಇದ್ದರೆ ಅವರಿಗೆ ಮಿಸಲಾತಿ ಸೌಲಭ್ಯ ಸಿಗುವುದಿಲ್ಲ' ಎಂದು ನಾಗಮೋಹನದಾಸ್ ಸ್ಪಷ್ಟಪಡಿಸಿದರು.

'ಪರಿಶಿಷ್ಟ ಜಾತಿಯ 101 ಜಾತಿಗಳ ಪಟ್ಟಿಯಲ್ಲಿಲ್ಲದ ಸಣ್ಣ ಪುಟ್ಟ ಜಾತಿಗಳಿವೆ. ಅವುಗಳಲ್ಲಿ ಕೆಲವರು ಆದಿ ಕರ್ನಾಟಕ ಅಥವಾ ಆದಿ ದ್ರಾವಿಡ ಎಂದು ಬರೆಸುತ್ತಾರೆ, ಜಾತಿ ಹೆಸರು ಬರೆಸುವುದಿಲ್ಲ. ಕರಾವಳಿ ಭಾಗದಲ್ಲಿ 'ಮನ್ಸ' ಎಂಬ ಜಾತಿಯವರು ಇದ್ದಾರೆ. ಅವರು ಆದಿ ದ್ರಾವಿಡ ಎಂದು ಬರೆಸುತ್ತಾರೆ. ಆದರೆ, 'ಮನ್ಸ' ಜಾತಿ 101 ಜಾತಿಗಳ ಪಟ್ಟಿಯಲ್ಲಿ ಇಲ್ಲ. ಇಂತಹ ವರ್ಗವನ್ನು ಎಲ್ಲಿಗೆ ಸೇರಿಸುತ್ತೀರಿ' ಎಂಬ ಪ್ರಶ್ನೆಗೆ "ಜಾತಿ ಇಲ್ಲದ ವರ್ಗ' ವಿಭಾಗಕ್ಕೆ ಸೇರಿಸಲಾಗುತ್ತದೆ' ಎಂದರು.

ಮತಾಂತರಗೊಂಡ ದಲಿತರ ಜಾತಿ ಗುರುತಿಸುವಿಕೆ, ಅನ್ಯ ಭಾಷಿಕ ದಲಿತರ ಗುರುತಿಸುವಿಕೆ, ಕೊಳೆಗೇರಿಗಳಲ್ಲಿ, ಅಲೆಮಾರಿಗಳ ಗುರುತಿಸುವಿಕೆ ಬಗ್ಗೆಯೂ ನಿಯೋಗ ಚರ್ಚಿಸಿತು. 'ನನಗೆ ಜಾತಿ ಗೊತ್ತಿಲ್ಲ' ಎಂಬ ಕಲಂ ತೆಗೆಯಲು ಕೋರಿ ಮನವಿ ಪತ್ರ ಸಲ್ಲಿಸಲಾಯಿತು.

ನಿಯೋಗದಲ್ಲಿ ಬಿಜೆಪಿ ವಕ್ತಾರ ವೆಂಕಟೇಶ್ ದೊಡ್ಡೇರಿ, ಸಾಮಾಜಿಕ ಕಾರ್ಯಕರ್ತ ವಾದಿರಾಜ್, ಎಂಆರ್‌ಪಿಎಸ್‌ನ ಪ್ರಧಾನ ಕಾರ್ಯದರ್ಶಿ ದೇವರಾಜ್, ಬಾಬು, ಸತ್ಯೇಂದ್ರ ಇದ್ದರು.

ಮದ್ಯಪಾನ ನಿಲ್ಲಿಸಲಾಗದು, ಕಡಿಮೆ ಮಾಡಿಸಬಹುದು: ಸಿ.ಎಂ

'ಕುಡಿತ ತಗ್ಗಿಸಲು ಮದ್ಯದ ದರ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಮಂಡ್ಯ: 'ಕುಡಿಯುವುದನ್ನು ಕಡಿಮೆ ಮಾಡಲೆಂದು ಮದ್ಯದ ದರವನ್ನು ಜಾಸ್ತಿ ಮಾಡುತ್ತಿದ್ದೇವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ಸಮರ್ಥಿಸಿಕೊಂಡರು.

ತೂಬಿನಕೆರೆ ಹೆಲಿಪ್ಯಾಡ್‌ನಲ್ಲಿ ಪತ್ರಕರ್ತರು ಕೇಳಿದ ಪ್ರಶ್ನೆಗೆ 'ಮದ್ಯಪಾನ ಸಂಯಮ ಮಂಡಳಿ ಇದೆ ಗೊತ್ತಾ? ಕುಡಿಯುವುದನ್ನು ಪೂರ್ಣ ನಿಲ್ಲಿಸಲಾಗುವುದಿಲ್ಲ, ಕಡಿಮೆ ಮಾಡಿಸಬಹುದು. ಅದಕ್ಕಾಗಿ ಸ್ವಲ್ಪ ಬೆಲೆ ಜಾಸ್ತಿ ಇರಲಿ ಬಿಡಿ' ಎಂದು ನಗುತ್ತಾ ಉತ್ತರಿಸಿದರು.

'ಬೆಲೆ ಹೆಚ್ಚಳದ ಮೂಲಕ ಕುಡಿತದ ಪ್ರಮಾಣ ಕಡಿಮೆ ಮಾಡುವುದೇ ನಮ್ಮ ಉದ್ದೇಶ' ಎಂದರು.

'ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ತರಲಿ': 'ಮೀಸಲಾತಿಯಲ್ಲಿ ಶೇ 50ರಷ್ಟು ಗರಿಷ್ಠ ಮಿತಿ ತೆಗೆಯಬೇಕು. ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ತರಬೇಕು ಎಂದು ಪ್ರಧಾನಿಯನ್ನು ಒತ್ತಾಯಿಸುತ್ತೇನೆ' ಎಂದು ಹೇಳಿದರು.

'ನ್ಯಾಯಮೂರ್ತಿ ರೋಹಿಣಿ ಸಮಿತಿಯ ಶಿಫಾರಸುಗಳ ಜಾರಿ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆಯನ್ನೂ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಶ್ರೀರಂಗಪಟ್ಟಣದ ಅಲ್ಲಾಪಟ್ಟಣದ ಅನ್ನದಾನೇಶ್ವರಸ್ವಾಮಿ ದೇವಸ್ಥಾನದ ಪುನರ್ ನಿರ್ಮಾಣ ಮತ್ತು ವಿಗ್ರಹಗಳ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ನೆರವೇರಿಸಿದರು. ಶಾಸಕರಾದ ರಮೇಶ ಬಂಡಿಸಿದ್ದೇಗೌಡ, ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವ ಎನ್.ಚಲುವರಾಯಸ್ವಾಮಿ, ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ಉಪಸ್ಥಿತರಿದ್ದರು

ಲಾವಣಿ ಹಾಡಿದ ಸಿದ್ದರಾಮಯ್ಯ

ಶ್ರೀರಂಗಪಟ್ಟಣ: 'ಅಲ್ಲಾ ಪಟ್ಟಣದಿಂದ ಮೆಲ್ಲ ಮೆಲ್ಲನೇ ಬಂದೆ, ಅನ್ನದಾನೇಶ್ವರಾ...' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಮನೆ ದೇವರ ಕುರಿತಾದ ಲಾವಣಿಯ ಸಾಲುಗಳನ್ನು ಹಾಡಿ ನೆರೆದಿದ್ದವರನ್ನು ರಂಜಿಸಿದರು.

ಅಲ್ಲಾಪಟ್ಟಣದ ಅನ್ನದಾನೇಶ್ವರ ಸ್ವಾಮಿ ದೇವಸ್ಥಾನ ಪುನರ್ ನಿರ್ಮಾಣ, ವಿಗ್ರಹಗಳ ಸ್ಥಾಪನೆ ಹಾಗೂ ಗೋಪುರ ಕುಂಭಾಭಿಷೇಕ ನೆರವೇರಿಸಿ ಮಾತನಾಡುವ ವೇಳೆ ತಾವು ಬಾಲ್ಯದಲ್ಲಿ ಹಾಡುತ್ತಿದ್ದುದು ಹಾಗೂ ವೀರ ಕುಣಿತ ಮಾಡುತ್ತಿದ್ದುದ್ದನ್ನು ಉಲ್ಲೇಖಿಸಿ ಲಾವಣಿ ಹಾಡಿದರು.

'ಭೋವಿಯೆಂದೇ ನಮೂದಿಸಿ'

ಬೆಂಗಳೂರು: 'ಭೋವಿ ಜನಾಂಗವು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ತುಂಬಾ ಹಿಂದುಳಿದಿದೆ. ಸಂಖ್ಯೆಯ ದೃಷ್ಟಿಯಿಂದ ಸಮುದಾಯದವರು ಕೇಂದ್ರ ಸರ್ಕಾರ ನಡೆಸಲಿರುವ ಜಾತಿ ಜನಗಣತಿಯಲ್ಲಿ ಭೋವಿ ಎಂದೇ ನಮೂದಿಸಬೇಕು. ವಡ್ಡ ಎಂದು ನಮೂದಿಸಬಾರದು' ಎದು ಭೋವಿ ಜನಾಂಗ ಒಕ್ಕೂಟ ರಾಜ್ಯ ಸಮಿತಿ ಸಮುದಾಯದವರಿಗೆ ಮನವಿ ಮಾಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಕುಮಾರ್, 'ಭೋವಿ ಜನಾಂಗಕ್ಕೆ ಸೇರಿದ ಪ್ರತಿಯೊಬ್ಬರೂ ಜಾತಿ ಜನಗಣತಿಯಲ್ಲಿ ಭಾಗವಹಿಸಬೇಕು. ಕುಟುಂಬದ ಎಲ್ಲ ಸದಸ್ಯರ ವಿವರವನ್ನು ನೀಡಬೇಕು. ಜಾತಿ ಜನಗಣತಿ ನಡೆಯುವಾಗ ಊರುಗಳನ್ನು ತೊರೆಯಬಾರದು' ಎಂದರು.

'ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಭೋವಿ ಸೇರಿ ವಿವಿಧ ಸಮುದಾಯಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಒಳ ಮೀಸಲಾತಿ ಹಂಚಿಕೆ ಮಾಡಲಾಗುತ್ತದೆ. ಹೀಗಾಗಿ, ಸರಿಯಾದ ಮಾಹಿತಿ ಒದಗಿಸಬೇಕು' ಎಂದರು.

'ಮೊದಲು ಸಮಾನತೆ ತಂದವರು ಅಂಬೇಡ್ಕರ್‌ರಲ್ಲ, ಶಂಕರಾಚಾರ್ಯರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: '1,300 ವರ್ಷಗಳ ಹಿಂದೆಯೇ ಶಂಕರಾಚಾರ್ಯರು ಸಮಾನತೆಯನ್ನು ಪ್ರತಿಪಾದಿಸಿದ್ದರು. ಇನ್ನು ಇಪ್ಪತ್ತು ವರ್ಷಗಳ ಬಳಿಕವಾದರೂ ಸಮಾನತೆ ತಂದವರು ಯಾರು ಎಂದು ಕೇಳಿದಾಗ ಅಂಬೇಡ್ಕರ್ ಬದಲು ಶಂಕರಾಚಾರ್ಯರ ಹೆಸರು ಹೇಳುವಂತಾಗಬೇಕು' ಎಂದುಹೈಕೋರ್ಟ್‌ನಿವೃತ್ತನ್ಯಾಯಮೂರ್ತಿ ಎನ್. ಕುಮಾರ್ ತಿಳಿಸಿದರು.

ಬಬ್ಬೂರುಕಮ್ಮೆ ಸೇವಾ ಸಮಿತಿ ಶುಕ್ರವಾರ ಹಮ್ಮಿಕೊಂಡಿದ್ದ ಶಂಕರಾಚಾರ್ಯ ಜಯಂತಿ, ವಿಶ್ವ ವಿಪ್ರತ್ರಯೀ ಪರಿಷತ್ ನೀಡುವ 'ಶಂಕರ ಪ್ರಶಸ್ತಿ' ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಂಬೇಡ್ಕರ್ ಸಮಾನತೆಯನ್ನು ತಂದರು ಎಂದು ಹಾದಿ ಬೀದಿಯಲ್ಲಿರುವವರೆಲ್ಲ ಮಾತನಾಡುತ್ತಿದ್ದಾರೆ. ಅಂಬೇಡ್ಕರ್ ಇಲ್ಲದೇ ಇರುತ್ತಿದ್ದರೆ ಸಮಾನತೆ ಇರುತ್ತಿರಲಿಲ್ಲ ಎಂದು ಹೇಳುವವರು ಜಾಸ್ತಿಯಾಗಿದ್ದಾರೆ. ಅಮೆರಿಕ, ಇಂಗ್ಲೆಂಡ್‌ನಿಂದ ಸಮಾನತೆಯನ್ನು ತರಲಾಯಿತು ಎಂದು ಹೇಳುವ ಬುದ್ಧಿವಂತರು ಇನ್ನೊಂದು ಕಡೆ ಇದ್ದಾರೆ. ಫ್ರೆಂಚ್ ಕ್ರಾಂತಿಯಿಂದ ಸಮಾನತೆ ಬಂತು ಎಂದೂ ಹೇಳುವವರಿದ್ದಾರೆ. ಸಾವಿರ ವರ್ಷಗಳ ಹಿಂದೆಯೇ ಸಮಾನತೆ ಸಾರಿದ್ದ ಶಂಕರಾಚಾರ್ಯರ ತತ್ವಗಳೇ ನಮಗೆ ಗೊತ್ತಿಲ್ಲ' ಎಂದರು.

'ಶಂಕರಾಚಾರ್ಯರ ತತ್ವಗಳನ್ನು ಪಾಲನೆ ಮಾಡಿದ್ದರೆ ಇಂಥ ದುಃಸ್ಥಿತಿ ನಮಗೆ ಬರುತ್ತಿರಲಿಲ್ಲ. ದೇಶವೂ ಹಿಂದುಳಿಯುತ್ತಿರಲಿಲ್ಲ. ಈಗಲೂ ಕಾಲ ಮಿಂಚಿಲ್ಲ. ಗುರುಗಳು ಪ್ರತಿಪಾದಿಸಿದ ಸಮಾನತೆಯನ್ನು ಅನುಷ್ಠಾನಕ್ಕೆ ತರಬೇಕು' ಎಂದು ಹೇಳಿದರು.

'ನಾವು ಒಪ್ಪದಿದ್ದರೂ ಜಗತ್ತು ಶಂಕರಾಚಾರ್ಯರ ಅದ್ವೈತ ತತ್ವವನ್ನು ಒಪ್ಪಿಕೊಂಡಿದೆ. ಅತಿ ಬುದ್ಧಿವಂತಿಕೆ ಮತ್ತು ಬೂಟಾಟಿಕೆಯಿಂದಾಗಿ ಬ್ರಾಹ್ಮಣರು ಶ್ರದ್ಧೆಯನ್ನು ಬಿಟ್ಟಿದ್ದಾರೆ' ಎಂದು ಬೇಸರ ವ್ಯಕ್ತಪಡಿಸಿದರು.

ಶಂಕರ ಪ್ರಶಸ್ತಿ ಸ್ವೀಕರಿಸಿದ ಪ್ರದೀಪ ಶರ್ಮ ಮಾತನಾಡಿ, 'ವೈದಿಕರಿಗೆ ಹಣ, ಮನೆ, ಆಶ್ರಯ ಎಲ್ಲವೂ ಸಮಾಜದಲ್ಲಿ ದೊರೆಯುತ್ತಿದೆ. ಆದರೆ, ಮದುವೆಯಾಗಲು ಹೆಣ್ಣು ಸಿಗುತ್ತಿಲ್ಲ. ಪುರೋಹಿತರೇ ತಮ್ಮ ಹೆಣ್ಣು ಮಕ್ಕಳನ್ನು ಪೌರೋಹಿತ್ಯ ಮಾಡುವವರಿಗೆ ಕೊಡುತ್ತಿಲ್ಲ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೆ ವೈದಿಕರೇ ಇಲ್ಲದಂತಾಗಲಿದೆ' ಎಂದರು.

ಶಂಕರ ಪ್ರಶಸ್ತಿ ಸ್ವೀಕರಿಸಿದ ಗಿರೀಶ್ ಜೋಯಿಸ್ ಮಾತನಾಡಿ, 'ನಮ್ಮ ಸಂಸ್ಕೃತಿಯನ್ನು ನಾವೇ ಮರೆಯುತ್ತಿದ್ದೇವೆ. ಮಕ್ಕಳ ಉನ್ನತ ವಿದ್ಯಾಭ್ಯಾಸ, ಉನ್ನತ ಉದ್ಯೋಗಕ್ಕಾಗಿ ಬ್ರಾಹ್ಮಣರು ವಲಸೆ ಹೋಗುತ್ತಿದ್ದಾರೆ. ಊರುಗಳಲ್ಲಿ ಬ್ರಾಹ್ಮಣರೇ ಇಲ್ಲದಂತಾಗಿದೆ' ಎಂದರು.

'ಪ್ರಜಾವಾಣಿ'ಯ ಮುಖ್ಯ ಉಪ ಸಂಪಾದಕ ಎಸ್. ಸೂರ್ಯಪ್ರಕಾಶ್ ಪಂಡಿತ್ ಶಂಕರ ಸಂದೇಶದ ಕುರಿತು ಮಾತನಾಡಿದರು. ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಎಸ್. ರಘುನಾಥ್, ಬಬ್ಬೂರುಕಮ್ಮೆ ಸೇವಾ ಸಮಿತಿ ಅಧ್ಯಕ್ಷ ಎ.ವಿ. ಪ್ರಸನ್ನ, ಕಾರ್ಯದರ್ಶಿ ಎನ್. ಸತ್ಯಪ್ರಕಾಶ್ ಉಪಸ್ಥಿತರಿದ್ದರು.

ಮದುವೆ ಮನೆಯಿಂದ ಹೊರಟವ ಹೆಣವಾಗಿ ಬಂದ: ಮಗನನ್ನು ಕಳೆದುಕೊಂಡ ಮೋಹನ್ ಶೆಟ್ಟಿ ಅಳಲು

‘ಎಲ್ಲರಂತೆ ಬದುಕುತ್ತಾನೆಂಬುದು ಈಡೇರಲಿಲ್ಲ’

● ಪ್ರವೀಣ್ ಕುಮಾರ್ ಪಿ.ವಿ.

ಕಾರಿಂಜ (ದಕ್ಷಿಣ ಕನ್ನಡ): ಕ್ಯಾನ್ಸರ್ ಪೀಡಿತ ತಾಯಿ, ವಯಸ್ಸಾದ ತಂದೆ ತಲೆ ಮೇಲೆ ಕೈ ಹೊತ್ತು ಕುಳಿತಿದ್ದರು. ಕಣ್ಣೆದುರೇ ಬೆಳೆದ ಮಗನ ಪಾರ್ಥಿವ ಶರೀರವು ಮೈಮೇಲೆ ಗಂಧದ ಮಾಲೆಗಳನ್ನು ಹೊದ್ದುಕೊಂಡು ಮನೆಯಂಗಳಕ್ಕೆ ಬಂದಾಗ ಈ ಹಿರಿಯ ಜೀವಗಳಿಗೆ ಹಿಡಿದಿಟ್ಟುಕೊಂಡ ನೋವನ್ನು ತಡೆಯಲಾಗಲಿಲ್ಲ. ಮನದಲ್ಲಿ ಮಡುಗಟ್ಟಿದ ದುಃಖ ಕಣ್ಣೀರ ಧಾರೆಯಾಗಿ ಹರಿಯಿತು.

ಮಗನ ಬದುಕಿನಲ್ಲಿ ಹಿಂದುತ್ವವಾದಿ ಚಟುವಟಿಕೆಯ ಜೊತೆಗೆ ಅಪರಾಧಿ ಚಟುವಟಿಕೆ ಬೆಸದುಕೊಂಡಿದ್ದು ತಂದೆ ತಾಯಿಗೆ ಅರಿವಿರಲಿಲ್ಲ ಎಂದಲ್ಲ. ತಮ್ಮ ಮಗನೂ ಎಲ್ಲರಂತೆ ನಿರಾಳವಾಗಿ ಬದುಕಬೇಕು ಎಂಬ ಹಂಬಲ ಹೊತ್ತ ತಂದೆತಾಯಿಯ ಕನಸನ್ನು ಈ ಘಟನೆ ನುಚ್ಚುನೂರು ಮಾಡಿದೆ.

‘ಬೆಳ್ತಂಗಡಿಯಲ್ಲಿ ನನ್ನ ತಮ್ಮನ ಮಗಳ ಮದುವೆಯಲ್ಲಿ ಓಡಾಡಿಕೊಂಡು ಎಲ್ಲ ವ್ಯವಸ್ಥೆ ಮಾಡಿದ್ದ. ಅಲ್ಲಿ ಎರಡು ದಿನ ಇದ್ದು ಮದುವೆ ಕಾರ್ಯ ಮುಗಿಸಿಕೊಂಡು ಹೋಗಿದ್ದ. ಇವತ್ತು ಇಲ್ಲೇ ಇರು ಎಂದರೂ ಕೇಳಲಿಲ್ಲ. ಏ.30ಕ್ಕೆ ಅವನನ್ನು ಕೊನೆ ಸಲ ನೋಡಿದ್ದೆ’ ಎಂದು ಸುಹಾಸ್ ಶೆಟ್ಟಿ ಅವರ ತಂದೆ ಮೋಹನ ಶೆಟ್ಟಿ ತಿಳಿಸಿದರು.

ಸುಹಾಸ್ ಶೆಟ್ಟಿ ಪಾರ್ಥಿವ ಶರೀರವನ್ನು ಕಂಡ ಅವರ ತಂದೆ ಮೋಹನ್ ಬಿಕ್ಕಿ ಬಿಕ್ಕಿ ಅತ್ತರು. ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಶಾಸಕರಾದ ರಾಜೇಶ್ ನಾಯ್ಕ್ ಉಳಿಪಾಡಿ, ಡಿ.ವೇದವ್ಯಾಸ ಕಾಮತ್ ಮೊದಲಾದವರು ಜೊತೆಯಲ್ಲಿದ್ದರು ಪ್ರಜಾವಾಣಿ ಚಿತ್ರ

‘ತಮ್ಮನ ಮಗಳ ಮದುವೆಯ ಬಳಿಕದ ಕಾರ್ಯಕ್ರಮದಲ್ಲಿ ನಾವು ಗುರುವಾರ ರಾತ್ರಿ ಊಟ ಬಡಿಸುತ್ತಿದ್ದೆವು. ಆತನ ಮಗನ ಸ್ನೇಹಿತರಿಗೆ ಫೋನ್ ಕರೆ ಬಂತು. ಹಲ್ಲೆಯಿಂದ ಗಾಯಗೊಂಡ ಮಗನನ್ನು ಮಂಗಳೂರಿನ ಎ.ಜೆ. ಆಸ್ಪತ್ರೆಗೆ ಕರೆದೊಯ್ದಿದ್ದಾರೆ, ಆತ ಹುಷಾರಾಗಿದ್ದಾನೆ ಎಂದರು. ಆದರೆ ರಾತ್ರಿ 11 ಗಂಟೆಗೆ ಸುಮಾರಿಗೆ ಆತ ಮೃತಪಟ್ಟಿದ್ದು ಗೊತ್ತಾಯಿತು’ ಎಂದು ಅವರು ತಿಳಿಸಿದರು.

‘ಮಗನದ್ದೂ ಸೇಡಿನ ಕೊಲೆಯೇ. ಸುರತ್ಕಲ್‌ನಲ್ಲಿ ಎರಡು ವರ್ಷ ಹಿಂದೆ ನಡೆದ ಫಾಝಿಲ್ ಕೊಲೆಗೆ ಪ್ರತೀಕಾರವಾಗಿ ಈ ಹತ್ಯೆ ನಡೆದಿರಬಹುದು. ತನ್ನನ್ನು ನಗರದಿಂದ ಯಾರೋ ಹಿಂಬಾಲಿಸಿಕೊಂಡು ಬಂದಿದ್ದರು ಎಂದು ಆರು ತಿಂಗಳು ಹಿಂದೆ ಹೇಳಿದ್ದ. ಅವನು ಬಜಪೆಯಲ್ಲೇ ಇದ್ದುದು ಹೆಚ್ಚು. ಎಲ್ಲರಂತೆ ನಾನು ಬದುಕಬೇಕು ಎಂದು ಆತನಿಗೂ ಹಂಬಲ ಇತ್ತು. ಇವೆಲ್ಲ ಬೇಡ ಎಂದು ಆಗಾಗ ಹೇಳುತ್ತಿದ್ದ’ ಎಂದು ಮೋಹನ ಶೆಟ್ಟಿ ನೆನಪಿಸಿಕೊಂಡರು.

‘ನನ್ನ ಇಬ್ಬರು ಗಂಡು ಮಕ್ಕಳಲ್ಲಿ ಸುಹಾಸ್ ದೊಡ್ಡವನು. ಏಳೆಂಟು ವರ್ಷದವನಿದ್ದಾಗಲೇ ಹಿಂದುತ್ವದ ಕೆಲಸಗಳಿಗೆ ಹೋಗುತ್ತಿದ್ದ. ನಾವೂ ಪ್ರೋತ್ಸಾಹ ಮಾಡಿದ್ದೆವು. ನಮ್ಮ ಜೀವನಕ್ಕೆ ಇವನೇ ಆಧಾರಸ್ತಂಭವಾಗಿದ್ದ. ಮಂಗಳೂರಲ್ಲಿ ಮರಳು ವ್ಯಾಪಾರ ಹಾಗೂ ಲಾರಿ ಇಟ್ಟು ಕೊಂಡು ವ್ಯಾಪಾರ ಮಾಡುತ್ತಿದ್ದ’ ಎಂದು ಅವರು ತಿಳಿಸಿದರು.

‘ಕಾರಿಂಜದಲ್ಲಿ ತಮ್ಮ ಪೂರ್ವಜರಿಂದ ಬಂದ ಜಮೀನಿನಲ್ಲಿ ಸುಹಾಸ್ ಶೆಟ್ಟಿ ಮೂರು ವರ್ಷಗಳ ಹಿಂದೆ ಅಡಿಕೆ ಸಸಿಗಳನ್ನು ನೆಡಿಸಿದ್ದ. ಅವು ಈಗ ಫಲಬಿಡುವ ಹಂತವನ್ನು ತಲುಪಿವೆ. ಸುರತ್ಕಲ್‌ನಲ್ಲಿ ಫಾಝಿಲ್ ಹತ್ಯೆಯಲ್ಲಿ ಬಂಧನಕ್ಕೊಳಗಾದ ಬಳಿಕ ಅಪರಾಧ ಕೃತ್ಯಗಳಿಂದ ದೂರವೇ ಇದ್ದ. ಬೈಕಂಪಾಡಿಬಳಿ ಪರಿಕರಗಳ ಅಂಗಡಿಯೊಂದನ್ನು ಇಟ್ಟುಕೊಂಡಿದ್ದ. ಅಪರಾಧ ಜಗತ್ತಿನಿಂದ ಹೊರಗೆ ಬರಬೇಕೆನ್ನುವಷ್ಟರಲ್ಲಿ ಈ ರೀತಿಯಾಗಿದೆ’ ಎಂದು ಬೇಸರ ತೋಡಿಕೊಳ್ಳುತ್ತಾರೆ ಸ್ಥಳೀಯರು.

‘ನಾವು ಬಾಲ್ಯದಿಂದಲೂ ಅವನನ್ನು ಬಲ್ಲೆವು. ಎಲ್ಲರಿಗೂ ನೆರವಾಗುವ ಸ್ವಭಾವ ಅವನದು. ಅವನನ್ನು ಈ ರೀತಿ ನೋಡುತ್ತೇವೆ ಎಂದು ಯಾವತ್ತೂ ಭಾವಿಸಿರಲಿಲ್ಲ’ ಎಂದು ಸುಹಾಸ್ ಶೆಟ್ಟಿ ಸಹಪಾಠಿ ಹೇಳಿದರು.

‘ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಲಿ’

‘ನನ್ನ ಮಗ ಹಿಂದುತ್ವಕ್ಕೆ ಹೋರಾಟ ಮಾಡುತ್ತೇನೆ ಎನ್ನುತ್ತಿದ್ದ. ಅವನ ಉಸಿರನ್ನೇ ನಿಲ್ಲಿಸಿಬಿಟ್ಟರು. ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಬೇಕು. ಯಾರೇ ಆಗಲಿ. ಇನ್ನೊಂದು ಸಲ ಹೀಗೆ ಆಗಬಾರದು’ ಎಂದು ಸುಹಾಸ್ ಶೆಟ್ಟಿ ಅವರ ತಾಯಿ ಸುಲೋಚನಾ ಹೇಳಿದರು.

‘ಮಗ ಮನೆಯ ದೀಪವಾಗಿದ್ದ. ನಿತ್ಯವೂ ಮಗನ ಜೊತೆ ಫೋನ್‌ನಲ್ಲಿ ಮಾತನಾಡುತ್ತಿದ್ದೆ. ನಿನ್ನೆ ಮದುವೆ ಕಾರ್ಯಕ್ರಮದಲ್ಲಿದ್ದೆ. ಹಾಗಾಗಿ ನಿನ್ನೆ ಫೋನ್ ಕರೆಗೂ ಸಿಕ್ಕಿಲ್ಲ’ ಎಂದು ಅವರು ಕಣ್ಣೀರಾದರು.

‘ಶೇ 85ರಷ್ಟು ಹಿಂದೂಗಳನ್ನು ಶೇ 15ರಷ್ಟು ಇರುವವರು ಇಷ್ಟು ಹೆದರಿಸಿದ್ದಾರೆ. ಹಿಂದೂಗಳೇ ಹೆದರಬೇಕಾದ ಸ್ಥಿತಿ ಇದೆ’ ಎಂದರು.

ಫಾಝಿಲ್ ತಂದೆ ತಮ್ಮ ಪಾತ್ರವಿಲ್ಲ ಎಂದಿದ್ದಾರೆ: ಯು.ಟಿ. ಖಾದರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸುಹಾಸ್ ಶೆಟ್ಟಿ ಹತ್ಯೆಗೂ ನಮಗೂ ಸಂಬಂಧವಿಲ್ಲ ಎಂದು ಫಾಝಿಲ್ ಅವರ ತಂದೆ ಮತ್ತು ಸೋದರ ನನಗೆ ಕರೆ ಮಾಡಿ ಹೇಳಿದ್ದಾರೆ. ತನಿಖೆಗೆ ಸಹಕರಿಸುವುದಾಗಿಯೂ ತಿಳಿಸಿದ್ದಾರೆ’ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಫಾಝಿಲ್ ಹತ್ಯೆಗೆ ಪ್ರತೀಕಾರ ತೆಗೆದುಕೊಳ್ಳಬೇಕು ಎಂದು ತಾವು ಯಾವತ್ತಿಗೂ ಅಂದುಕೊಂಡಿಲ್ಲ. ಆ ವಿಷಯವನ್ನು ಅಲ್ಲಿಗೇ ಬಿಟ್ಟಿದ್ದೇವೆ. ಪೊಲೀಸರು ಕರೆದಲ್ಲಿಗೆ ಹೋಗಿ ಉತ್ತರಿಸುತ್ತೇವೆ ಎಂದು ನನ್ನ ಬಳಿ ಹೇಳಿದ್ದಾರೆ’ ಎಂದು ವಿವರಿಸಿದರು.

ಸುಹಾಸ್ ಹಂತಕರಿಗೆ ಬುರ್ಖಾಧಾರಿ ಮಹಿಳೆಯೊಬ್ಬರು ನೆರವು ನೀಡುತ್ತಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ ಎಂದು ಸುದ್ದಿಗಾರರು ಪ್ರಸ್ತಾಪಿಸಿದ್ದಕ್ಕೆ ಖಾದರ್ ಅವರು, ‘ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ವಿಡಿಯೊಗಳನ್ನು ಆಧರಿಸಿ ಚರ್ಚೆ ಮಾಡಲಾಗುತ್ತದೆಯೇ? ಇದನ್ನೆಲ್ಲಾ ಪ್ರಶ್ನಿಸುತ್ತಾರೆಯೇ’ ಎಂದು ಮರುಪ್ರಶ್ನಿಸಿದರು.

‘ಮಗನ ಸಾವು ನೋಡುವ ತಂದೆ-ತಾಯಿಯ ನೋವಿಗೆ ಅಂತ್ಯವಿಲ್ಲ. ನಾವು ಎಷ್ಟೇ ಸಂತಾಪ ಹೇಳಿದರೂ, ಅವರ ನೋವು ಕಡಿಮೆಯಾಗುವುದಿಲ್ಲ. ಎಷ್ಟೇ ಹಗೆ ಇದ್ದರೂ, ಕೊಲ್ಲುವ ಹಕ್ಕು ಅಥವಾ ಅಧಿಕಾರ ಯಾರಿಗೂ ಇಲ್ಲ. ತಪ್ಪಿತಸ್ಥರನ್ನು ಹುಡುಕಿ, ಅವರಿಗೆ ಶಿಕ್ಷೆಯಾಗುವಂತೆ ಮಾಡಬೇಕು. ಇದಕ್ಕೆ ಎಲ್ಲರೂ ಸಹಕಾರ ನೀಡಬೇಕು’ ಎಂದರು.

4 ತಂಡ ರಚನೆ ಪರಮೇಶ್ವರ

‘ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದ ತನಿಖೆಗೆ ನಾಲ್ಕು ತಂಡಗಳನ್ನು ರಚಿಸಿದ್ದೇವೆ. ಆರೋಪಿಗಳನ್ನು ಶೀಘ್ರವೇ ಬಂಧಿಸುತ್ತೇವೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರಾಜ್ಯದಲ್ಲಿ ನಾವು ಶಾಂತಿಯನ್ನು ಕಾಪಾಡಿಕೊಂಡು ಬಂದಿದ್ದೇವೆ. ಶಾಂತಿ ಕದಡಲು ಯಾರೇ ಯತ್ನಿಸಿದರೂ, ಅವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ. ಈ ವಿಚಾರದಲ್ಲಿ ರಾಜಿ ಇಲ್ಲ’ ಎಂದರು.

‘ಮಂಗಳೂರಿನಲ್ಲಿ ಪರಿಸ್ಥಿತಿ ನಿಯಂತ್ರಣದಲ್ಲಿ ಇದೆ. ಆದರೂ ತನಿಖೆ, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಗಾಗಿ ಹಿರಿಯ ಪೊಲೀಸ್ ಅಧಿಕಾರಿಯನ್ನು ನಿಯೋಜಿಸಿದ್ದೇವೆ’ ಎಂದರು.

‘ಅನೈತಿಕತೆಗೆ ಕಡಿವಾಣ ಹಾಕದಿದ್ದರೆ ಅರಾಜಕತೆ’

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ‘ಸರ್ಕಾರಗಳ ಆಡಳಿತ ಹಾಗೂ ನ್ಯಾಯಾಂಗ ವ್ಯವಸ್ಥೆ ಮೇಲೆ ಜನರು ವಿಶ್ವಾಸ ಕಳೆದುಕೊಂಡಾಗ ಸಮಾಜದಲ್ಲಿ ಕೊಲೆ, ಕಳ್ಳತನ, ಅತ್ಯಾಚಾರ, ದರೋಡೆ, ಹಲ್ಲೆಯಂಥ ಪ್ರಕರಣಗಳು ಹೆಚ್ಚಾಗುತ್ತವೆ. ಇದನ್ನೇ ಅರಾಜಕತೆ ಎನ್ನಲಾಗುತ್ತದೆ’ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಹೇಳಿದರು.

ನಗರದ ಸತ್ಯನಾರಾಯಣ ದೇವಸ್ಥಾನದಲ್ಲಿ ಶುಕ್ರವಾರ ನಡೆದ ವಿಶ್ವೇಶತೀರ್ಥ ಸಭಾಭವನ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಸ್ವಾಮೀಜಿ, ‘ಮಂಗಳೂರಿನಲ್ಲಿ ಹಿಂದೂ ಕಾರ್ಯಕರ್ತನ ಕೊಲೆ ಪ್ರಕರಣದ ವಿಚಾರದಲ್ಲಿ ರಾಜ್ಯ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಸಮಾಜದಲ್ಲಿ ನಡೆಯುವ ಅನೈತಿಕ ಚಟುವಟಿಕೆಗಳನ್ನು ನಿಯಂತ್ರಿಸುವ ಸಂಕಲ್ಪ ತೆಗೆದುಕೊಂಡಾಗ ಮಾತ್ರ ಸರ್ಕಾರ ಜನರ ವಿಶ್ವಾಸ ಗಳಿಸಲು ಸಾಧ್ಯ’ ಎಂದರು.

‘ಕಾಶ್ಮೀರದಲ್ಲಿ ಪ್ರವಾಸಿಗರ ಮೇಲೆ ದಾಳಿ ನಡೆಸಿದ ಭಯೋತ್ಪಾದಕರಿಗೆ ಶಿಕ್ಷೆ ಕೊಡಬೇಕು’ ಎಂದು ಹೇಳಿದರು.

ಅಶ್ರಫ್ ಹತ್ಯೆ: ನ್ಯಾಯ, ಪರಿಹಾರಕ್ಕೆ ಕೂಗು

ಮಲಪ್ಪುರಂ ಜಿಲ್ಲೆಯ ಪರಪ್ಪೂರ್‌ನಲ್ಲಿ ಕ್ರಿಯಾ ಸಮಿತಿ ರಚನೆ; ಕರ್ನಾಟಕದ ಮೇಲೆ ಒತ್ತಡಕ್ಕೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರ ಹೊರವಲಯದ ಕುಡುಪುವಿನಲ್ಲಿ ಗುಂಪು ಹಲ್ಲೆಗೆ ಒಳಗಾಗಿ ಕೊಲೆಯಾದ ಕೇರಳದ ವಯನಾಡ್ ಜಿಲ್ಲೆ ಪುಲ್ಪಳ್ಳಿಯ ಮೊಹಮ್ಮದ್ ಅಶ್ರಫ್ ಕುಟುಂಬದವರಿಗೆ ಕರ್ನಾಟಕ ಸರ್ಕಾರ ನೆರವಾಗಬೇಕೆಂದು ಕೇರಳದಾದ್ಯಂತ ಕೂಗು ಎದ್ದಿದೆ. ಮಲಪ್ಪುರಂ ಜಿಲ್ಲೆಯಲ್ಲಿ ಕ್ರಿಯಾ ಸಮಿತಿ ರಚಿಸಲಾಗಿದೆ.

ಕೇರಳದ ಸಾಮಾಜಿಕ ಮಾಧ್ಯಮಗಳಲ್ಲಿ ಅಶ್ರಫ್‌ಗೆ ನ್ಯಾಯ ಸಿಗಬೇಕು ಮತ್ತು ಅವರ ಕುಟುಂಬಕ್ಕೆ ಪರಿಹಾರ ನೀಡಬೇಕೆಂಬ ಕೂಗು ಎದ್ದಿತ್ತು. ಶುಕ್ರವಾರ ಸಿಪಿಎಂ, ಕಾಂಗ್ರೆಸ್ ಮತ್ತು ಇಂಡಿಯನ್ ನ್ಯಾಷನಲ್ ಮುಸ್ಲಿಂ ಲೀಗ್ (ಐಯುಎಂಎಲ್) ಮುಖಂಡರು ಅಶ್ರಫ್ ನಿವಾಸಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದರು.

‘ಸಿಪಿಎಂ ಪುಲ್ಪಳ್ಳಿ ವಲಯ ಕಾರ್ಯದರ್ಶಿ ಎಂ.ಎಸ್ ಸುರೇಶ್ ಬಾಬು, ಮುಖಂಡರಾದ ಬೈಜು, ಪಿ.ಎ ಮೊಹಮ್ಮದ್, ಕಾಂಗ್ರೆಸ್ ಶಾಸಕ ಕೆ.ಬಾಲಕೃಷ್ಣನ್, ಐಯುಎಂಎಲ್ ನೇತಾರ ಸಿ.ಕೆ ಸುಬೇರ್ ಮನೆಗೆ ಬಂದಿದ್ದಾರೆ. ತನಿಖೆಯನ್ನು ಚುರುಕುಗೊಳಿಸಲು ನೆರವಾಗುವುದಾಗಿಯೂ ಸರ್ಕಾರಗಳ ಕಡೆಯಿಂದ ಪರಿಹಾರ ಸಿಗುವಂತೆ ಮಾಡುವುದಾಗಿಯೂ ಭರವಸೆ ನೀಡಿದ್ದಾರೆ’ ಎಂದು ಅಶ್ರಫ್ ಅವರ ತಮ್ಮ ಅಬ್ದುಲ್ ಜಬ್ಬಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕ್ರಿಯಾಸಮಿತಿ ಸಭೆಯಲ್ಲಿ ಪಿ.ಕೆ ಕುಂಞಾಲಿಕುಟ್ಟಿ ಮಾತನಾಡಿದರು

ಕರ್ನಾಟಕ ಸರ್ಕಾರದ ಮೇಲೆ ಒತ್ತಡ: ಅಶ್ರಫ್ ಕುಟುಂಬದ ಮೂಲ ಮಲಪ್ಪುರಂ ಜಿಲ್ಲೆಯ ಕೋಟಕ್ಕಲ್. ಸಾಲದಿಂದ ಮನೆ ಜಪ್ತಿಯಾದ ಕಾರಣ ಈಚೆಗೆ ವಯನಾಡಿಗೆ ಬಂದಿದ್ದರು. ಕೋಟಕ್ಕಲ್‌ನಲ್ಲಿ ಈಗ ದೊಡ್ಡಮಟ್ಟದ ಹೋರಾಟ ರೂಪಿಸಲಾಗುತ್ತಿದೆ. ಕಾಂಗ್ರೆಸ್ ಪರಪ್ಪೂರ್ ಬ್ಲಾಕ್ ಅಧ್ಯಕ್ಷ ನಾಸರ್ ಕುಟ್ಟಿಕಾಟಿಲ್ ಅಧ್ಯಕ್ಷತೆಯಲ್ಲಿ ಮೇ 1ರಂದು ಕ್ರಿಯಾಸಮಿತಿ ರಚಿಸಲಾಗಿದ್ದು, ಐಯುಎಂಎಲ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪಿ.ಕೆ ಕುಂಞಾಲಿಕುಟ್ಟಿ ನೇತೃತ್ವ ವಹಿಸಿದ್ದಾರೆ.

‘ಅಶ್ರಫ್ ಕೊಲೆಗೆ ಸಂಬಂಧಿಸಿದ ತನಿಖಾ ಪ್ರಕ್ರಿಯೆ ಸರಿಯಾದ ದಾರಿಯಲ್ಲಿ ಸಾಗಬೇಕು, ಅವರ ಕುಟುಂಬಕ್ಕೆ ಪರಿಹಾರ ಸಿಗಬೇಕು ಎಂಬುದು ಕ್ರಿಯಾ ಸಮಿತಿಯ ಪ್ರಮುಖ ಬೇಡಿಕೆ. ಘಟನೆ ಕರ್ನಾಟಕದಲ್ಲಿ ನಡೆದಿರುವುದರಿಂದ ಕರ್ನಾಟಕ ಸರ್ಕಾರವೇ ಪರಿಹಾರಕ್ಕೆ ಮುಂದಾಗಬೇಕು. ಇದಕ್ಕಾಗಿ ಸದ್ಯದಲ್ಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲಾಗುವುದು’ ಎಂದು ನಾಸರ್ ಕುಟ್ಟಿಕಾಟ್ಟಿಲ್ ತಿಳಿಸಿದರು.

‘ಅಶ್ರಫ್ ಅವರ ಕುಟುಂಬ ತೀರಾ ಸಂಕಷ್ಟದಲ್ಲಿದೆ. ಆದರೆ ವೈಯಕ್ತಿಕವಾಗಿ ಯಾರಿಂದಲೂ ನೆರವು ಪಡೆಯುವ ಜಾಯಮಾನದವರಲ್ಲ. ಈ ಕಾರಣದಿಂದ ಸರ್ಕಾರವೇ ಅವರಿಗೆ ಪರಿಹಾರ ನೀಡಬೇಕಾಗಿದೆ. ಶಾಸಕ ಎ.ಪಿ ಅನಿಲ್ ಕುಮಾರ್ ನೇತೃತ್ವದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್ ಮೂಲಕ ಕರ್ನಾಟಕ ಸರ್ಕಾರಕ್ಕೆ ಈ ಸಂಬಂಧ ಮನವಿ ಸಲ್ಲಿಸಲಾಗುವುದು’ ಎಂದು ಅವರು ತಿಳಿಸಿದರು.

‘ಕೇರಳದ ಸಹಜ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ’

ಇಂಥ ಘಟನೆಗಳು ನಡೆದಾಗ ಸಾಮಾನ್ಯವಾಗಿ ಕೇರಳದಲ್ಲಿ ಎಲ್ಲ ಭೇದ ಮರೆತು ಜನರು ಒಂದಾಗುತ್ತಾರೆ. ಆದರೆ ಅಶ್ರಫ್ ಪ್ರಕರಣದಲ್ಲಿ ಸಹಜವಾದ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಶತ್ರುರಾಷ್ಟ್ರದ ಪರವಾಗಿ ಘೋಷಣೆ ಕೂಗಿದರೆ ಕೊಲೆ ಮಾಡಬೇಕು ಎಂದು ಎಲ್ಲೂ ಹೇಳಿಲ್ಲ. ಭಾರತದ ಮೇಲೆ ದಾಳಿ ಮಾಡಿದ ಕಸಬ್‌ಗೆ ಕೂಡ ವಿಚಾರಣೆಗೆ ಒಳಪಡಿಸಿದ ನಂತರವಷ್ಟೇ ಶಿಕ್ಷೆ ನೀಡಿದ್ದು. ಆ ದೃಷ್ಟಿಯಲ್ಲಿ ನೋಡಿದರೆ ಅಶ್ರಫ್ ಮೇಲೆ ನಡೆದದ್ದು ಅತ್ಯಂತ ಅಮಾನವೀಯ ಕೃತ್ಯ. ಇದಕ್ಕೆ ಮಾನವೀಯ ನೆಲೆಯಲ್ಲಿ ಪ್ರತಿಕ್ರಿಯೆ ನೀಡಲು ಎಲ್ಲರೂ ಬದ್ಧರಾಗಬೇಕು.

ಸಹೀದ್ ರೂಮಿ, ವಕೀಲ

ಕರ್ನಾಟಕ ಸರ್ಕಾರ ಈವರೆಗೆ ನೀಡಿರುವ ಸಹಕಾರ ತೃಪ್ತಿಕರವಾಗಿತ್ತು. ಇನ್ನು ಮುಂದೆ ಪರಿಹಾರದ ರೂಪದಲ್ಲಿ ಆರ್ಥಿಕ ನೆರವು ನೀಡುವುದಕ್ಕೂ ಮುಂದಾಗಬೇಕು

ನಾಸರ್, ಪರಪ್ಪೂರ್ ಕ್ರಿಯಾ ಸಮಿತಿ ಅಧ್ಯಕ್ಷ

ಎನ್‌ಐಎಗೆ ಪ್ರಕರಣ ವಹಿಸುವಂತೆ ಸಚಿವೆ ಶೋಭಾ ಕರಂದ್ಲಾಜೆ ಪತ್ರ

ನವದೆಹಲಿ: ಮಂಗಳೂರಿನ ರೌಡಿಶೀಟರ್ ಸುಹಾಸ್ ಶೆಟ್ಟಿ ಕೊಲೆ ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸುವಂತೆ ಆಗ್ರಹಿಸಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಶುಕ್ರವಾರ ಪತ್ರ ಬರೆದಿದ್ದಾರೆ.

‘ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದು ಬಿದ್ದಿದೆ. ಹಿಂದೂ ಸಂಘಟನೆಗಳಲ್ಲಿ ಗುರುತಿಸಿಕೊಂಡ ಕಾರ್ಯಕರ್ತರ ಮೇಲೆ ನಿರಂತರ ದಾಳಿ ಆಗುತ್ತಿದೆ. ಕಾಂಗ್ರೆಸ್ ಸರ್ಕಾರದ ಓಲೈಕೆ ರಾಜಕಾರಣದಿಂದಾಗಿ ಸಮಾಜ ವಿರೋಧಿ ಶಕ್ತಿಗಳ ಅಟ್ಟಹಾಸ ಮಿತಿಮೀರಿದೆ. ಹೀಗಾಗಿ, ಸುಹಾಸ್ ಶೆಟ್ಟಿ ಕೊಲೆ ಪ್ರಕರಣವನ್ನು ಎನ್‌ಐಎ ಮೂಲಕ ತನಿಖೆ ನಡೆಸಿ ಇಂತಹ ಶಕ್ತಿಗಳನ್ನು ಮಟ್ಟ ಹಾಕಬೇಕು’ ಎಂದು ಅವರು ಪತ್ರದಲ್ಲಿ ಆಗ್ರಹಿಸಿದ್ದಾರೆ.

ದ್ವೇಷ ಕೆರಳಿಸುವ ಪೋಸ್ಟ್: 12 ಪ್ರಕರಣ

ಮಂಗಳೂರು: ಕಿನ್ನಿಪದವಿನಲ್ಲಿ ನಡೆದ ಸುಹಾಸ್ ಶೆಟ್ಟಿ ಹತ್ಯೆಯ ನಂತರ ದ್ವೇಷ ಭಾವನೆ ಕೆರಳಿಸುವಂಥ ಪೋಸ್ಟ್‌ಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ ವ್ಯಕ್ತಿಗಳು ಮತ್ತು ಗುಂಪುಗಳ ವಿರುದ್ಧ ನಗರ ಪೊಲೀಸ್ ಕಮಿಷನರೇಟ್‌ನ ವಿವಿಧ ಠಾಣೆಗಳಲ್ಲಿ ಒಟ್ಟು 12 ಪ್ರಕರಣಗಳು ದಾಖಲಾಗಿವೆ.

ಮೂಲ್ಕಿ, ಕಾವೂರು ಮತ್ತು ಮಂಗಳೂರು ದಕ್ಷಿಣ ಠಾಣೆಗಳಲ್ಲಿ ತಲಾ ಎರಡು, ಮಂಗಳೂರು ಉತ್ತರ, ಪೂರ್ವ, ಉರ್ವ, ಬರ್ಕೆ, ಮೂಡುಬಿದಿರೆ ಮತ್ತು ಕಂಕನಾಡಿ ಠಾಣೆಗಳಲ್ಲಿ ತಲಾ ಒಂದೊಂದು ಪ್ರಕರಣ ದಾಖಲಾಗಿದೆ. ಶಾಂತಿ ಮತ್ತು ಸೌಹಾರ್ದಕ್ಕೆ ಧಕ್ಕೆ ತರುವ ಉದ್ದೇಶದಿಂದ ಪೋಸ್ಟ್ ಹಾಕಲಾಗಿದ್ದು ಭಾರತೀಯ ನ್ಯಾಯಸಂಹಿತೆಯಡಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದು ಪೊಲೀಸ್ ಕಮಿಷನರ್ ತಿಳಿಸಿದ್ದಾರೆ.

ಕಾರಿಂಜ: ಸುಹಾಸ್ ಶೆಟ್ಟಿ ಅಂತ್ಯಕ್ರಿಯೆ

ಒಂದನೇ ಪುಟದಿಂದ...

ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಸ್ಥಳೀಯ ಬಿಜೆಪಿ ಶಾಸಕರು, ಶಾಸಕ ಬಸನಗೌಡ ಪಾಟೀಲ ಯತ್ನಾಳ, ವಿಶ್ವ ಹಿಂದೂ ಪರಿಷತ್ತಿನ ಅಂತರರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಿಲಿಂದ್ ಪರಾಂಡೆ, ಆರ್‌ಎಸ್‌ಎಸ್ ಮುಖಂಡ ಡಾ. ಕಲ್ಲಡ್ಕ ಪ್ರಭಾಕರ ಭಟ್ ಮತ್ತಿತರರು ಅಂತಿಮ ದರ್ಶನ ಪಡೆದರು.

ದ.ಕ ಸ್ತಬ್ಧ: ಈ ಹತ್ಯೆ ಖಂಡಿಸಿ ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ಶುಕ್ರವಾರ ದಕ್ಷಿಣ ಕನ್ನಡ ಜಿಲ್ಲೆ ಬಂದ್‌ಗೆ ಕರೆ ನೀಡಿತ್ತು. ಹೀಗಾಗಿ ಇಡೀ ಜಿಲ್ಲೆಯ ಬಹುತೇಕ ಕಡೆ ಅಂಗಡಿಗಳು ಮುಚ್ಚಿದ್ದವು. ಬಸ್ ಸಂಚಾರ ಸ್ಥಗಿತದಿಂದಾಗಿ ಜನ ಜೀವನ ಸ್ತಬ್ಧಗೊಂಡಿತ್ತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇದೇ 6ರ ವರೆಗೆ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಬೆಂಗಳೂರಿನಿಂದ ಬಂದ ನಾಲ್ಕು ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಹಾಗೂ ಎರಡು ಖಾಸಗಿ ಬಸ್‌ಗಳಿಗೆ ಕಿಡಿಗೇಡಿಗಳು ನಗರದಲ್ಲಿ ನಸುಕಿನಲ್ಲಿ ಕಲ್ಲು ತೂರಿದ್ದರು. ಇದರ ಬೆನ್ನಲ್ಲೇ ಖಾಸಗಿ ಬಸ್ ಹಾಗೂ ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಚಾರವನ್ನು ಸ್ಥಗಿತಗೊಳಿಸಲಾಯಿತು. ಇದರಿಂದಾಗಿ ಉದ್ಯೋಗಕ್ಕೆ ಹೋಗುವವರು, ಹೊರ ಜಿಲ್ಲೆಗಳಿಂದ ಇಲ್ಲಿಗೆ ಬಂದ ಪ್ರಯಾಣಿಕರು ಸಮಸ್ಯೆ ಎದುರಿಸಿದರು. ಕೆಲವೆಡೆ ಹಿಂದುತ್ವವಾದಿ ಕಾರ್ಯಕರ್ತರು ಟೈರ್‌ಗೆ ಬೆಂಕಿ ಹಚ್ಚಿ ಪ್ರತಿಭಟಿಸಿದರು.

ದ್ವಿತೀಯ ಪಿಯುಸಿ-2 ಗಣಿತ ಪರೀಕ್ಷೆ, ಬಿ- ಫಾರ್ಮಾ ವಿದ್ಯಾರ್ಥಿಗಳ ಸೆಮಿಸ್ಟರ್ ಪರೀಕ್ಷೆಗೆ ಹಾಜರಾಗಲು ಹೊರಟಿದ್ದ ಕೆಲವು ವಿದ್ಯಾರ್ಥಿಗಳು ಬಸ್ ಇಲ್ಲದೆ ಪರದಾಡಿದರು. ಮಂಗಳೂರು ವಿಶ್ವವಿದ್ಯಾಲಯ ವ್ಯಾಪ್ತಿಯ ಮೂರು ಕಾಲೇಜುಗಳಲ್ಲಿ ಗುರುವಾರ ನಡೆಯಬೇಕಿದ್ದ ಎಂಬಿಎ ಪರೀಕ್ಷೆ ಮುಂದೂಡಲಾಯಿತು. ಬಿ-ಫಾರ್ಮಾ ಪರೀಕ್ಷೆಯನ್ನು ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯವು ಮುಂದೂಡಿತು.

ಬಜಪೆಯ ಕಿನ್ನಿಪದವು ಎಂಬಲ್ಲಿ ರೌಡಿ ಶೀಟರ್ ಸುಹಾಸ್ ಶೆಟ್ಟಿಯನ್ನು ದುಷ್ಕರ್ಮಿಗಳು ತಲವಾರಿನಿಂದ ಕೊಚ್ಚಿ ಗುರುವಾರ ರಾತ್ರಿ ಕೊಲೆ ಮಾಡಿದ್ದರು. ಸುಹಾಸ್ ಶೆಟ್ಟಿ, ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹತ್ಯೆ ಪ್ರಕರಣ ಪ್ರಮುಖ ಆರೋಪಿಯಾಗಿದ್ದ. ಪ್ರವೀಣ್ ನೆಟ್ಟಾರು ಕೊಲೆಗೆ ಪ್ರತೀಕಾರವಾಗಿ ಮಹಮ್ಮದ್ ಫಾಝಿಲ್ ಹತ್ಯೆ ನಡೆದಿತ್ತು ಎಂದು ಹೇಳಲಾಗಿತ್ತು.

ಮತ್ತೆ ನಾಲ್ವರ ಮೇಲೆ ದಾಳಿ

ಮಂಗಳೂರು ಹೊರವಲಯದ ಕಲ್ಲಾಪುವಿನ ಹಣ್ಣು- ತರಕಾರಿ ಮಾರುಕಟ್ಟೆಯಲ್ಲಿ ಕೂಲಿ ಕಾರ್ಮಿಕರಾಗಿರುವ ನೌಷಾದ್ ಅಹ್ಮದ್ ನಸುಕಿನಲ್ಲಿ ಬಸ್‌ಗಾಗಿ ಕಾಯುತ್ತಾ ಕಣ್ಣೂರು ಬಸ್‌ನಿಲ್ದಾಣದ ಬಳಿ ನಿಂತಿದ್ದರು. ಆಗ ಅಲ್ಲಿಗೆ ಬಂದ ಮೂವರು ಅವರಲ್ಲಿ ‘ಮಂಗಳೂರಿಗೆ ಬಸ್ ಇದೆಯಾ’ ಎಂದು ವಿಚಾರಿಸಿದರು. ಅವರು ಉತ್ತರಿಸಲು ಮುಂದಾಗುತ್ತಿದ್ದಂತೆಯೇ ಡ್ಯಾಗರ್‌ನಿಂದ ಹೊಟ್ಟೆಗೆ ಇರಿದಾಗ, ನೌಷಾದ್ ಕೈ ಅಡ್ಡ ಹಿಡಿದು ತಪ್ಪಿಸಿಕೊಳ್ಳಲು ಯತ್ನಿಸಿದರು. ಅವರು ತಿರುಗಿದಾಗ ಬೆನ್ನಿಗೆ ಡ್ಯಾಗರ್‌ನಿಂದ ಇರಿದರು. ಅದನ್ನು ತಿರುಗಿಸುವಾಗ ಡ್ಯಾಗರ್ ತುಂಡಾಗಿದ್ದು, ಅದರ ಸುಮಾರು ನಾಲ್ಕು ಇಂಚು ಉದ್ದದ ಭಾಗ ಬೆನ್ನಿನಲ್ಲಿ ಸಿಲುಕಿತ್ತು’ ಎಂದು ಅವರ ಸೋದರ ಜುನೈದ್ ಅಹ್ಮದ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶಸ್ತ್ರಚಿಕಿತ್ಸೆ ಬಳಿಕ ಡ್ಯಾಗರ್ ತುಂಡನ್ನು ಹೊರತೆಗೆಯಲಾಗಿದೆ. ನೌಷಾದ್ ಪ್ರಾಣಾಪಾಯದಿಂದ ಪಾರಾಗಿದ್ದು, ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ’ ಎಂದು ಜುನೈದ್ ತಿಳಿಸಿದ್ದಾರೆ. ನೌಷಾದ್ ಅವರಿಗೆ ಪತ್ನಿ, ನಾಲ್ಕು ವರ್ಷದ ಮಗಳು, ಆರು ತಿಂಗಳ ಗಂಡು ಮಗು ಇದೆ. ಅವರು ಪತ್ನಿ ಮಕ್ಕಳು, ತಂದೆ ತಾಯಿ, ಇಬ್ಬರು ಸೋದರರ ಜೊತೆ ಕಣ್ಣೂರು ಮಸೀದಿ ಬಳಿ ನೆಲಸಿದ್ದರು.

ಉಳ್ಳಾಲ ಸಮೀಪದ ತೊಕ್ಕೊಟ್ಟು ಮಾಯ ಬಾರ್ ಎದುರುಗಡೆ ಶುಕ್ರವಾರ ತಡರಾತ್ರಿ ಅಲೇಕಳ ನಿವಾಸಿ ಫೈಝುಲ್ ಎಂಬುವರ ಮೇಲೆ ತಲವಾರಿನಿಂದ ಹಲ್ಲೆ ನಡೆಸಲಾಗಿದೆ. ಅವರು ಸೋಮೇಶ್ವರದಲ್ಲಿರುವ ಪತ್ನಿಯ ಮನೆಯಿಂದ ಕಲ್ಲಾಪುವಿನಲ್ಲಿರುವ ಗ್ಲೋಬಲ್ ಮಾರುಕಟ್ಟೆಗೆ ಬೈಕ್‌ನಲ್ಲಿ ತೆರಳುತ್ತಿರುವಾಗ ಕೆಲವರು ತಲವಾರು ಬೀಸಿದ್ದು, ಬೆನ್ನಿನಲ್ಲಿ ಗಾಯಗಳಾಗಿವೆ. ಈ ಬಗ್ಗೆ ಉಳ್ಳಾಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನಗರದ ಕುಂಟಿಕಾನದ ಬಳಿ ಯುವಕನೊಬ್ಬನ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ.

ಉಡುಪಿಯ ಹಿರಿಯಡ್ಕ ವ್ಯಾಪ್ತಿಯ ಶೇಡಿಗುಡ್ಡೆ ಎಂಬಲ್ಲಿ ಆಟೊ ಚಾಲಕ ಆತ್ರಾಡಿಯ ಅಬೂಬಕ್ಕರ್ ಮೇಲೆ ಗುರುವಾರ ರಾತ್ರಿ ದಾಳಿ ನಡೆಸಿ, ಕೊಲೆಗೆ ಯತ್ನಿಸಿರುವ ಪ್ರಕರಣಕ್ಕೆ ಸಂಬಂಧಿಸಿ ಹಿರಿಯಡ್ಕ ಬೊಮ್ಮರಬೆಟ್ಟುವಿನ ಸಂದೇಶ್ (31) ಮತ್ತು ಬಾಪೂಜಿ ದರ್ಖಾಸು ನಿವಾಸಿ ಸುಶಾಂತ್ (32) ಎಂಬವರನ್ನು ಪೊಲೀಸರು ಬಂಧಿಸಿದ್ದಾರೆ.

‘ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಈ ಕೃತ್ಯ ಎಸಗಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ’ ಎಂದು ಉಡುಪಿ ಎಸ್‌ಪಿ ಡಾ. ಅರುಣ್ ಕೆ. ತಿಳಿಸಿದ್ದಾರೆ.

ಬಿಜೆಪಿಯಿಂದ ₹25 ಲಕ್ಷ

‘ಸುಹಾಸ್ ಶೆಟ್ಟಿ ಅವರದ್ದು ಬಡ ಕುಟುಂಬ. ತಾಯಿ ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಆ ಕುಟುಂಬದ ಆಧಾರ ಸ್ತಂಭವೇ ಇಲ್ಲವಾಗಿದೆ. ಹೀಗಾಗಿ ಪಕ್ಷದಿಂದ ₹25 ಲಕ್ಷ ಪರಿಹಾರ ನೀಡಲು ನಿರ್ಧರಿಸಿದ್ದೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಈ ಕುಟುಂಬಕ್ಕೆ ರಾಜ್ಯ ಸರ್ಕಾರವೂ ಪರಿಹಾರ ನೀಡಬೇಕು. ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂದು ಅವರು ಆಗ್ರಹಿಸಿದರು.

ಆರೋಪಿಗಳ ಸುಳಿವು: ಶೀಘ್ರ ಬಂಧನ

ಸುಹಾಸ್ ಶೆಟ್ಟಿ ಕೊಲೆ ಆರೋಪಿಗಳ ಹೆಸರು ಸಹಿತ ಸುಳಿವು ದೊರೆತಿದೆ. ಬಂಧಿಸಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಶಾಂತಿ, ಸುವ್ಯವಸ್ಥೆ ಕಾಪಾಡಲು ಸಹಕರಿಸಬೇಕು ಎಂದು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್. ಹಿತೇಂದ್ರ ಹೇಳಿದರು.

‘ತಪ್ಪು ಮಾಡಿದ್ದು ಯಾರೇ ಆದರೂ ಕ್ರಮ ಕೈಗೊಳ್ಳಲಾಗುವುದು. ಹೆಚ್ಚಿನ ಭದ್ರತೆಗಾಗಿ 22 ಕೆಎಸ್‌ಆರ್‌ಪಿ, ಐವರು ಎಸ್‌ಪಿ, ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜಿಸಲಾಗಿದೆ. ಸಾರ್ವಜನಿಕರು ಯಾವುದೇ ವದಂತಿಗೆ ಕಿವಿಗೊಡಬಾರದು. ಪೊಲೀಸ್ ಇಲಾಖೆ ವಾಸ್ತವದ ಬಗ್ಗೆ ಕಾಲಕಾಲಕ್ಕೆ ಮಾಹಿತಿ ನೀಡಲಿದೆ’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಹಂತಕರಿಗೆ ಗುಂಡಿಕ್ಕಿ ಯತ್ನಾಳ

ಮಂಗಳೂರು: ‘ಹಿಂದೂ ಧರ್ಮವನ್ನು ಉಳಿಸಲು ಹೋರಾಡುವವರನ್ನು ಮುಸ್ಲಿಂ ಭಯೋತ್ಪಾದಕರು ಕೊಂದು ಹಾಕುತ್ತಿದ್ದಾರೆ. ಆರೋಪಿಗಳು ಎಲ್ಲಿ ಸಿಗುತ್ತಾರೋ ಅಲ್ಲೇ ಗುಂಡಿಕ್ಕಿ ಸಾಯಿಸಬೇಕು. ಇಲ್ಲದಿದ್ದರೆ ದೇಶಕ್ಕಾಗಿ ದುಡಿಯುವವರಿಗೆ ಭಯಪಡುವ ವಾತಾವರಣ ನಿರ್ಮಾಣವಾಗುತ್ತದೆ’ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ಸುಹಾಸ್ ಶೆಟ್ಟಿ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದ ಬಳಿಕ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು ಸಂತ್ರಸ್ತ ಕುಟುಂಬಕ್ಕೆ ₹ 5 ಲಕ್ಷ ನೀಡುವುದಾಗಿ ತಿಳಿಸಿದರು.

‘ಕೆಲವರು ಹಿಂದೂ ಹೆಸರಿನಲ್ಲಿ ಮಜಾ ಮಾಡಿದ್ದಾರೆ. ಕಾರ್ಯಕರ್ತರ ಹೆಸರಲ್ಲಿ ಅಧಿಕಾರಕ್ಕೆ ಬಂದಿದ್ದಾರೆ. ‘ನಮ್ಮ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ’ ಎಂದು ಹೇಳಿ ಸುಮ್ಮನೆ ಕುಳಿತರು.ಈಗ ಬಂದು ಸಾಂತ್ವನ ಹೇಳುತ್ತಾರೆ’ ಎಂದು ಕಿಡಿಕಾರಿದರು.

ಸುಹಾಸ್ ಶೆಟ್ಟಿಗೆ ಬೆದರಿಕೆ ಸಂದೇಶ ಬಂದಿತ್ತು: ಅಶೋಕ

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಆಪತ್ತು ಕಾದಿದೆ ಎಂಬ ಸಂದೇಶವು ಸುಹಾಸ್ ಶೆಟ್ಟಿಗೆ ಹಿಂದೆಯೇ ಬಂದಿತ್ತು. ಆದರೂ ರಕ್ಷಣೆಗೆ ಕ್ರಮವಹಿಸದಿರುವುದು ಪೊಲೀಸ್ ಇಲಾಖೆಯ ವೈಫಲ್ಯ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

‘ರಾಜ್ಯದ ಪೊಲೀಸರಿಂದ ನ್ಯಾಯ ಸಿಗುತ್ತದೆ ಎಂಬ ವಿಶ್ವಾಸ ಇಲ್ಲ. ಸಿದ್ದರಾಮಯ್ಯ ಆಡಳಿತದಲ್ಲಿ ಹಿಂದುತ್ವವಾದಿ ಕಾರ್ಯಕರ್ತರ ಹತ್ಯೆ ಗ್ಯಾರಂಟಿ. ಸಿದ್ದರಾಮಯ್ಯನವರ ಹೇಳಿಕೆಗಳು, ಪೊಲೀಸರ ವೈಫಲ್ಯ ಹಾಗೂ ಪಿಎಫ್‌ಐ, ಕೆಎಫ್‌ಡಿ ಹಾಗೂ ಜಿಹಾದಿ ಬ್ರದರ್ಸ್ ಈ ಕೊಲೆಗೆ ಕಾರಣ. ಹತ್ಯೆ ಮಾಡುವುದಕ್ಕೆ ಒಂದು ತಂಡ ಹಾಗೂ ಬಂಧನಕ್ಕೆ ಒಳಗಾಗುವುದಕ್ಕೆ ಇನ್ನೊಂದು ತಂಡವನ್ನು ಸಿದ್ಧಗೊಳಿಸುತ್ತಾರೆ’ ಎಂದು ಅವರು ಆರೋಪಿಸಿದರು.

‘ಪಿಎಫ್‌ಐ ಕಾರ್ಯಕರ್ತರ ಮೇಲಿನ ಪ್ರಕರಣ ರದ್ದುಪಡಿಸಿದ್ದಾರೆ. ಅವರ ಪಾಕ್ ಜಿಂದಾಬಾದ್ ಘೋಷಣೆಗಳು ಹಾಗೂ ಭಯೋತ್ಪಾದನೆ ಚಟುವಟಿಕೆ ಜಾಸ್ತಿಯಾಗಿದೆ. ಹಾಗಾಗಿ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಕೇಂದ್ರವನ್ನು ಇಲ್ಲಿ ಆರಂಭಿಸುವಂತೆ ಕೇಂದ್ರಕ್ಕೆ ಪತ್ರ ಬರೆಯುತ್ತೇವೆ’ ಎಂದರು.

ಸುಹಾಸ್ ಶೆಟ್ಟಿ ಹತ್ಯೆ ಬಗ್ಗೆ ಒಂದು ತಿಂಗಳ ಮೊದಲೇ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕಿದ್ದರು. ಆದರೂ ಪೊಲೀಸರು ಅವರಿಗೆ ಏಕೆ ರಕ್ಷಣೆ ನೀಡಿಲ್ಲ. ನಮ್ಮ ರಕ್ಷಣೆ ನಾವೇ ಮಾಡಬೇಕಂದ್ರೆ ಅದಕ್ಕೂ ತಯಾರಿದ್ದೇವೆ

ಸಿ.ಟಿ.ರವಿ, ವಿಧಾನ ಪರಿಷತ್ ಸದಸ್ಯ

ರಾಜ್ಯದಲ್ಲಿನ ಅಪರಾಧ ಪ್ರಕರಣಗಳನ್ನು ಗೃಹ ಸಚಿವ ಜಿ ಪರಮೇಶ್ವರ ಅವರು ಗಂಭೀರವಾಗಿ ಪರಿಗಣಿಸದ ಕಾರಣ ಹಿಂದುತ್ವಪರ ಹೋರಾಟಗಾರರ ಹತ್ಯೆಯಾಗುತ್ತಿದೆ. ಸಚಿವರು ರಾಜೀನಾಮೆ ನೀಡಬೇಕು

ಬಿ.ಶ್ರೀರಾಮುಲು, ಮಾಜಿ ಸಚಿವ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

ಅಲ್ಪಸಂಖ್ಯಾತರ ನಿರ್ದೇಶನಾಲಯ

ಮೌಲಾನಾ ಅಜಾದ್ ಭವನ, ನಂ.16ಸಿ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತನಗರ, ಬೆಂಗಳೂರು-560052.

ಸಹಾಯವಾಣಿ: 8277799990 Website: www.dom.karnataka.gov.in

e-mail: directorgokdom@gmail.com

ಸಂಖ್ಯೆ: ಅ.ಸಂ. ನಿ/ಶಿ.ವಿ/ಪ.ಪೂ/ಸಿಆರ್-30/2025-26 ದಿನಾಂಕ: 02.05.2025

ಪ್ರಕಟಣೆ

ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿ ಪದವಿಪೂರ್ವ ಕಾಲೇಜುಗಳು /ಇಂಟಿಗ್ರೇಟೆಡ್ (ಉನ್ನತೀಕರಣಗೊಂಡ) ಅಲ್ಪಸಂಖ್ಯಾತರ ಮೊರಾರ್ಜಿದೇಸಾಯಿ ವಸತಿಶಾಲೆ/ ಪದವಿಪೂರ್ವ ಕಾಲೇಜುಗಳು, ಡಾ|| ಎ.ಪಿ.ಜೆ ಅಬ್ದುಲ್ ಕಲಾಂ ವಸತಿಶಾಲೆ/ ಪದವಿಪೂರ್ವ ಕಾಲೇಜುಗಳು ಮತ್ತು ಸರ್ಕಾರಿ ಮುಸ್ಲಿಂ ವಸತಿಶಾಲೆ/ ಪದವಿಪೂರ್ವ ಕಾಲೇಜುಗಳು ಹಾಗೂ ಉನ್ನತೀಕರಿಸಿದ ಮೌಲಾನಾ ಆಜಾದ್ ಪದವಿಪೂರ್ವ ಕಾಲೇಜುಗಳಲ್ಲಿನ 2025-26 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ ತರಗತಿಗೆ ಉಚಿತ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸುವ ಕುರಿತು

2025-26 ನೇ ಶೈಕ್ಷಣಿಕ ಸಾಲಿನ ಪ್ರಥಮ ಪಿ.ಯು.ಸಿ ತರಗತಿಗೆ ದಿನಾಂಕ: 03.05.2025 ರಿಂದ ದಿನಾಂಕ: 17.05.2025 ರವರೆಗೆ ಅಧಿಕೃತ ಜಾಲತಾಣದ ಮೂಲಕ ಅರ್ಜಿಯನ್ನು ಉಚಿತವಾಗಿ ಸಲ್ಲಿಸಬಹುದಾಗಿರುತ್ತದೆ

2025-26 ನೇ ಸಾಲಿಗೆ ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತರು, ಸಿಖ್ಖರು, ಜೈನರು, ಬೌದ್ಧರು, ಮತ್ತು ಪಾರ್ಸಿ ಸಮುದಾಯಗಳಿಗೆ ಸೇರಿದ ಹಾಗೂ ಪ.ಜಾತಿ, ಪ.ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಸೇರಿದ ಎಸ್. ಎಸ್. ಎಲ್.ಸಿ/ತತ್ಸಮಾನ ಪರೀಕ್ಷೆ ತೇರ್ಗಡೆಯಾದ ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ವಸತಿ ಪದವಿಪೂರ್ವ ಶಾಲಾ/ಕಾಲೇಜು/ಮೌಲಾನಾ ಆಜಾದ್ ಪದವಿಪೂರ್ವ ಕಾಲೇಜುಗಳಿಗೆ ಪ್ರಥಮ ಪಿ.ಯು.ಸಿ ತರಗತಿಗೆ ಉಚಿತ ಪ್ರವೇಶಾತಿಗಾಗಿ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.

ಅರ್ಜಿ ಸಲ್ಲಿಸುವ ವಿಧಾನ

ಅರ್ಜಿ ಸಲ್ಲಿಸುವ ಜಾಲತಾಣದ ವಿಳಾಸ:

https://sevasindhuservices.karnataka.gov.in

ಅರ್ಜಿ ಸಲ್ಲಿಸಲು ಅರ್ಹತೆ

1. ವಿದ್ಯಾರ್ಥಿಗಳು ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್ಖ, ಬೌದ್ಧ, ಪಾರಸಿ ಹಾಗೂ ಪರಿಶಿಷ್ಟ ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರಬೇಕು.
2. ಕರ್ನಾಟಕ ರಾಜ್ಯದ ಎಸ್. ಎಸ್. ಎಲ್. ಸಿ ಅಥವ ತತ್ಸಮಾನ ಪರೀಕ್ಷೆಯಲ್ಲಿ ಅಥವ COBSE ಪಟ್ಟಿಯಲ್ಲಿರುವ ಬೋರ್ಡ್‌ಗಳಲ್ಲಿ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪ್ರಥಮ ಪಿ.ಯು.ಸಿಗೆ ದಾಖಲಾಗಲು ಅರ್ಹರಿರುತ್ತಾರೆ.
3. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
4. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.2.50 ಲಕ್ಷಗಳನ್ನು ಮೀರಿರಬಾರದು.
5. ವಿಶೇಷಚೇತನ ವಿದ್ಯಾರ್ಥಿಗಳಿಗೆ ಪ್ರವೇಶಾತಿಯಲ್ಲಿ ಶೇ. 4 ರಷ್ಟು ಸ್ಥಾನಗಳನ್ನು ಮೀಸಲಿರಿಸಿದೆ.
6. ಪ್ರವೇಶಾತಿಯಲ್ಲಿ ಶೇ. 75ರಷ್ಟು ಸ್ಥಾನಗಳನ್ನು ಅಲ್ಪಸಂಖ್ಯಾತರ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತರು, ಸಿಖ್ಖರು, ಜೈನರು, ಬೌದ್ಧರು ಮತ್ತು ಪಾರ್ಸಿ ಸಮುದಾಯಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಮೀಸಲಿರಿಸಿದೆ, ಶೇ. 25 ರಷ್ಟು ಸ್ಥಾನಗಳನ್ನು ಪ.ಜಾತಿ, ಪ.ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಿರಿಸಿದೆ.

ಸೂಚನೆ: ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳು, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆರವರ ಕಛೇರಿ ಮತ್ತು ಕಾಲೇಜಿನ ಪ್ರಾಂಶುಪಾಲರ ಹಾಗೂ ಅಲ್ಪಸಂಖ್ಯಾತರ ನಿರ್ದೇಶನಾಲಯದ ಸಹಾಯವಾಣಿ ಸಂಖ್ಯೆ: - 8277799990 ಮೂಲಕ ಮಾಹಿತಿ ಪಡೆಯುವುದು ಹಾಗೂ ಹೆಚ್ಚಿನ ಮಾಹಿತಿಯನ್ನು ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ (https://dom.karnataka.gov.in)ಗೆ ಸಂಪರ್ಕಿಸುವುದು.

ಸಹಿ/-
ನಿರ್ದೇಶಕರು
ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ವಾಸಾಸಂಇ/ವಾಪ್ರ/435/25-26

ಪೊಲೀಸ್ ಇಲಾಖೆ

3ನೇ ಪಡೆ, ಕೆ.ಎಸ್.ಆರ್.ಪಿ., ರಾಜ್ಯ ಶಸ್ತ್ರಾಗಾರ, ಬೆಂಗಳೂರು–560034.

(ಎಮ್.ಎಸ್.ಟಿ.ಸಿ. ಇ–ಕಾಮರ್ಸ್ ಪೋರ್ಟಲ್ ಮೂಲಕ)

ಇ–ಹರಾಜು

Auction No. MSTC/BLR/OFFICE OF THE COMMANDANT, 3RD BATTALION K.S.R.P/1/KORAMANGALA/25-26/7157

ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆ, ರಾಜ್ಯ ಶಸ್ತ್ರಾಗಾರ, ಕೋರಮಂಗಲ, ಬೆಂಗಳೂರು– 34 ರಲ್ಲಿ ಮದ್ದುಗುಂಡುಗಳಿಗೆ ಸಂಬಂಧಿಸಿದ ಅನುಪಯುಕ್ತ ಹಿತ್ತಾಳೆ, ಅಲ್ಯೂಮಿನಿಯಂ ಖಾಲಿ ಖೋಕಾ, ವಿವಿಧ ಬಗೆಯ ಕಬ್ಬಿಣದ ವಸ್ತುಗಳು ಮತ್ತು ಕಾಟನ್ ಬಂಡೋಲಿಯರ್ಸ್‌ಗಳ ವಿಲೇವಾರಿ ಅಧಿಸೂಚನೆ ಸಂಖ್ಯೆ: 20/ರಾ.ಶ/ವಿಲೇವಾರಿ/2025–26, ದಿನಾಂಕ: 29.04.2025

(ಹರಾಜು ಅಧಿಸೂಚನೆಯ ಅರ್ಹತೆಯ ಮಾನದಂಡ, ನಿಯಮಾವಳಿ ಮತ್ತು ನಿಯಮಗಳು)

(1) ಅಧಿಸೂಚನೆಯ ದಿನಾಂಕ: 29/04/2025, (2) ಇ–ಹರಾಜು ಸ್ವೀಕಾರಕ್ಕಾಗಿ ಕೊನೆಯ ದಿನಾಂಕ ಮತ್ತು ಸಮಯ: 20/05/2025, 17.00 ಗಂಟೆಯವರೆಗೆ (3) ಬಿಡ್ ಪ್ರಾರಂಭಿಸುವ ದಿನಾಂಕ & ಸಮಯ 21/05/2025, 10.00 ರಿಂದ 17.00 ಗಂಟೆಯವರೆಗೆ

ಸಹಿ/–
ಕಮಾಂಡೆಂಟ್, 3ನೇ ಪಡೆ, ಕೆ.ಎಸ್.ಆರ್.ಪಿ.,
ರಾಜ್ಯ ಶಸ್ತ್ರಾಗಾರ, ಬೆಂಗಳೂರು–560034.

DIPR/CP/440/Zen/2025-26

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಮು.ಪ್ರ.ವ್ಯ(ತಾ)/ಉ.ಪ್ರ.ವ್ಯ(ಪ್ರೊ&ಎಪಿಸಿಸಿ)/ಕಾನಿಇಂ(ಪ್ರೊ)–2/ಸ.ಕಾ.ನಿ.ಇಂ–4/2025–26/231–40

ದಿನಾಂಕ:02.05.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಈ ಕೆಳಕಂಡ ವಿಚಾರಣೆ ಸಂಖ್ಯೆಗಳ ಮೂಲಕ ಕೆಳಕಂಡ ಕಾಮಗಾರಿಗಳಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ.

ವಿಚಾರಣಾ ಸಂಖ್ಯೆ/ಕಾಮಗಾರಿಯ ವಿವರ

ಕವಿಪ್ರನಿನಿ/2025–26/ಟಿಎಲ್/ವರ್ಕ್_ಇಂಡೆಂಟ್2222

ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನಲ್ಲಿ 28.564 ಕಿ.ಮೀ. ಉದ್ದದ ಹಾಲಿಯಿರುವ 220ಕೆವಿ ಅಂಚೆಪಾಳ್ಯ ಉಪಕೇಂದ್ರದ 66ಕೆವಿ ಅಂಚೆಪಾಳ್ಯ–66ಕೆವಿ ಯಡಿಯೂರು ಉಪಕೇಂದ್ರದವರೆಗೆ ಜೋಡಿ ಗೋಪುರಗಳ ಮೇಲೆ ಒಂಟಿ ಮಾರ್ಗದ ತಿಪ್ಪೂರು ಉಪಕೇಂದ್ರಕ್ಕೆ ಒಳ ಮತ್ತು ಹೊರಹೋಗುವ ವಿದ್ಯುತ್ ಮಾರ್ಗದಲ್ಲಿನ ಪ್ರಸ್ತುತ ವಾಹಕವನ್ನು ಬದಲಾಯಿಸಿ ಹೆಚ್‌ಟಿಎಲ್‌ಎಸ್ (ಹೆಚ್‌ಪಿಸಿ) ವಾಹಕವನ್ನು ಅಳವಡಿಸಿ ಮಾರ್ಗ ಬಲಪಡಿಸುವುದು ಹಾಗೂ 220ಕೆವಿ ಅಂಚೆಪಾಳ್ಯ ಮತ್ತು 66ಕೆವಿ ಯಡಿಯೂರು ಉಪಕೇಂದ್ರಗಳಲ್ಲಿ ಒಂದು 66ಕೆವಿ ಬೇಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ ನಿರ್ಮಾಣ ಮಾಡುವುದು, ಎಲ್ಲಾ ಉಪಕರಣಗಳ/ಸಾಮಗ್ರಿಗಳ ಸರಬರಾಜು ಮತ್ತು ಸ್ಥಾಪನೆ, (ಸಿವಿಲ್ ಕಾಮಗಾರಿಯನ್ನು ಒಳಗೊಂಡಂತೆ), ಪರೀಕ್ಷಿಸುವುದು ಮತ್ತು ಕಾರ್ಯಾರಂಭಗೊಳಿಸುವುದು.

ಬಿಡ್ ಸಲ್ಲಿಕೆಗೆ ಕೊನೆಯ **ದಿನಾಂಕ:04.06.2025, 15.00 ಗಂಟೆ.**

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್: **https://kptcl.karnataka.gov.in** ನ ಹೈಪರ್‌ಲಿಂಕ್ "E Procurement KPTCL" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ: 05.05.2025 ರಂದು ಅಥವಾ ನಂತರದಿಂದ** ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕವನ್ನು ವಿಸ್ತರಿಸಿದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಬಿಡ್ಡುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು/ ಸೇರ್ಪಡೆಗಳನ್ನು ಗಮನಿಸತಕ್ಕದ್ದು.

**ಸಹಿ/– ಮುಖ್ಯ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ,
ಕ.ವಿ.ಪ್ರ.ನಿ.ನಿ, ಕಾವೇರಿ ಭವನ, ಬೆಂಗಳೂರು–560009**

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590 018, ಕರ್ನಾಟಕ.
ದೂರವಾಣಿ : 0831–2498100 ಫ್ಯಾಕ್ಸ್ : 0831–2405467.

ಸಂಖ್ಯೆ : ವಿ.ತಾ.ವಿ./ಬೆ/ಸ್ಥಾ.ಅ./2025–26/ಐ.ಎಫ್.ಟಿ. ನಂ.16/542
ದಿನಾಂಕ : 02–05–2025

ಟೆಂಡರ್ ಪ್ರಕಟಣೆ

ದ್ವಿ–ಲಕೋಟೆ ಪದ್ಧತಿ (ಇ–ಪ್ರೊಕ್ಯೂರಮೆಂಟ್ ಮೂಲಕ)

ಕುಲಸಚಿವರು, ವಿ.ತಾ.ವಿ., ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರನ್ನು ಆಮಂತ್ರಿಸಲಾಗಿದೆ.

ಕಾಮಗಾರಿ ಹೆಸರು : ವಿ.ತಾ.ವಿ.ಯ ಯುಬಿಡಿಟಿ ಇಂಜಿನಿಯರಿಂಗ್ ಕಾಲೇಜ್ ದಾವಣಗೆರೆಯಲ್ಲಿಯ ಹೊಸ ತರಗತಿಯ ಸಂಕೀರ್ಣದಲ್ಲಿ ಸೆಮೀನಾರ ಹಾಲ್ ನಿರ್ಮಾಣ ಮಾಡುವ ಕಾಮಗಾರಿ ಮೊತ್ತ ರೂ. 1,66,04,441/– (ತೆರಿಗೆ ರಹಿತ) ಇದೇ ತರನಾದ ಕಾಮಗಾರಿಗೆ 80% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ–ಪೋರ್ಟಲ್‌ನಲ್ಲಿ ಸಲ್ಲಿಸುವುದು.

ಇತರೆ ಮಾಹಿತಿಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ದಿನಾಂಕ : 06–05–2025 ರಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು,
ವಿ.ತಾಂ.ವಿ., ಬೆಳಗಾವಿ.

ಡಿಐಪಿಆರ್/ಬೆಳಗಾವಿ/165/ಮಣಿಪಾಲ್/2025–26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಬೃ.ನೀ.ಕಾ, ದಾಸರಹಳ್ಳಿ ವಲಯ, ಬೃಬೆಂಮಪಾಲಿಕೆ, 9ನೇ ಮಹಡಿ, ಜಯನಗರ ವಾಣಿಜ್ಯ ಸಂಕೀರ್ಣ, ಜಯನಗರ 4ನೇ ಬ್ಲಾಕ್, ಬೆಂಗಳೂರು – 560 011.

ಸಂಖ್ಯೆ: ಕಾಪಾಅ/ಬೃನೀಕಾ/ದಾಹವ/ಟೆಂಡರ್/02/2024–25 ದಿನಾಂಕ: 02.05.2025

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)

ದ್ವಿಲಕೋಟೆ ಪದ್ಧತಿ (2ನೇ ಕರೆ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬೃ.ನೀ.ಕಾ–ದಾಸರಹಳ್ಳಿ ವಲಯ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರು ಬೃ.ಬೆಂ.ಮ.ಪಾಲಿಕೆಯಲ್ಲಿ ಅಥವಾ ಸಮನಾಂತರವಾಗಿ ಸಿ.ಪಿ.ಡಬ್ಲ್ಯೂ.ಡಿ/ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್/ಎಂ.ಇ.ಎಸ್/ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆಳಗೆ ತಿಳಿಸಿರುವ ಕಾಮಗಾರಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (ಸ್ಟ್ಯಾಂಡರ್ಡ್ ಟೆಂಡರ್ ದಾಖಲೆ–ಕೆಡಬ್ಲ್ಯೂ4)

ಕ್ರ ಸಂ.	ಕಾಮಗಾರಿಯ ಹೆಸರು
1.	ದಾಸರಹಳ್ಳಿ ವಲಯದಲ್ಲಿ ಬಾಹ್ಯ ಹಣಕಾಸು ಯೋಜನೆಯೊಂದಿಗೆ (ವಿಶ್ವ ಬ್ಯಾಂಕ್) ಕರ್ನಾಟಕ ಜಲ ಸಂರಕ್ಷಣೆ ಮತ್ತು ಚೇತರಿಕೆ / ಸ್ಥಿತಿಸ್ಥಾಪಕತ್ವ ಯೋಜನೆ (ಕೆಡಬ್ಲ್ಯೂಎಸ್‌ಆರ್‌ಪಿ) ಅಡಿಯಲ್ಲಿ ಆರ್‌ಸಿಸಿ ತಡೆಗೋಡೆಗಳು, ನೀರು ರಿಟೆನ್ಷನ್ ರಚನಾತ್ಮಕಗಳು, ಪರಿಸರ ಆಧಾರಿತ ಪರಿಹಾರ ರಚನಾತ್ಮಕಗಳು /ಸೇತುವೆಗಳು ಮತ್ತು ಕಲ್ವರ್ಟ್‌ಗಳನ್ನು ಒಳಗೊಂಡಂತೆ ಬೃಹತ್ ನೀರು ಕಾಲುವೆಗೆ ಪ್ರವಾಹ ರಕ್ಷಣೆ ರಚನಾತ್ಮಕಗಳನ್ನು ನಿರ್ಮಾಣ ಮಾಡುವುದು. ಪ್ಯಾಕೇಜ್–1 ಟೆಂಡರಿಗಿಟ್ಟ ಮೊತ್ತ: ₹.16638.00 ಲಕ್ಷಗಳು, ಇಎಂಡಿ ₹.1,00,000.00 ಕೆಪಿಪಿ ಪೋರ್ಟಲ್ ಮೂಲಕ ಮತ್ತು 1,65,38,000.00 ಬಿಜಿ ಮೂಲಕ ಕಾಪಾಅ ಬೃ.ನೀ.ಕಾ–ದಾಸರಹಳ್ಳಿ ವಲಯ, ಇವರ ಹೆಸರಿನಲ್ಲಿ

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ **03.05.2025**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಬಿಡ್ ಪೂರ್ವಭಾವಿ ಸಭೆಯನ್ನು ಪ್ರಧಾನ ಅಭಿಯಂತರರು ಮತ್ತು ನಿಯೋಜಿತ ಮುಖ್ಯ ಅಭಿಯಂತರರು, ಬೃಹತ್ ನೀರು ಕಾಲುವೆ, ಬೃ.ಬೆಂ.ಮ.ಪಾಲಿಕೆ, ಕೊಠಡಿ ಸಂ. 108, ಅನೆಕ್ಸ್–2 ಕಟ್ಟಡ, 1ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹರಾಜ ಚೌಕ, ಬೆಂಗಳೂರು–560 002 ಇಲ್ಲಿ ದಿನಾಂಕ **15.05.2025**ರ ಸಂಜೆ **4:00** ಗಂಟೆಗೆ ನಡೆಸಲಾಗುವುದು. (3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **26.05.2025**ರ ಸಂಜೆ **5:00** ಗಂಟೆಯವರೆಗೆ. (4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **27.05.2025**ರ ಸಂಜೆ **5:30** ಗಂಟೆಗೆ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (5) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕವಾಗಿ ಯಶಸ್ವಿ ಅರ್ಹರಾದ ಬಿಡ್ಡರುಗಳಿಗೆ ಕೆಪಿಪಿ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.

**ಸಹಿ/– ಕಾರ್ಯಪಾಲಕ ಅಭಿಯಂತರರು,
ಬೃ.ನೀ.ಕಾ, ದಾಸರಹಳ್ಳಿ ವಲಯ**

ಪ್ರಜ್ವಲ್ ರೇವಣ್ಣ ವಿರುದ್ಧ ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಕೆಲಸದಾಕೆ ಮೇಲೆ ಅತ್ಯಾಚಾರ ಎಸಗಿದ ಆರೋಪದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆರಂಭಿಸಿದ್ದು, ಶುಕ್ರವಾರ ಪ್ರಕರಣದ ಮುಖ್ಯ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿತು.

ಈ ಕುರಿತ, 'ಇನ್ ಕ್ಯಾಮರಾ' ಪ್ರಕ್ರಿಯೆಯ ಮುಖಾಂತರದ ವಿಚಾರಣೆಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ನಡೆಸಿದರು.

ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಅಶೋಕ್ ಎನ್.ನಾಯಕ್ ಅವರಿಂದ ಮುಖ್ಯ ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಿದ ನ್ಯಾಯಾಧೀಶರು ಪಾಟಿ ಸವಾಲಿಗೆ ಅವಕಾಶ ನೀಡಿ ವಿಚಾರಣೆಯನ್ನು ಶನಿವಾರಕ್ಕೆ (ಮೇ 3) ಮುಂದೂಡಿದರು.

ವಜಾ: 'ಪ್ರಜ್ವಲ್ ರೇವಣ್ಣ ವಿರುದ್ಧದ

ಅತ್ಯಾಚಾರ ಆರೋಪಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಸಾಕ್ಷಿ ವಿಚಾರಣೆಗೆ ತಡೆ ನೀಡಬೇಕು ಹಾಗೂ ಆರೋಪಿಯು ತಮ್ಮ ವಕೀಲರನ್ನು ನೇಮಕ ಮಾಡಿಕೊಳ್ಳಲು ಕನಿಷ್ಠ 7 ದಿನ ಕಾಲಾವಕಾಶ ನೀಡಬೇಕು' ಎಂದು ಕೋರಿ ಪ್ರಜ್ವಲ್ ಪರ ತಾಯಿ, ಭವಾನಿ ರೇವಣ್ಣ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ವಿಚಾರಣೆ ಮುಂದೂಡಿಕೆ ಮನವಿಯನ್ನು ಪ್ರಾಸಿಕ್ಯೂಷನ್ ಪರ ವಕೀಲರೂ ಆದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮಕುಮಾರ್ ಬಲವಾಗಿ ಆಕ್ಷೇಪಿಸಿದರು. ಇದನ್ನು ಮಾನ್ಯ ಮಾಡಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ವಿಚಾರಣೆ ಮುಂದೂಡಿಕೆ ಮನವಿಯನ್ನು ಪುರಸ್ಕರಿಸಿ ನಿರ್ದೇಶಿಸಿದರೆ ಅದು ವಿಚಾರಣಾ ನ್ಯಾಯಾಲಯದ ಸ್ಥೈರ್ಯ ಕುಂದಿಸಿದಂತಾಗುತ್ತದೆ' ಎಂಬ ಅಭಿಪ್ರಾಯದೊಂದಿಗೆ ಅರ್ಜಿ ವಜಾಗೊಳಿಸಿತು.

ಅಟಲ್ ಭೂಜಲ ಯೋಜನೆ

(ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ)

ಯೋಜನಾ ನಿರ್ದೇಶಕರ ಕಛೇರಿ, ರಾಜ್ಯ ಕಾರ್ಯಕ್ರಮ ನಿರ್ವಹಣಾ ಘಟಕ (SPMU), ನಂ1/1, 2ನೇ ಮಹಡಿ, ಕೆಎಸ್‌ಎಫ್‌ಸಿ ಭವನ, ತಿಮ್ಮಯ್ಯ ರಸ್ತೆ, ಬೆಂಗಳೂರು–560 052.

No: ABHY/SPMU/PROC/02/340/2025-26 Date: 02.05.2025

ಅಲ್ಪಾವಧಿ ಟೆಂಡರ್ ಅಧಿಸೂಚನೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಎಸ್.ಪಿ.ಎಂ.ಯು, ಅಟಲ್ ಭುಜಲ್ ಯೋಜನೆ, ಕೆಪಿಪಿ ಪೋರ್ಟಲ್ ಮೂಲಕ ಅರ್ಹ ಬಿಡ್‌ದಾರರಿಂದ **"Construction of wire screen filter injection well for artificial recharge of groundwater along with 2 year operation and maintenance in Atal Bhujal Yojana, Karnataka"** ಇಲ್ಲಿಗೆ ಸೇವೆಯನ್ನು ಒದಗಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ಅರ್ಹತೆ ಮತ್ತು ಇತರ ವಿವರಗಳಿಗೆ ಸಂಬಂಧಿಸಿದ ವಿವರವಾದ ಅಧಿಸೂಚನೆಯನ್ನು **https://kppp.karnataka.gov.in** ಗೆ ಲಾಗ್ ಇನ್ ಮಾಡುವ ಮೂಲಕ ಪಡೆಯಬಹುದು. ಟೆಂಡರ್ ಡಾಕ್ಯುಮೆಂಟ್ ಅನ್ನು **ದಿನಾಂಕ: 03.05.2025** ರಿಂದ ಕೆಪಿಪಿ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಬಹುದು ಮತ್ತು ಟೆಂಡರ್ ಸಲ್ಲಿಸಲು **ಕೊನೆಯ ದಿನಾಂಕ: 12.05.2025 ರ 17.30 ಗಂಟೆಗಳು ಆಗಿರುತ್ತದೆ.**

ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ **ಬೆಳಗ್ಗೆ 10:00 ಗಂಟೆಯಿಂದ ಸಂಜೆ 5:30 ಗಂಟೆಗಳವರೆಗೆ ಪಡೆಯಬಹುದು.**

ಸಹಿ/–
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಎಸ್.ಪಿ.ಎಂ.ಯು, ಅಟಲ್ ಜಲ್, ಕರ್ನಾಟಕ

DIPR/CP/AAPL/RO449/25-26

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಎಂಪಿಇಡಿ–ಕೇಂದ್ರ, ಅನೆಕ್ಸ್–2 ಕಟ್ಟಡ, ನೆಲಮಹಡಿ, ಬಿಬಿಎಂಪಿ ಕೇಂದ್ರ ಕಛೇರಿ ಆವರಣ, ಎನ್‌ಆರ್ ಚೌಕ, ಬೆಂಗಳೂರು–560002

ನಂ.: ಕಾಪಾಅ/ಎಂಪಿಇಡಿ–ಕೇಂದ್ರ/ಟೆಂಡರ್/01/2025–26 ದಿನಾಂಕ: 02.05.2025

ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ ಲಕೋಟೆ ಪದ್ಧತಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ಜಿಒಕೆ ಕೆಪಿಪಿ–ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಎಂಪಿಇಡಿ–ಕೇಂದ್ರ ಇವರು ಅರ್ಹ ಟೆಂಡರ್‌ದಾರರಿಂದ ಈ ಕೆಳಗೆ ವಿವರಿಸಿರುವ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಕೇಂದ್ರ ಕಛೇರಿ ಆವರಣದಲ್ಲಿರುವ ಕೆಂಪೇಗೌಡ ಕೌನ್ಸಿಲ್ ಸಭಾಂಗಣಕ್ಕೆ ಮ್ಯೂರಲ್ ಕೆಲಸಗಳು, ಇಟಾಲಿಯನ್ ಮಾರ್ಬಲ್, ಆಡಿಯೋ ಕೇಬಲ್ ಹಾಕುವುದು, ಮೈಕ್ ಅಳವಡಿಸುವುದು, ಟಾಯ್ಲೆಟ್ ಫಿಕ್ಚರ್‌ಗಳು ಮತ್ತು ಇತರೆ ಸಂಬಂಧಿತ ಕಾಮಗಾರಿಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) (ಜಿಎಸ್‌ಟಿ ಹೊರತುಪಡಿಸಿ):** 249.29, **ಇಎಂಡಿ ಮೊತ್ತ (ರೂ.ಗಳಲ್ಲಿ):** 3,74,000.00.

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ **03.05.2025** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಕೆಪಿಪಿ ಪೋರ್ಟಲ್ ಮೂಲಕ ಪ್ರಶ್ನೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ **12.05.2025**ರ **ಸಂಜೆ 5:30 ಗಂಟೆಗೆ** ಮುಂಚಿತವಾಗಿ. (3) ಪೂರ್ವಭಾವಿ ಸಭೆಯು ದಿನಾಂಕ **13.05.2025**ರ **ಸಂಜೆ 4:00 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ (ಯೋಜನೆಗಳು ಕೇಂದ್ರ), 4ನೇ ಮಹಡಿ, ಅನೆಕ್ಸ್–3 ಕಟ್ಟಡ, ಬಿಬಿಎಂಪಿ ಕೇಂದ್ರ ಕಛೇರಿ ಆವರಣ, ಎನ್‌ಆರ್ ಚೌಕ, ಬೆಂಗಳೂರು–560002 ಇಲ್ಲಿ ನಡೆಯಲಿದೆ. (4) ಟೆಂಡರ್‌ಗಳನ್ನು ಆನ್‌ಲೈನ್ ಕೆಪಿಪಿ ಪೋರ್ಟಲ್ ಮೂಲಕ ದಿನಾಂಕ **20.05.2025**ರ **ಸಂಜೆ 5:00 ಗಂಟೆಗೆ** ಮುಂಚಿತವಾಗಿ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ **21.05.2025**ರ **ಸಂಜೆ 5:30 ಗಂಟೆಗೆ** ಕಾರ್ಯಪಾಲಕ ಅಭಿಯಂತರರ ಕಛೇರಿ, ಎಂಪಿಇಡಿ–ಕೇಂದ್ರ ವಿಭಾಗ ಇಲ್ಲಿ ವೆಬ್‌ಸೈಟ್ **https://kppp.karnataka.gov.in** ಮೂಲಕ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/–, ಕಾರ್ಯಪಾಲಕ ಅಭಿಯಂತರರು, ಎಂಪಿಇಡಿ–ಕೇಂದ್ರ, ಬಿಬಿಎಂಪಿ

ಇ–ಮೇಲ್ 'ಬಾಂಬ್': ಆತಂಕ

ನನಗೆ ಬೆದರಿಕೆ ಕರೆ ಬಂದಿರುವ ವಿಷಯವನ್ನು ಸದನದ ಹಕ್ಕುಬಾಧ್ಯತಾ ಸಮಿತಿ ಗಮನಕ್ಕೆ ತಂದಿದ್ದೇನೆ. ಮುಂದಿನ ಕ್ರಮ ಅಲ್ಲಿ ನಿರ್ಧಾರವಾಗುತ್ತದೆ

ಯು.ಟಿ. ಖಾದರ್, ವಿಧಾನಸಭಾಧ್ಯಕ್ಷ

ಒಂದನೇ ಪುಟದಿಂದ...

'ಇ–ಮೇಲ್ ಬಂದಿರುವ ಬಗ್ಗೆ ನಜರ್‌ಬಾದ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಲಾಡ್ಜ್, ಬಸ್ ನಿಲ್ದಾಣ, ಮಾರುಕಟ್ಟೆ, ಹೋಟೆಲ್ ಮುಂತಾದ ಸಾರ್ವಜನಿಕರು ಸೇರುವ ಸ್ಥಳಗಳಲ್ಲಿ ಭದ್ರತೆ ಹೆಚ್ಚಿಸಲಾಗಿದೆ. ಮೇಲ್ ಕಳುಹಿಸಿದವರು ಯಾರು ಎಂಬುದನ್ನು ಪತ್ತೆಹಚ್ಚಲು ತನಿಖೆ ಮುಂದುವರಿಸಿದ್ದೇವೆ' ಎಂದು ಹೇಳಿದರು.

ಸಿಬ್ಬಂದಿ ಹೊರ ಕಳುಹಿಸಿದ ಡಿ.ಸಿ: ಚಾಮರಾಜನಗರದ ಜಿಲ್ಲಾಡಳಿತ ಭವನದಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಇ– ಮೇಲ್ ಸಂದೇಶದಿಂದಾಗಿ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶುಕ್ರವಾರವಿಡೀ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಬೆಳಿಗ್ಗೆ 7.10ಕ್ಕೆ ಅಜ್ಮಲ್ ಜಕ್ಕುಮೊಲ ಎಂಬ ಖಾತೆಯಿಂದ ಜಿಲ್ಲಾಧಿಕಾರಿ ಕಚೇರಿಯ ಅಧಿಕೃತ ಇ– ಮೇಲ್‌ಗೆ ಸಂದೇಶ ಬಂದಿದೆ. ಜಿಲ್ಲಾಧಿಕಾರಿ ಶಿಲ್ಪಾನಾಗ್ ಹಾಗೂ ಎಡಿಸಿ ಬಿ.ಟಿ. ಕವಿತಾ ಕಚೇರಿಯ ಸಿಬ್ಬಂದಿಯನ್ನು ಹೊರಗೆ ಕಳುಹಿಸಿದರು.

ಬಳಿಕ ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಜಿಲ್ಲಾಡಳಿತ ಭವನವನ್ನು ಪೂರ್ತಿ ತಪಾಸಣೆ ನಡೆಸಿದರು. ಆದರೆ, ಬಾಂಬ್ ಪತ್ತೆಯಾಗಲಿಲ್ಲ. 'ಮೇಲ್ನೋಟಕ್ಕೆ ಹುಸಿ ಬಾಂಬ್ ಬೆದರಿಕೆಯಂತೆ ಕಂಡುಬಂದಿದ್ದು ಮುಂಜಾಗ್ರತಾ ಕ್ರಮವಾಗಿ ಭವನಕ್ಕೆ ಭದ್ರತೆ ಹೆಚ್ಚಿಸಲಾಗಿದೆ' ಎಂದು ಕವಿತಾ ಮಾಹಿತಿ ನೀಡಿದರು.

ಜಿಲ್ಲಾಡಳಿತ ನೀಡಿದ ದೂರಿನ ಮೇರೆಗೆ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಂದೇಶದ ಮೂಲ ಪತ್ತೆಗೆ ವಿಶೇಷ ತಂಡಗಳನ್ನು ರಚಿಸಲಾಗಿದೆ ಎಂದು ತಿಳಿಸಿದರು.

ತಮಿಳು ಭಾಷೆಯಲ್ಲಿ ಇ–ಮೇಲ್: ರಾಯಚೂರು ಜಿಲ್ಲಾಧಿಕಾರಿ ಕಚೇರಿಯಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಸಂದೇಶವು ಜಿಲ್ಲಾಧಿಕಾರಿ ಕಚೇರಿಯ ಇ–ಮೇಲ್‌ಗೆ ಶುಕ್ರವಾರ ಬಂದಿದ್ದರಿಂದ ನಗರದ ಹೊಸ ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಲಕಾಲ ಆತಂಕ ಸೃಷ್ಟಿಯಾಗಿತ್ತು.

ತಮಿಳು ಭಾಷೆಯಲ್ಲಿ ಕಳುಹಿಸಿದ್ದ ಇಮೇಲ್ ವೀಕ್ಷಿಸಿದ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು, ತಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮಾಹಿತಿ ನೀಡಿದರು. ನಂತರ ಅಧಿಕಾರಿಗಳು ಹಾಗೂ ಕಚೇರಿ ಸಿಬ್ಬಂದಿ ಹೊರಗಡೆ ಬಂದು ಸುರಕ್ಷಿತ ಸ್ಥಳಕ್ಕೆ ತೆರಳಿದರು.

ಬಾಂಬ್ ನಿಷ್ಕ್ರಿಯ ದಳ ಹಾಗೂ ಶ್ವಾನದಳ ಬಾಂಬ್ ಶೋಧ ನಡೆಸಿದರು. ಅಲ್ಲಿ ಯಾವುದೇ ರೀತಿಯ ಸ್ಫೋಟಕ ಪತ್ತೆಯಾಗಲಿಲ್ಲ. ಹುಸಿ ಸಂದೇಶ ಎಂಬುದು ಖಚಿತವಾದ ನಂತರ ಪೊಲೀಸರು ಅಲ್ಲಿಂದ ತೆರಳಿದರು. ಇದೇ ಸಂದರ್ಭದಲ್ಲಿ ಹಳೆಯ ಕಟ್ಟಡದಲ್ಲೂ ಪೊಲೀಸರು ಶೋಧ ನಡೆಸಿದರು.

ನನಗೂ ಬೆದರಿಕೆ ಕರೆ ಬಂದಿದೆ: ಸಿ.ಎಂ

ಒಂದನೇ ಪುಟದಿಂದ...

ರೌಡಿಶೀಟರ್ ಸುಹಾಸ್ ಶೆಟ್ಟಿ ಕೊಲೆಯಾದ ಸ್ಥಳಕ್ಕೆ ಬಿಜೆಪಿಯವರು ಭೇಟಿ ನೀಡಿದ ಬಗ್ಗೆ ಪ್ರತಿಕ್ರಿಯಿಸಿ, 'ಬಿಜೆಪಿಯವರು ಯಾವಾಗಲೂ ರಾಜಕೀಯವಾಗಿ ಇಂಥ ಪ್ರಕರಣಗಳನ್ನೇ ಹುಡುಕುತ್ತಿರುತ್ತಾರೆ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ 26 ಮಂದಿ ಮೃತಪಟ್ಟರು. ಪ್ರಧಾನಿ ನರೇಂದ್ರ ಮೋದಿ ಅವರು ಆ ಸ್ಥಳಕ್ಕೆ ಭೇಟಿ ನೀಡಿದ್ದಾರೆಯೇ? ಪ್ರವಾಸಿಗರು ಸೇರುವ ಸ್ಥಳದಲ್ಲಿ ಪೊಲೀಸ್ ಆಗಲಿ, ಭದ್ರತಾ ಪಡೆಯವರನ್ನಾಗಲಿ ನಿಯೋಜಿಸಿರಲಿಲ್ಲ. ಇದು ಭದ್ರತಾ ವೈಫಲ್ಯವಲ್ಲವೇ? ಎಂದು ಕೇಳಿದರು.

'ಸುಹಾಸ್ ಶೆಟ್ಟಿ ರೌಡಿಶೀಟರ್ ಆಗಿದ್ದ ಎಂದು ಪೊಲೀಸರು ತಿಳಿಸಿದ್ದು, ಪರಿಶೀಲಿಸಿಲು ಎಡಿಜಿಪಿಗೆ ಸೂಚಿಸಿದ್ದೇನೆ. ಪ್ರಾಣ ಬಹಳ ಮುಖ್ಯ. ಅಪರಾಧಿಗಳು ಯಾರೇ ಆಗಿದ್ದರೂ ಅವರನ್ನು ಪತ್ತೆ ಹಚ್ಚಿ, ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೇನೆ' ಎಂದರು.

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

Website:-www.raichurcity.gov.in E-mail:itstaff_ulb_raichura@yahoo.com
Phone No:08532-226768 Fax No:08532-226316

ಸಂ.ರಾಮಪಾ/ತಾ/ಕಾ/ಅ/ನ.ನಿ/01,22,29,191/24–25/25–26 ದಿನಾಂಕ: 29–04–2025.

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವಳಿಗಾಗಿ ನಗರಸಭೆಯ ವೆಬ್‌ಸೈಟ್ WWW.raichurcity.mrc. gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	ಎಸ್.ಬಿ.ಎಂ. 1.0 ಅನುದಾನ	Purchasing of Proposed 50 TPD Trommel Machinery for SWM Site at Raichur City **Estimate Amount Rs. 117,00,000/-**	DMA/2024-25/PM/ WORK_INDENT35991 /Call-2
2	ಕೆ.ಕೆ.ಆರ್.ಡಿ.ಬಿ ಅನುದಾನದಲ್ಲಿ	Construction of High-Tech Toilet At Bapanayan Doddi Ward No.17 In Raichur City. **Estimate Amount Rs. 75,00,000/-**	DMA/2024-25/BD/ WORK_INDENT32857/ Call-3
3	ಮಹಾ ನಗರ ಪಾಲಿಕೆ ಅನುದಾನದಲ್ಲಿ	Providing and Erection Of Barricading Bamboo (Thatti) And Ballies For Water Kiosks (Neerina Aravatige) At Various Places In Raichur City. **Estimate Amount Rs.** 13,80,000/-	DMA/2025-26/OW/ WORK_INDENT 39361
4	2022–23ನೇ ಸಾಲಿನ ಎಸ್.ಸಿ.ಎಸ್.ಸಿ ಅನುದಾನ	Construction of RCC Drain from Singanodi John's House to Shasikala's House in Kindigeri area in Ward No 02 in Raichur City. **Estimate Amount Rs.** 12,36,000/-	DMA/2025-26/OW/ WORK_INDENT39369

ಸಹಿ/– ಆಯುಕ್ತರು
ಮಹಾನಗರ ಪಾಲಿಕೆ, ರಾಯಚೂರು

DIP/RCR/62/KSMCA/62/2025-26

ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಮಂಡ್ಯ

ಪೋಸ್ಟ್ ಬಾಕ್ಸ್ ನಂ. 10, ಮಂಡ್ಯ – 571 401 (ಕರ್ನಾಟಕ ರಾಜ್ಯ)

ನಂ:ಆರ್.ಎ.ಪಿ.ಸಿ.ಎಂ.ಎಸ್/ಸಿಬ್ಬಂದಿ ನೇಮಕಾತಿ/01/2025–26 ದಿನಾಂಕ : 29–04–2025

ನೇಮಕಾತಿ ಪ್ರಕಟಣೆ

ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಮಂಡ್ಯ ಇದರಲ್ಲಿ ಖಾಲಿ ಇರುವ ವಿವಿಧ ವೃಂದದ ಈ ಕೆಳಗಿನ ಎರಡು ಹುದ್ದೆಗಳ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಖುದ್ದಾಗಿ ಅಥವಾ ಅಂಚೆ ಮೂಲಕ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಆಸಕ್ತಿಯುಳ್ಳ ಅಭ್ಯರ್ಥಿಗಳು ನೇಮಕಾತಿಗೆ ಸಂಬಂಧಿಸಿದ ಮಾಹಿತಿಗಳಾದ ಅರ್ಜಿ ನಮೂನೆ, ಅರ್ಜಿ ಸಲ್ಲಿಸುವ ವಿಧಾನ, ವಿದ್ಯಾರ್ಹತೆ, ವಯೋಮಿತಿ ಹಾಗೂ ಅರ್ಜಿ ಶುಲ್ಕ ಸಲ್ಲಿಸಬೇಕಾದ ದಾಖಲೆಗಳು, ಆಯ್ಕೆ ವಿಧಾನ, ಸೂಚನೆಗಳು ಇತ್ಯಾದಿ ಎಲ್ಲಾ ಹೆಚ್ಚಿನ ವಿವರಗಳನ್ನು ಸಂಘದಲ್ಲಿ ಪಡೆದುಕೊಳ್ಳುವುದು.
ನೇಮಕಾತಿ ಹುದ್ದೆಗಳ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ಹುದ್ದೆಯ ಹೆಸರು	ವೇತನ ಶ್ರೇಣಿ	ನೇಮಕಾತಿ ಹುದ್ದೆಗಳ ಸಂಖ್ಯೆ	ಮೀಸಲಾತಿ
1	ಮ್ಯಾನೇಜರ್ ಜನರಲ್	ರೂ. 28100–50100 ಹಾಗೂ (ಡಿ.ಎ ಶೇ. 56.5 ಮತ್ತು ಹೆಚ್.ಆರ್.ಎ ಶೇ 10 ರಷ್ಟು)	01	ಸಾಮಾನ್ಯ
2	ಮುಖ್ಯ ಲೆಕ್ಕಾಧಿಕಾರಿ	ರೂ. 28100 – 50100 ಹಾಗೂ (ಡಿ.ಎ ಶೇ. 56.5 ಮತ್ತು ಹೆಚ್.ಆರ್.ಎ ಶೇ. 10 ರಷ್ಟು)	01	ಸಾಮಾನ್ಯ
ಒಟ್ಟು ನೇಮಕಾತಿ ಹುದ್ದೆಗಳ ಸಂಖ್ಯೆ			02	

ಈ ಕುರಿತು ಹೆಚ್ಚಿನ ಮಾಹಿತಿಯು ಸಂಘದಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಸಂಘಕ್ಕೆ ಭೇಟಿ ನೀಡಿ ಪಡೆದುಕೊಳ್ಳುವುದು.
ನೇಮಕಾತಿಗೆ ಅರ್ಜಿಯನ್ನು **ದಿನಾಂಕ: 03–05–2025** ರಿಂದ ದಿನಾಂಕ : **31–05–2025** ರವರೆಗೆ ಸಲ್ಲಿಸಬಹುದಾಗಿದೆ.

ಸಹಿ/– ಸದಸ್ಯ ಕಾರ್ಯದರ್ಶಿ, ನೇಮಕಾತಿ ಸಮಿತಿ ಹಾಗೂ
ವ್ಯವಸ್ಥಾಪಕ ನಿರ್ದೇಶಕರು, ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ., ಮಂಡ್ಯ

ನ್ಯಾಯಾಧೀಶರ ವರ್ಗಾವಣೆ

ಬೆಂಗಳೂರು: ರಾಜ್ಯದ ವಿವಿಧ ನ್ಯಾಯಾಲಯಗಳ ಜಿಲ್ಲಾ ಹಾಗೂ ಸಿವಿಲ್ ನ್ಯಾಯಾಧೀಶರನ್ನು ವರ್ಗಾವಣೆಗೊಳಿಸಿ ಹೈಕೋರ್ಟ್ ಆದೇಶಿಸಿದೆ. ಈ ವರ್ಗಾವಣೆ ಆದೇಶವು 2025ರ ಜೂನ್ 2ರಿಂದ ಅನ್ವಯವಾಗಲಿದೆ. ಒಟ್ಟು 119 ಜಿಲ್ಲಾ ನ್ಯಾಯಾಧೀಶರು, 113 ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ 216 ಸಿವಿಲ್ ನ್ಯಾಯಾಧೀಶರನ್ನು ವರ್ಗಾವಣೆಗೊಳಿಸಿ ಹೈಕೋರ್ಟ್, ರಿಜಿಸ್ಟ್ರಾರ್ ಜನರಲ್ ಎಸ್.ಭರತ್ ಕುಮಾರ್ ಶುಕ್ರವಾರ ಅಧಿಸೂಚನೆ ಹೊರಡಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಹೈಕೋರ್ಟ್‌ನ ಅಧಿಕೃತ ವೆಬ್‌ಸೈಟ್ ವೀಕ್ಷಿಸಬಹುದು.

'ರಾಜ್ಯಪಾಲರು ಪತ್ರ ಬರೆದದ್ದು ನಿಜ'

ಬೆಂಗಳೂರು: '18 ಬಿಜೆಪಿ ಶಾಸಕರ ಅಮಾನತನ್ನು ರದ್ದುಪಡಿಸಿ ಎಂದು ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನನಗೆ ಪತ್ರ ಬರೆದದ್ದು ನಿಜ' ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಹೇಳಿದರು.

ಮಾಧ್ಯಮಗೋಷ್ಠಿಯಲ್ಲಿ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, 'ಬಿಜೆಪಿ ಶಾಸಕರು ಮತ್ತು ನಾಯಕರ ನಿಯೋಗವು ರಾಜ್ಯಪಾಲರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತ್ತು. ಅದರ ಬೆನ್ನಲ್ಲೇ ರಾಜ್ಯಪಾಲರು ಪತ್ರ ಬರೆದಿದ್ದಾರೆ. ನಾನು ಪ್ರವಾಸದಲ್ಲಿ ಇದ್ದ ಕಾರಣ, ಕರೆಮಾಡಿ ಅವರೊಂದಿಗೆ ಚರ್ಚಿಸಿದೆ' ಎಂದರು. 'ರಾಜ್ಯಪಾಲರ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ನಿಯಮಾನುಸಾರ ಉತ್ತರ ಬರೆಯುತ್ತೇನೆ' ಎಂದರು.

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001.

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ /ಸೂಚನೆ

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿ ಸಂರಕ್ಷಣಾ ಕಾಯ್ದೆ, 2004 ರ ಅಡಿಯಲ್ಲಿ ಸರ್ಕಾರವು ಸ್ಥಿರಾಸ್ತಿ ಸ್ವತ್ತುಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದು, ಮಾನ್ಯ ವಿಶೇಷ ನ್ಯಾಯಾಲಯವು ಕೆಪಿಐಡಿಎಫ್‌ಇ ಕಾಯ್ದೆ ಅಡಿಯಲ್ಲಿ ಸ್ಥಿರೀಕರಿಸಿದ ಆದೇಶದ ಅನುಸಾರವಾಗಿ, ವಿಶೇಷ ಅಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರದ ವತಿಯಿಂದ ಸ್ಥಿರಾಸ್ತಿ ಸ್ವತ್ತುಗಳನ್ನು ಇ–ಹರಾಜಿನ ಮೂಲಕ ವಿಲೇವಾರಿ ಮಾಡಲು ಪ್ರಕಟಣೆಯನ್ನು ಹೊರಡಿಸಲಾಗಿದೆ. (ಎಲ್ಲಿದೇಯೋ, ಹೇಗಿದೇಯೋ, ಯಾವ ಸ್ಥಿತಿಯಲ್ಲಿದೇಯೋ ಅದೇ ಆಧಾರದ ಮೇಲೆ) **(as is where is and whatever there is basis')** ಆಸಕ್ತ ಬಿಡ್‌ದಾರರು ಅರ್ನೆಸ್ಟ್ ಮನಿ ಡೆಪಾಸಿಟ್ **(EMD)** ಅನ್ನು ಒದಗಿಸಬೇಕಾಗುತ್ತದೆ (ಸೇವಾ ಪೂರೈಕೆದಾರರು/ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಒದಗಿಸಿದ ಇ–ಪೋರ್ಟಲ್‌ನಲ್ಲಿ ಮಾತ್ರ)

Short description of the Immovable Property (SPLOCA/AUC(2)/CR/10/2025-26)

Properties are free of all encumbrances and are in the name of Competent Authority appointed by Government and confirmed by the Special Court under KPIDFE Act, 2004. (Khata stands in the name of Competent Authority and Auctioning Authority)

Sl. No.	DETAILS OF THE SCHEDULE PROPERTY (Clear Title by Court in order No. MISC No. 707/2019)	Minimum Bid Price (Rs)	EMD (Rs)	Bid Increase Value (Rs)
1.	No.7/2, PID No. 76-36-7/2, Alexandra Street, Richmond Town, Old Ward No. 76 New Ward No. 117, Shanthinagara, Bengaluru. East to west toward East 65' 3 & Towards West 51+ 10 ft & North to South Towards North 59 ft & toward South 68 ft Aggregating 4010 sq.ft (Ground + 6 Floor) Location: https://maps.app.goo.gl/GB9VyYJrwfcfagiS8			
(a)	1st floor, Flat No. FF-101, UDS-369.50, SBA-1715.625 sq.ft	2,64,30,000/-	26,43,000/-	2,65,000/-
(b)	1st floor, Flat No. FF-102, UDS-359.41, SBA-1668.75 sq.ft	2,57,20,000/-	25,72,000/-	2,58,000/-
(c)	2nd floor, Flat No. SF-201, UDS-369.50, SBA-1715.625 sq.ft	2,66,90,000/-	26,69,000/-	2,67,000/-
(d)	2nd floor, Flat No. SF-202, UDS-359.41, SBA-1668.75 sq.ft	2,59,80,000/-	25,98,000/-	2,60,000/-
(e)	4th floor, Flat No.FRT-401, UDS-369.50, SBA-1715.625 sq.ft	2,63,00,000/-	26,30,000/-	2,63,000/-
(f)	4th floor, Flat No.FRT-402, UDS-359.41, SBA-1668.75 sq.ft	2,56,00,000/-	25,60,000/-	2,56,000/-
(g)	5th floor, Flat No.FTF-500, UDS-711, SBA-3301.25 sq.ft	5,02,10,000/-	50,21,000/-	5,03,000/-
(h)	6th floor, Pent House No.501, UDS-383.37, SBA-1780 sq.ft	2,74,10,000/-	27,41,000/-	2,75,000/-

ಪೂರ್ವ ಭಾವಿ ಬಿಡ್ ಸಭೆ ದಿನಾಂಕ ಮತ್ತು ಸಮಯ	ಸ್ಥಳ ಪರಿಶೀಲನೆ ದಿನಾಂಕ ಮತ್ತು ಸಮಯ	ಬಿಡ್ ದಾಖಲೆಗಳು ಮತ್ತು ಇಎಂಡಿ ಸಲ್ಲಿಸಲು ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
12ನೇ ಜೂನ್ 2025 ಮಧ್ಯಾಹ್ನ 3 ರಿಂದ 4 ಗಂಟೆ ಸ್ಥಳ: O/o SPLOCA, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಟವರ್, ಬೆಂಗಳೂರು–01	13ನೇ ಜೂನ್ 2025 ಬೆಳಗ್ಗೆ 11 ರಿಂದ ಸಂಜೆ 5 ಗಂಟೆಯವರೆಗೆ	17ನೇ ಜೂನ್ 2025 ಸಂಜೆ 5 ಗಂಟೆಯವರೆಗೆ	18ನೇ ಜೂನ್ 2025 ಬೆಳಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ

ಆಸಕ್ತ ಬಿಡ್‌ದಾರರು ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ **https://kppp.karnataka.gov.in** ಇಲ್ಲಿಗೆ ಲಾಗಿನ್ ಮಾಡಬಹುದು (ಸಹಾಯವಾಣಿ ಸಂಖ್ಯೆ: 080–46010000, 080–68948777) ಮತ್ತು ಇ–ಹರಾಜಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯ ಬಗ್ಗೆ ಸಹಾಯಕ ಆಯುಕ್ತರು, ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಗಳ ಕಛೇರಿ, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರನ್ನು ಸಂಪರ್ಕಿಸಬಹುದು. ಇ–ಮೇಲ್ ಐಡಿ: **splocaeauction@gmail.com** ಅಥವಾ ಮೊಬೈಲ್ ಸಂಖ್ಯೆ 6364403715 ಅನ್ನು ಸಂಪರ್ಕಿಸಬಹುದು.

ಸ್ಥಳ: ಬೆಂಗಳೂರು
ದಿನಾಂಕ: 29.04.2025

DIPR/CP/ /Zen/2025-26

ಸಹಿ/– ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿ
(ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು), ಬೆಂಗಳೂರು, ಕರ್ನಾಟಕ

ಕರ್ನಾಟಕ ಸರ್ಕಾರ

ಜಲ ಸಂಪನ್ಮೂಲ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ.

ಕಾರ್ಯಪಾಲಕ ಇಂಜಿನೀಯರ ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಕೊಪ್ಪಳ.
E-mail: eemidnkst@rediffmail.com

ಕ್ರ.ಸಂ: ಕಾನಿಇಂ/ಸನೀ&ಅಂಅವಿ/ಕೊಪ್ಪಳ/ತಾಶಾ/2024–25/1522 ದಿನಾಂಕ:28.04.2025

ತಿದ್ದುಪಡಿ ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಉಲ್ಲೇಖ :– ಈ ಕಛೇರಿ ಅಲ್ಪಾವಧಿ ಟೆಂಡರ ಪ್ರಕಟಣೆ ಸಂಖ್ಯೆ: 1484 ದಿನಾಂಕ: 24.04.2025

01) ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಜಕ್ಕೆರಿಮಡು, ವಟಗಲ್, ವೀರಪುರ, ಸಾನಬಾಳ್, ಮಸ್ಕಿ, ರಂಗಾಪುರ, ಮಾರಲದಿನ್ನಿ, ಯಸಗಲ್,ಸಾಹುತ್ತಿಗುಡ್ಡ,ಯಲಗಟ್ಟಾ ಮತ್ತು ಬಸಾಪುರ ಗ್ರಾಮಗಳಲ್ಲಿನ 14 ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು. (2024–25 ನೇ ಸಾಲಿನಲ್ಲಿ ಟಿಎಸ್‌ಪಿ ಅಡಿಯಲ್ಲಿ). 2) ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲೂಕಿನ ಅಮೀನಗಡ, ತೂಪ್ಪದೂರು, ಪಾಮನಕಲ್ಲೂರು, ಬೆನಕನಾಳ್, ನಾಗರಬೆಂಚಿ, ಬಸಾಪುರ ಮತ್ತು ಮುದಬಾಳ ಗ್ರಾಮಗಳ 09 ರೈತರಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು. (2024–25 ವರ್ಷಕ್ಕೆ SCP ಅಡಿಯಲ್ಲಿ). 3) ರಾಯಚೂರು ಜಿಲ್ಲೆಯ ಮಸ್ಕಿ ತಾಲೂಕಿನ ಮಟ್ಟೂರು ತಾಂಡಾ ಮತ್ತು ಸಾನಬಾಳ ಗ್ರಾಮಗಳಲ್ಲಿ ಆಯ್ಕೆಯಾದ 02 ರೈತರ ಜಮೀನು ಫಲಾನುಭವಿಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು (2024–25 ನೇ ಸಾಲಿನ ಎಸ್‌ಸಿಪಿ ಅಡಿಯಲ್ಲಿ). 4) ರಾಯಚೂರು ಜಿಲ್ಲೆಯ ಲಿಂಗಸಗೂರು ಮತ್ತು ಮಸ್ಕಿ ತಾಲೂಕಿನ ವಂದಲಿಹೊಸೂರು ಮತ್ತು ಜಕ್ಕೇರಿಮಡು ಗ್ರಾಮಗಳಲ್ಲಿ ಆಯ್ಕೆಯಾದ 02 ರೈತರ ಫಲಾನುಭವಿಗಳಿಗೆ ನೀರಾವರಿ ಸೌಲಭ್ಯಗಳನ್ನು ಒದಗಿಸುವುದು (2024–25 ನೇ ಸಾಲಿನ ಟಿಎಸ್‌ಪಿ ಅಡಿಯಲ್ಲಿ). ಮೇಲಿನ ಉಲ್ಲೇಖದಲ್ಲಿ ಪ್ರಕಟಣೆಗೊಂಡ ಟೆಂಡರನಲ್ಲಿರುವ ಕಾಮಗಾರಿಗಳ ಈ ಕೆಳಗಿನಂತೆ ಮಾರ್ಪಾಡಿಸಿ ತಿದ್ದುಪಡಿ ಟೆಂಡರ ಪ್ರಕಟಣೆಯನ್ನು ಹೊರಡಿಸಲಾಗಿದೆ.

ಮೂಲ ಟೆಂಡರ ಪ್ರಕಟಣೆ: ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:28.04.2025. **ತಿದ್ದುಪಡಿ:** ಗುತ್ತಿಗೆದಾರರು ಡೌನಲೋಡ್ ಮಾಡಿಕೊಳ್ಳುವ ದಿನಾಂಕ:05.05.2025

ಮೂಲ ಟೆಂಡರ ಪ್ರಕಟಣೆ: ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :09.05.2025 ಸಾಯಂಕಾಲ 17:30. **ತಿದ್ದುಪಡಿ:** ಗುತ್ತಿಗೆದಾರರು ದಾಖಲಾತಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ :14.05.2025 ಸಾಯಂಕಾಲ 17:30

ಮೂಲ ಟೆಂಡರ ಪ್ರಕಟಣೆ: ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:12.05.2025ರ ಬೆಳಿಗ್ಗೆ 11.00 ಗಂಟೆಗೆ. **ತಿದ್ದುಪಡಿ:** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:16.05.2025 ರ ಬೆಳಿಗ್ಗೆ 11.00 ಗಂಟೆಗೆ.

ಮೂಲ ಟೆಂಡರ ಪ್ರಕಟಣೆ: ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:14.05.2025 ಬೆಳಿಗ್ಗೆ 11.00 ಗಂಟೆಗೆ. **ತಿದ್ದುಪಡಿ:** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ:19.05.2025 ಬೆಳಿಗ್ಗೆ 11.00 ಗಂಟೆಗೆ.

ಮೇಲಿನ ಟೆಂಡರ ಅಧಿಸೂಚನೆಯ ಎಲ್ಲಾ ನಿಯಮಗಳು ಮತ್ತು ಷರತ್ತುಗಳು ಬದಲಾವಣೆಯಾಗಿರುವುದಿಲ್ಲ.

ಡಿಐಪಿಆರ್/ಕೊಪ್ಪಳ/761/
ಕೆಎಸ್‌ಎಂಸಿಎ/2024–25

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು
ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕೊಪ್ಪಳ.

ಜಾತಿ ಜನಗಣತಿಗೆ ಕಾಲಮಿತಿ ನಿಗದಿಪಡಿಸಲು ಕಾಂಗ್ರೆಸ್ ಪಟ್ಟು

ಪಾಕ್‌ಗೆ ತಕ್ಕ ಪಾಠ ಕಲಿಸಿ: 'ಕೈ' ಆಗ್ರಹ

ಪ್ರಜಾವಾಣಿ ವಾರ್ತೆ

ನವದೆಹಲಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ, ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತಿತರ ನಾಯಕರು ಪಾಲ್ಗೊಂಡಿದ್ದರು ಪಿಟಿಐ ಚಿತ್ರ

ನವದೆಹಲಿ: ಜಾತಿ ಗಣತಿಯ ಪ್ರತಿಯೊಂದು ಹಂತಕ್ಕೂ ಸ್ಪಷ್ಟ ಕಾಲಮಿತಿ ನಿಗದಿ ಮಾಡಬೇಕು ಎಂದು ಕೇಂದ್ರ ಸರ್ಕಾರವನ್ನು ಕಾಂಗ್ರೆಸ್ ಪಕ್ಷ ಶುಕ್ರವಾರ ಆಗ್ರಹಿಸಿದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಮೀಸಲಾತಿಯ ಶೇ 50 ಮಿತಿಯನ್ನು ತೆಗೆದು ಹಾಕಬೇಕು ಎಂದು ಪಕ್ಷ ಪುನರುಚ್ಚರಿಸಿದೆ.

ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷತೆಯಲ್ಲಿ ಎಐಸಿಸಿ ಕಚೇರಿಯಲ್ಲಿ ನಡೆದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಸಂಬಂಧ ನಿರ್ಣಯ ಕೈಗೊಳ್ಳಲಾಯಿತು. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ ಹಿರಿಯ ನಾಯಕರು ಸಭೆಯಲ್ಲಿ ಭಾಗಿಯಾಗಿದ್ದರು.

ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ಹಿನ್ನೆಲೆಯಲ್ಲಿ ಭಯೋತ್ಪಾದನೆಯನ್ನು ನಿಗ್ರಹಿಸಲು ಪಾಕಿಸ್ತಾನಕ್ಕೆ ಪಾಠ ಕಲಿಸಬೇಕು ಎಂದು ಪಕ್ಷವು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. 'ಇಡೀ ದೇಶವು ಉತ್ತರ ಹಾಗೂ ನ್ಯಾಯಕ್ಕಾಗಿ ಕಾಯುತ್ತಿದೆ. ಇದು ರಾಜಕೀಯಕ್ಕೆ ಸಮಯವಲ್ಲ. ಒಗ್ಗಟ್ಟು, ಶಕ್ತಿ ಪ್ರದರ್ಶನ ಹಾಗೂ ರಾಷ್ಟ್ರೀಯ ಸಂಕಲ್ಪಕ್ಕೆ ಕರೆ ನೀಡುವ ಕ್ಷಣ' ಎಂದು ಅಭಿಪ್ರಾಯ ಪಟ್ಟಿದೆ. 'ದೇಶದ ಅತ್ಯಂತ ಬಿಗಿ ಭದ್ರತೆಯ ಜಾಗದಲ್ಲಿ ಘೋರ ದುರಂತ ನಡೆದಿದೆ. ಭದ್ರತೆ ಹಾಗೂ ಗುಪ್ತಚರ ಇಲಾಖೆಯಲ್ಲಿನ ಗಂಭೀರ ಲೋಪಗಳಿಗೆ ಶೀಘ್ರ ಹೊಣೆಗಾರಿಕೆ ನಿಗದಿಪಡಿಸಬೇಕು' ಎಂದು ಪಕ್ಷ ಆಗ್ರಹಿಸಿದೆ.

'ಜಾತಿ ಗಣತಿಯ ಪ್ರಸ್ತಾವಕ್ಕೆ ಬಿಜೆಪಿ 11 ವರ್ಷಗಳ ಕಾಲ ವಿರೋಧ ವ್ಯಕ್ತಪಡಿಸಿತು ಹಾಗೂ ಹಟಮಾರಿತನ ಧೋರಣೆ ತಳೆಯಿತು. ಈ ಬೇಡಿಕೆಯನ್ನು ಮುಂದಿಟ್ಟಿದ್ದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ನಾಯಕತ್ವದ ವಿರುದ್ಧ ದಾಳಿ ನಡೆಸಿದರು. ಕೊನೆಗೂ ಪಕ್ಷದ ಹೋರಾಟಕ್ಕೆ ಸರ್ಕಾರ ಮಣಿದಿದೆ. ಆದರೆ, ಯಾವ ರೀತಿಯಲ್ಲಿ ಜಾತಿ ಗಣತಿ ನಡೆಸಲಾಗುತ್ತದೆ ಎಂಬ ಬಗ್ಗೆ ಸರ್ಕಾರ ವಿವರ ನೀಡಿಲ್ಲ, ಅಗತ್ಯ ಅನುದಾನ ಒದಗಿಸಿಲ್ಲ' ಎಂದು ನಿರ್ಣಯದಲ್ಲಿ ತಿಳಿಸಲಾಗಿದೆ. ತೆಲಂಗಾಣದ ಮಾದರಿಯಲ್ಲೇ ದೇಶದಾದ್ಯಂತ ಜಾತಿ ಗಣತಿ ಮಾಡಬೇಕು ಎಂದೂ ಪಕ್ಷ ಆಗ್ರಹಿಸಿದೆ.

'ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಒಬಿಸಿಗಳು, ದಲಿತರು ಮತ್ತು ಆದಿವಾಸಿಗಳಿಗೆ ಮೀಸಲಾತಿ ಒದಗಿಸಲು ಅನುವು ಮಾಡಿಕೊಡುವ ಸಂವಿಧಾನದ 15(5)ನೇ ವಿಧಿಯನ್ನು ತುರ್ತಾಗಿ ಜಾರಿಗೆ ತರಬೇಕೆಂದು ಪಕ್ಷ ಒತ್ತಾಯಿಸಿದೆ.

> **ಭಾರತವು ಪಾಕಿಸ್ತಾನದ ಬಾಲಾಕೋಟ್ ಮೇಲೆ 2019ರಲ್ಲಿ ದಾಳಿ ನಡೆಸಿದೆ ಎಂಬುದರ ಬಗ್ಗೆ ಯಾವುದೇ ಪುರಾವೆಗಳು ಇಲ್ಲ**
> **ಚರಣ್‌ಜಿತ್ ಸಿಂಗ್ ಚನ್ನಿ,**
> ಕಾಂಗ್ರೆಸ್ ಸಂಸದ

'ಉಗ್ರ ದಾಳಿ: ಸರ್ಕಾರದಿಂದ ಕಾರ್ಯತಂತ್ರ ಇಲ್ಲ'

'ಪಹಲ್ಗಾಮ್ ಭಯೋತ್ಪಾದಕ ದಾಳಿಯಿಂದ ಉದ್ಭವಿಸಿರುವ ಪರಿಸ್ಥಿತಿ ನಿಭಾಯಿಸಲು ಕೇಂದ್ರ ಸರ್ಕಾರ ಯಾವುದೇ ಸ್ಪಷ್ಟ ಕಾರ್ಯತಂತ್ರ ರೂಪಿಸಿಲ್ಲ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು. ಆದರೆ, ಈ ವಿಷಯದಲ್ಲಿ ಇಡೀ ವಿರೋಧ ಪಕ್ಷವು ಕೇಂದ್ರ ಸರ್ಕಾರದೊಂದಿಗೆ ಇದೆ ಎಂದು ಅವರು ಸ್ಪಷ್ಟಪಡಿಸಿದರು.

ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 'ದೇಶದಾದ್ಯಂತ ಜಾತಿ ಸಮೀಕ್ಷೆ ನಡೆಸಬೇಕೆಂಬ ಪಕ್ಷದ ಬೇಡಿಕೆಯನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಇದು ರಾಹುಲ್ ಗಾಂಧಿ ಹೋರಾಟಕ್ಕೆ ಸಿಕ್ಕ ಜಯ. ನಾವು ಜನರ ಸಮಸ್ಯೆಗಳನ್ನು ಪ್ರಾಮಾಣಿಕವಾಗಿ ಎತ್ತಿದರೆ, ಸರ್ಕಾರ ತಲೆಬಾಗಬೇಕು ಎಂಬುದನ್ನು ರಾಹುಲ್ ಅವರು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ' ಎಂದು ಶ್ಲಾಘಿಸಿದರು.

'ಜಾತಿ ಗಣತಿ ನಡೆಸಬೇಕು ಎಂದು ಒತ್ತಾಯಿಸಿ 2023ರ ಏಪ್ರಿಲ್ ತಿಂಗಳಿನಲ್ಲಿ ಪ್ರಧಾನಿ ಅವರಿಗೆ ಪತ್ರ ಬರೆದಿದ್ದೆ. ಆಗ ಸರ್ಕಾರ ಇದಕ್ಕೆ ವಿರೋಧ ವ್ಯಕ್ತಪಡಿಸಿತ್ತು. ಆದರೆ, ಈಗ ಏಕಾಏಕಿ ಮನಸ್ಸು ಬದಲಾಯಿಸಿದ್ದು ಏಕೆ? ಸರ್ಕಾರದ ನಡೆ ಅನುಮಾನದಿಂದ ಕೂಡಿದೆ' ಎಂದು ಅವರು ಹೇಳಿದರು.

'ಸರ್ಕಾರ ಈ ವಿಷಯದಲ್ಲಿ ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದೆ. ಬಿಹಾರದಲ್ಲಿ ಎನ್‌ಡಿಎ ಮೈತ್ರಿಕೂಟದ ಉನ್ನತ ನಾಯಕರು ಪ್ರತಿ ಜಿಲ್ಲೆಯಲ್ಲಿ ಪತ್ರಿಕಾಗೋಷ್ಠಿಗಳನ್ನು ನಡೆಸುವ ಮೂಲಕ ಬಿಜೆಪಿ ಮತ್ತು ಪ್ರಧಾನಿ ಮೋದಿ ಅವರಿಗೆ ಶ್ರೇಯಸ್ಸು ನೀಡಲು ಯತ್ನಿಸಿದ್ದಾರೆ. ಕಾಂಗ್ರೆಸ್ ಪಕ್ಷವೇ ಜಾತಿ ಜನಗಣತಿ ವಿರೋಧಿಸುತ್ತಿದೆ ಎಂದು ಬಿಂಬಿಸುತ್ತಿದ್ದಾರೆ. ಈ ಕುತಂತ್ರದ ವಿರುದ್ಧ ನಾವು ಕಾರ್ಯತಂತ್ರ ರೂಪಿಸಬೇಕು. ಮಿತ್ರಪಕ್ಷಗಳ ಜತೆಗೂಡಿ ರಾಷ್ಟ್ರ ಮಟ್ಟ ಅಥವಾ ರಾಜ್ಯ ಮಟ್ಟದಲ್ಲಿ ಸಾರ್ವಜನಿಕ ಸಭೆ ನಡೆಸಬೇಕು ಅಥವಾ ದೇಶದಾದ್ಯಂತ ಪತ್ರಿಕಾಗೋಷ್ಠಿಗಳನ್ನು ನಡೆಸಬೇಕು' ಎಂದರು.

ನ್ಯಾಷನಲ್ ಹೆರಾಲ್ಡ್ ಪ್ರಕರಣದ ವಿಚಾರಣೆ

ಸೋನಿಯಾ, ರಾಹುಲ್‌ಗೆ ನೋಟಿಸ್

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಪ್ರಕರಣದ ಜತೆ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರಿಗೆ ದೆಹಲಿಯ ನ್ಯಾಯಾಲಯ ಶುಕ್ರವಾರ ನೋಟಿಸ್ ಜಾರಿ ಮಾಡಿದೆ.

ಪ್ರಕರಣಕ್ಕೆ ಸಂಬಂಧಿಸಿದ ಆರೋಪ-ಪಟ್ಟಿಯನ್ನು ಪರಿಗಣಿಸಿ, ಆರೋಪಿಗಳಿಗೆ ನೋಟಿಸ್ ಜಾರಿ ಮಾಡುವಂತೆ ಜಾರಿ ನಿರ್ದೇಶನಾಲಯ (ಇ.ಡಿ), ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತ್ತು.

ಅರ್ಜಿ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶ ವಿಶಾಲ್ ಗೋಗ್ನೆ, 'ವಾದವನ್ನು ಮಂಡಿಸುವ ಹಕ್ಕು ಇದೆ' ಎಂದು ಹೇಳಿ ಇಬ್ಬರಿಗೂ ನೋಟಿಸ್ ಜಾರಿಗೊಳಿಸಿ, ಮೇ 8ಕ್ಕೆ ಮುಂದಿನ ವಿಚಾರಣೆಯನ್ನು ನಿಗದಿಪಡಿಸಿದರು.

'ಯಾವುದೇ ಹಂತದಲ್ಲಿ ತಮ್ಮ ವಾದವನ್ನು ಮಂಡಿಸುವ ಹಕ್ಕು ದೊರೆತರೆ ವಿಚಾರಣೆಯು ನ್ಯಾಯಯುತವಾಗಿರುತ್ತದೆ ಎಂದರ್ಥ' ಎಂದು ತಮ್ಮ ಆದೇಶದಲ್ಲಿ ತಿಳಿಸಿದರು.

ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ. ರಾಜು, 'ನ್ಯಾಯಯುತ ವಿಚಾರಣೆ ಬಯಸಿರುವುದರಿಂದ ತನಿಖಾ ಸಂಸ್ಥೆಯು ಅಂತಹ ನೋಟಿಸ್ ಅನ್ನು ವಿರೋಧಿಸುತ್ತಿಲ್ಲ' ಎಂದು ಹೇಳಿದರು. ಆರೋಪ ಪಟ್ಟಿಯಲ್ಲಿ ಹೆಸರಿಸಿರುವ ಕಾಂಗ್ರೆಸ್ ಮುಖಂಡರಾದ ಸ್ಯಾಮ್ ಪಿತ್ರೋಡಾ ಮತ್ತು ಸುಮನ್ ದುಬೆ ಅವರಿಗೂ ನ್ಯಾಯಾಧೀಶರು ನೋಟಿಸ್ ಜಾರಿಗೊಳಿಸಿದರು.

ಬಿಜೆಪಿ ಮುಖಂಡ ಸುಬ್ರಮಣಿಯನ್ ಸ್ವಾಮಿ ಅವರು 2014ರಲ್ಲಿ ದಾಖಲಿಸಿದ್ದ ಖಾಸಗಿ ದೂರನ್ನು ಪಟಿಯಾಲಾ ಹೌಸ್ ನ್ಯಾಯಾಲಯದ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟರು ಪರಿಗಣನೆಗೆ ತೆಗೆದುಕೊಂಡ ನಂತರ 2021ರಲ್ಲಿ ವಿಚಾರಣೆ ಆರಂಭಿಸಿದ್ದ ಇ.ಡಿ ಕಳೆದ ತಿಂಗಳ 15ರಂದು ಆರೋಪಪಟ್ಟಿ ಸಲ್ಲಿಸಿತ್ತು.

'ಒಬ್ಬನೇ ಅತ್ಯಾಚಾರ ಎಸಗಿದ್ದರೂ, ಇಡೀ ಗುಂಪು ಶಿಕ್ಷೆಗೆ ಅರ್ಹ'

ನವದೆಹಲಿ: ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ಒಬ್ಬ ವ್ಯಕ್ತಿ ಮಾತ್ರವೇ ಅತ್ಯಾಚಾರ ಎಸಗಿದ್ದರೂ, ಕ್ರೌರ್ಯದಲ್ಲಿ ಭಾಗಿಯಾದ ಎಲ್ಲರೂ ಹೊಣೆಗಾರರು ಮತ್ತು ಸಮಾನ ಶಿಕ್ಷೆಗೆ ಅರ್ಹರು ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

2006ರಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ತಪ್ಪಿತಸ್ಥ ಎಂದು ಆದೇಶಿಸಿದ್ದನ್ನು ಪ್ರಶ್ನಿಸಿ, ರಾಜು ಅಲಿಯಾಸ್ ಉಮಾಕಾಂತ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಂಜಯ್ ಕರೋಲ್ ಮತ್ತು ಕೆ.ವಿ.ವಿಶ್ವನಾಥನ್ ಅವರನ್ನು ಒಳಗೊಂಡ ನ್ಯಾಯಪೀಠ ವಜಾಗೊಳಿಸಿತು.



ಸ್ಯಾನಿಟರಿ ಪ್ಯಾಡ್, ಕಪ್‌ಗಳ ಬಳಕೆ ಹೆಚ್ಚಿದ್ದು, ಮರುಬಳಕೆ ಮಾಡಬಹುದಾದ ಪ್ಯಾಡ್‌ಗಳು ಮತ್ತು ಹೊಸದಾಗಿ ಬರುತ್ತಿರುವ ಪಿರಿಯಡ್ ಪ್ಯಾಂಟಿಸ್‌ಗಳನ್ನು ಕೂಡ ಬಳಸುತ್ತಿದ್ದಾರೆ. ಭಾರತಕ್ಕಿಂತ ವಿದೇಶಗಳಲ್ಲಿ ಟ್ಯಾಂಪೂನ್ ಮತ್ತು ಡಿಸ್ಕ್‌ಗಳ ಬಳಕೆ ಹೆಚ್ಚಿದೆ. ಸ್ವಚ್ಛವಾದ ಬಟ್ಟೆ ಕೂಡ ಒಂದು ಉತ್ತಮ ಆಯ್ಕೆಯಾಗಿದೆ.

ಹರಿವಿನ ಮಟ್ಟ, ಕಂಫರ್ಟ್ ಪರಿಗಣಿಸಿ ನಿಮಗೆ ಹೊಂದುವ ಸೂಕ್ತ ಉತ್ಪನ್ನವನ್ನು ಆಯ್ಕೆ ಮಾಡಿ. ಉತ್ಪನ್ನದ ಬಳಕೆ ಯಾವುದೇ ಆದರೂ ನೈರ್ಮಲ್ಯದ ಕಡೆ ಹೆಚ್ಚು ಒತ್ತು ನೀಡುವುದು ಅವಶ್ಯಕ. ನಿಗದಿತ ಸಮಯಕ್ಕೆ ಅವುಗಳನ್ನು ಬದಲಾಯಿಸುವುದು ಸೇರಿದಂತೆ ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ಇತರೆ ಅಡ್ಡಪರಿಣಾಮಗಳಿಂದ ದೂರವಿರಬಹುದು.

ಗರ್ಭಿಣಿಯರು ಮಾಡಬಹುದಾದ ವ್ಯಾಯಾಮ

ಡಾ. ಶ್ರುತಿ ಕಲಗಾರ

ಕಾಳಜಿ

ಗರ್ಭಾವಸ್ಥೆಯಲ್ಲಿ ಸೂಕ್ತ ವ್ಯಾಯಾಮ ಮಾಡುವುದರಿಂದ ತಾಯಿ ಮತ್ತು ಮಗುವಿಗೆ ಒಳ್ಳೆಯದು. ವ್ಯಾಯಾಮ ಮಾಡುವುದರಿಂದ ಬೆನ್ನುನೋವು, ಆಯಾಸ, ಮಲಬದ್ಧತೆ ಮತ್ತು ಊತದಂತಹ ದೈಹಿಕ ತೊಂದರೆಗಳು ಕಡಿಮೆಯಾಗುತ್ತವೆ. ಅಲ್ಲದೇ ಉತ್ತಮ ನಿದ್ರೆ ಬರುತ್ತದೆ.

ಸುರಕ್ಷತೆ ದೃಷ್ಟಿಯಿಂದ ಸೂಕ್ತವಾದ ವ್ಯಾಯಾಮವನ್ನು ಆಯ್ಕೆ ಮಾಡುವುದು ಬಹಳ ಮುಖ್ಯ. ವ್ಯಾಯಾಮ ಚಟುವಟಿಕೆಗಳು ದೇಹಕ್ಕೆ ಹೆಚ್ಚು ಒತ್ತಡ ಉಂಟಾಗದಂತೆ ನೋಡಿಕೊಳ್ಳಬೇಕು.

ಅವಳಿ ಜವಳಿ ಗರ್ಭ, ಐವಿಎಫ್ ಗರ್ಭಾವಸ್ಥೆ, ಚಿಕ್ಕ ಗರ್ಭಕಂಠ ಅಥವಾ ಕಡಿಮೆ ಪ್ಲೆಸೆಂಟಾ ಸಂದರ್ಭಗಳಲ್ಲಿ ವ್ಯಾಯಾಮವನ್ನು ಪ್ರಾರಂಭಿಸುವ ಮೊದಲು ವೈದ್ಯರ ಅನುಮತಿ ಅಗತ್ಯ. ಪೆಲ್ವಿಕ್ ಅಥವಾ ಸಿಯಾಟಿಕಾ ನೋವು ಇದ್ದರೆ, ಫಿಸಿಯೋಥೆರಪಿಸ್ಟ್ ಪರಿಶೀಲಿಸುವುದು ಒಳಿತು. ಎಂಥ ವ್ಯಾಯಾಮಗಳಿದ್ದರೆ ಒಳ್ಳೆಯದು?.

ನಡಿಗೆ: ನಡಿಗೆ ಸೂಕ್ತ ಆಯ್ಕೆಯಾಗಿದ್ದು, ಸುರಕ್ಷಿತವಾಗಿಯೂ ಇರುತ್ತದೆ. ಕಾಲುಗಳ ಕೀಲುಗಳಿಗೆ ನಿರಾಳತೆ ಸಿಗುತ್ತದೆ. ಅಲ್ಲದೇ ನಿತ್ಯ ನಡಿಗೆ ಮಾಡುವುದು ಮುಖ್ಯ. ರಕ್ತಸಂಚಾರವನ್ನು ಸುಧಾರಿಸುತ್ತದೆ. ದೈಹಿಕ ಕ್ಷಮತೆಯನ್ನು ಹೆಚ್ಚಿಸುತ್ತದೆ.

ಈಜು: ಈಜುವಿಕೆ ಮತ್ತೊಂದು ಉತ್ತಮ ಆಯ್ಕೆ. ಈಜುವಾಗ ದೇಹದ ತೂಕಕ್ಕೆ ನೀರು ಬೆಂಬಲ ನೀಡುತ್ತದೆ. ಈಜುವುದರಿಂದ ಕೀಲುಗಳು ಮತ್ತು ಕೆಳಬೆನ್ನಿನ ಮೇಲಿನ ಒತ್ತಡ ನಿವಾರಣೆಯಾಗಿ ನಿರಾಳತೆ ಆವರಿಸುತ್ತದೆ. ಅಲ್ಲದೇ ಊತ ಉಂಟಾಗುವುದನ್ನು ಕಡಿಮೆ ಮಾಡುತ್ತದೆ. ಆದರೆ ಗರ್ಭಾವಸ್ಥೆಯ ಯಾವ ಹಂತದಲ್ಲಿ ಈಜಬೇಕು ಎನ್ನುವುದು ಗೊತ್ತಿರಬೇಕು.

ಯೋಗ: ಪರಿಣತರ ಮಾರ್ಗದರ್ಶನದಲ್ಲಿ ಯೋಗ ಮಾಡುವುದರಿಂದ ದೈಹಿಕ ಕ್ಷಮತೆ ಹೆಚ್ಚುತ್ತದೆ. ಉಸಿರಾಟ ತಂತ್ರಗಳನ್ನು ಕಲಿಯುವುದರಿಂದ ಸಹಜ ಹೆರಿಗೆಯ ಸಮಯದಲ್ಲಿ ಉಪಯಕ್ತವಾಗುತ್ತದೆ. ಒತ್ತಡವನ್ನು ಕಡಿಮೆ ಮಾಡುವುದಲ್ಲದೆ, ಶಾಂತವಾಗಿರಲು ನೆರವು ನೀಡುತ್ತದೆ.

ಸೈಕ್ಲಿಂಗ್: ಒಳಾಂಗಣ ಸೈಕ್ಲಿಂಗ್‌ಗೆ ಆದ್ಯತೆ ನೀಡುವುದು ಒಳ್ಳೆಯದು. ಬೀಳುವ ಅಪಾಯ ಇರುವುದಿಲ್ಲ. ನಿಯಮಿತವಾಗಿ ಸೈಕ್ಲಿಂಗ್ ಮಾಡುವುದರಿಂದ ಹೃದಯರಕ್ತನಾಳಗಳು ಆರೋಗ್ಯಕರವಾಗಿರುತ್ತವೆ.

ಸ್ಟ್ರೆಂತ್ ಟ್ರೇನಿಂಗ್: ಸ್ನಾಯುವನ್ನು ಬಲಪಡಿಸಲು ಉತ್ತಮವಾಗಿದೆ.ಆದರೆ, ಒತ್ತಡ ಉಂಟಾಗದಂತೆ ನೋಡಿಕೊಳ್ಳಬೇಕು. ಪೆಲ್ವಿಕ್ ಫ್ಲೋರ್ ಸ್ನಾಯುಗಳನ್ನು ಬಲಗೊಳಿಸುವ ವ್ಯಾಯಾಮಗಳಿಗೆ ವಿಶೇಷ ಗಮನ ನೀಡಬೇಕು. ಇದರಿಂದ ಮೂತ್ರಕೋಶ, ಗರ್ಭಾಶಯ ಮತ್ತು ಕರುಳುಗಳ ಸ್ನಾಯುಗಳು ಬಲಗೊಳ್ಳುತ್ತವೆ.

ಏನು ಮಾಡಬಾರದು?

ಅಪಾಯಕಾರಿ ವ್ಯಾಯಾಮ ಮಾಡಬೇಡಿ. ಭಾರಿ ತೂಕ ಎತ್ತುವುದು, ಡೀಪ್ ಸ್ಕ್ವಾಟ್, ವೈಡ್ ಲಂಗ್‌ನಂಥ ವ್ಯಾಯಾಮಗಳು ದೇಹಕ್ಕೆ ಹೆಚ್ಚಿನ ಒತ್ತಡ ಉಂಟು ಮಾಡಬಲ್ಲದು.

ಮೊದಲ ತ್ರೈಮಾಸಿಕದ ನಂತರ ಬೆನ್ನಿನ ಮೇಲೆ ದೀರ್ಘಕಾಲ ಮಲಗುವುದರಿಂದ ರಕ್ತದ ಹರಿವು ಕಡಿಮೆಯಾಗಿ, ತಲೆ ತಿರುಗುವಂತೆ ಆಗಬಹುದು. ಅದನ್ನು ತಪ್ಪಿಸಿ.

ವ್ಯಾಯಾಮದ ಸಮಯದಲ್ಲಿ ಅತಿಯಾಗಿ ಆಯಾಸಗೊಳ್ಳುವುದನ್ನು ತಪ್ಪಿಸಿ. ಸದಾ ಆರಾಮವಾಗಿ ಇರುವಂತೆ ನೋಡಿಕೊಳ್ಳಿ. ವ್ಯಾಯಾಮ ಮಿತವಾಗಿರಲಿ.

ವ್ಯಾಯಾಮ ಮಾಡುವ ಸಮಯದಲ್ಲಿ ದೇಹ ನೀಡುವ ಎಚ್ಚರಿಕೆಯ ಸಂಕೇತಗಳಿಗೆ ಗಮನ ಕೊಡಿ. ತಲೆತಿರುಗುವಿಕೆ, ಉಸಿರಾಟದ ತೊಂದರೆ, ಎದೆನೋವು ಸೇರಿದಂತೆ ಇನ್ನಿತರ ಲಕ್ಷಣಗಳನ್ನು ನಿರ್ಲಕ್ಷಿಸಬೇಡಿ. ಇಂಥ ಲಕ್ಷಣ ಕಂಡುಬಂದರೆ ಕೂಡಲೇ ವ್ಯಾಯಾಮ ಮಾಡುವುದನ್ನು ನಿಲ್ಲಿಸಿ.

ಶುಚಿ ಕಾಳಜಿಯ ಆ ದಿನಗಳಿಗೆ ಆಯ್ಕೆಗಳು ಹಲವು

ಮಹಿಳೆಯರ ಬದುಕಿನ ಮುಖ್ಯಭಾಗ ಮುಟ್ಟು ನಿರ್ವಹಣೆಯಲ್ಲಿಯೇ ಕಳೆಯುತ್ತದೆ. ಇಲ್ಲಿವೆ ಸುಲಭದ ಉಪಾಯಗಳು

ಭಾರತದಲ್ಲಿ ಶೇ **76.15** ಮಹಿಳೆಯರು ಮುಟ್ಟಿನ ಸಮಯದಲ್ಲಿ ನೈರ್ಮಲ್ಯ ಉತ್ಪನ್ನಗಳನ್ನು ಬಳಕೆ ಮಾಡುತ್ತಾರೆ ಎಂದು ಸಂಶೋಧನಾ ವರದಿಯೊಂದು ತಿಳಿಸಿದೆ. ನಗರ ಪ್ರದೇಶಗಳಿಗಿಂತ (ಶೇ 89.37) ಗ್ರಾಮೀಣ ಪ್ರದೇಶದಲ್ಲಿ ನೈರ್ಮಲ್ಯ ಉತ್ಪನ್ನಗಳ ಬಳಕೆ (ಶೇ 72.32) ಕಡಿಮೆಯಿದೆ ಎಂದು ಅದು ತಿಳಿಸಿದೆ.

18 ವರ್ಷ ಮೇಲ್ಪಟ್ಟವರು ಮಾತ್ರ ಮುಟ್ಟಿನ ಕಪ್‌ಗಳನ್ನು ಬಳಸುವುದು ಸೂಕ್ತ. ಚಿಕ್ಕ ಮಕ್ಕಳಿಗೆ ಸ್ಯಾನಿಟರಿ ಪ್ಯಾಡ್‌ಗಳಿಗಿಂತ ಮರುಬಳಕೆ ಮಾಡಬಹುದಾದ ಪ್ಯಾಡ್‌ಗಳನ್ನು ಬಳಸುವುದು ಉತ್ತಮ. ಮುಟ್ಟಿನ ದಿನಗಳಲ್ಲಿ ವೈಯಕ್ತಿಕ ಶುಚ್ಚಿತ್ವದ ಕಡೆ ಹೆಚ್ಚು ಗಮನವಹಿಸಬೇಕು

ಡಾ. ವೀಣಾ ಎನ್.ಸುಳ್ಯ, ಸ್ತ್ರೀರೋಗ ತಜ್ಞರು

ಸಿಂಧು ಕೆ.ಟಿ.

ಹದಿಹರೆಯದ ಹೆಣ್ಣುಮಕ್ಕಳು ಮನೆಯಲ್ಲಿದ್ದರೆ, ಮುಟ್ಟಿನ ದಿನಗಳ ಚರ್ಚೆ ಸಾಮಾನ್ಯ. ಮೊದಲೆಲ್ಲ ಹೆಚ್ಚು ಆಯ್ಕೆಗಳಿರಲಿಲ್ಲ. ಹಳೆಯಬಟ್ಟೆ, ನ್ಯಾಪ್ಕಿನ್ ಅಥವಾ ಟ್ಯಾಂಪೂನ್‌ಗಳು ಬಳಕೆಯಲ್ಲಿದ್ದವು. ಬಹುತೇಕರ ಆಯ್ಕೆ ಬಟ್ಟೆಯದ್ದೇ ಆಗಿತ್ತು. ತೊಳೆದು ಒಣಗಿಸುವುದು ಸವಾಲಿನ ಕೆಲಸವೇ ಆಗಿತ್ತು. ಇದೀಗ ವಯಸ್ಸು, ಅಗತ್ಯ ಮತ್ತು ಸ್ರಾವದ ಪ್ರಮಾಣಕ್ಕೆ ಅನುಗುಣವಾಗಿ ಹಲವಾರು ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ.

ಯುವತಿಯರ ಅಗತ್ಯಕ್ಕೆ ಅನುಸಾರವಾಗಿ ಯಾವುದನ್ನಾದರೂ ಕೊಳ್ಳಬಹುದಾಗಿದೆ. ಶುಚಿಯಾಗಿರುವುದು ಮತ್ತು ನಿರೋಗಿಗಳಾಗಿರುವುದು ಈ ಆಯ್ಕೆಯನ್ನು ಅವಲಂಬಿಸಿದೆ ಎಂಬ ಎಚ್ಚರ ಇರಬೇಕು.

1. ಸ್ಯಾನಿಟರಿ ಪ್ಯಾಡ್ - ನ್ಯಾಪ್ಕಿನ್

ಇದು ಹೆಚ್ಚು ಜನಪ್ರಿಯವಾದ ಉತ್ಪನ್ನವಾಗಿದೆ. ಸಾಮಾನ್ಯವಾಗಿ ರೇಯಾನ್, ಹತ್ತಿ ಅಥವಾ ಸೆಲ್ಯುಲೋಸ್‌ನಂತಹ ಮೃದುವಾದ, ಹೀರಿಕೊಳ್ಳುವ ವಸ್ತುಗಳಿಂದ ಇವುಗಳನ್ನು ತಯಾರಿಸಲಾಗುತ್ತದೆ. ಇವು ಒಮ್ಮೆ ಮಾತ್ರ ಬಳಸಬಹುದಾದ ಪ್ಯಾಡ್‌ಗಳಾಗಿದ್ದು, ಅಗತ್ಯಕ್ಕೆ ತಕ್ಕಂತೆ ಅನೇಕ ಗಾತ್ರ ಮತ್ತು ಆಕಾರದಲ್ಲಿ ಲಭ್ಯ ಇವೆ.

ಕೈಗೆಟುಕುವ ಬೆಲೆಯಲ್ಲಿ ಮಾರುಕಟ್ಟೆಯಲ್ಲಿ ಈ ಉತ್ಪನ್ನಗಳು ಲಭ್ಯವಿದ್ದು, ಬಳಕೆ ಸುಲಭವಾಗಿರುವುದರಿಂದ ಹೆಚ್ಚಿನವರು ತಮ್ಮ ಮುಟ್ಟಿನ ದಿನಗಳಲ್ಲಿ ಸ್ಯಾನಿಟರಿ ಅಥವಾ ನ್ಯಾಪ್ಕಿನ್‌ಗಳನ್ನು ಹೆಚ್ಚಾಗಿ ಬಳಸುತ್ತಾರೆ.

ಪ್ರತಿ ನಾಲ್ಕರಿಂದ ಆರು ಗಂಟೆಗಳಿಗೊಮ್ಮೆ ಅಥವಾ ಅಗತ್ಯವಿರುವಂತೆ ಪ್ಯಾಡ್ ಬದಲಾಯಿಸಬೇಕು. ಆದರೆ ಆರೋಗ್ಯದ ದೃಷ್ಟಿಯಿಂದ ಮೂರರಿಂದ ನಾಲ್ಕು ಗಂಟೆಯೊಳಗೆ ಬದಲಾಯಿಸುವುದು ಸೂಕ್ತ. ಇಲ್ಲದಿದ್ದರೆ ಅಲರ್ಜಿ ಮತ್ತು ಗಾಯಗಳು ಉಂಟಾಗುವ ಸಾಧ್ಯತೆಗಳಿವೆ. ಇವು ಕೆಲವೊಮ್ಮೆ ಕಿರಿಕಿರಿಯನ್ನು ಉಂಟುಮಾಡಬಲ್ಲವು. ಹೆಚ್ಚು ಬಳಕೆಯಲ್ಲಿದ್ದರೂ ಆರೋಗ್ಯದ ದೃಷ್ಟಿಯಿಂದ ಉತ್ತಮವೇನಲ್ಲ; ಪರಿಸರಸ್ನೇಹಿಯೂ ಆಗಿಲ್ಲ.

ಪ್ಯಾಂಟಿಲೈನರ್: ಪ್ಯಾಂಟಿಲೈನರ್‌ಗಳು ಚಿಕ್ಕ ಮತ್ತು ತೆಳುವಾದ ಪ್ಯಾಡ್‌ಗಳಾಗಿದ್ದು, ಋತುಚಕ್ರವು ತುಂಬಾ ಕಡಿಮೆ ಇರುವ ದಿನಗಳಲ್ಲಿ ಇದನ್ನು ಬಳಸಬಹುದು. ಪ್ರತಿ 4ರಿಂದ 6 ಗಂಟೆಗಳಿಗೊಮ್ಮೆ ಇವುಗಳನ್ನು ಬದಲಾಯಿಸಬೇಕು. ಇದರ ಜತೆಗೆ ಮುಟ್ಟಿನ ಕಪ್‌ಗಳು ಅಥವಾ ಟ್ಯಾಂಪೂನ್‌ಗಳನ್ನು ಬ್ಯಾಕಪ್ ಆಗಿಯೂ ಬಳಸಬಹುದು.

2. ಮರುಬಳಕೆ ಮಾಡಬಹುದಾದ ಪ್ಯಾಡ್

ಮರುಬಳಕೆ ಮಾಡಬಹುದಾದ ಪ್ಯಾಡ್‌ಗಳು ಸ್ಯಾನಿಟರಿ ಪ್ಯಾಡ್‌ಗಳಂತೆಯೇ ಕಾರ್ಯನಿರ್ವಹಿಸುತ್ತವೆ. ಇವುಗಳನ್ನು ಹೆಚ್ಚಾಗಿ ಬಟ್ಟೆಗಳಿಂದ ಮಾಡಲಾಗುತ್ತದೆ. ಅದರೊಂದಿಗೆ ಹತ್ತಿ, ಬಿದಿರು ಅಥವಾ ಸೆಣಬುಗಳಿಂದ ತಯಾರಿಸಲಾಗುತ್ತದೆ.

ಇವು ಸ್ಯಾನಿಟರಿ ಪ್ಯಾಡ್‌ಗಳಿಗಿಂತ ಮೃದು ಮತ್ತು ಆರಾಮದಾಯಕವಾಗಿರುತ್ತವೆ. ಇವುಗಳಲ್ಲಿಯೂ ವಿಭಿನ್ನ ಗಾತ್ರ ಮತ್ತು ಆಕಾರಗಳನ್ನೂ ಕಾಣಬಹುದು. ಪ್ಯಾಡ್‌ಗಳಿಗೆ ಹೋಲಿಸಿದರೆ, ಇವುಗಳು ಹೆಚ್ಚು ದುಬಾರಿಯಾಗಿರುತ್ತವೆ.

ಇವುಗಳನ್ನು ಒಮ್ಮೆ ಬಳಸಿದ ನಂತರ ಸ್ವಚ್ಛ ಮಾಡಿ ಪುನಃ ಬಳಸಬಹುದು. ಸರಿಯಾದ ನಿರ್ವಹಣೆಯಿದ್ದರೆ ಕನಿಷ್ಠ ಮೂರು ವರ್ಷಗಳು ಬಾಳಿಕೆ ಬರುತ್ತದೆ. ಇವು ಪರಿಸರಸ್ನೇಹಿ ಎನಿಸಿವೆ.

3. ಟ್ಯಾಂಪೂನ್

ಟ್ಯಾಂಪೂನ್‌ಗಳು ಸಿಲಿಂಡರ್ ಆಕಾರದಲ್ಲಿ ಇರುತ್ತವೆ. ಇವುಗಳನ್ನು ಹತ್ತಿ, ರೇಯಾನ್ ಅಥವಾ ಎರಡರ ಮಿಶ್ರಣದಿಂದ ತಯಾರಿಸಲಾಗುತ್ತದೆ. ಒಮ್ಮೆ ಬಳಸಿದ ಬಳಿಕ ಬಿಸಾಡಬಹುದಾದ ಉತ್ಪನ್ನಗಳಾಗಿವೆ.

ಯೋನಿಯ ಒಳಗಿನಿಂದಲೇ ರಕ್ತವನ್ನು ಹೀರಿಕೊಳ್ಳುತ್ತವೆ. ಪ್ರತಿ 4–6 ಗಂಟೆಗಳಿಗೊಮ್ಮೆ ಇವುಗಳನ್ನು ಬದಲಾಯಿಸಬೇಕು. ವಿವಿಧ ರೀತಿಯ ಟ್ಯಾಂಪೂನ್‌ಗಳಿವೆ. ಇವು ಹೆಚ್ಚು ಆರಾಮದಾಯಕವಾಗಿರಲು ಸಹಾಯ ಮಾಡುವುದರಿಂದ ಕ್ರೀಡೆಯಂಥ ಚಟುವಟಿಕೆಗಳಲ್ಲಿ ತೊಡಗುವವರಿಗೆ ಸೂಕ್ತ.

ನ್ಯಾಪ್ಕಿನ್‌ಗಳಿಗೆ ಹೋಲಿಸಿದರೆ ಇವು ಹೆಚ್ಚು ದುಬಾರಿ ಮತ್ತು ಪರಿಸರಸ್ನೇಹಿಯಲ್ಲ. ಟ್ಯಾಂಪೂನ್ ಬಳಕೆಯ ಅಪಾಯವೆಂದರೆ, ಟಾಕ್ಸಿಕ್ ಶಾಕ್ ಸಿಂಡ್ರೋಮ್‌ನಂಥ ಸೋಂಕು ಉಂಟಾಗಬಹುದು. ಹಾಗಾಗಿ ಇವುಗಳನ್ನು ಆಗಾಗ್ಗೆ ಬದಲಾಯಿಸುವುದು ಮುಖ್ಯ.

4. ಕಪ್

ಹೆಚ್ಚು ಜನಪ್ರಿಯ ಮತ್ತು ಪರಿಸರಸ್ನೇಹಿ ಎನಿಸಿವೆ. ಆರೋಗ್ಯದ ದೃಷ್ಟಿಯಿಂದಲೂ ಇದು ಉತ್ತಮ ಆಯ್ಕೆಯಾಗಿದೆ. ಈ ಕಪ್‌ಗಳನ್ನು ಮರುಬಳಕೆ ಮಾಡಬಹುದು. ಮುಟ್ಟಿನ ದ್ರವವನ್ನು ಹೀರಿಕೊಳ್ಳುವ ಬದಲಿಗೆ ಸಂಗ್ರಹಿಸುತ್ತವೆ.

ಮುಟ್ಟಿನ ಕಪ್‌ಗಳನ್ನು ಸಿಲಿಕಾನ್, ಲ್ಯಾಟೆಕ್ಸ್ ರಬ್ಬರ್ ಅಥವಾ ಎಲಾಸ್ಟೊಮರ್‌ನಿಂದ ತಯಾರಿಸಲಾಗುತ್ತದೆ. ಈ ಉತ್ಪನ್ನಗಳು ವಿಭಿನ್ನ ಗಾತ್ರದಲ್ಲಿಯೂ ಲಭ್ಯ. ನಿಮ್ಮ ಅಗತ್ಯಕ್ಕೆ ತಕ್ಕಂತೆ ಖರೀದಿಸಬಹುದು.

ಬಳಸಿ 6–8 ಗಂಟೆಯ ನಂತರ ತೆಗೆದು, ಖಾಲಿ ಮಾಡಬೇಕು. ಸೂಕ್ತ ಕಾಳಜಿ ವಹಿಸಿದರೆ ಒಂದು ಮುಟ್ಟಿನ ಕಪ್ 5 ರಿಂದ10 ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಆಟಗಾರರಿಗೆ, ದೈಹಿಕ ಚಟುವಟಿಕೆಗಳಲ್ಲಿ ನಿರತರಾದವರಿಗೆ ಕಪ್‌ಗಳು ಉತ್ತಮ ಆಯ್ಕೆಯಾಗಿವೆ.

5. ಪಿರಿಯಡ್ಸ್ ಪ್ಯಾಂಟಿಸ್ /ಒಳ ಉಡುಪು

ಪಿರಿಯಡ್ಸ್ ಪ್ಯಾಂಟಿಸ್‌ಗಳು ಸಾಮಾನ್ಯ ಒಳ ಉಡುಪಿನಂತೆ ಇರುತ್ತವೆ. ಆದರೆ, ಬಟ್ಟೆಗಳ ಮೇಲೆ ಸೋರಿಕೆಯಾಗುವುದನ್ನು ತಡೆಯಲು ಹಲವು ವಿಶೇಷ ಪದರಗಳನ್ನು ಹೊಂದಿರುತ್ತವೆ. ಸಾಮಾನ್ಯವಾಗಿ ಹತ್ತಿ, ಬಿದಿರು ಮತ್ತು ಸ್ಪ್ಯಾಂಡೆಕ್ಸ್‌ನಂಥ ಹೀರಿಕೊಳ್ಳುವ ಮತ್ತು ತೇವಾಂಶ-ಹೀರುವ ಬಟ್ಟೆಗಳ ಸಂಯೋಜನೆಯಿಂದ ತಯಾರಿಸಲಾಗುತ್ತದೆ.

ಏಕ ಬಳಕೆಯ ಪ್ಯಾಂಟಿಸ್‌ಗಳು ಮತ್ತು ಮರು ಬಳಕೆಯ ಪ್ಯಾಂಟಿಸ್‌ಗಳು ಮಾರುಕಟ್ಟೆಯಲ್ಲಿ ಲಭ್ಯ ಇವೆ. ಪ್ರತಿ 4 ರಿಂದ 6 ಗಂಟೆಗಳಿಗೊಮ್ಮೆ ಅವುಗಳನ್ನು ಬದಲಾಯಿಸಬೇಕಾಗುತ್ತದೆ.

ಇವುಗಳ ಬೆಲೆ ದುಬಾರಿಯಾಗಿದ್ದು, ಕನಿಷ್ಠ ₹400ರಿಂದ ₹500 ಇರುತ್ತದೆ. ಇವು ಪರಿಸರಸ್ನೇಹಿಯಾಗಿವೆ. ವಿವಿಧ ಪ್ರಮಾಣದ ಮುಟ್ಟಿನ ದ್ರವವನ್ನು ಹಿಡಿದಿಟ್ಟುಕೊಳ್ಳುತ್ತವೆ.

6. ಡಿಸ್ಕ್

ಪ್ಲಾಸ್ಟಿಕ್ ಅಥವಾ ಸಿಲಿಕಾನ್‌ನಿಂದ ಮಾಡಿರುವ ಮುಟ್ಟಿನ ಡಿಸ್ಕ್‌ಗಳು ದುಂಡಗಿನ, ಹೊಂದಿಕೊಳ್ಳುವ ಉಂಗುರದ ಆಕಾರದಲ್ಲಿ ಇರುತ್ತದೆ. ಇವುಗಳು ಕಪ್‌ಗಳಂತೆ ಕಾರ್ಯನಿರ್ವಹಿಸುತ್ತವೆ.

ಪ್ಲಾಸ್ಟಿಕ್‌ನಿಂದ ತಯಾರಾದ ಡಿಸ್ಕ್‌ಗಳನ್ನು ಮರುಬಳಕೆ ಮಾಡಲು ಸಾಧ್ಯವಿಲ್ಲ. ಸಿಲಿಕಾನ್ ಮತ್ತು ರಬ್ಬರ್‌ನಿಂದ ತಯಾರಾದ ಡಿಸ್ಕ್‌ಗಳನ್ನು ಮರುಬಳಕೆ ಮಾಡಬಹುದು. ಸ್ವಚ್ಛವಾಗಿಟ್ಟುಕೊಂಡರೆ ಡಿಸ್ಕ್‌ಗಳು ವರ್ಷಗಳವರೆಗೆ ಬಾಳಿಕೆ ಬರುತ್ತದೆ.

ಕಪ್‌ಗಳಿಗೆ ಹೋಲಿಸಿದರೆ ಡಿಸ್ಕ್‌ಗಳು ತೆಳ್ಳಗಿರುತ್ತವೆ. ಹೆಚ್ಚು ನಿಖರವಾಗಿ ಹೊಂದಿಕೊಳ್ಳುವ ಕಾರಣ ಲೈಂಗಿಕ ಚಟುವಟಿಕೆಯ ಸಮಯದಲ್ಲಿಯೂ ಬಳಸಬಹುದು.

7. ಸ್ಪಾಂಜ್

ಸ್ಪಾಂಜ್‌ಗಳು ಟ್ಯಾಂಪೂನ್‌ಗಳಂತೆ ಕಾರ್ಯನಿರ್ವಹಿಸುತ್ತವೆ. ಕೆಲವು ಸ್ಪಾಂಜ್‌ಗಳನ್ನು ಮರುಬಳಕೆ ಮಾಡುವಂತೆ ವಿನ್ಯಾಸಗೊಳಿಸಲಾಗಿದೆ. ಸ್ಪಾಂಜ್‌ಗಳನ್ನು ಕೆಲವು ಗಂಟೆಗಳಿಗೊಮ್ಮೆ ಬದಲಾಯಿಸಬೇಕಾಗುತ್ತದೆ. ಮರುಬಳಕೆ ಮಾಡಬಹುದಾದ ಸ್ಪಾಂಜ್‌ಗಳು 6 ತಿಂಗಳವರೆಗೆ ಬಾಳಿಕೆ ಬರಬಹುದು. ಆದರೆ ಇವುಗಳ ನಿರ್ವಹಣೆ ಕಷ್ಟ. ತುಂಬಾ ಮೃದುವಾಗಿರುವುದರಿಂದ, ಹೊಂದಿಕೊಳ್ಳುವುದರಿಂದ ಅವು ಹೆಚ್ಚು ಆರಾಮದಾಯಕವೆಂದು ಹೇಳಲಾಗುತ್ತದೆ. ಆದರೆ ಸ್ಪಾಂಜ್‌ಗಳು ಆರೋಗ್ಯದ ದೃಷ್ಟಿಯಿಂದ ಉತ್ತಮವಲ್ಲ ಎಂಬುದು ತಜ್ಞವೈದ್ಯರ ಅಭಿಪ್ರಾಯ. ಇವು ಉಪಯೋಗಕ್ಕಿಂತ ಹೆಚ್ಚು ಅಡ್ಡಪರಿಣಾಮವನ್ನೇ ಉಂಟುಮಾಡಬಲ್ಲದು.

ಲೈಂಗಿಕತೆಯ ಕನಸು ಕಾಣುವುದು ಸರಿಯೇ?

ಅಂತರಂಗ

ಅಕ್ಷರ ದಾಮ್ಲೆ

• ಸರ್, ನನಗೆ 22 ವರ್ಷ. ಈಚೆಗೆ ಲೈಂಗಿಕತೆಗೆ ಸಂಬಂಧಿಸಿದ ಕನಸುಗಳೇ ಹೆಚ್ಚಾಗಿ ಬೀಳುತ್ತಿವೆ. ಇದನ್ನು ನಿಯಂತ್ರಿಸುವುದು ಹೇಗೆ?

ಕನಸುಗಳ ಬಗ್ಗೆ ಅನೇಕ ವ್ಯಾಖ್ಯಾನಗಳಿವೆ. ಹಾಗಂತ ನಿಖರವಾಗಿ ಕನಸುಗಳಿಗೆ ಮೂಲಕಾರಣಗಳೇನು ಮತ್ತು ಯಾವ ಕಾರಣದಿಂದಾಗಿ ಬರುತ್ತದೆ ಎನ್ನುವುದನ್ನು ಇನ್ನೂ ಅಧ್ಯಯನ ಮಾಡುತ್ತಲೇ ಇದ್ದಾರೆ.

ನಿಮ್ಮ ಪ್ರಶ್ನೆಯಲ್ಲಿ ಹೇಳಿರುವ ಹಾಗೆ ಕಾಮಕ್ಕೆ ಸಂಬಂಧಿಸಿದ ಕನಸುಗಳೇ ಹೆಚ್ಚಾಗಿ ಬೀಳುವುದಕ್ಕೆ ಅನೇಕ ಕಾರಣಗಳಿರಬಹುದು.

1 ಮೊದಲನೆಯದಾಗಿ ವಿಶ್ವದ ಶ್ರೇಷ್ಠ ಮನಃಶ್ಶಾಸ್ತ್ರಜ್ಞರಲ್ಲಿ ಒಬ್ಬರಾದ ಸಿಗ್ಮಂಡ್ ಫ್ರಾಯ್ಡ್ ಅವರ ಸಿದ್ಧಾಂತದ ಆಧಾರದ ಪ್ರಕಾರ ಹೇಳುವುದಾದರೆ, ನಿಮ್ಮ ಸುಪ್ತ ಮನಸ್ಸಿನಲ್ಲಿ ಕಾಮದ ಕುರಿತು ಎಲ್ಲಾದರೂ ಒತ್ತಡದಿಂದ ಹತ್ತಿಕ್ಕಿದಂಥ ಯೋಚನೆಗಳು ಅಥವಾ ಭಾವನೆಗಳು ಇದ್ದಲ್ಲಿ ಅವುಗಳು ಕನಸಿನ ರೂಪದಲ್ಲಿ ಬರಬಹುದು. ಮತ್ತು ಮನಸ್ಸು ಹಗಲಿನಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಂತಹ ಆಸೆ - ಆಕಾಂಕ್ಷೆಗಳನ್ನು ಎಷ್ಟೋ ಬಾರಿ ರಾತ್ರಿ ಕನಸಿನ ಮೂಲಕ ಪೂರ್ಣಗೊಳಿಸಿಕೊಳ್ಳುತ್ತದೆ ಅಂತಲೂ ಹೇಳಲಾಗುತ್ತದೆ.

2 ಎರಡನೆಯದಾಗಿ, ನಿಮ್ಮ ಶರೀರದಲ್ಲಿ ಹಾರ್ಮೋನ್‌ಗಳು ಬದಲಾವಣೆ ಆಗುತ್ತಿದ್ದರೆ, ಅದರಿಂದಲೂ ಈ ರೀತಿಯ ಕಾಮದ ಕನಸುಗಳು ಬರುವ ಸಾಧ್ಯತೆಗಳಿವೆ.

3 ಮೂರನೆಯದಾಗಿ, ಕಾಮದ ಕುರಿತು ಏನಾದರೂ ದೃಶ್ಯ ಮಾಧ್ಯಮಗಳಲ್ಲಿ (ಸಿನಿಮಾ, ಸೀರಿಯಲ್, ಅಥವಾ ಒಟಿಟಿ ಪ್ಲಾಟ್‌ಫಾರಂಗಳಲ್ಲಿ ಬರುವ ಸೀರೀಸ್‌ಗಳು) ನೋಡುವುದು ಅಥವಾ ಕಾಮದ ಕುರಿತು ಏನಾದರೂ ಕಥೆ - ಕಾದಂಬರಿಗಳನ್ನು ಓದುವುದೂ ಕೂಡಾ ನಿಮ್ಮ ಕನಸಿಗೆ ಕಾರಣಗಳಾಗಿರಬಹುದು.

4 ಅಥವಾ ಕಾಮದ ಬಗ್ಗೆ ಎಲ್ಲಾದರೂ ಅಪರಾಧಿ ಪ್ರಜ್ಞೆ ನಿಮ್ಮಲ್ಲಿದ್ದರೆ ಮತ್ತು ಅಂಥ ಭಾವನೆಯನ್ನು ನೀವು ಅದುಮಿಟ್ಟುಕೊಳ್ಳುತ್ತಿದ್ದೀರಾದರೆ, ಅಂತಹ ಕಾರಣಗಳಿಂದಲೂ ನಿಮಗೆ ಅಂತಹ ಕನಸುಗಳೇ ಬೀಳುತ್ತಿರಬಹುದು.

ಈ ಮೇಲೆ ಹೇಳಿದ ವಿಚಾರಗಳಲ್ಲದೇ, ಇತರೆ ಇನ್ಯಾವುದೋ ಕಾರಣದಿಂದಲೂ ನಿಮಗೆ ಕನಸುಗಳು ಬೀಳುತ್ತಿರಬಹುದು.

ಇದನ್ನು ಪರಿಹರಿಸುವುದು ಹೇಗೆ? ಮೊದಲನೆಯದಾಗಿ, ಇಂತಹ ಕನಸುಗಳು ಬಿದ್ದಾಗ ಅಥವಾ ಬಿದ್ದಿದೆ ಎಂಬುದು ನಿಮ್ಮ ಅರಿವಿಗೆ ಬಂದಾಗ ನಿಮಗೆ ಯಾವ ರೀತಿಯ ಭಾವನೆ ಉಂಟಾಗುತ್ತದೆ ಎಂಬುದನ್ನು ಗಮನಿಸಿಕೊಳ್ಳಿ. ಮತ್ತು ಆ ರೀತಿಯ ಭಾವನೆಯ ಹಿಂದೆ ಇರುವ ಕಾರಣವನ್ನು ಗೊತ್ತು ಮಾಡಿಕೊಳ್ಳಿ.

ಅದರ ಜತೆಗೆ ಮೇಲೆ ಹೇಳಿರುವ ಒಂದಷ್ಟು ಕಾರಣಗಳ ಆಧಾರದ ಮೇಲೆ ನಿಮಗೆ ಯಾವ ಕಾರಣಕ್ಕೆ ಕನಸು ಬೀಳುತ್ತಿರಬಹುದು ಎಂಬುವುದನ್ನು ಹುಡುಕಿ.

ಈ ಎರಡೂ ವಿಚಾರಗಳ ಮೂಲವನ್ನು ಹುಡುಕಿದ್ದೇ ಆದಲ್ಲಿ ನಿಮಗೆ ಅದನ್ನು ಪರಿಹರಿಸಿಕೊಳ್ಳುವುದು ಸಾಧ್ಯವಾಗಬಹುದು.

ಇನ್ನೊಂದು ವಿಚಾರ, ಈ ಕನಸುಗಳನ್ನು ನಿಯಂತ್ರಿಸಬೇಕು ಎಂಬ ಯೋಚನೆ ಎಲ್ಲಿಂದ ಬಂತು? ಅದಕ್ಕೆ ಕಾರಣಗಳೇನು? ಕಾಮದ ಬಗ್ಗೆ ಸಮಾಜದಲ್ಲಿ ಏನಾದರೂ ತಪ್ಪಾಗಿ ಅಥವಾ ತುಚ್ಛವಾಗಿರುವಂತಹ ಮಾತುಗಳನ್ನು ಕೇಳಿರುವಿರೇ? ಸಾಧಾರಣವಾಗಿ ಸಮಾಜದಲ್ಲಿ ಲೈಂಗಿಕತೆಯ ಬಗ್ಗೆ ಮುಕ್ತವಾಗಿ ಮಾತನಾಡುವುದಿಲ್ಲ. ಆ ಕಾರಣದಿಂದಾಗಿ ಎಷ್ಟೋ ಜನರಿಗೆ ಅದರ ಕುರಿತು ಈ ಆಧುನಿಕ ಯುಗದಲ್ಲೂ ತಪ್ಪು ಕಲ್ಪನೆಗಳು ಮತ್ತು ಭಾವನೆಗಳು ಇವೆ. ಆದ್ದರಿಂದ ನಿಮ್ಮೊಳಗೆ ಕಾಮದ ಕುರಿತು ಇರುವ ಅಭಿಪ್ರಾಯವೇನು ಎಂಬುದನ್ನು ಮೊದಲು ಅರ್ಥಮಾಡಿಕೊಳ್ಳಿ. ಯಾಕೆಂದರೆ ಇದು ನೈಸರ್ಗಿಕವಾದಂತಹ ಸಹಜ ಪ್ರಕ್ರಿಯೆ. ಅದನ್ನು ಮೊದಲು ಅರ್ಥಮಾಡಿಕೊಳ್ಳುವುದು ಬಹಳ ಅಗತ್ಯ.

ಮಾವಿನ ವೈವಿಧ್ಯ

ರಸಾಸ್ವಾದ

ಹಸಿದು ಹಲಸು ತಿನ್ನು, ಉಂಡು ಮಾವು ತಿನ್ನು ಎನ್ನುವ ಮಾತಿದೆ. ಮಾವನ್ನು ಹಣ್ಣುಗಳ ರಾಜ ಎಂತಲೂ ಕರೆಯುತ್ತಾರೆ. ಆಹಾರ ಸಂಸ್ಕೃತಿಯಲ್ಲಿ ವಿಶಿಷ್ಟ ಸ್ಥಾನ ಪಡೆದಿರುವ ಮಾವಿನ ಸರಳ ರೆಸಿಪಿಗಳನ್ನು ನೀಡಿದ್ದಾರೆ **ಹರಿ ಸುಂದರ್ ಕೌಶಿಕ್**

ಐಸ್ ಕ್ರೀಮ್

ಬೇಕಾಗಿರುವ ಸಾಮಗ್ರಿ: ಮಾವಿನಹಣ್ಣು, ತಾಜಾ ಹಾಲಿನ ಕೆನೆ ಕ್ರೀಮ್ 3 ಚಮಚ , ಕಂಡೆನ್ಸ್ಡ್ ಮಿಲ್ಕ್ 1/2 ಕಪ್.

ಮಾಡುವ ವಿಧಾನ: ಮಾವಿನಹಣ್ಣಿನ ತಿರುಳು, ಕಂಡೆನ್ಸ್ಡ್, ಹಾಲಿನ ಕೆನೆಯನ್ನು ಚೆನ್ನಾಗಿ ಬೀಟ್ ಮಾಡಿ, ಫ್ರೀಜರ್ ನಲ್ಲಿ 2-3 ಗಂಟೆಯವರೆಗೆ ಇಡಿ. ನಂತರ ಹೊರಗೆ ತೆಗೆದರೆ ಬಾಯಲ್ಲಿ ನೀರೂರಿಸುವ ಐಸ್ ಕ್ರೀಮ್ ಸಿದ್ಧ.

ಸಲಾಡ್

ಬೇಕಾಗುವ ಸಾಮಗ್ರಿ: ಮಾವಿನಹಣ್ಣು 1, ಬಾಳೆಹಣ್ಣು 1 ಚಮಚ, ಗೋಡಂಬಿ ದ್ರಾಕ್ಷಿ 10-12, ಜೇನುತುಪ್ಪ 1 ಚಮಚ

ಮಾಡುವ ವಿಧಾನ: ಮಾವಿನಹಣ್ಣನ್ನು ಮತ್ತು ಬಾಳೆಹಣ್ಣನ್ನು ಚಿಕ್ಕ ತುಂಡುಗಳಾಗಿ ಹೆಚ್ಚಿರಿ. ದ್ರಾಕ್ಷಿ,ಗೋಡಂಬಿ ತುಂಡುಗಳು, ಜೇನು ತುಪ್ಪ ಸೇರಿಸಿ ಮಿಶ್ರ ಮಾಡಿರಿ



ಲಸ್ಸಿ

ಬೇಕಾಗಿರುವ ಸಾಮಗ್ರಿ: ಮಾವಿನಹಣ್ಣು 1. ಗಟ್ಟಿ ಮೊಸರು 1 ಕಪ್, ಸಕ್ಕರೆ 4 ಚಮಚ, ಏಲಕ್ಕಿ ಪುಡಿ 1/2 ಚಮಚ.

ಮಾಡುವ ವಿಧಾನ: ಮಾವಿನ ಹಣ್ಣಿನ ಪಲ್ಪ್ ಅನ್ನು ಗಟ್ಟಿ ಮೊಸರು, ಸಕ್ಕರೆ, ಏಲಕ್ಕಿ ಪುಡಿ ಹಾಕಿ ಮಿಕ್ಸಿಯಲ್ಲಿ ಎರಡು ಸುತ್ತು ಅರೆದುಕೊಳ್ಳಿ. ರುಚಿಯಾದ ಮಾವಿನ ಲಸ್ಸಿ ಸಿದ್ಧ.

ಮಿಲ್ಕ್ ಶೇಕ್

ಬೇಕಾಗಿರುವ ಸಾಮಗ್ರಿ: ಮಾವಿನಹಣ್ಣು 1, ಸಕ್ಕರೆ 1 ಚಮಚ, ಕಂಡೆನ್ಸ್ಡ್ ಮಿಲ್ಕ್ 1 ಚಮಚ,ಹಾಲು 1/2 ಕಪ್, 2 ಗೋಡಂಬಿ

ಮಾಡುವ ವಿಧಾನ: ಮಾವಿನ ಹಣ್ಣಿನ ತಿರುಳನ್ನು ಸಣ್ಣದಾಗಿ ಹೆಚ್ಚಿ, ಉಳಿದ ಪದಾರ್ಥಗಳನ್ನು ಸೇರಿಸಿ ಮಿಕ್ಸಿಯಲ್ಲಿ ಅರೆಯಿರಿ. ಕೆನೆಭರಿತ ಮಾವಿನ ಮಿಲ್ಕ್ ಶೇಕ್ ಸಿದ್ಧ.

ಪ್ರಜಾವಾಣಿ
ಪ್ರಜಾ ಪ್ಲಸ್
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ

₹19.71 ಕೋಟಿ ಬಾಚಿದ 'ರೇಡ್–2'

ಮೇ 1ರಂದು ಬಿಡುಗಡೆಯಾದ ಅಜಯ್ ದೇವಗನ್ ನಟನೆಯ 'ರೇಡ್–2' ಸಿನಿಮಾ ದೇಶದಾದ್ಯಂತ ಮೊದಲ ದಿನ ₹19.71 ಕೋಟಿ ಗಳಿಸಿದೆ ಎಂದು ಚಿತ್ರದ ನಿರ್ಮಾಪಕರು ತಿಳಿಸಿದ್ದಾರೆ. 2018ರಲ್ಲಿ ಬಿಡುಗಡೆಯಾಗಿದ್ದ 'ರೇಡ್' ಚಿತ್ರದ ಸೀಕ್ವೆಲ್ ಇದಾಗಿದೆ.



"ಮಕ್ಕಳ ಸಿನಿಮಾ ಮಾಡಬೇಕು ಎನ್ನುವುದು ಬಹಳ ವರ್ಷ-ಗಳ ಆಸೆ. ಮಕ್ಕಳಿಗೆ ಶಿಕ್ಷಣ ಬಹಳ ಮುಖ್ಯ. ಆದರೆ ಈಗ ಮಕ್ಕಳಿಗೆ ಒತ್ತಡ ಹೆಚ್ಚಾಗಿದೆ. ಯಾವುದೇ ಒತ್ತಡ ಹಾಕದೆ ಮಕ್ಕಳಿಗೆ ಹೇಗೆ ಪಾಠ ಮಾಡಬಹುದು ಎನ್ನುವುದನ್ನು ಈ ಸಿನಿಮಾದಲ್ಲಿ ಹೇಳಲಿದ್ದೇವೆ.

–ಗೀತಾ ಶಿವರಾಜ್‌ಕುಮಾರ್, ನಿರ್ಮಾಪಕಿ."

ಸಿನಿಮಾದ ಮುಹೂರ್ತದ ಸಂದರ್ಭ

'ಎ ಫಾರ್ ಆನಂದ್‌ನಲ್ಲಿ ನಾನು ಸ್ಟಾರ್ ಅಲ್ಲ

ಅದು ಮೂರನೇ ತರಗತಿ. ಕುರ್ಚಿಯಲ್ಲಿ ಆನಂದ್ ಮೇಷ್ಟ್ರು (ಶಿವರಾಜ್‌ಕುಮಾರ್) ಕುಳಿತಿದ್ದಾರೆ. ತಮ್ಮ ಆನಂದ್ ಮೇಷ್ಟ್ರ ಕಥೆ ಹೇಳ್ತಾ 'ಜೋಗಿ' ಮಟ್ಟಕ್ಕೆ ಬಿಲ್ಡ್‌ಅಪ್ ಕೊಡ್ತಿದ್ದಾರೆ ಪುಟಾಣಿ ವಿದ್ಯಾರ್ಥಿಗಳು. ಇವರ ಮಾತುಗಳನ್ನು ಕೇಳಿ ಮೇಷ್ಟ್ರು ಮುಗುಳ್ನಗುತ್ತಿದ್ದಾರೆ. ಇವೆಲ್ಲವನ್ನೂ ಬೆಂಚ್‌ನಲ್ಲಿ ಕುಳಿತ ಸಿನಿಮಾ ಪತ್ರಕರ್ತರು ಕೇಳುತ್ತಿದ್ದಾರೆ... ಹೀಗೊಂದು ವಿಶೇಷವಾದ ಸುದ್ದಿಗೋಷ್ಠಿ ನಡೆದಿದ್ದು ಶ್ರೀನಿ ನಿರ್ದೇಶನದ 'ಎ ಫಾರ್ ಆನಂದ್' ಸಿನಿಮಾ ಮುಹೂರ್ತದ ಸಂದರ್ಭದಲ್ಲಿ.

ಬೆಂಗಳೂರಿನ ಬಂಡೆ ಮಹಾಕಾಳಿ ದೇವಸ್ಥಾನದಲ್ಲಿ ಶುಕ್ರವಾರ (ಮೇ 2) 'ಎ ಫಾರ್ ಆನಂದ್' ಮುಹೂರ್ತ ನಡೆಯಿತು. ಚಿತ್ರದ ನಿರ್ಮಾಪಕಿ ಗೀತಾ ಶಿವರಾಜ್‌ಕುಮಾರ್ ಕ್ಲ್ಯಾಪ್ ಮಾಡಿದರು. 'ವೇದ' ಹಾಗೂ 'ಭೈರತಿ ರಣಗಲ್' ಬಳಿಕ ಗೀತಾ ಪಿಕ್ಚರ್ಸ್ ನಿರ್ಮಾಣ ಮಾಡುತ್ತಿರುವ ಮೂರನೇ ಸಿನಿಮಾ ಇದಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಿವರಾಜ್‌ಕುಮಾರ್, 'ಇದು 'ಘೋಸ್ಟ್' ಬಳಿಕ ಶ್ರೀನಿ ಜೊತೆ ಎರಡನೇ ಸಿನಿಮಾ. ಹಲವು ಮಕ್ಕಳ ಸಿನಿಮಾಗಳು ಬಂದಿವೆ. 'ವಿಲ್ಲಿ ವೋಂಕಾ' ಚಿತ್ರದಲ್ಲಿ ಚಾಕೊಲೇಟ್ ಫ್ಯಾಕ್ಟರಿ ಇರುತ್ತದೆ. ಆದರೆ ಈ ಸಿನಿಮಾದಲ್ಲಿ ಚಾಕೊಲೇಟ್ ಇಲ್ಲ. ಇಲ್ಲಿ ಸಿಹಿಯಾದ ಮಾತಿನ ಫ್ಯಾಕ್ಟರಿ ಇದೆ. ಚಾಕೊಲೇಟ್ ರೀತಿಯ ನಡವಳಿಕೆ ಇರುತ್ತದೆ. ಇದೇ ಕಂಪಿನಲ್ಲಿ ಮಕ್ಕಳಿಗೆ ಹೇಗೆ ಶಿಕ್ಷಣ ನೀಡುತ್ತೇವೆ, ಅವರನ್ನು ಬೆಳಕಿಗೆ ತರುತ್ತೇವೆ ಎನ್ನುವುದೇ ಸಿನಿಮಾ ಕಥೆ. ಬಹಳ ಮನರಂಜನಾತ್ಮಕವಾಗಿ ಈ ಸಿನಿಮಾವಿರಲಿದೆ. ಮಕ್ಕಳು ಹಾಗೂ ಶಿಕ್ಷಕರನ್ನು ಪರಸ್ಪರ ಬೆಸೆಯುವ ಸಿನಿಮಾ ಇದಾಗಲಿದೆ. ಅಕ್ಟೋಬರ್ ಅಂತ್ಯದಲ್ಲಿ ಅಥವಾ ನವೆಂಬರ್‌ನಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ. ವಾಸುಕಿ ವೈಭವ್ ಸಂಗೀತ ಚಿತ್ರಕ್ಕಿರಲಿದ್ದು, ಆರು ಹಾಡುಗಳು ಇರಲಿವೆ. 'ಆನಂದ್' ಎಂಬ ಶೀರ್ಷಿಕೆಯನ್ನು ಅಮ್ಮ ಇಟ್ಟಿದ್ದರು. ಈ ಆನಂದ್ ಎಲ್ಲ ಮಕ್ಕಳ ಮುಖದಲ್ಲಿ ಹೇಗೆ ಆನಂದ ತರಲಿದ್ದಾನೆ ಎನ್ನುವುದನ್ನು ಕಾದುನೋಡಿ. ಈ ಸಿನಿಮಾ ಇವತ್ತಿನ ಶಿಕ್ಷಣ ವ್ಯವಸ್ಥೆಗೇ ದೊಡ್ಡ ಪಾಠ ಆಗಲಿದೆ. ಶಿವಣ್ಣ ಇಲ್ಲಿ ಸ್ಟಾರ್ ಆಗಿ ಅಲ್ಲ ಮೇಷ್ಟ್ರಾಗಿ ನಟಿಸುತ್ತಿದ್ದಾನೆ' ಎಂದರು.



'ಐಡಿಯಾ ಕೊಟ್ಟಿದ್ದೇ ಗೀತಕ್ಕ'

'ಎ ಫಾರ್ ಆನಂದ್ ಐಡಿಯಾ ಶುರುವಾಗಿದ್ದೇ ಗೀತಾ ಶಿವರಾಜ್‌ಕುಮಾರ್ ಅವರಿಂದ' ಎಂದು ಮಾತು ಆರಂಭಿಸಿದ ಶ್ರೀನಿ, ''ಘೋಸ್ಟ್' ಸಿನಿಮಾ ಚಿತ್ರೀಕರಣದ ಸಂದರ್ಭದಲ್ಲಿ ಈ ಎಳೆಯನ್ನು ಮುಂದಿಟ್ಟು ನೀವೇ ನಿರ್ದೇಶನ ಮಾಡಿದರೆ ಚೆನ್ನಾಗಿರುತ್ತದೆ ಎಂದಿದ್ದರು ಗೀತಕ್ಕ. ಇದೊಂದು ದೊಡ್ಡ ಜವಾಬ್ದಾರಿ. ಮುದ್ದಾದ ಒಳ್ಳೆಯ ಕೌಟುಂಬಿಕ ಮನರಂಜನಾತ್ಮಕ ಸಿನಿಮಾ ಇದು. ಶೀರ್ಷಿಕೆ ಹುಡುಕುತ್ತಾ, ಶಿವಣ್ಣ ಅವರ ಮೊದಲ ಸಿನಿಮಾದ ಶೀರ್ಷಿಕೆಯನ್ನೇ ಬಳಸಿಕೊಂಡು 'ಎ ಫಾರ್ ಆನಂದ್' ಎಂದು ಇಟ್ಟೆವು. ಯಾಕೀ ಶೀರ್ಷಿಕೆ ಇಟ್ಟೆವು ಎನ್ನುವುದಕ್ಕೆ ಕಥೆಯೊಳಗೆ ಸಂದರ್ಭಗಳು ಇವೆ. ಇದು ಒಂದು ಹೊಸ ಜಾನರ್‌ನ ಸಿನಿಮಾ. ಇಡೀ ಕುಟುಂಬವೇ ಜೊತೆಗೂಡಿ ನೋಡಬೇಕಾದ ಸಿನಿಮಾ. ಶಿವರಾಜ್‌ಕುಮಾರ್ ಅವರ ಕಾಮಿಡಿ ಟೈಮಿಂಗ್ ಚೆನ್ನಾಗಿದೆ. ಮಕ್ಕಳ ಜೊತೆ ಶಿವಣ್ಣನೂ ಮಕ್ಕಳಾಗೇ ಇರುತ್ತಾರೆ. ಹೀಗಾಗಿ ಕಥೆ ಬರೆಯುವುದು ಸುಲಭ' ಎಂದರು.

'ಘೋಸ್ಟ್' ಸಿನಿಮಾಗೆ ಕೆಲಸ ಮಾಡಿದ್ದ ತಾಂತ್ರಿಕ ತಂಡವೇ 'ಎ ಫಾರ್ ಆನಂದ್' ಸಿನಿಮಾಗೂ ಕೆಲಸ ಮಾಡಲಿದೆ. ಮಹೇನ್ ಸಿಂಹ ಛಾಯಾಚಿತ್ರಗ್ರಹಣ, ದೀಪು ಎಸ್. ಕುಮಾರ್ ಸಂಕಲನ, ಪ್ರಸನ್ನ ವಿ.ಎಂ. ಸಂಭಾಷಣೆ ಬರೆದಿದ್ದಾರೆ.

ಸಿದ್ಧಸೂತ್ರವಿಲ್ಲದೆ ಕಟ್ಟಿದ ಸರಳ ಕಥೆ

ನಾವು ನೋಡಿದ ಸಿನಿಮಾ

ಪಪ್ಪಿ (ಕನ್ನಡ)

- ನಿರ್ಮಾಣ: ಬಿ.ಬಿ. ಸಂಕನೂರು
- ನಿರ್ದೇಶನ: ಆಯುಷ್ ಮಲ್ಲಿ
- ತಾರಾಗಣ: ಜಗದೀಶ್ ಕೊಪ್ಪಳ, ಆದಿತ್ಯ ಸಿಂಧನೂರು, ದುರುಗಪ್ಪ ಕಂಬ್ಳಿ, ರೇಣುಕಾ, ಕನಕಪ್ಪ, ಕಾವ್ಯ ಹೊಸಪೇಟೆ ಮತ್ತಿತರರು.

'ತಿಥಿ', 'ದೊಡ್ಡಹಟ್ಟಿ ಬೋರೇಗೌಡ', 'ಫೋಟೋ', 'ಶಿವಮ್ಮ' ಹೀಗೆ ಕೆಲ ಸಿನಿಮಾಗಳು ಸಿದ್ಧಸೂತ್ರಕ್ಕೆ ಅಂಟಿಕೊಳ್ಳದೆ ಆದಷ್ಟು ನೈಜವಾಗಿ ಹಳ್ಳಿಯ ಜನರ ಕಥೆಗಳನ್ನು ಮನರಂಜನಾತ್ಮಕವಾಗಿ, ಭಾವನಾತ್ಮಕವಾಗಿ ತೆರೆ ಮೇಲೆ ತಂದಿವೆ. 'ಪಪ್ಪಿ' ಇದಕ್ಕೆ ಹೊಸ ಸೇರ್ಪಡೆ. ಅಪ್ಪಟ ಉತ್ತರ ಕರ್ನಾಟಕ ಭಾಷೆಯ ಈ ಸಿನಿಮಾ ಮನುಷ್ಯ–ನಾಯಿಯ ಪರಸ್ಪರ ಪ್ರೀತಿ, ವಿಶ್ವಾಸದ ಕಥೆ ಹೇಳುತ್ತಾ ವಾಸ್ತವ ಸ್ಥಿತಿಗತಿಗಳನ್ನು ತೆರೆದಿಟ್ಟಿದೆ.

ಬರಗಾಲದ ಕಾರಣದಿಂದ ಕೆಲಸ ಅರಸಿ ಸಿಂಧನೂರು ತಾಲ್ಲೂಕಿನ ದಡೇಸುಗೂರಿನ ದುರುಗಪ್ಪ–ರೇಣುಕಾ ದಂಪತಿ ಪುತ್ರ ಪರಶುರಾಮನ(ಪರ್ಶ್ಯಾ) ಜೊತೆ ಬೆಂಗಳೂರು ದಾರಿ ಹಿಡಿಯುತ್ತಾರೆ. ರೇಣುಕಾಳ ಅಣ್ಣ ಕನಕಪ್ಪನೂ ಜೊತೆಗಿದ್ದಾನೆ. ತಮ್ಮದೇ ಊರಿನ ಮೇಸ್ತ್ರಿಯ ಕೈಯಡಿ ಬೆಂಗಳೂರಿನಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಕೆಲಸ ಮಾಡುತ್ತಿರುತ್ತಾರೆ. ಉಳಿಯಲೊಂದು ಗುಡಿಸಲು. ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಮೇಸ್ತ್ರಿಯೇ ಶಿಕ್ಷಕಿಯನ್ನು ನೇಮಿಸಿದ್ದಾನೆ. ಪರ್ಶ್ಯಾನನ್ನು ದುರುಗಪ್ಪ ಇಲ್ಲಿಗೆ ಸೇರಿಸುತ್ತಾನೆ. ಪರ್ಶ್ಯಾನಿಗೆ ಆದಿ ಸ್ನೇಹಿತನಾಗುತ್ತಾನೆ. 'ಪಪ್ಪಿ ಎಂಬ ನಾಯಿಮರಿ ಕಳೆದುಹೋಗಿದೆ, ಹುಡುಕಿಕೊಟ್ಟವರಿಗೆ ₹10 ಸಾವಿರ ಬಹುಮಾನ' ಎಂಬ ಜಾಹೀರಾತು ಸಿನಿಮಾದ ಕಥೆಯನ್ನು ಮುಂದುವರಿಸುತ್ತದೆ.

ಸಿನಿಮಾದ ಮುಖ್ಯ ಕಥೆ ಪ್ರಾರಂಭವಾಗುವುದು ಮಧ್ಯಂತರದ ವೇಳೆಗೆ. ಚಿತ್ರದ ಮೊದಲಾರ್ಧವನ್ನು ಹಲವು ವಿಷಯಗಳನ್ನು ಹೇಳುವುದಕ್ಕಾಗಿ ನಿರ್ದೇಶಕರು ಮೀಸಲಿಟ್ಟಿದ್ದಾರೆ. ಬರಗಾಲ–ಸಾಲ, ಬೆಂಗಳೂರಿಗೆ ಉತ್ತರ ಕರ್ನಾಟಕದ ಜನರ ಗುಳೆ, ಮಹಾನಗರದೊಳಗೆ ಸಣ್ಣ ಗುಡಿಸಲುಗಳಲ್ಲಿ ಅವರ ಬದುಕು, ಅವರು ಕಾಣುವ ಸಣ್ಣ ಕನಸುಗಳು, ಬದಲಾದ ಉತ್ತರ ಕರ್ನಾಟಕದ ಜನರ ಜೀವನಶೈಲಿ, ಪರ್ಶ್ಯಾ–ಆದಿಯ ಸ್ನೇಹವನ್ನು ತೋರಿಸುವುದಕ್ಕೆ ಈ ಅವಧಿ ಬಳಕೆಯಾಗಿದೆ. ಇದು ಕೊಂಚ ದೀರ್ಘವೆನಿಸುತ್ತದೆ. ಮೊದಲಾರ್ಧದಲ್ಲೇ ಬರುವ 'ಕಾಲ ಕೆಟ್ಟೈತಂತ...' ಹಾಡಿನಲ್ಲಿ ಮಕ್ಕಳ ಮೂಲಕ ಸಮಾಜದಲ್ಲಿನ ಆಗುಹೋಗುಗಳನ್ನು ನಿರ್ದೇಶಕರು ಪ್ರಸ್ತುತಪಡಿಸಿದ್ದಾರೆ. ಆಕಾಶದೆತ್ತರದ ಅಪಾರ್ಟ್‌ಮೆಂಟ್‌ಗಳ ಕೆಳಗೆ ಕಾರ್ಮಿಕರ ಗುಡಿಸಲುಗಳು, ಅವರ ಜೀವನ ಹಲವು ಕಥೆಗಳನ್ನು ಮೌನವಾಗಿಯೇ ಹೇಳುತ್ತವೆ. ಕಥೆಯ ಎಳೆ ಸಣ್ಣದಾಗಿರುವುದರಿಂದ ಕೆಲ ದೃಶ್ಯಗಳಿಗೆ ಕತ್ತರಿ ಹಾಕಬಹುದಿತ್ತು.

ಉತ್ಸವ್ ಗೋನವಾರ ನಿರ್ದೇಶನದ 'ಫೋಟೋ' ಇದೇ ರೀತಿ ಹುಡುಗನೊಬ್ಬನ ಕನಸಿನ ಸುತ್ತವಿತ್ತು. ಅದರಲ್ಲೂ ಕೋವಿಡ್ ಲಾಕ್‌ಡೌನ್ ವಿಷಯವನ್ನೇ ಆಧಾರವಾಗಿಟ್ಟುಕೊಂಡು ಕಥೆ ಹೆಣೆಯಲಾಗಿತ್ತು. ಈ ಸಿನಿಮಾದಲ್ಲೂ ಲಾಕ್‌ಡೌನ್ ಘೋಷಣೆಯಾದ ಸಂದರ್ಭದ ಸ್ಥಿತಿಯನ್ನು ಸಣ್ಣ ಪ್ರಮಾಣದಲ್ಲಿ ಕಟ್ಟಿಕೊಡಲಾಗಿದೆ.

ನಟನೆಯಲ್ಲಿ 'ಪರ್ಶ್ಯಾ'ನಾಗಿ ಜಗದೀಶ್, 'ಆದಿ'ಯಾಗಿ ಆದಿತ್ಯ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ಜಗದೀಶ್ ಮಾತು ಮಾಲೆಪಟಾಕಿಯಂತೆ. ಪರ್ಶ್ಯಾ ಪಾತ್ರಕ್ಕೆ ಜೀವ ತುಂಬುತ್ತಾ ನಾಯಿಯ ಪ್ರೀತಿಯಲ್ಲಿ ಕರಗಿಹೋಗುವ ಪರಿ ಅದ್ಭುತ. ಸಂಭಾಷಣೆ ಪೂರ್ತಿ ಉತ್ತರ ಕರ್ನಾಟಕದ ಸೊಗಡಿನಲ್ಲಿದೆ. ಹೀಗಾಗಿ ಬೈಗುಳಗಳೂ ಸಿನಿಮಾದುದ್ದಕ್ಕೂ ತುಂಬಿಕೊಂಡಿವೆ. ಇವು ಒಂದು ಹಂತದಲ್ಲಿ ಕಿರಿಕಿರಿ ಅನಿಸುತ್ತದೆ. ದುರುಗಪ್ಪ ಕಂಬ್ಳಿ ಹಾಗೂ ರೇಣುಕಾ ನಟನೆ ಚೆನ್ನಾಗಿದೆ. ಸುರೇಶ್ ಬಾಬು ಛಾಯಾಚಿತ್ರಗ್ರಹಣ ಪಾತ್ರಗಳ ಬದುಕನ್ನು ನೈಜವಾಗಿ ಸೆರೆಹಿಡಿದಿದೆ.

-ಅಭಿಲಾಷ್ ಪಿ.ಎಸ್.

'ಸಿಂಧೂರಿ' ಚಿತ್ರಕ್ಕೆ ಚಾಲನೆ

ಧರ್ಮ, ರಾಗಿಣಿ

ರಾಗಿಣಿ ದ್ವಿವೇದಿ ಹಾಗೂ ಧರ್ಮ ಕೀರ್ತಿರಾಜ್ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿರುವ ಹೊಸ ಸಿನಿಮಾ 'ಸಿಂಧೂರಿ'ಯ ಮುಹೂರ್ತ ಇತ್ತೀಚೆಗೆ ನಡೆಯಿತು.

ಈ ಚಿತ್ರಕ್ಕೆ ಶಂಕರ್ ಕೋನಮಾನಹಳ್ಳಿ ಆ್ಯಕ್ಷನ್ ಕಟ್ ಹೇಳುತ್ತಿದ್ದು, ಎಸ್ ರಮೇಶ್ ನಿರ್ಮಾಣ ಮಾಡುತ್ತಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಂಕರ್, 'ನಿರ್ದೇಶಕನಾಗಿ ಇದು ನನಗೆ ನಾಲ್ಕನೇ ಚಿತ್ರ. ಮೇ 10ರಿಂದ ಚಿತ್ರದ ಚಿತ್ರೀಕರಣ ಪ್ರಾರಂಭವಾಗಲಿದೆ. ಸಕಲೇಶಪುರ ಸೇರಿದಂತೆ ಹಲವೆಡೆ 45 ದಿನಗಳಲ್ಲಿ ಒಂದೇ ಹಂತದ ಚಿತ್ರೀಕರಣ ನಡೆಯಲಿದೆ. ಸಿನಿಮಾದ ಶೀರ್ಷಿಕೆಗೂ ಯಾವುದೇ ವ್ಯಕ್ತಿಗೂ ಸಂಬಂಧವಿಲ್ಲ. ಇದೊಂದು ಕಾಲ್ಪನಿಕ ಕಥೆ. ಮರ್ಡರ್ ಮಿಸ್ಟ್ರಿ ಜಾನರ್‌ನಲ್ಲಿ ಈ ಸಿನಿಮಾವಿದ್ದು, ಇಲ್ಲಿ ರಾಗಿಣಿ ಮತ್ತು ಧರ್ಮ ಕೀರ್ತಿರಾಜ್ ಜೋಡಿಯಾಗಿ ನಟಿಸುತ್ತಿಲ್ಲ. ಕಥೆಗೆ ತಿರುವು ನೀಡುವ ಪಾತ್ರವಾಗಿ ಅವರ ಪ್ರವೇಶವಾಗುತ್ತದೆ' ಎಂದರು.

'ಮಹಿಳಾ ಪ್ರಧಾನ ಚಿತ್ರ ಮಾಡುವುದು ಸವಾಲಿನ ಕೆಲಸ. ಈ ಚಿತ್ರದ ಕಥೆ ಅಸಾಧಾರಣವಾಗಿದೆ ಎಂದಲ್ಲ, ವಿಭಿನ್ನವಾಗಿದೆ. ಚಿತ್ರದಲ್ಲಿ ಎಲ್ಲಾ ಪಾತ್ರಗಳಿಗೂ ಮಹತ್ವವಿದ್ದು, ಪ್ರೇಕ್ಷಕರನ್ನು ಹಿಡಿದಿಡುವ ಎಲ್ಲಾ ಅಂಶಗಳು ಇವೆ' ಎಂದರು ರಾಗಿಣಿ.

ಅಮೆರಿಕ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿಕೆ • ಉಗ್ರರ ನಿಗ್ರಹಕ್ಕೆ ಸಹಕರಿಸಲು ಪಾಕಿಸ್ತಾನಕ್ಕೆ ಸಲಹೆ

'ಸಂಘರ್ಷ ಆಗದಂತೆ ನೋಡಿಕೊಳ್ಳಿ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಪಹಲ್ಗಾಮ್‌ನ ಉಗ್ರರ ದಾಳಿ ಕೃತ್ಯಕ್ಕೆ ಪ್ರತಿಕ್ರಿಯಿಸುವಾಗ ಪಾಕ್ ಜೊತೆಗೆ ಸೇನಾ ಸಂಘರ್ಷ ಏರ್ಪಡುವುದನ್ನು ತಪ್ಪಿಸಬೇಕು' ಎಂದೂ ಅಮೆರಿಕ ಭಾರತಕ್ಕೆ ಕೋರಿದೆ.

ಜೆ.ಡಿ.ವ್ಯಾನ್ಸ್

'ಮಿತ್ರ ರಾಷ್ಟ್ರಗಳಾದ ಭಾರತ ಮತ್ತು ಪಾಕಿಸ್ತಾನದ ಜೊತೆಗೆ ನಾವು ನಿಕಟ ಸಂಪರ್ಕದಲ್ಲಿ ಇದ್ದೇವೆ. ಪ್ರಾದೇಶಿಕ ಬಿಕ್ಕಟ್ಟು ಇನ್ನಷ್ಟು ಉಲ್ಬಣಗೊಳ್ಳದಂತೆ ಭಾರತ ಪ್ರತಿಕ್ರಿಯಿಸಲಿದೆ ಎಂದು ಆಶಿಸುತ್ತೇವೆ' ಎಂದು ಅಮೆರಿಕದ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಹೇಳಿದ್ದಾರೆ.

'ಫಾಕ್ಸ್ ನ್ಯೂಸ್' ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಈ ನಿಲುವು ತಿಳಿಸಿರುವ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ಅವರು, 'ಗಡಿಯಾಚೆಗಿನ ಉಗ್ರರನ್ನು ಹತ್ತಿಕ್ಕುವ ಭಾರತದ ನಡೆಗೆ ಪಾಕಿಸ್ತಾನವು 'ಸಹಕರಿಸಲಿದೆ' ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ವ್ಯಾನ್ಸ್ ಅವರು ಇತ್ತೀಚೆಗೆ ಭಾರತದ ಪ್ರವಾಸದಲ್ಲಿದ್ದಾಗಲೇ ಉಗ್ರರು ಪಹಲ್ಗಾಮ್‌ನಲ್ಲಿ ಪ್ರವಾಸಿಗರನ್ನು ಗುರಿಯಾಗಿಸಿ ದಾಳಿ ನಡೆಸಿದ್ದು, 26 ಜನರು ಮೃತಪಟ್ಟಿದ್ದರು.

ಭಾರತ ಮತ್ತು ಪಾಕ್ ನಡುವಿನ ಉದ್ವಿಗ್ನ ಸ್ಥಿತಿ ಮೂಡುತ್ತಿರುವುದು ಕಳವಳಕಾರಿಯೇ ಎಂಬ ಪ್ರಶ್ನೆಗೆ, 'ಪರಿಸ್ಥಿತಿ ಉಲ್ಬಣಗೊಳ್ಳುವ ಆತಂಕವಿದೆ. ಉಭಯ ರಾಷ್ಟ್ರಗಳು ಅಣುಶಕ್ತಿ ಹೊಂದಿರುವುದು ಇದಕ್ಕೆ ಕಾರಣವಾಗಿದೆ' ಎಂದು ವ್ಯಾನ್ಸ್ ಪ್ರತಿಕ್ರಿಯಿಸಿದರು.

'ಉಭಯ ದೇಶಗಳ ಜೊತೆಗೆ ನಾವು ಸಂಪರ್ಕದಲ್ಲಿದ್ದೇವೆ. ಬಿಕ್ಕಟ್ಟು ಉಲ್ಬಣಿಸದಂತೆ ಭಾರತ ಪ್ರತಿಕ್ರಿಯಿಸದು ಎಂಬ ವಿಶ್ವಾಸವಿದೆ. ನೋಡೋಣ ಏನಾಗುವುದೋ' ಎಂದು ಹೇಳಿದರು.

'ಆದರೆ, ಸದ್ಯ ತನ್ನ ನೆಲವನ್ನು ನೆಲೆಯಾಗಿಸಿ ಭಯೋತ್ಪಾದನೆ ಚಟುವಟಿಕೆ ನಡೆಸುತ್ತಿರುವ ಉಗ್ರರ ಹತ್ತಿಕ್ಕಲು ಸಹಕರಿಸುವ ಹೊಣೆಗಾರಿಕೆಯನ್ನು ಪಾಕಿಸ್ತಾನ ತೋರಬೇಕಿದೆ' ಎಂದರು.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕ್ ರುಬಿಯೊ ಅವರು, ಉದ್ವಿಗ್ನ ಸ್ಥಿತಿ ಶಮನಗೊಳಿಸಲು ಭಾರತ ಮತ್ತು ಪಾಕ್ ಸಹಕರಿಸಬೇಕು ಎಂದು ಗುರುವಾರ ಹೇಳಿದ್ದರು. ಅದರ ಹಿಂದೆಯೇ ವ್ಯಾನ್ಸ್ ಈ ಮಾತು ಹೇಳಿದ್ದಾರೆ.

'ಭಾರತ ಮತ್ತು ಪಾಕಿಸ್ತಾನವು ಸಂಯಮ ತೋರಬೇಕು' ಎಂದು ಚೀನಾ ಈ ವಾರದ ಆರಂಭದಲ್ಲಿ ಹೇಳಿದ್ದರೆ, ಪರಿಸ್ಥಿತಿ ಶಮನಗೊಳಿಸಲು ಜವಾಬ್ದಾರಿಯುತ ನಿರ್ಣಯಕ್ಕೆ ಬರುವಂತೆ ಅಮೆರಿಕವು ಸಲಹೆ ಮಾಡಿತ್ತು.

ವಾಘಾ ಗಡಿಯಲ್ಲಿ ಪಾಕ್ ಪ್ರಜೆಗಳು ಅತಂತ್ರ

ಅಮೃತಸರ (ಪಿಟಿಐ): ದೇಶ ತೊರೆಯಲು ಕೇಂದ್ರ ಸರ್ಕಾರ ನೀಡಿದ್ದ ಗಡುವು ಅಂತ್ಯವಾಗಿದ್ದು, ಪಾಕಿಸ್ತಾನದ 21 ಪ್ರಜೆಗಳು ಅಟ್ಟಾರಿ– ವಾಘಾ ಗಡಿಯಲ್ಲಿ ಅತಂತ್ರರಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ಪಹಲ್ಗಾಮ್ ಭಯೋತ್ಪಾದಕ ದಾಳಿ ನಂತರ ಕೇಂದ್ರ ಸರ್ಕಾರ, ಪಾಕಿಸ್ತಾನದ ಪ್ರಜೆಗಳಿಗೆ ನೀಡಿದ್ದ ಎಲ್ಲ ರೀತಿಯ ವೀಸಾಗಳನ್ನು ರದ್ದು ಮಾಡಿತ್ತು. ಏಪ್ರಿಲ್ 30ರ ಒಳಗಾಗಿ ದೇಶ ಬಿಟ್ಟು ಹೋಗುವಂತೆ ಆದೇಶ ನೀಡಿತ್ತು. ಈ ಗಡುವು ಮುಗಿಯುತ್ತಿದ್ದಂತೆಯೇ ಗುರುವಾರ ವಾಘಾ ಗಡಿಯನ್ನು ಮುಚ್ಚಲಾಗಿದೆ.

ಶುಕ್ರವಾರ ಮಧ್ಯಾಹ್ನ 12 ಗಂಟೆವರೆಗೆ 21 ಪಾಕ್ ಪ್ರಜೆಗಳು ಇಂಟಿಗ್ರೇಟೆಡ್ ಚೆಕ್ ಪೋಸ್ಟ್‌ನ ರಸ್ತೆ ಬದಿಯಲ್ಲಿ ಬೀಡು ಬಿಟ್ಟಿದ್ದರು.

ಪಾಕಿಸ್ತಾನದ ಸುಮಾರು 50 ಪ್ರಜೆಗಳು ಇಂಟಿಗ್ರೇಟೆಡ್ ಚೆಕ್ ಪೋಸ್ಟ್ ಹೊರಗೆ ಸರತಿಯಲ್ಲಿ ನಿಂತಿದ್ದರು. ಕಸ್ಟಮ್ಸ್ ಮತ್ತು ವಲಸೆ ಅಧಿಕಾರಿಗಳಿಂದ ಅನುಮತಿ ಪಡೆದ ನಂತರ ಅವರಿಗೆ ಪಾಕಿಸ್ತಾನದ ಒಳಕ್ಕೆ ಪ್ರವೇಶಕ್ಕೆ ಅನುಮತಿ ನೀಡಬಹುದು.

ಈ ಮಧ್ಯೆ, ಭಾರತದಲ್ಲಿ ಅತಂತ್ರರಾಗಿರುವ ಪ್ರಜೆಗಳು ವಾಘಾ ಗಡಿ ಮೂಲಕ ದೇಶಕ್ಕೆ ಬರಲು ಅನುವು ಮಾಡಿಕೊಡುವುದಾಗಿ ಪಾಕಿಸ್ತಾನ ಶುಕ್ರವಾರ ಘೋಷಿಸಿದೆ.

'ಪಾಕಿಸ್ತಾನದ ಪ್ರಜೆಗಳು ಅಟ್ಟಾರಿ ಗಡಿಯಲ್ಲಿ ಅತಂತ್ರರಾಗಿರುವ ಬಗ್ಗೆ ಮಾಧ್ಯಮ ವರದಿಗಳಿಂದ ತಿಳಿದಿದೆ. ಭಾರತೀಯ ಅಧಿಕಾರಿಗಳು ಗಡಿ ದಾಟಲು ಅವಕಾಶ ನೀಡಿದರೆ, ನಮ್ಮ ಪ್ರಜೆಗಳನ್ನು ಬರಮಾಡಿಕೊಳ್ಳಲು ನಾವು ಸಿದ್ಧರಿದ್ದೇವೆ' ಎಂದು ಪಾಕಿಸ್ತಾನ ವಿದೇಶಾಂಗ ಇಲಾಖೆಯ ವಕ್ತಾರರು ತಿಳಿಸಿದರು.

ಆಟ್ಟಾರಿ–ವಾಘಾ ಗಡಿಯತ್ತ ಸಾಗಿದ ಪಾಕ್ ಪ್ರಜೆಯನ್ನು ದಿಟ್ಟಿಸಿದ ಬಿಎಸ್‌ಎಫ್ ಜವಾನ –ಪಿಟಿಐ ಚಿತ್ರ

'ಉಗ್ರರ ಸಂಘಟನೆಗಳ ಇತಿಹಾಸವೇ ಇದೆ'

ಲಂಡನ್/ಇಸ್ಲಾಮಾಬಾದ್ (ಪಿಟಿಐ): 'ಉಗ್ರರ ಸಂಘಟನೆಗಳ ಇತಿಹಾಸವೇ ಪಾಕ್ ಜೊತೆಗಿದೆ. ಇದರಿಂದ ದೇಶ ಸಾಕಷ್ಟು ನಲುಗಿದೆ' ಎಂದು ಪಾಕಿಸ್ತಾನ್ ಪೀಪಲ್ಸ್ ಪಾರ್ಟಿ ಮುಖ್ಯಸ್ಥ ಬಿಲಾವಲ್ ಭುಟ್ಟೊ ಜರ್ದಾರಿ ಹೇಳಿದ್ದಾರೆ.

ಸ್ಕೈ ನ್ಯೂಸ್ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಅವರು, 'ಪಾಕಿಸ್ತಾನ ದಶಕಗಳವರೆಗೆ 'ಕೆಟ್ಟ ಕೆಲಸ' ಮಾಡಿದೆ' ಎಂಬ ಸಚಿವ ಕ್ವಾಜಾ ಅಸಿಫ್ ಹೇಳಿಕೆ ಉಲ್ಲೇಖಿಸಿ ಈ ಮಾತು ಹೇಳಿದರು.

'ಪಾಕ್ ಅನ್ನು ಉಗ್ರರ ಸಂಘಟನೆಗಳು ನೆಲೆ ಆಗಿಸಿಕೊಂಡಿದ್ದವು ಎಂಬುದು ರಹಸ್ಯವೇನೂ ಅಲ್ಲ. ಇದರಿಂದ ದೇಶಕ್ಕೆ ನಷ್ಟವಾಯಿತು. ಪದೇ ಪದೇ ಅದರ ಪರಿಣಾಮ ಎದುರಿಸಿದೆವು' ಎಂದರು.

'ಆದರೆ, ನಾವು ಇದರಿಂದ ಪಾಠ ಕಲಿತಿದ್ದೇವೆ. ಪರಿಹಾರ ಕಂಡುಕೊಳ್ಳಲು ಆಂತರಿಕ ಸುಧಾರಣೆಗೆ ಒತ್ತು ನೀಡಿದ್ದೇವೆ' ಎಂದು ಪ್ರತಿಪಾದಿಸಿದರು. ಸಿಂಧೂ ಜಲ ಒಪ್ಪಂದವನ್ನು ಅಮಾನತಿನಲ್ಲಿಡುವ ಭಾರತದ ಕ್ರಮಕ್ಕೆ ಪ್ರತಿಕ್ರಿಯಿಸಿ, 'ನೀರು ಹರಿಯದಿದ್ದರೆ, ರಕ್ತ ಹರಿಯಲಿದೆ' ಎಂದು ಬಿಲಾವಲ್ ಈ ಹಿಂದೆ ಹೇಳಿದ್ದರು. ಈ ಬಗ್ಗೆ ಗಮನಸೆಳೆದಾಗ, 'ಅದು ನನ್ನ ಉದ್ದೇಶವಲ್ಲ. ನನ್ನ ಹೇಳಿಕೆ ಅದಾಗಿರಲಿಲ್ಲ. ಖಂಡಿತವಾಗಿ ರಕ್ತಪಾತಕ್ಕೆ ಪ್ರೇರೇಪಿಸುವಂತಹದು ಆಗಿರಲಿಲ್ಲ' ಎಂದು ತಿಳಿಸಿದರು.

'ಉದ್ವಿಗ್ನ ಸ್ಥಿತಿ: ಶೀಘ್ರ ವಿಶ್ವಸಂಸ್ಥೆ ಸಭೆ'

ವಿಶ್ವಸಂಸ್ಥೆ (ಪಿಟಿಐ): 'ಪಹಲ್ಗಾಮ್ ದಾಳಿ ಕೃತ್ಯದ ನಂತರದ ಸ್ಥಿತಿ ಚರ್ಚೆಗೆ ಶೀಘ್ರ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆ ನಡೆಯಲಿದೆ' ಎಂದು ಅಧ್ಯಕ್ಷ ಇವಾಂಜೆಲೊಸ್ ಸೆಕೆರಿಸ್ ತಿಳಿಸಿದರು. 'ಸಭೆ ನಡೆಸಲು ಮನವಿ ಬಂದಿದೆ. ಪರಿಸ್ಥಿತಿ ಗಮನಿಸುತ್ತಿದ್ದು, ಉಭಯ ರಾಷ್ಟ್ರಗಳ ಜೊತೆ ಸಂಪರ್ಕದಲ್ಲಿದ್ದೇವೆ. ಶೀಘ್ರ ಸಭೆ ನಡೆಯಲಿದೆ' ಎಂದು ಪ್ರತಿಕ್ರಿಯಿಸಿದರು.

ದಿನದ ಬೆಳವಣಿಗೆ...

- ಪಾಕ್ ಮೇಲೆ ಭಾರತ ದಾಳಿ ನಡೆಸಿದರೆ ಚೀನಾ ಜೊತೆಗೂಡಿ ಈಶಾನ್ಯ ರಾಜ್ಯದ ಅತಿಕ್ರಮಣಕ್ಕೆ ಮುಂದಾಗಬೇಕು ಎಂದು ಬಾಂಗ್ಲಾದ ಮಾಜಿ ಸೇನಾಧಿಕಾರಿ, ಉಸ್ತುವಾರಿ ಸರ್ಕಾರದ ಮುಖ್ಯಸ್ಥ ಯೂನಸ್ ಅವರ ಆಪ್ತ ಸಲಹೆ ಮಾಡಿದ್ದಾರೆ. ಮೇಜರ್ ಜನರಲ್ (ನಿವೃತ್ತ) ಎಎಲ್‌ಎಂ ಫಜ್ಲುರ್ ರಹಮಾನ್ ಅವರ ಈ ಹೇಳಿಕೆಯಿಂದ ಮೊಹಮ್ಮದ್ ಯೂನುಸ್ ನೇತೃತ್ವದ ಸರ್ಕಾರ ಅಂತರ ಕಾಯ್ದುಕೊಂಡಿದೆ.
- ಸಿಂಧೂ ನದಿ ಒಪ್ಪಂದದ ಅಮಾನತು ನಡೆ ವಿರುದ್ಧ ಭಾರತಕ್ಕೆ ರಾಜತಾಂತ್ರಿಕ ನೋಟಿಸ್ ಜಾರಿಗೆ ಪಾಕಿಸ್ತಾನ ಚಿಂತನೆ ನಡೆಸಿದೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.
- ಪಹಲ್ಗಾಮ್‌ನ ಉಗ್ರರ ದಾಳಿ ಕೃತ್ಯವನ್ನು ಬ್ರಿಟನ್ ಸಂಸತ್ತು ಖಂಡಿಸಿದೆ. ಈ ಕುರಿತ ಚರ್ಚೆಯಲ್ಲಿ ಪಾಲ್ಗೊಂಡಿದ್ದ ವಿದೇಶಾಂಗ ಸಚಿವೆ ಲಾರ್ಡ್ ರೇ ಕಾಲಿನ್ಸ್, 'ಪರಿಸ್ಥಿತಿ ಶಮನಕ್ಕೆ ಎಲ್ಲರ ಒಗ್ಗೂಡುವಿಕೆ ಈಗಿನ ಅಗತ್ಯ' ಎಂದು ಹೇಳಿದರು.
- 'ಪಹಲ್ಗಾಮ್ ದಾಳಿ ತಡೆಯಬಹುದಾಗಿದ್ದ ಅವಘಡ. ಜನರು ನಿತ್ಯ ತೆರಳುತ್ತಿದ್ದ ಹಾದಿ, ತಾಣ ಆಗಿದ್ದರೂ ಭದ್ರತಾ ಸಿಬ್ಬಂದಿ ಇರಲಿಲ್ಲ' ಎಂದು ಹ್ಯೂಸ್ಟನ್‌ನ ಇಂಡೊ–ಅಮೆರಿಕ ಕಾಶ್ಮೀರಿ ಫೋರಂ ಸಂಯೋಜಕ ಡಾ. ವಿಜಯ್ ಸಜವಾಲ್ ಹೇಳಿದರು.

ಪಾಕ್ ಪ್ರಧಾನಿಯ ಯೂಟ್ಯೂಬ್ ಚಾನೆಲ್ ನಿರ್ಬಂಧ

ನವದೆಹಲಿ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರ ಯೂಟ್ಯೂಬ್ ಚಾನೆಲ್ ಅನ್ನು ಭಾರತ ಶುಕ್ರವಾರ ನಿರ್ಬಂಧಿಸಿದೆ.

ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯ ಬಳಿಕ ಪಾಕಿಸ್ತಾನದ ವಿರುದ್ಧ ತೆಗೆದುಕೊಳ್ಳುತ್ತಿರುವ ನಿರ್ಬಂಧ ಕ್ರಮಗಳನ್ನು ಭಾರತ ಮುಂದುವರಿಸಿದೆ. ರಾಷ್ಟ್ರೀಯ ಭದ್ರತೆ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದಂತೆ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ.

ಭಾರತದ ಬಗ್ಗೆ 'ಸುಳ್ಳು, ಪ್ರಚೋದನಕಾರಿ ಮತ್ತು ಕೋಮು ಭಾವನೆ ಕೆರಳಿಸುವ' ಸುದ್ದಿಗಳನ್ನು ಪ್ರಸಾರ ಮಾಡಿದ ಆರೋಪದ ಮೇಲೆ ಪಾಕಿಸ್ತಾನದ 16 ಯೂಟ್ಯೂಬ್ ಚಾನೆಲ್‌ಗಳನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ನಿರ್ಬಂಧಿಸಿತ್ತು. ಗೃಹ ಸಚಿವಾಲಯದ ಶಿಫಾರಸಿನ ಮೇರೆಗೆ ಸರ್ಕಾರ ಈ ಕ್ರಮ ಕೈಗೊಂಡಿತ್ತು. ಅಲ್ಲದೆ, ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಸಂಬಂಧಿಸಿದಂತೆ ಬಿಬಿಸಿ ವರದಿಗಾರಿಕೆ ಬಗ್ಗೆಯೂ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

ಮುಸ್ಲಿಂ ಕುಟುಂಬದ ಮತಾಂತರ

ಮಥುರಾ (ಉತ್ತರ ಪ್ರದೇಶ) (ಪಿಟಿಐ): ನಗರದ ಜಮುನಾಪರ್ ಪ್ರದೇಶದ ಮುಸ್ಲಿಂ ಕುಟುಂಬವೊಂದರ ಎಂಟು ಸದಸ್ಯರು ಗುರುವಾರ ಹಿಂದೂ ಧರ್ಮ ಸ್ವೀಕರಿಸಿದರು.

ವೃಂದಾವನದ ಶ್ರೀ ಜಿ ವಾಟಿಕಾ ಕಾಲೊನಿಯ ಭಗವತ್ ಧಾಮ್ ಆಶ್ರಮದಲ್ಲಿ ಹಿಂದೂ ಯುವ ವಾಹಿನಿ ಆಯೋಜಿಸಿದ್ದ ಸಮಾರಂಭದಲ್ಲಿ ಈ ಮತಾಂತರ ಪ್ರಕ್ರಿಯೆ ನಡೆಯಿತು.

ಮತಾಂತರದ ನಂತರ 50 ವರ್ಷದ ಝಾಕೀರ್– ಜಗದೀಶ್, ಇವರ ಪತ್ನಿ ಗುಡ್ಡಿ– ಗುಡಿಯಾ, ಹಿರಿಯ ಮಗ ಅನ್ವರ್– ಸುಮಿತ್, ಕಿರಿಯ ಮಗ ರನ್ವಾರ್– ರಾಮೇಶ್ವರ್, ಸೊಸೆ ಸಬೀರಾ– ಸಾವಿತ್ರಿ ಮತ್ತು ಮೊಮ್ಮಕ್ಕಳಾದ ಸಬೀರ್, ಜೋಯಾ ಮತ್ತು ನೇಹಾ ಕ್ರಮವಾಗಿ ಶತ್ರುಘ್ನ, ಸರಸ್ವತಿ ಮತ್ತು ಸ್ನೇಹಾ ಎಂದು ತಮ್ಮ ಹೆಸರು ಬದಲಿಸಿಕೊಂಡರು.

ಶೇರ್‌ಗಢ ಪ್ರದೇಶದಿಂದ ವಲಸೆ ಬಂದಿರುವ ಜಗದೀಶ್ ಅವರು ಹಲವು ವರ್ಷಗಳಿಂದಲೂ ತಮ್ಮ ಮಾವನ ಮನೆಯಲ್ಲಿದ್ದು, ಬದುಕಿಗಾಗಿ ಅಂಗಡಿಯೊಂದನ್ನು ನಡೆಸುತ್ತಿದ್ದಾರೆ.

'ನಮ್ಮದು ಮೂಲತಃ ಗುರ್ಜರ್ ಸಮುದಾಯ. 3 ವರ್ಷಗಳಿಂದಲೂ ಮೂಲಕ್ಕೆ ಮರಳಲು ಚಿಂತಿಸುತ್ತಿದ್ದೆವು. ನಮ್ಮ ಪೂರ್ವಜರು ಹಿಂದೂಗಳಾಗಿದ್ದರು' ಎಂದು ಜಗದೀಶ್ ಮಾಧ್ಯಮದ ವರಿಗೆ ತಿಳಿಸಿದರು.

ಅಕ್ರಮ ವಾಸ ಗಡೀಪಾರಿಗೆ ಆಗ್ರಹ

ನವದೆಹಲಿ (ಪಿಟಿಐ): ಭಾರತದಲ್ಲಿ ಅಕ್ರಮವಾಗಿ ವಾಸಿಸುತ್ತಿರುವ ಪಾಕಿಸ್ತಾನದ ಪ್ರಜೆಗಳನ್ನು ಗಡೀಪಾರು ಮಾಡಬೇಕು ಎಂದು ವಿಶ್ವ ಹಿಂದೂ ಪರಿಷತ್ ಶುಕ್ರವಾರ ಆಗ್ರಹಿಸಿದೆ.

ರಾಷ್ಟ್ರೀಯ ಪೌರತ್ವ ನೋಂದಣಿ (ಎನ್‌ಆರ್‌ಸಿ) ಪ್ರಕ್ರಿಯೆ ಶೀಘ್ರ ಶುರು ಮಾಡಬೇಕು ಎಂದೂ ಇದೇ ಸಂದರ್ಭ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಅನೇಕ ವರ್ಷಗಳಿಂದ ಭಾರತದಲ್ಲಿರುವ ಪಾಕಿಸ್ತಾನದ ಪ್ರಜೆಗಳಲ್ಲಿ ಬಹುತೇಕರು ಆಧಾರ್, ಪಡಿತರ ಚೀಟಿ ಪಡೆದಿದ್ದಾರೆ. ಇವರನ್ನು ಪತ್ತೆ ಹಚ್ಚಿ ಗಡೀಪಾರು ಮಾಡಬೇಕು ಎಂದು ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಹೇಳಿದ್ದಾರೆ.

ಮತಾಂತರ ನಿಷೇಧ ಕಾಯ್ದೆ: ವಿಚಾರಣೆಗೆ 'ಸುಪ್ರೀಂ' ಸಮ್ಮತಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶ ಸರ್ಕಾರ ಜಾರಿಗೊಳಿಸಿರುವ 'ಕಾನೂನುಬಾಹಿರ ಧಾರ್ಮಿಕ ಮತಾಂತರ ನಿಷೇಧ ತಿದ್ದುಪಡಿ ಕಾಯ್ದೆಯ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಶುಕ್ರವಾರ ಸಮ್ಮತಿಸಿದೆ.

ತಿದ್ದುಪಡಿಯ ಬಳಿಕ ಕಾಯ್ದೆಯ ಕೆಲ ನಿಬಂದನೆಗಳು ಅಸ್ಪಷ್ಟವಾಗಿವೆ. ಜೊತೆಗೆ, ವಾಕ್ ಮತ್ತು ಧಾರ್ಮಿಕ ಪ್ರಚಾರದ ಸ್ವಾತಂತ್ರ್ಯವನ್ನು ಉಲ್ಲಂಘಿಸುತ್ತದೆ ಎಂದು ಹಿರಿಯ ವಕೀಲ ಎಸ್. ಮುರಳೀಧರನ್ ಅವರು ಕೋರ್ಟ್ ಮೆಟ್ಟಿಲೇರಿದ್ದರು. ಈ ಅರ್ಜಿ ವಿಚಾರಣೆಗೆ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಹಾಗೂ ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್, ಕೆ.ವಿ ವಿಶ್ವನಾಥನ್ ಅವರಿದ್ದ ನ್ಯಾಯಪೀಠ ಒಪ್ಪಿಗೆ ನೀಡಿದೆ.

ಬಾಕಿ ಉಳಿದಿರುವ ಇತರ ಅರ್ಜಿಗಳೊಂದಿಗೆ ಮೇ 13ರಂದು ವಿಚಾರಣೆ ನಡೆಸುವುದಾಗಿ ಖನ್ನಾ ಅವರು ತಿಳಿಸಿದರು.

ಪಾಕ್‌ಗೆ ಗಡೀಪಾರಾಗಬೇಕಿದ್ದ ಕುಟುಂಬಕ್ಕೆ 'ಸುಪ್ರೀಂ' ರಕ್ಷಣೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಟುಂಬವೊಂದರ ಆರು ಮಂದಿಯ ಪೌರತ್ವದ ಪರಿಶೀಲನೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಅವರನ್ನು ಪಾಕಿಸ್ತಾನಕ್ಕೆ ಗಡೀಪಾರು ಮಾಡದಂತೆ ಅಧಿಕಾರಿಗಳಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಸೂಚನೆ ನೀಡಿದೆ.

ವೀಸಾ ಅವಧಿ ಮುಗಿದಿದ್ದರೂ ಭಾರತದಲ್ಲಿ ವಾಸವಿರುವ ಆರೋಪ ಅವರ ಮೇಲಿದೆ.

ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ಎನ್.ಕೋಟೀಶ್ವರ ಸಿಂಗ್ ಅವರು, ಯಾವುದೇ ಕಾಲಮಿತಿ ನಿಗದಿ ಮಾಡದೆ, ಆ ಕುಟುಂಬದ ಪಾಸ್‌ಪೋರ್ಟ್, ಆಧಾರ್, ಪಾನ್ ಕಾರ್ಡ್ ಮತ್ತಿತರ ಗುರುತಿನ ದಾಖಲೆಗಳನ್ನು ಪರಿಶೀಲಿಸುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಿರ್ದಿಷ್ಟ ನಿರ್ಧಾರ ಕೈಗೊಳ್ಳುವವರೆಗೂ ಅಧಿಕಾರಿಗಳು ಯಾವುದೇ ಬಲವಂತದ ಕ್ರಮ ಕೈಗೊಳ್ಳುವಂತಿಲ್ಲ. ಅರ್ಜಿದಾರರು ಅಂತಿಮ ತೀರ್ಪಿನಿಂದ ಅತೃಪ್ತರಾದಲ್ಲಿ ಜಮ್ಮು– ಕಾಶ್ಮೀರ ಮತ್ತು ಲಡಾಕ್ ಹೈಕೋರ್ಟ್ ಮೊರೆ ಹೋಗಬಹುದು ಎಂದು ನ್ಯಾಯಪೀಠ ತಿಳಿಸಿತು.

ಪಹಲ್ಗಾಮ್ ದಾಳಿ ನಂತರ ಕಾಶ್ಮೀರದಲ್ಲಿ ನೆಲಸಿರುವ ಕುಟುಂಬವು ಗಡೀಪಾರು ಸವಾಲು ಎದುರಿಸುತ್ತಿದೆ. ಕುಟುಂಬದ ವ್ಯಕ್ತಿಯೊಬ್ಬರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

ಭಾರತೀಯ ದಾಖಲೆಗಳಿದ್ದರೂ ಬಂಧಿಸಿ ಗಡೀಪಾರು ಮಾಡಲು ವಾಘಾ ಗಡಿಗೆ ಕೊಂಡೊಯ್ದಿದ್ದಾಗಿ ಅಹ್ಮದ್ ತಾರೀಕ್ ಭಟ್ ಮತ್ತು ಅವರ ಕುಟುಂಬದ ಐದು ಮಂದಿ ಆರೋಪಿಸಿ, ಕೋರ್ಟ್ ಮೆಟ್ಟಿಲೇರಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ, ವಿಜಯಪುರ ವಿಭಾಗ, ವಿಜಯಪುರ

ಸಂಖ್ಯೆ: ಕಕರಸಾ/ವಿವಿ/ಸಂಚಾರ/ವಾಣಿಜ್ಯ/284/2025–26 ದಿನಾಂಕ:28.04.2025

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 713/25/ಇ–01/25
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ವಿಜಯಪುರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿ ಇರುವ ಹಾಗೂ ಖಾಲಿಯಾಗಲಿರುವ ವಾಣಿಜ್ಯ ಮಳಿಗೆಗಳು / ತೆರೆದ ಸ್ಥಳಗಳು & ಉಪಹಾರ ಗೃಹಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಆನ್‌ಲೈನ್) ಮೂಲಕ ಟೆಂಡರ್ ಆಹ್ವಾನಿಸಲಾಗಿದ್ದು, ದಿನಾಂಕಗಳ ವಿವರ ಈ ಕೆಳಗಿನಂತೆ ಇರುತ್ತವೆ.

1) ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಲು ಕೊನೆಯ **ದಿನಾಂಕ: 21.05.2025** ರ 17.30 **ಗಂಟೆಯ ವರೆಗೆ.**

2) ಆನ್‌ಲೈನ್ ಮೂಲಕ ಇ–ಟೆಂಡರ್ ತೆರೆಯುವ **ದಿನಾಂಕ: 23.05.2025** ರಂದು ಬೆಳಿಗ್ಗೆ 10.00 **ಗಂಟೆಯ ನಂತರ.**

ಟೆಂಡರ್ ಪ್ರಕಟಣೆಯ ಪ್ರತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ರವರ ಹೊಸ ತಂತ್ರಾಂಶ https://kppp.karnataka.gov.in ದಿಂದ ಪಡೆಯಬಹುದಾಗಿದೆ ಅಥವಾ DTO ರವರ ದೂರವಾಣಿ ಸಂಖ್ಯೆ:7760992252 ಗೆ ಕರೆಮಾಡಿ ಪಡೆಯಬಹುದಾಗಿದೆ ಅಥವಾ ವಾಣಿಜ್ಯ ವಿಷಯ ನಿರ್ವಾಹಕರನ್ನು ಕಚೇರಿ ವೇಳೆಯಲ್ಲಿ ಬಂದು ವಿಚಾರಿಸಬಹುದಾಗಿದೆ. ವಿಳಾಸ: ಕ.ಕ.ರ.ಸಾ ನಿಗಮ ವಿಜಯಪುರ ವಿಭಾಗದ ವಿಭಾಗೀಯ ಕಚೇರಿ ಸಂಚಾರ ಶಾಖೆಯಲ್ಲಿ ಬಂದು ವಿಚಾರಿಸಬಹುದಾಗಿದೆ.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ಕ.ರ.ಸಾ ಸಂಸ್ಥೆ, ವಿಜಯಪುರ ವಿಭಾಗ

ವಾಸಾಸಂಇ/ವಿಜಯಪುರ/40/
ಕೆಎಸ್‌ಎಂಸಿಎ/2025–26

ಆಯುಕ್ತರ ಕಛೇರಿ
ಮಹಾನಗರಪಾಲಿಕೆ, ಬಳ್ಳಾರಿ–583101.

ದೂರವಾಣಿ ಸಂಖ್ಯೆ : 08392–273479 /278168
ಫ್ಯಾಕ್ಸ್ : 08392–273477
ವೆಬ್‌ಸೈಟ್ : www.bellarycity.gov.in
ಇ–ಮೇಲ್: bellarycommissioner@yahoo.co.in
ಗಡಿಗಿ ಚೆನ್ನಪ್ಪ ವೃತ್ತ (ರಾಯಲ್ ಸರ್ಕಲ್) ಬಳ್ಳಾರಿ–583101

ಸಂ:ಮನಪಾಬ/ಆಶಾ/ಘವನಿ/ ಕೋಟೇಶನ್/15ನೇ ಹಣಕಾಸು /01/2025–26 ದಿನಾಂಕ: 29.04.2025

ದರಪಟ್ಟಿ ಆಹ್ವಾನ ಪ್ರಕಟಣೆ

ಬಳ್ಳಾರಿ ಮಹಾನಗರಪಾಲಿಕೆಯ 15ನೇ ಹಣಕಾಸು ಆಯೋಗದ ಹಾಗೂ ವಿವಿಧ ಅನುದಾನಗಳಲ್ಲಿ ನೈರ್ಮಲ್ಯ ಮತ್ತು ಘನತ್ಯಾಜ್ಯ ವಸ್ತು ನಿರ್ವಹಣೆ ಘಟಕದಡಿಯಲ್ಲಿ 40ಹೆಚ್.ಪಿ/ಹೆಚ್ಚಿನ ಸಾಮಾರ್ಥ್ಯದ ಟ್ರಾಕ್ಟರ್ ಇಂಜಿನ್ ಖರೀದಿಸುವ ಕಾಮಗಾರಿ, ಎರಡು ಸಂಖ್ಯೆಯ 60ಹೆಚ್.ಪಿ/ಹೆಚ್ಚಿನ ಸಾಮರ್ಥ್ಯದ ಟ್ರಾಕ್ಟರ್ ಇಂಜಿನ್ ಜೊತೆಗೆ ಲೋಡರ್ ಖರೀದಿಸಲು, 16ಘ.ಮೀ ಸಾಮಾರ್ಥ್ಯದ ಹೊಸ ಎರಡು ಕಾಂಪ್ಯಾಕ್ಟರ್ ಖರೀದಿಸಲು,ಬಳ್ಳಾರಿ ಮಹಾನಗರ ಪಾಲಿಕೆಯ ಮನೆ ಮನೆ ತ್ಯಾಜ್ಯ ಸಂಗ್ರಹಣೆಗಾಗಿ 03 ಸಂಖ್ಯೆಯ ಆಟೋ ಟಿಪ್ಪರ್ ವಾಹನಗಳನ್ನು ಖರೀದಿಸಲು, ಬಳ್ಳಾರಿ ಮಹಾನಗರಪಾಲಿಕೆಗೆ ಅವಶ್ಯವಿರುವ 01 ಸಂಖ್ಯೆಯ 3000 ಲೀಟರ್ ಸಾಮರ್ಥದ ಜೆಟ್ಟಿಂಗ್ ಯಂತ್ರ ಖರೀದಿಸುವುದು, ಬಳ್ಳಾರಿ ಮಹಾನಗರಪಾಲಿಕೆಗೆ ಅವಶ್ಯವಿರುವ ಮಿನಿ ಎಕ್ಸಾಕವೇಟರ್ ಖರೀದಿಸುವುದು,ಪೌರ ಕಾರ್ಮಿಕರಿಗೆ ಸುರಕ್ಷತಾ ಸಾಮಾಗ್ರಿಗಳನ್ನು ಖರೀದಿಸುವುದು ಕಾಮಗಾರಿಗಳಿಗೆ ಕೊಟೇಶನ್‌ಗಳನ್ನು ಅರ್ಹ ಗುತ್ತಿಗೆದಾರರು/ಸರಬರಾಜುದಾರರು ಇ–ಮೇಲ್ ಮೂಲಕ ಅಥವಾ ಖುದ್ದಾಗಿ/ಪೋಸ್ಟ್ ಮೂಲಕ ದಿನಾಂಕ: 09.05.2025 ಸಂಜೆ 5.30 ಗಂಟೆಯೊಳಗಾಗಿ ಸಲ್ಲಿಸಬಹುದು. ತಾಂತ್ರಿಕ ನಿರ್ದಿಷ್ಟತೆಗಳಿಗಾಗಿ ಹಾಗೂ ಹೆಚ್ಚಿನ ವಿವರಗಳನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ದೂರವಾಣಿ ಸಂಖ್ಯೆ: 9620095318 ಗೆ ಕರೆ ಮಾಡಿ ಪಡೆಯಬಹುದು.

ಆಯುಕ್ತರು
ಬಳ್ಳಾರಿ ಮಹಾನಗರಪಾಲಿಕೆ ಬಳ್ಳಾರಿ

ಷೇರುಪೇಟೆ ವಹಿವಾಟು



ಎನ್ಎಸ್ಇ ನಿಫ್ಟಿ

ಹಿಂದಿನ ಅಂತ್ಯ	24,334
ಇಂದಿನ ಅಂತ್ಯ	24,346
▲	12
ದಿನದ ಗರಿಷ್ಠ	24,589

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹495
12 ಕ್ಕೆ	₹65
ಮೈಸೂರು	
100ಕ್ಕೆ	₹515

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹267-592
ದ್ವಿತಳಿ (ಬಿ.ವಿ)	₹333-690

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್ಎಸ್ಎಸ್-4	₹194
ಆರ್ಎಸ್ಎಸ್-5	₹189
ಗುಡ್ ಲಾಟ್	₹179

ವಿನಿಮಯ ದರ

$	ಡಾಲರ್	84.57
£	ಪೌಂಡ್	112.52
€	ಯುರೊ	95.95
¥	ಯೆನ್ (100ಕ್ಕೆ)	59

‘ಗ್ರ್ಯಾಚ್ಯುಟಿ ಮೊತ್ತ ಪಾವತಿ ಬಲವಂತದ ಕ್ರಮ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐದು ವರ್ಷಕ್ಕಿಂತ ಹೆಚ್ಚಿನ ಸೇವಾವಧಿ ಪೂರೈಸಿರುವ ತನ್ನ ಸಿಬ್ಬಂದಿಗೆ ಗ್ರ್ಯಾಚ್ಯುಟಿ ವಿಮಾ ಪ್ರೀಮಿಯಂ ಮೊತ್ತ ಪಾವತಿಸಿಲ್ಲ ಎಂಬ ಆಕ್ಷೇಪಕ್ಕೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಹೋಟೆಲ್ ಸಂಘಟನೆ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು’ ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಈ ಸಂಬಂಧ, ‘ಬೃಹತ್ ಬೆಂಗಳೂರು ಹೋಟೆಲ್ ಸಂಘಟನೆ’ಯ ಪ್ರಧಾನ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್, ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಪ್ರತಿನಿಧಿ ಜೆ. ಪ್ರದೀಪ್ ಕುಮಾರ್ ಮತ್ತು ಪೀಣ್ಯ ಇಂಡಸ್ಟ್ರೀಸ್ ಅಸೋಸಿಯೇಷನ್‌ನಿಂದ ಸಲ್ಲಿಸಲಾಗಿರುವ ರಿಟ್ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಬಿ.ಎಂ. ಶ್ಯಾಮ್ ಪ್ರಸಾದ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿಯನ್ನು ತಿದ್ದುಪಡಿ ಮಾಡಿ, ಅಖಿಲ ಭಾರತ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ (ಎಐಸಿಸಿಟಿಯು) ಮತ್ತು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಸಂಘಟನೆಗಳನ್ನೂ ಪ್ರತಿವಾದಿಗಳನ್ನಾಗಿ ಮಾಡಿ’ ಎಂದು ಅರ್ಜಿದಾರರಿಗೆ ಸೂಚಿಸಿರುವ ನ್ಯಾಯಪೀಠವು, ವಿಚಾರಣೆಯನ್ನು ಜೂನ್ 3ಕ್ಕೆ ಮುಂದೂಡಿದೆ.

‘ರಾಜ್ಯ ಸರ್ಕಾರ 2024ರ ಜನವರಿ 10ರಂದು ಹೊರಡಿಸಿರುವ ಅಧಿಸೂಚನೆ 14ನೇ ವಿಧಿಯ ಪ್ರಕಾರ ಸಂವಿಧಾನಬಾಹಿರ ಎಂದು ಘೋಷಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಸ್ವಾಗತ: ‘ಕರ್ನಾಟಕ ರಾಜ್ಯ ಕಡ್ಡಾಯ ಗ್ರ್ಯಾಚ್ಯುಟಿ ವಿಮಾ ನಿಯಮ–2024ರ ಅಡಿಯಲ್ಲಿ ರಾಜ್ಯ ಸರ್ಕಾರವು ಯಾವುದೇ ಬಲವಂತದ ಕ್ರಮ ಕೈಗೊಳ್ಳದಂತೆ ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣ ಉದ್ದಿಮೆಗಳಿಗೆ (ಎಂಎಸ್ಎಂಇ) ಹೈಕೋರ್ಟ್ ನೀಡಿರುವ ಮಧ್ಯಂತರ ಪರಿಹಾರ ಸ್ವಾಗತಾರ್ಹವಾಗಿದೆ. ಈ ವಲಯಕ್ಕೆ ತಾತ್ಕಾಲಿಕ ಪರಿಹಾರ ಸಿಕ್ಕಿದೆ’ ಎಂದು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ (ಕಾಸಿಯಾ) ಅಧ್ಯಕ್ಷ ಎಂ.ಜಿ. ರಾಜಗೋಪಾಲ್ ಪ್ರತಿಕ್ರಿಯಿಸಿದ್ದಾರೆ.

ಟನ್‌ಗೆ ₹30 ಸಾವಿರ ದರ: ಚಿಪ್ಪು ಸಿಗದೆ ಉದ್ಯಮಗಳಿಗೆ ಸಂಕಷ್ಟ

ತೆಂಗಿನ ಚಿಪ್ಪು ಧಾರಣೆ ಜಿಗಿತ

• ಎ.ಎಸ್. ರಮೇಶ್

ಅರಸೀಕೆರೆ (ಹಾಸನ ಜಿಲ್ಲೆ): ಮಾರುಕಟ್ಟೆಯಲ್ಲಿ ಕೊಬ್ಬರಿ, ತೆಂಗಿನಕಾಯಿ ಮತ್ತು ಎಳನೀರಿಗೆ ಉತ್ತಮ ಬೆಲೆ ಸಿಗುತ್ತಿದೆ. ಈ ನಡುವೆಯೇ ತೆಂಗಿನಕಾಯಿ ಚಿಪ್ಪಿಗೂ ಶುಕ್ರದೆಸೆ ಬಂದಿದ್ದು, ಬೆಳೆಗಾರರ ಮೊಗದಲ್ಲಿ ಮಂದಹಾಸ ಮೂಡಿದೆ.

ತಿಂಗಳ ಹಿಂದೆ ಪ್ರತಿ ಟನ್ ಚಿಪ್ಪಿಗೆ ₹26 ಸಾವಿರ ಇದ್ದ ಬೆಲೆಯು, ಈಗ ₹30 ಸಾವಿರಕ್ಕೆ ಮುಟ್ಟಿದೆ. ಮಾರುಕಟ್ಟೆಯಲ್ಲಿ ಚಿಪ್ಪುಗಳ ಕೊರತೆಯಾಗಿದೆ. ಹಾಗಾಗಿ, ಮತ್ತಷ್ಟು ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ ಎಂದು ವರ್ತಕರು ಹೇಳುತ್ತಾರೆ.

ಅಧಿಕ ಲಾಭದ ಆಸೆಯಿಂದಾಗಿ ಬೆಳೆಗಾರರು ಎಳನೀರು ಮಾರಾಟಕ್ಕೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಉಂಡೆ ಕೊಬ್ಬರಿ ತಯಾರಿಕೆಗೆ ಅಷ್ಟೊಂದು ಆಸಕ್ತಿ ತೋರಿಸುತ್ತಿಲ್ಲ. ಇದರಿಂದ ಚಿಪ್ಪಿನ ಕೊರತೆ ಎದುರಾಗಿದೆ. ಬೇಡಿಕೆ ಇರುವಷ್ಟು ಪ್ರಮಾಣದಲ್ಲಿ ಚಿಪ್ಪು ದೊರೆಯುತ್ತಿಲ್ಲ. ಇದರಿಂದ ಕಾರ್ಖಾನೆಗಳ ಮಾಲೀಕರು ಹಳ್ಳಿಗಳಿಗೆ ವಾಹನಗಳಲ್ಲಿ ಬಂದು ರೈತರ ಬಳಿ ‘ಚಿಪ್ಪು ಇದೆಯಾ’ ಎಂದು ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ.

ಪ್ರಮುಖವಾಗಿ ತೆಂಗಿನಕಾಯಿ ಚಿಪ್ಪನ್ನು ಇದ್ದಿಲು ತಯಾರಿಸಲು ಬಳಸಲಾಗುತ್ತದೆ. ಅತಿಹೆಚ್ಚು ತೆಂಗು ಬೆಳೆಯುವ ರಾಜ್ಯಗಳಾದ ತಮಿಳುನಾಡು ಮತ್ತು ಕೇರಳದಲ್ಲೂ ಚಿಪ್ಪಿಗೆ ಕೊರತೆ ಎದುರಾಗಿದೆ.

ಹಾಸನ ಜಿಲ್ಲೆಯ ಅರಸೀಕೆರೆ ಹೊರವಲಯದಲ್ಲಿ ತೆಂಗಿನ ಚಿಪ್ಪು ಬಳಸಿ ಇದ್ದಿಲು ತಯಾರಿಸಲಾಗುತ್ತಿದೆ ಪ್ರಜಾವಾಣಿ ಚಿತ್ರ

> **ತೆಂಗಿನ ಮರಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಕಪ್ಪುಹುಳು ಬಾಧೆಯಿಂದಾಗಿ ಇಳುವರಿ ಕಡಿಮೆಯಾಗಿದೆ. ಇದರಿಂದ ತೆಂಗಿನ ಉತ್ಪನ್ನಗಳಿಗೆ ಬೆಲೆ ಹೆಚ್ಚಳವಾಗುತ್ತಿದೆ**
> **ಮಲ್ಲಿಕಾರ್ಜುನ ಎಂ.ಸಿ.,** ಮೇಲೇನಹಳ್ಳಿ ತೆಂಗು ಚಿಪ್ಪಿನ ಘಟಕದ ಮಾಲೀಕ

> **ನಿತ್ಯ 2–3 ಟನ್ ಚಿಪ್ಪು ಸಿಗುತ್ತಿದೆ. ತಾಲ್ಲೂಕಿನಲ್ಲಿರುವ 3 ಕಾರ್ಖಾನೆಗಳು ಸ್ಥಗಿತಗೊಳ್ಳುವ ಹಂತದಲ್ಲಿವೆ. ಕೇರಳ, ತಮಿಳುನಾಡಿನಲ್ಲೂ ಕೆಲವು ಕಾರ್ಖಾನೆ ಸ್ಥಗಿತವಾಗಿವೆ**
> **ನಟರಾಜು ಪೊನ್ನಸಮುದ್ರ,** ಬೊಮ್ಮಲಿಂಗೇಶ್ವರ ಫ್ಯಾಕ್ಟರಿ ಮಾಲೀಕ

ಹೊರ ರಾಜ್ಯಗಳಲ್ಲಿ ಸಿಗುವ ಚಿಪ್ಪಿನಿಂದ ತಯಾರಿಸುವ ಇದ್ದಿಲಿನಲ್ಲಿ ಇಂಗಾಲದ ಪ್ರಮಾಣ ಶೇ 80ಕ್ಕಿಂತ ಕಡಿಮೆ ಇರುತ್ತದೆ. ರಾಜ್ಯದ ತೆಂಗಿನಕಾಯಿ ಚಿಪ್ಪು ಬಳಸಿ ತಯಾರಿಸುವ ಇದ್ದಿಲಿನಲ್ಲಿ ಶೇ 95ರಷ್ಟು ಪ್ರಮಾಣದಲ್ಲಿ ಇಂಗಾಲದ ಅಂಶ ಇರುತ್ತದೆ. ಹಾಗಾಗಿ, ರಾಜ್ಯದ ಚಿಪ್ಪಿಗೆ ಹೊರರಾಜ್ಯಗಳಲ್ಲಿ ಬೇಡಿಕೆ ಹೆಚ್ಚಳವಾಗಿದೆ.

ಸ್ಥಳೀಯ ತೆಂಗಿನ ಚಿಪ್ಪು ಬಳಸಿ ತಯಾರಿಸುವ ಇದ್ದಿಲಿಗೆ ತಮಿಳುನಾಡು, ಕೇರಳ, ಗುಜರಾತ್, ರಾಜಸ್ಥಾನದ ಕಾರ್ಖಾನೆಗಳಲ್ಲಿ ಅಧಿಕ ಬೇಡಿಕೆ ಇದೆ. ಹೀಗಾಗಿ, ಇಲ್ಲಿನ ತೆಂಗಿನಕಾಯಿ ಚಿಪ್ಪಿಗೆ ಅಧಿಕ ಬೆಲೆಯೂ ಸಿಗುತ್ತಿದೆ.

ಮುಂಗಾರು ಮಳೆ ನಂತರ ತೆಂಗಿನ ಮರಗಳಲ್ಲಿ ಉತ್ತಮ ಫಸಲು ಬಂದು ಬೆಳೆಗಾರರು ಕೊಬ್ಬರಿ ತಯಾರಿಕೆಗೆ ಒತ್ತು ನೀಡಿದ ರಷ್ಟೇ ತೆಂಗಿನಕಾಯಿ ಚಿಪ್ಪಿನ ಬೆಲೆ ಕಡಿಮೆಯಾಗಬಹುದು. ಇಲ್ಲವಾದರೆ ಮತ್ತಷ್ಟು ದರ ಹೆಚ್ಚಳವಾಗಲಿದೆ ಎಂಬುದು ವರ್ತಕರ ಅಭಿಪ್ರಾಯ.

ವಿವಿಧ ಉತ್ಪನ್ನ ತಯಾರಿಕೆಗೆ ಬಳಕೆ

ಗಾತ್ರಕ್ಕೆ ಅನುಗುಣವಾಗಿ ಇದ್ದಿಲನ್ನು ಚೆನ್ನಾಗಿ ತೊಳೆದು ಒಣಗಿಸಿ ಪ್ಯಾಕಿಂಗ್ ಮಾಡಿ ಹೊರ ರಾಜ್ಯಗಳಿಗೆ ಕಳುಹಿಸಲಾಗುತ್ತದೆ. ವಾಟರ್ ಪೇಂಟ್, ಸೌಂದರ್ಯ ವರ್ಧಕಗಳ ತಯಾರಿಕೆಗೆ ತೆಂಗಿನಕಾಯಿ ಚಿಪ್ಪಿನ ಪೌಡರ್ ಬಳಸುತ್ತಾರೆ. ಈ ಇದ್ದಿಲನ್ನು ನೀರು ಫಿಲ್ಟರ್‌ಗಳ ತಯಾರಿಕೆಗೂ ಬಳಸಲಾಗುತ್ತಿದೆ ಎನ್ನುತ್ತಾರೆ ಉದ್ಯಮಿಗಳು.

ಸುದ್ದಿ 2 ನಿಮಿಷ

ಐಒಬಿಗೆ ₹1,051 ಕೋಟಿ ಲಾಭ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಓವರ್‌ಸೀಸ್ ಬ್ಯಾಂಕ್‌ನ (ಐಒಬಿ) ನಿವ್ವಳ ಲಾಭದಲ್ಲಿ ಶೇ 30ರಷ್ಟು ಏರಿಕೆಯಾಗಿದೆ.

ಈ ತ್ರೈಮಾಸಿಕದಲ್ಲಿ ₹1,051 ಕೋಟಿ ನಿವ್ವಳ ಲಾಭ ಗಳಿಸಲಾಗಿದೆ. 2023–24ನೇ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹808 ಕೋಟಿ ಲಾಭ ಗಳಿಸಿತ್ತು. ವಸೂಲಾಗದ ಸಾಲದ ಪ್ರಮಾಣ ಇಳಿಕೆ ಮತ್ತು ಬಡ್ಡಿ ವರಮಾನ ಹೆಚ್ಚಳದಿಂದಾಗಿ ಲಾಭದ ಪ್ರಮಾಣವು ಏರಿಕೆಯಾಗಿದೆ ಎಂದು ಬ್ಯಾಂಕ್, ಷೇರುಪೇಟೆಗೆ ಶುಕ್ರವಾರ ತಿಳಿಸಿದೆ.

ಒಟ್ಟು ವರಮಾನ ₹9,215 ಕೋಟಿಯಾಗಿದೆ. ಬಡ್ಡಿ ವರಮಾನ ₹7,634 ಕೋಟಿಯಾಗಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 3.10ರಿಂದ ಶೇ 2.14ಕ್ಕೆ ಇಳಿದಿದೆ. ನಿವ್ವಳ ಎನ್‌ಪಿಎ ಶೇ 0.57ರಿಂದ ಶೇ 0.37ಕ್ಕೆ ತಗ್ಗಿದೆ. ಬ್ಯಾಂಕ್‌ನ ಸಮರ್ಪಕ ಬಂಡವಾಳ ಅನುಪಾತವು (ಸಿಎಆರ್) ಶೇ 19.74ರಷ್ಟು ಆಗಿದೆ.

2024–25ನೇ ಪೂರ್ಣ ಆರ್ಥಿಕ ವರ್ಷದ ನಿವ್ವಳ ಲಾಭದಲ್ಲಿ ಶೇ 26ರಷ್ಟು ಏರಿಕೆಯಾಗಿದೆ. ಒಟ್ಟು ₹3,335 ಕೋಟಿ ಆಗಿದೆ. ಒಟ್ಟು ವರಮಾನ ₹33,676 ಕೋಟಿಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಔಡಿ ಕಾರಿನ ಬೆಲೆ ಶೇ 2ರಷ್ಟು ಏರಿಕೆ

ನವದೆಹಲಿ (ಪಿಟಿಐ): ಜರ್ಮನಿಯ ಐಷಾರಾಮಿ ಕಾರು ತಯಾರಿಕಾ ಕಂಪನಿ ಔಡಿ, ತನ್ನ ಎಲ್ಲಾ ಮಾದರಿಯ ಕಾರಿನ ದರವನ್ನು ಶೇ 2ರಷ್ಟು ಹೆಚ್ಚಿಸಿದೆ. ಈ ಪರಿಷ್ಕೃತ ದರವು ಮೇ 15ರಿಂದ ಜಾರಿಗೆ ಬರಲಿದೆ.

ವಿನಿಮಯ ದರ ಏರಿಕೆ ಮತ್ತು ತಯಾರಿಕಾ ವೆಚ್ಚದಲ್ಲಿ ಹೆಚ್ಚಳಗೊಂಡಿದೆ. ಇದನ್ನು ಸರಿದೂಗಿಸಲು ದರ ಏರಿಕೆ ಮಾಡುವ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಔಡಿ ಇಂಡಿಯಾ ಮುಖ್ಯಸ್ಥ ಬಲ್ಬೀರ್ ಸಿಂಗ್ ಧಿಲ್ಲೋನ್ ಶುಕ್ರವಾರ ತಿಳಿಸಿದ್ದಾರೆ.

ಎ4, ಕ್ಯೂ5, ಕ್ಯೂ7 ಮತ್ತು ಆರ್‌ಎಸ್ ಇ–ಟ್ರೋನ್ ಜಿಟಿ ಸೇರಿ ವಿವಿಧ ಶ್ರೇಣಿಯ ಕಾರುಗಳನ್ನು ಕಂಪನಿಯು, ಭಾರತದಲ್ಲಿ ಮಾರಾಟ ಮಾಡುತ್ತದೆ.

ತಯಾರಿಕಾ ಚಟುವಟಿಕೆ ಸದೃಢ

ನವದೆಹಲಿ (ಪಿಟಿಐ): ಏಪ್ರಿಲ್ ತಿಂಗಳಲ್ಲಿ ದೇಶದ ತಯಾರಿಕಾ ವಲಯದ ಪ್ರಗತಿಯು 10 ತಿಂಗಳ ಗರಿಷ್ಠ ಮಟ್ಟಕ್ಕೆ ದಾಖಲಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ವರದಿ ಶುಕ್ರವಾರ ತಿಳಿಸಿದೆ.

ಕಳೆದ ವರ್ಷದ ಜೂನ್ ಬಳಿಕ ಉತ್ಪಾದನೆಯಲ್ಲಿ ಅತಿಹೆಚ್ಚು ವೇಗ ಪಡೆದ ತಿಂಗಳು ಇದಾಗಿದೆ. ಹೊಸ ಆರ್ಡರ್‌ಗಳ ಹೆಚ್ಚಳವು ಇದಕ್ಕೆ ನೆರವಾಗಿದೆ ಎಂದು ಹೇಳಿದೆ. ಮಾರ್ಚ್‌ನಲ್ಲಿ ಸೂಚ್ಯಂಕವು 58.1 ದಾಖಲಾಗಿತ್ತು. ಏಪ್ರಿಲ್‌ನಲ್ಲಿ 58.2 ಆಗಿದೆ.

ಸೂಚ್ಯಂಕವು 50ರ ಮೇಲಿದ್ದರೆ ಬೆಳವಣಿಗೆಯು ಸದೃಢವಾಗಿದೆ ಎಂದರ್ಥ. 50ಕ್ಕಿಂತ ಕಡಿಮೆ ದಾಖಲಾಗಿದ್ದರೆ ಬೆಳವಣಿಗೆ ಕುಂಠಿತವಾಗಿದೆ ಎಂದು ಅರ್ಥೈಸಲಾಗುತ್ತದೆ.

ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಪ್ರಮುಖವಾಗಿ ಆಫ್ರಿಕಾ, ಏಷ್ಯಾ, ಯುರೋಪ್, ಪಶ್ಚಿಮ ಏಷ್ಯಾ ಮತ್ತು ಅಮೆರಿಕದಿಂದ ಹೊಸ ಆರ್ಡರ್‌ಗಳ ಸಂಖ್ಯೆ ಹೆಚ್ಚಳವಾಗಿದೆ. ಹೀಗಾಗಿ ವಲಯದ ಪ್ರಗತಿ ಏರಿಕೆ ಕಂಡಿದೆ ಎಂದು ತಿಳಿಸಿದೆ.

ಕಂಟೆಂಟ್ ಸೃಷ್ಟಿಕರ್ತರಿಗೆ ಹೆಚ್ಚಿನ ನೆರವು: ಯೂಟ್ಯೂಬ್

₹21 ಸಾವಿರ ಕೋಟಿ ಪಾವತಿ

ಮುಂಬೈ (ಪಿಟಿಐ): ‘ಭಾರತವು ಡಿಜಿಟಲ್ ಕಂಟೆಂಟ್ ಸೃಷ್ಟಿಕರ್ತರ ನೆಚ್ಚಿನ ತಾಣವಾಗಿದೆ. ಕಳೆದ ಮೂರು ವರ್ಷಗಳಲ್ಲಿ ಕಂಟೆಂಟ್ ಸೃಷ್ಟಿಕರ್ತರು, ಪಾಲುದಾರರು, ಮಾಧ್ಯಮ ಮತ್ತು ಮ್ಯೂಸಿಕ್ ಕಂಪನಿಗಳಿಗೆ ₹21 ಸಾವಿರ ಕೋಟಿ ಪಾವತಿಸಲಾಗಿದೆ’ ಎಂದು ಯೂಟ್ಯೂಬ್‌ನ ಏಷ್ಯಾ ಪೆಸಿಫಿಕ್ ವಿಭಾಗದ ಉಪಾಧ್ಯಕ್ಷ ಗೌತಮ್ ಆನಂದ್ ಹೇಳಿದ್ದಾರೆ.

ಇಲ್ಲಿ ನಡೆಯುತ್ತಿರುವ ಜಾಗತಿಕ ಶ್ರವಣ-ದೃಶ್ಯ ಮನರಂಜನೆ ಶೃಂಗ 2025ರಲ್ಲಿ (ವೇವ್ಸ್) ಪಿಟಿಐ ಸುದ್ದಿಸಂಸ್ಥೆ ಜೊತೆಗೆ ಮಾತನಾಡಿದ ಅವರು, ವಿಡಿಯೊಗಳನ್ನು ಸೃಷ್ಟಿಸಿ, ಅವುಗಳನ್ನು ಯೂಟ್ಯೂಬ್‌ನಲ್ಲಿ ಪ್ರಸಾರ ಮಾಡಿ ಹಣ ಗಳಿಸುವಂತಹ ಮಾರುಕಟ್ಟೆಯು ದೇಶದಲ್ಲಿ ವೇಗವಾಗಿ ಬೆಳೆಯುತ್ತಿದೆ ಎಂದು ಹೇಳಿದ್ದಾರೆ.

ಕಂಟೆಂಟ್ ಸೃಷ್ಟಿಕರ್ತರಿಗೆ ವಿಡಿಯೊಗಳ ಸೃಷ್ಟಿಗೆ ಅಗತ್ಯವಿರುವ ಎಲ್ಲಾ ನೆರವು ನೀಡಲು ಬದ್ಧ. ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ನೆರವು ಕೂಡ ಕಲ್ಪಿಸಲಾಗುವುದು. ಆ ಮೂಲಕ ಅವರ ಆದಾಯ ಸೃಷ್ಟಿಗೆ ಅಗತ್ಯವಿರುವ ಎಲ್ಲಾ ಸಹಕಾರ ನೀಡಲಾಗುವುದು ಎಂದು ಹೇಳಿದ್ದಾರೆ.

₹850 ಕೋಟಿ ಹೂಡಿಕೆ: ‘ಭಾರತದಲ್ಲಿರುವ ಕಂಟೆಂಟ್ ಸೃಷ್ಟಿಕರ್ತರು, ಕಲಾವಿದರು ಮತ್ತು ಮಾಧ್ಯಮ ಕಂಪನಿಗಳ ಬೆಳವಣಿಗೆಗೆ ಪೂರಕವಾಗಿ ಮುಂದಿನ ಎರಡು ವರ್ಷಗಳಲ್ಲಿ ₹850 ಕೋಟಿ ಬಂಡವಾಳ ಹೂಡಿಕೆಗೆ ನಿರ್ಧರಿಸಲಾಗಿದೆ’ ಎಂದು ಯೂಟ್ಯೂಬ್ ಸಿಇಒ ನೀಲ್ ಮೋಹನ್ ಹೇಳಿದ್ದಾರೆ.

ಭಾರತದಲ್ಲಿ ಕಳೆದ ವರ್ಷ ಯೂಟ್ಯೂಬ್‌ನಲ್ಲಿ 10 ಕೋಟಿಗೂ ಹೆಚ್ಚು ಚಾನೆಲ್‌ಗಳಿಂದ ಕಂಟೆಂಟ್ ಅಪ್‌ಲೋಡ್ ಮಾಡಲಾಗಿದೆ. ಈ ಪೈಕಿ 15 ಸಾವಿರ ಚಾನೆಲ್‌ಗಳು ಒಂದು ಕೋಟಿಗೂ ಹೆಚ್ಚು ಚಂದಾದಾರರನ್ನು ಹೊಂದಿವೆ ಎಂದು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸೆನ್ಸೆಕ್ಸ್, ನಿಫ್ಟಿ ಏರಿಕೆ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಏರಿಕೆಯಾಗಿವೆ.

ಅಮೆರಿಕ ಮತ್ತು ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವು ಫಲಪ್ರದವಾಗುವ ನಿರೀಕ್ಷೆಯಿದೆ. ಜಿಎಸ್‌ಟಿ ಸಂಗ್ರಹದಲ್ಲಿ ಏರಿಕೆಯಾಗಿದೆ. ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಒಳಹರಿವಿನ ಪ್ರಮಾಣ ಹೆಚ್ಚಳವಾಗಿದೆ. ಇದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದ್ದು, ಷೇರುಪೇಟೆ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 259 ಅಂಶ ಹೆಚ್ಚಳ ಕಂಡು, 80,501 ಅಂಶಗಳಲ್ಲಿ ವಹಿವಾಟು ಮುಕ್ತಾಯವಾಯಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 12 ಅಂಶ ಏರಿಕೆ ಕಂಡಿದ್ದು, 24,346 ಅಂಶಗಳಲ್ಲಿ ಸ್ಥಿರಗೊಂಡಿದೆ.

ಚಿನ್ನ, ಬೆಳ್ಳಿ ದರ ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಾಗಿದೆ.

ಸ್ಥಳೀಯ ಆಭರಣ ತಯಾರಕರಿಂದ ಬೇಡಿಕೆ ಹೆಚ್ಚಿದೆ. ಇದರಿಂದ ಬೆಲೆ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹1,080 ಹೆಚ್ಚಳವಾಗಿದ್ದು, ₹96,800ಕ್ಕೆ ಮಾರಾಟವಾಗಿದೆ. ಆಭರಣ ಚಿನ್ನದ (99.5 ಪರಿಶುದ್ಧತೆ) ದರವು ₹180 ಏರಿಕೆಯಾಗಿದ್ದು, ₹96,350 ಆಗಿದೆ.

ಪ್ರತಿ ಕೆ.ಜಿ ಬೆಳ್ಳಿ ದರ ₹1,600 ಹೆಚ್ಚಳವಾಗಿದ್ದು, ₹97,100 ಆಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ		ಗೊರಬಲು	17199-35669	ರಾಶಿ	42169-50569
ಚಾಲಿ	39999-44098	ರಾಶಿ	48536-57481	ತಟ್ಟಿಬೆಟ್ಟೆ	28089-32089
ಚಿಪ್ಪು	28089-32509	ಸರಕು	59000-95300	ಶಿರಸಿ	
ಕೋಕ	9099-19999	ಸಿದ್ದಾಪುರ		ಬೆಟ್ಟೆ	27599-39999
ಫ್ಯಾಕ್ಟರಿ	6099-25001	ಬಿಳಿಗೋಟು	24799-32939	ಬಿಳಿಗೋಟು	16499-33399
ಹೊಸಚಾಲಿ	38869-44149	ಚಾಲಿ	34689-42099	ಚಾಲಿ	35199-43899
ಶಿವಮೊಗ್ಗ		ಕೋಕ	12189-22699	ಕೆಂಪುಗೋಟು	12900-23799
ಬೆಟ್ಟೆ	53569-59299	ಕೆಂಪುಗೋಟು	18019-22601	ರಾಶಿ	42110-50009

Package Includes
• AIRFARES FROM BENGALURU TO NEW YORK - SAN FRANCISO TO BENGALURU
• INTERNAL FLIGHT - ORLANDO TO LAS VEGAS / LOS ANGELES
• ACCOMMODATION - 4 & 3* STAR CATEGORY HOTEL TWIN SHARING
• ALL MEALS AS PER ITINERARY
• ALL TRANSFER, SIGHT SEEING BY A/C COACH
• SIGHT SEEING AS PER THE ITINERARY INCLUDES ENTRY FEES
• SERVICES OF PROFESSIONAL TOUR MANAGER FROM BENGALURU
• TRAVEL INSURANCE UPTO AGE 60 YEARS • GST
Confirmed Group Departure Date 14th June
• UK & EUROPE • SINGAPORE MALAYSIA & THAILAND • BALI • VIETNAM & CAMBODIA • JAPAN • DUBAI • MUKTINATHA • AUSTRALIA & NEW ZEALAND • SRILANKA • LEH LADAKH • CHARDHAM YATRA BY HELICOPTER
Website : www.orchidtours.net

ದೆಹಲಿ: 500 ವಿಮಾನ ಸಂಚಾರ ವ್ಯತ್ಯಯ, ವಿದ್ಯುತ್ ಸ್ಥಗಿತ

ಮಳೆ: ಉತ್ತರ ಭಾರತದಲ್ಲಿ 7 ಜನ ಸಾವು

ನವದೆಹಲಿ (ಪಿಟಿಐ): ದೆಹಲಿ ಸೇರಿದಂತೆ ಉತ್ತರ ಭಾರತದ ಹಲವೆಡೆ ಶುಕ್ರವಾರ ಮುಂಜಾನೆ ಬಿರುಗಾಳಿ ಸಹಿತ ಧಾರಾಕಾರ ಮಳೆ ಸುರಿದಿದ್ದು, ಇದರಿಂದ ಉಂಟಾದ ಅವಘಡಗಳಲ್ಲಿ ಏಳು ಜನರು ಸಾವಿಗೀಡಾಗಿದ್ದಾರೆ.

ದೆಹಲಿ, ಗುರುಗ್ರಾಮ, ಫರೀದಾಬಾದ್ ಹಾಗೂ ಮಥುರಾ ಸೇರಿದಂತೆ ಪ್ರಮುಖ ನಗರಗಳ ರಸ್ತೆಗಳು ಮಳೆಯಿಂದಾಗಿ ಬಹುತೇಕ ಜಲಾವೃತಗೊಂಡು, ಮರಗಳು ಧರೆಗುರುಳಿದ ಕಾರಣ ತೀವ್ರ ಸಂಚಾರ ದಟ್ಟಣೆ ಉಂಟಾಗಿತ್ತು.

ದೆಹಲಿಯ ನಜಾಫಗಡದಲ್ಲಿ ಮನೆಯ ಮೇಲೆ ಮರವೊಂದು ಬಿದ್ದ ಪರಿಣಾಮ ಮನೆ ಕುಸಿದು ತಾಯಿ ಹಾಗೂ ಮೂವರು ಮಕ್ಕಳು ಸಾವಿಗೀಡಾಗಿದ್ದಾರೆ. ಮಹಿಳೆಯ ಪತಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಉತ್ತರ ಪ್ರದೇಶದಲ್ಲಿ ಪ್ರತ್ಯೇಕ ಘಟನೆಗಳಲ್ಲಿ, 17 ವರ್ಷದ ಬಾಲಕಿ ಸೇರಿದಂತೆ ಸಿಡಿಲು ಬಡಿದು ಮೂವರು ಮೃತಪಟ್ಟಿದ್ದಾರೆ.

ಬೆಳೆ ಹಾನಿ ವರದಿಗೆ ಯೋಗಿ ಆದೇಶ: ಉತ್ತರಪ್ರದೇಶದಲ್ಲಿ ಮಳೆಯಿಂದಾಗಿ ಹಲವೆಡೆ ಅವಘಡಗಳು ಸಂಭವಿಸುತ್ತಿದ್ದಂತೆ, ರಕ್ಷಣೆ ಮತ್ತು ಪರಿಹಾರ ಕಾರ್ಯಗಳನ್ನು ಕೂಡಲೇ ಕೈಗೊಳ್ಳುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು. ಬೆಳೆ ಹಾನಿ ಕುರಿತು ರಾಜ್ಯ ಸರ್ಕಾರಕ್ಕೆ ವಿವರವಾದ ವರದಿ ಸಲ್ಲಿಸುವಂತೆಯೂ ಅವರು ಆದೇಶಿಸಿದ್ದಾರೆ.

ಜಮ್ಮು–ಕಾಶ್ಮೀರದ ರಾಮಬನ ಜಿಲ್ಲೆಯ ಚಂಬಾ ಸೆರಿಯಲ್ಲಿ ಮಳೆಯಿಂದಾಗಿ ಮಣ್ಣು ಕುಸಿದಿದ್ದು, ಜಮ್ಮು– ಶ್ರೀನಗರ ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಲಾಗಿದೆ.

ಹಿಮಾಚಲ ಪ್ರದೇಶದ ಶಿಮ್ಲಾ ಮತ್ತು ಇತರ ಪ್ರದೇಶಗಳಲ್ಲಿ ಆಲಿಕಲ್ಲು ಸಹಿತ ಮಳೆ ಸುರಿದಿದೆ. ಹವಾಮಾನ ಇಲಾಖೆಯು ಮುಂದಿನ ಗುರುವಾರದವರೆಗೆ ಹಲವೆಡೆ ಆರೆಂಜ್ ಮತ್ತು ಯೆಲ್ಲೊ ಅಲರ್ಟ್ ಘೋಷಿಸಿದೆ.

ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಪಂಜಾಬ್ ಮತ್ತು ಹರಿಯಾಣದ ಅನೇಕ ಕಡೆ ತಾಪಮಾನವು ಕುಸಿದಿದೆ.

ವಿಮಾನ ಸಂಚಾರ ವ್ಯತ್ಯಯ: ದೆಹಲಿಯ ವಿಮಾನ ನಿಲ್ದಾಣದಲ್ಲಿ 500ಕ್ಕೂ ಹೆಚ್ಚು ವಿಮಾನಗಳ ಹಾರಾಟದಲ್ಲಿ ವ್ಯತ್ಯಯವಾಗಿದೆ. ಮೂರು ವಿಮಾನಗಳ ಮಾರ್ಗ ಬದಲಾಯಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ

ಭಾರಿ ಮಳೆಯಿಂದಾಗಿ ದೆಹಲಿ– ಗುರುಗ್ರಾಮ ಎಕ್ಸ್‌ಪ್ರೆಸ್ ವೇ ಶುಕ್ರವಾರ ಮುಂಜಾನೆ ಜಲಾವೃತಗೊಂಡಿತ್ತು ಪಿಟಿಐ ಚಿತ್ರ

ರೆಡ್ ಅಲರ್ಟ್ ಘೋಷಣೆ

ಮೂರು ಗಂಟೆಗಳಲ್ಲಿ 77 ಮಿ.ಮೀ. ಮಳೆ ಸುರಿದಿದ್ದು, ಹವಾಮಾನ ಇಲಾಖೆಯು ನಗರದಾದ್ಯಂತ ರೆಡ್ ಅಲರ್ಟ್ ಘೋಷಿಸಿದೆ. ಮುಂಜಾಗ್ರತಾ ಕ್ರಮ ಕೈಗೊಂಡು ಜಾಗರೂಕರಾಗಿರುವಂತೆ ಜನರಿಗೆ ಸೂಚನೆ ನೀಡಿದೆ.

ಮಳೆ ಅವಘಡಗಳ ಕುರಿತು ದೆಹಲಿ ಅಗ್ನಿಶಾಮಕ ದಳವು 3–4 ಗಂಟೆಗಳಲ್ಲಿ ಸುಮಾರು 100 ಕರೆಗಳನ್ನು ಸ್ವೀಕರಿಸಿದೆ. ಸಮಸ್ಯೆ ಬಗೆಹರಿಸಲು 150 ತ್ವರಿತ ಪ್ರತಿಕ್ರಿಯೆ ತಂಡಗಳನ್ನು ರಚಿಸಲಾಯಿತು ಎಂದು ಲೋಕೋಪಯೋಗಿ ಇಲಾಖೆ ತಿಳಿಸಿದೆ.

ಹಮ್‌ದರ್ದ್ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಲ್ಲ: ರಾಮದೇವ್



ನವದೆಹಲಿ (ಪಿಟಿಐ): ಹಮ್‌ದರ್ದ್ ಸಂಸ್ಥೆಯ ವಿರುದ್ಧ ಆಕ್ಷೇಪಾರ್ಹ, ನಿಂದನಾತ್ಮಕ ಹೇಳಿಕೆ ನೀಡುವುದಿಲ್ಲ ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಅಂಥ ಯಾವುದೇ ಪೋಸ್ಟ್ ಹಾಕುವುದಿಲ್ಲ ಎಂದು ಯೋಗಗುರು ರಾಮದೇವ್ ಅವರು ದೆಹಲಿ ಹೈಕೋರ್ಟ್‌ಗೆ ಶುಕ್ರವಾರ ತಿಳಿಸಿದರು.

ನ್ಯಾಯಮೂರ್ತಿ ಅಮೃತ್ ಬನ್ಸಾಲ್ ಅವರು, ಈ ಕುರಿತು ಪ್ರಮಾಣ ಪತ್ರ ಸಲ್ಲಿಸುವಂತೆ ರಾಮದೇವ್ ಪರ ವಕೀಲರಿಗೆ ತಿಳಿಸಿದರು. ಇದಕ್ಕೂ ಮೊದಲು ಮೇ 1ರಂದು ಅವರು, ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದ ವಿವಾದಾತ್ಮಕ ಅಂಶವನ್ನು ಅಳಿಸಿಹಾಕುವಂತೆ ಸೂಚಿಸಿದ್ದರು. ನಂತರ ಅರ್ಜಿಯ ವಿಚಾರಣೆಯನ್ನು ಮೇ 9ಕ್ಕೆ ಮುಂದೂಡಿದರು.

ವಿವಾದಾತ್ಮಕ ಹೇಳಿಕೆಗಳಿಗೆ ಸಂಬಂಧಿಸಿದಂತೆ ರಾಮದೇವ್ ಮತ್ತು ಅವರ ಪತಂಜಲಿ ಸಂಸ್ಥೆಯ ವಿರುದ್ಧ ಹಮ್‌ದರ್ದ್ ನ್ಯಾಷನಲ್ ಫೌಂಡೇಷನ್ ಆಫ್ ಇಂಡಿಯಾ ಕೋರ್ಟ್ ಮೆಟ್ಟಿಲೇರಿದೆ.

ಪತಂಜಲಿಯ ‘ಗುಲಾಬ್ ಶರ್ಬತ್’ ಜಾಹೀರಾತಿನಲ್ಲಿ, ಹಮ್‌ದರ್ದ್ ರೂಹ್ ಅಫ್ಜಾದಿಂದ ಸಂಪಾದಿಸಿದ ಹಣದಲ್ಲಿ ಮದರಸಾ ಮತ್ತು ಮಸೀದಿಗಳನ್ನು ನಿರ್ಮಿಸಲಾಗುತ್ತಿದೆ ಎಂಬುದಾಗಿ ಆರೋಪಿಸಲಾಗಿದೆ ಎಂದು ಹಮ್‌ದರ್ದ್ ಸಂಸ್ಥೆ ದೂರಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000 ರಿಂದ 20,000,ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 6366625808, 6366627808.

Wanted

ಶ್ರೀ ಶಕ್ತಿ ಹೆಲ್ತ್ ಕೇರ, ಶೇಷಾದ್ರಿಪುರಂ ಬೆಂಗಳೂರು, ರಾಜ್ಯದಾದ್ಯಂತ ತೆರೆಯಲಿರುವ ನಮ್ಮ ಶಾಖೆಗಳಿಗೆ ಹೆಲ್ಪರಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 25000/- ಸಂಪರ್ಕಿಸಿ: 7349494852

ವೈಯಕ್ತಿಕ

Change of Name

MANORANJAN ARAMANETHALAGUR S/O AL Manjappa Gowda Residing at SV Meadows 29th Cross, Balaji Layout Kaggadaspura Bangalore 560093. Have changed my name to Manoranjan Aramanethalagur Manjappa Gowda Vide Affidavit Date 29/4/2025 at Bangalore

ಪ್ರವಾಸ

Travel

9/5/25 ಶ್ರೀಶೈಲ ಮಂತ್ರಾಲಯ ಹೈದರಾಬಾದ್ 4/6/25 ತಮಿಳುನಾಡು 16/6/25 ಪುರಿ ಜಗನ್ನಾಥ ಜಾರ್ಖಂಡ್ ವೈದ್ಯನಾಥ ಕೊನಾರ್ಕ್ 26/6/25 ಗುಜರಾತ್, ದ್ವಾರಕ, ಪಟೇಲ್ ಪ್ರತಿಮೆ ಸೋಮನಾಥ ನಾಗೇಶ್ವರ 28/6/25 ಕಾಶಿ, ದೆಹಲಿ ಅಯೋಧ್ಯೆ 2/7/25 ಉಜ್ಜಯಿನಿ ಮಹಾಕಾಳೇಶ್ವರ, ಓಂಕಾರೇಶ್ವರ ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

DH Classifieds More value, more impact ಪ್ರಜಾವಾಣಿ
NAME CHANGE @50/-* PER WORDS
Book your Name change Ad in DH All Karnataka + Prajavani Bengaluru City All Days
Conditions apply
www.dhclassifieds.com BOOK NOW
For more details contact: 7795158424 9900428036

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು!
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277
Tanveer: +91 9886213331 | Anitha: +91 9900428036

12 ಸಾವಿರಕ್ಕೂ ಹೆಚ್ಚು ಯಾತ್ರಿಕರಿಂದ ದರ್ಶನ

ಬಾಗಿಲು ತೆರೆದ ಕೇದಾರನಾಥ

ಕೇದಾರನಾಥ (ಉತ್ತರಾಖಂಡ), (ಪಿಟಿಐ): ಹಿಮಾಲಯದ ಮಡಿಲಲ್ಲಿರುವ ಕೇದಾರನಾಥ ದೇಗುಲವನ್ನು ಶುಕ್ರವಾರ ತೆರೆದಿದ್ದು, 12 ಸಾವಿರಕ್ಕೂ ಹೆಚ್ಚು ಯಾತ್ರಿಕರು ದರ್ಶನ ಪಡೆದರು.

ಮುಂಜಾನೆ 5 ಗಂಟೆಗೆ ದೇಗುಲದ ದ್ವಾರ ತೆರೆಯುವ ಧಾರ್ಮಿಕ ವಿಧಿ-ವಿಧಾನಗಳು ಆರಂಭವಾದವು. ಏಳು ಗಂಟೆಗೆ ವಿಧ್ಯುಕ್ತವಾಗಿ ತೆರೆಯಲಾಯಿತು ಎಂದು ಬದರೀನಾಥ-ಕೇದಾರನಾಥ ದೇಗುಲ ಸಮಿತಿ (ಬಿಕೆಟಿಸಿ) ತಿಳಿಸಿದೆ.

11 ಸಾವಿರ ಅಡಿ ಎತ್ತರದಲ್ಲಿರುವ ದೇವಳವನ್ನು 108 ಟನ್ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ಇದಕ್ಕಾಗಿಯೇ ನೇಪಾಳ, ಥಾಯ್ಲೆಂಡ್, ಶ್ರೀಲಂಕಾ ಸೇರಿದಂತೆ ವಿವಿಧ ದೇಶಗಳಿಂದ ತರಹೇವಾರಿ ಪುಷ್ಪಗಳನ್ನು ತರಿಸಿಕೊಳ್ಳಲಾಗಿತ್ತು ಎಂದು ಬಿಕೆಟಿಸಿ ಮಾಧ್ಯಮ ವಕ್ತಾರ ಹರೀಶ್ ಗೌರ್ ತಿಳಿಸಿದ್ದಾರೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಪಾಲ್ಗೊಂಡಿದ್ದರು.

ಗಂಗೋತ್ರಿ, ಯಮುನೋತ್ರಿ ದೇಗುಲಗಳ ದ್ವಾರ ಏ.30ರಂದು ತೆರೆದಿದ್ದು, ಬದರೀನಾಥದ ಬಾಗಿಲು ಮೇ 4ರಂದು ತೆರೆಯಲಿದೆ.

ಚಾರ್ ಧಾಮ್ ಯಾತ್ರೆಯ ನಾಲ್ಕು ದೇಗುಲಗಳಲ್ಲಿ ಮೂರನೇ ದೇವಾಲಯವಾಗಿರುವ ಕೇದಾರನಾಥವು ಪ್ರಮುಖವಾದದ್ದು. ಅಪಾರ ಸಂಖ್ಯೆಯ ಭಕ್ತರನ್ನು ತನ್ನತ್ತ ಆಕರ್ಷಿಸುತ್ತಿದೆ.

ಕೇದಾರನಾಥನ ದರ್ಶನಕ್ಕಾಗಿ ಶುಕ್ರವಾರ ಜಮಾಯಿಸಿದ್ದ ಭಕ್ತಸಮೂಹ ಪಿಟಿಐ ಚಿತ್ರ

ತಿರುವನಂತಪುರದ ವಿಝಿಂಜಂ ಬಂದರು ಉದ್ಘಾಟಿಸಿದ ಪ್ರಧಾನಿ

‘ನವಯುಗದ ಅಭಿವೃದ್ಧಿ ಸಂಕೇತ’

ಪ್ರಜಾವಾಣಿ ವಾರ್ತೆ/ ಪಿಟಿಐ

ತಿರುವನಂತಪುರ: ದೇಶದ ಜಲ ಮಾರ್ಗದ ವ್ಯಾಪಾರಕ್ಕೆ ಹೆಚ್ಚಿನ ಬಲ ತುಂಬಲಿರುವ ತಿರುವನಂತಪುರದ ವಿಝಿಂಜಂ ಬಂದರನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ರಾಷ್ಟ್ರಕ್ಕೆ ಸಮರ್ಪಿಸಿದರು. ಈ ಮಹತ್ವಾಕಾಂಕ್ಷೆಯ ಯೋಜನೆಯನ್ನು ‘ನವಯುಗದ ಅಭಿವೃದ್ಧಿಯ ಸಂಕೇತ’ ಎಂದು ಬಣ್ಣಿಸಿದರು.

ಬಹುಕಾಲದಿಂದ ಪೂರ್ಣಗೊಳ್ಳಲು ಬಾಕಿ ಉಳಿದಿದ್ದ ಈ ಕನಸಿನ ಯೋಜನೆಯ ಶ್ರೇಯವನ್ನು ತನ್ನದಾಗಿಸಿಕೊಳ್ಳಲು ವಿವಿಧ ರಾಜಕೀಯ ಪಕ್ಷಗಳ ನಡುವಿನ ಪೈಪೋಟಿಗೆ ಉದ್ಘಾಟನಾ ಸಮಾರಂಭ ಸಾಕ್ಷಿಯಾಯಿತು.

ಈ ಯೋಜನೆಯು ‘ಇಂಡಿಯಾ’ ಒಕ್ಕೂಟದ ಕೆಲವು ನಾಯಕರಿಗೆ ನಿದ್ದೆಯಿಲ್ಲದ ರಾತ್ರಿಗಳನ್ನು ನೀಡಲಿದೆ ಎಂದು ಮೋದಿ ಹೇಳಿದರೆ, ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಯೋಜನೆಯನ್ನು ಸಿಪಿಎಂ ಸರ್ಕಾರದ ಸಾಧನೆ ಎಂದು ಹೇಳಿದರು. ಆದರೆ,

ಪ್ರಧಾನಿ ನರೇಂದ್ರ ಮೋದಿ, ಕೇರಳ ರಾಜ್ಯಪಾಲ ರಾಜೇಂದ್ರ ಅರ್ಲೇಕರ್, ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಮತ್ತು ಅದಾನಿ ಸಮೂಹದ ಅಧ್ಯಕ್ಷ ಗೌತಮ್ ಅದಾನಿ ಅವರು ವಿಝಿಂಜಂ ಬಂದರು ವೀಕ್ಷಿಸಿದರು —ಪಿಟಿಐ ಚಿತ್ರ

ಕೇರಳದ ಹಿಂದಿನ ಕಾಂಗ್ರೆಸ್ ಸರ್ಕಾರಗಳ ಕೊಡುಗೆಗಳ ಬಗ್ಗೆ ಅವರು ಯಾವುದೇ ಉಲ್ಲೇಖ ಮಾಡಲಿಲ್ಲ.

₹8,800 ಕೋಟಿ ಮೊತ್ತದ ಈ ಯೋಜನೆಯು ಮುಂದಿನ ದಿನಗಳಲ್ಲಿ ದೇಶದ ಜಲ ಮಾರ್ಗದ ವ್ಯಾಪಾರದಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಮಲಯಾಳದಲ್ಲಿ ತಮ್ಮ ಭಾಷಣ ಆರಂಭಿಸಿದ ಪ್ರಧಾನಿ ಹೇಳಿದರು.

‘ವಿಝಿಂಜಂ ಬಂದರು ಕೇರಳವನ್ನು ಜಾಗತಿಕ ಜಲ ಮಾರ್ಗದ ವ್ಯಾಪಾರದ ಪ್ರಮುಖ ಕೇಂದ್ರವನ್ನಾಗಿಸಲಿದೆ ಮತ್ತು ಭಾರತದ ಜಲ ಮಾರ್ಗದ ವ್ಯಾಪಾರ ವಲಯವನ್ನು ಹೊಸ ಎತ್ತರಕ್ಕೆ ಕೊಂಡೊಯ್ಯಲಿದೆ. ಬಂದರನ್ನು ಹೊಂದಿರುವ ನಗರಗಳು ವಿಕಸಿತ ಭಾರತದಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ವಿಕಸಿತ ಕೇರಳ ನಿರ್ಮಾಣದಲ್ಲಿ ನಾವು ಜತೆಯಾಗಿ ಕೆಲಸ ಮಾಡೋಣ’ ಎಂದರು.

ಈ ಬೃಹತ್ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ಅದಾನಿ ಸಮೂಹವನ್ನು ಶ್ಲಾಘಿಸಿದ ಮೋದಿ, ‘ಕಮ್ಯುನಿಸ್ಟ್ ಪಕ್ಷದ ಒಬ್ಬ ಸಚಿವರು (ಕೇರಳದ ಬಂದರು ಸಚಿವ ವಿ.ಎನ್ ವಾಸವನ್) ಕೂಡಾ ಈ ಯೋಜನೆಯ ಖಾಸಗಿ ಪಾಲುದಾರರ ಕೊಡುಗೆಗಳನ್ನು ಕೊಂಡಾಡಿದ್ದಾರೆ’ ಎಂದರು.

ಕೇರಳ ವಿಧಾನಸಭೆ ವಿರೋಧ ಪಕ್ಷದ ನಾಯಕ ವಿ.ಡಿ.ಸತೀಶನ್ ಅವರು ತಡವಾಗಿ ಆಹ್ವಾನ ನೀಡಿರುವುದನ್ನು ಪ್ರತಿಭಟಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿಲ್ಲ. ಈ ಬಂದರು ಯೋಜನೆ ಸಾಕಾರಗೊಳ್ಳಲು ಉಮ್ಮನ್ ಚಾಂಡಿ ನೇತೃತ್ವದ ಹಿಂದಿನ ಯುಡಿಎಫ್ ಸರ್ಕಾರ ನೀಡಿರುವ ಕೊಡುಗೆಗಳನ್ನು ಗುರುತಿಸದೇ ಇರುವುದಕ್ಕೆ ಅವರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆಂಧ್ರ ಪ್ರದೇಶಕ್ಕೆ ನೆರವು: ಪ್ರಧಾನಿ

₹58 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ

ಅಮರಾವತಿ (ಆಂಧ್ರ ಪ್ರದೇಶ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಅಮರಾವತಿಯನ್ನು ‘ರಾಜಧಾನಿ ನಗರ’ವನ್ನಾಗಿ ಅಭಿವೃದ್ಧಿಪಡಿಸುವುದೂ ಸೇರಿದಂತೆ ₹58 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳ ಉದ್ಘಾಟನೆ ಹಾಗೂ ಶಂಕುಸ್ಥಾಪನೆಯನ್ನು ಶುಕ್ರವಾರ ನೆರವೇರಿಸಿದರು.

ರಾಜಧಾನಿ ನಗರದಲ್ಲಿ ಮೂಲಸೌಕರ್ಯ ನಿರ್ಮಾಣ, ರಾಷ್ಟ್ರೀಯ ಹೆದ್ದಾರಿಗಳು, ರೈಲ್ವೆಗೆ ಸಂಬಂಧಿಸಿದ ನವೀಕರಣ ಮತ್ತು ರಕ್ಷಣಾ ಸಂಬಂಧಿತ ಯೋಜನೆಗಳು ಸೇರಿದಂತೆ ಒಟ್ಟು 94 ಯೋಜನೆಗಳು ಇದರಲ್ಲಿ ಒಳಗೊಂಡಿವೆ.

‘ಸುಮಾರು ₹60 ಸಾವಿರ ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಲಾಗಿದೆ. ಈ ಯೋಜನೆಗಳು ಕಾಂಕ್ರೀಟ್ ರಚನೆಗಳು ಮಾತ್ರ ಅಲ್ಲ. ಮಹತ್ವಾಕಾಂಕ್ಷೆಯ ‘ಸ್ವರ್ಣಾಂಧ್ರ’ ಮತ್ತು ಮತ್ತು ವಿಕಸಿತ ಭಾರತ ನಿರ್ಮಾಣಕ್ಕೆ ಭದ್ರ ತಳಹದಿಯೂ ಹೌದು’ ಎಂದು ಪ್ರಧಾನಿ ಬಣ್ಣಿಸಿದರು.

‘ಅಮರಾವತಿ ಕೇವಲ ಒಂದು ನಗರವಲ್ಲ. ಬದಲಾಗಿ, ಆಂಧ್ರ ಪ್ರದೇಶವನ್ನು ಅಭಿವೃದ್ಧಿ ಹೊಂದಿದ ರಾಜ್ಯವನ್ನಾಗಿ ಪರಿವರ್ತಿಸುವ ಒಂದು ಶಕ್ತಿ ಆಗಿದೆ. ಆಂಧ್ರ ಪ್ರದೇಶದ ಅಭಿವೃದ್ಧಿಯಲ್ಲಿ ಕೇಂದ್ರ ಸರ್ಕಾರವು ಕೈಜೋಡಿಸಲಿದೆ ಎಂಬ ಭರವಸೆಯನ್ನು ಈ ರಾಜ್ಯದ ಜನರಿಗೆ ನೀಡಲು ಬಯಸುತ್ತೇನೆ’ ಎಂದು ಹೇಳಿದರು.

ಅಮರಾವತಿ ನಗರ ನಿರ್ಮಾಣದ ಭಾಗವಾಗಿ ಪ್ರಧಾನಿ ಅವರು ₹49 ಸಾವಿರ ಕೋಟಿ ಮೊತ್ತದ 74 ಯೋಜನೆಗಳಿಗೆ ಶಂಕುಸ್ಥಾಪನೆ ನೆರವೇರಿಸಿದರು.

ಯೋಗ ದಿನ: ಜೂನ್ 21ರಂದು ಅಂತರ ರಾಷ್ಟ್ರೀಯ ಯೋಗ ದಿನವನ್ನು ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ಆಚರಿಸುವುದಾಗಿ ಪ್ರಧಾನಿ ಮೋದಿ ತಿಳಿಸಿದರು.

‘ಕ್ವಾಂಟಮ್ ವ್ಯಾಲಿ’ ಮುಂದಿನ ವರ್ಷ ಆರಂಭ

‘ಭಾರತದ ಅತ್ಯಾಧುನಿಕ ಮತ್ತು ಮೊಟ್ಟಮೊದಲ ಕ್ವಾಂಟಮ್ ವ್ಯಾಲಿ ಟೆಕ್ ಪಾರ್ಕ್’ 2026ರ ಜ.1ರಂದು ಕಾರ್ಯಾರಂಭ ಮಾಡಲಿದೆ ಎಂದು ಎನ್.ಚಂದ್ರಬಾಬು ನಾಯ್ಡು ಹೇಳಿದರು.

ಮುಖ್ಯಮಂತ್ರಿ ಅವರು ಈ ಯೋಜನೆಗೆ ಸಂಬಂಧಿಸಿದಂತೆ ತಮ್ಮ ನಿವಾಸದಲ್ಲಿ ಐಬಿಎಂ, ಟಿಸಿಎಸ್ ಮತ್ತು ಎಲ್ ಆ್ಯಂಡ್ ಟಿ ಕಂಪನಿಗಳ ಜತೆ ಒಪ್ಪಂದಕ್ಕೆ ಸಹಿ ಹಾಕಿದರು.

ಕ್ವಾಂಟಮ್ ವ್ಯಾಲಿ ಟೆಕ್ ಪಾರ್ಕ್‌ನಲ್ಲಿ ಐಬಿಎಂನ ಅತ್ಯಾಧುನಿಕ 156-ಕ್ಯೂಬಿಟ್ ಕ್ವಾಂಟಮ್ ಸಿಸ್ಟಮ್ ಸ್ಥಾಪನೆಯಾಗಲಿದೆ. ಇದು ದೇಶದಲ್ಲಿ ಸ್ಥಾಪಿಸಲಾಗುವ ಅತಿದೊಡ್ಡ ಕ್ವಾಂಟಮ್ ಕಂಪ್ಯೂಟಿಂಗ್ ವ್ಯವಸ್ಥೆ ಎನಿಸಲಿದೆ.

ಕೃಷಿಕರೊಂದಿಗಿನ ಸಭೆ ಮುಂದೂಡಿದ ಕೇಂದ್ರ ಸರ್ಕಾರ

ಚಂಡೀಗಢ (ಪಿಟಿಐ): ರೈತ ಮುಖಂಡರೊಂದಿಗೆ ಮೇ 4ರಂದು ನಡೆಸಲು ಉದ್ದೇಶಿಸಿದ್ದ ಸಭೆಯನ್ನು ಕೇಂದ್ರ ಸರ್ಕಾರ ಮುಂದೂಡಿದೆ.

ಪಂಜಾಬ್ ಸರ್ಕಾರದ ಪ್ರತಿನಿಧಿಗಳು ಸಹ ರೈತರೊಂದಿಗಿನ ಸಭೆಯಲ್ಲಿ ಭಾಗಿಯಾಗುವ ವಿಚಾರಕ್ಕೆ ಸಂಬಂಧಿಸಿದಂತೆ ಒಮ್ಮತ ಮೂಡದ ಕಾರಣ ಮುಂದೂಡಲಾಗಿದೆ ಎನ್ನಲಾಗಿದೆ.

ಕೇಂದ್ರ ಕೃಷಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಪೂರ್ಣ ಚಂದ್ರ ಕಿಶಾನ್ ಅವರು ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯ ರಹಿತ) ಮತ್ತು ಕಿಸಾನ್ ಮಜ್ದೂರ್ ಮೋರ್ಚಾಗೆ (ಕೆಎಂಎಂ) ಈ ಸಂಬಂಧ ಪತ್ರ ಬರೆದಿದ್ದಾರೆ.

ಪಂಜಾಬ್ ಸರ್ಕಾರದ ಪ್ರತಿನಿಧಿಗಳನ್ನು ಆಹ್ವಾನಿಸಿದರೆ ಸರ್ಕಾರದೊಂದಿಗಿನ ಮಾತುಕತೆಯನ್ನು ಬಹಿಷ್ಕರಿಸಲಾಗುವುದು ಎಂದು ರೈತ ಮುಖಂಡ ಜಗಜಿತ್ ಸಿಂಗ್ ಡಲ್ಲೇವಾಲ್ ಕೇಂದ್ರಕ್ಕೆ ಎಚ್ಚರಿಕೆ ನೀಡಿದ ಕೆಲವೇ ದಿನಗಳಲ್ಲಿ ಈ ಬೆಳವಣಿಗೆ ನಡೆದಿದೆ.

‘ಪ್ಯಾನ್ ಇಂಡಿಯಾ ಒಂದು ಪರಿಭಾಷೆಯಷ್ಟೆ’

‘ವೇವ್ಸ್’ನಲ್ಲಿ ಖುಷ್ಬೂ, ಅನುಪಮ್ ಖೇರ್, ನಾಗಾರ್ಜುನ, ಕಾರ್ತಿ ಸಂವಾದ

ಪ್ರಜಾವಾಣಿ ವಾರ್ತೆ

ಮುಂಬೈ: ಕನ್ನಡ, ತೆಲುಗು ಹಾಗೂ ತಮಿಳಿನಲ್ಲಿ ‘ಶಾಂತಿ ಕ್ರಾಂತಿ’ ಚಿತ್ರವನ್ನು ನಟ-ನಿರ್ದೇಶಕ ವಿ. ರವಿಚಂದ್ರನ್ ಮಾಡಲು ಹೊರಟಿದ್ದರು. ಅದು ಹಿಂದಿಗೂ ಡಬ್ ಆಗಿತ್ತು. ಆದರೆ, ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ಆಗೆಲ್ಲ ‘ಪ್ಯಾನ್ ಇಂಡಿಯಾ’ ಎಂಬ ಪರಿಭಾಷೆ ಇರಲಿಲ್ಲ. ಕನಸು ಅದೇ ಆಗಿತ್ತು ಎಂದು ನಟಿ ಖುಷ್ಬೂ ನೆನಪಿಸಿಕೊಂಡರು.

ಜಾಗತಿಕ ಶ್ರವಣ-ದೃಶ್ಯ ಮನರಂಜನೆ ಶೃಂಗದಲ್ಲಿ (ವೇವ್ಸ್) ಶುಕ್ರವಾರ ನಡೆದ ‘ಪ್ಯಾನ್ ಇಂಡಿಯಾ-ಭ್ರಮೆಯೋ, ಕ್ಷಣಭಂಗುರ ಭಾವವೋ?’ ಎಂಬ ವಿಷಯ ಕುರಿತ ಗೋಷ್ಠಿಯಲ್ಲಿ ಅವರು ಹೀಗೆ ಹೇಳಿದರು.

‘ಪುಷ್ಪ’ ಚಿತ್ರದ ಕಥಾನಕ ತೆಲುಗಿಗೆ ಹೊಸತೇನೂ ಆಗಿರಲಿಲ್ಲ. ಬಹುಶಃ ಮಾರುಕಟ್ಟೆ ತಂತ್ರದಿಂದಾಗಿ ಅದು ದೇಶ- ವಿದೇಶಗಳನ್ನು ತಲುಪಿತು. ಹೆಚ್ಚು ಹಣ ಬಾಚಿತು ಎಂದು ತೆಲುಗು ನಟ ನಾಗಾರ್ಜುನ ಅಭಿಪ್ರಾಯಪಟ್ಟರು. ಪಟ್ನಾದಲ್ಲಿ ಆ ಚಿತ್ರದ ಆಡಿಯೊ ಬಿಡುಗಡೆ ಮಾಡಿದ್ದನ್ನು ಖುಷ್ಬೂ ಸ್ಮರಿಸಿಕೊಂಡರು.

ತಮ್ಮ ಎಲ್ಲ ಸಿನಿಮಾಗಳೂ ಪ್ಯಾನ್ ಇಂಡಿಯಾ ಆಗಬೇಕೆಂದೇನೂ ಇಲ್ಲ. ನೆಲದ ಭಾಷೆಯ ಸಿನಿಮಾಗಳನ್ನು ಮಾಡಿದರೆ, ಅದನ್ನು ಎಲ್ಲರಿಗೂ ತಲುಪಿಸುವ ಪ್ರಯತ್ನ ಮಾಡಬಹುದು ಎಂದು ತಮಿಳು ನಟ ಕಾರ್ತಿ ಅಭಿಪ್ರಾಯಪಟ್ಟರು.

ಸಂವಾದದಲ್ಲಿ ನಟ ನಾಗಾರ್ಜುನ, ನಟಿ ಖುಷ್ಬೂ ಸುಂದರ್ —ಪಿಟಿಐ ಚಿತ್ರ

ಕೋವಿಡ್ ಕಾಲದಲ್ಲಿ ಎಲ್ಲ ಭಾಷೆಯ ಸಿನಿಮಾಗಳನ್ನೂ ಜನರು ನೋಡಿದ್ದರಿಂದ, ಹಿಂದಿ ಚಿತ್ರರಂಗದವರಿಗೆ ಇದ್ದ ಶ್ರೇಷ್ಠತೆಯ ದರ್ಪಕ್ಕೆ ಸೂಜಿಮೊನೆ ಚುಚ್ಚಿದಂತಾಯಿತು ಎಂದು ನಟ ಅನುಪಮ್ ಖೇರ್ ಹೇಳಿದರು.

‘ಕೆಜಿಎಫ್’ ಚಿತ್ರದ ನಾಯಕ ತಾಯಿಗೆ ಚಿನ್ನ ಕೊಡಿಸುವ ಕನಸನ್ನು ಬಾಲ್ಯದಲ್ಲೇ ಕಾಣುತ್ತಾನೆ. ಅದೇ ಮುಂದೆ ಅವನು ಚಿನ್ನದ ಗಣಿಗೇ ಕೈಹಾಕುವ ಕಥನವಾಗಿ ವಿಸ್ತರಣೆಗೊಳ್ಳುತ್ತದೆ. ನಮ್ಮ ಸಿನಿಮಾಗಳು ಮೂಲತಃ ಭಾವಪ್ರಧಾನವಾಗಿದ್ದರೆ ಅದೇ ದೊಡ್ಡ ಗೆಲುವಿಗೆ ದಾರಿ ಮಾಡಿಕೊಡಬಲ್ಲದೆನ್ನುವುದಕ್ಕೆ ಇದು ಒಂದು ಉದಾಹರಣೆ’ ಎಂದು ಖುಷ್ಬೂ ಮಾತು ಸೇರಿಸಿದರು.

ಹತ್ತಾರು ಜನರನ್ನು ಹೊಡೆಯುವ ನಾಯಕನ ಧೋರಣೆಗೆ ಭಾರತದಲ್ಲಿ ತರ್ಕದ ಅಗತ್ಯವೇ ಇಲ್ಲ ಎಂದು ನಾಗಾರ್ಜುನ ಹೇಳಿದರೆ, ಕುಟುಂಬವನ್ನು ರಕ್ಷಿಸುವ ನೈತಿಕ ಪ್ರಜ್ಞೆ ಅಲ್ಲಿ ಕೆಲಸ ಮಾಡುತ್ತದೆ ಎಂದು ಖುಷ್ಬೂ ಹೇಳಿದರು.

> **ನಮ್ಮಲ್ಲಿ ಸಿನಿಮಾ ನೋಡುವವರ ಸಂಖ್ಯೆ ಶೇ 2 ಮಾತ್ರ. ಒಟಿಟಿಯಲ್ಲಿ ಸಿಗದ ಸಿನಿಮಾಗಳನ್ನು ನೋಡಲು ಚಿತ್ರಮಂದಿರಕ್ಕೆ ಜನರನ್ನು ಕರೆತರುವ ದಾರಿ ಹುಡುಕಬೇಕಷ್ಟೆ**
> **ಅಮೀರ್ ಖಾನ್,** ನಟ

‘ದೊಡ್ಡ ಕನಸನ್ನೇ ಕಾಣಿರಿ’

‘ನವೋದ್ಯಮಿಗಳ ಕನಸು ಯಾವಾಗಲೂ ದೊಡ್ಡದಾಗಿರಬೇಕು. ಸೋಲುಗಳು ಮೊದಲು ಎದುರಾದರೂ ಕೆಲ ಕಾಲದ ನಂತರ ಯಶಸ್ಸು ಸಿಕ್ಕೀತು. ಆಲೋಚನೆಗಳಲ್ಲಿ ಚಿಕ್ಕದು, ದೊಡ್ಡದು ಎಂದು ಇರುವುದಿಲ್ಲ. ಕೈಗೆ ಹೇಗೆ ಎಟುಕಿಸಿಕೊಳ್ಳುತ್ತೇವೆ ಎನ್ನುವುದಷ್ಟೆ ಮುಖ್ಯ’ ಎಂದು ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಶಾ ಕಿವಿಮಾತು ಹೇಳಿದರು.

‘ವೇವ್ಸ್’ನಲ್ಲಿ ‘ಸೃಜನಶೀಲತೆಯ ಪರಿಧಿ’ ಎಂಬ ವಿಷಯದ ಬಗ್ಗೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು

‘ಅಮೆರಿಕದ ಜಾರ್ಜ್ ಲ್ಯೂಕಸ್ ‘ಸ್ಟಾರ್ ವಾರ್ಸ್’ ಅನ್ನು ರಾಮಾಯಣದ ಆತ್ಮ ಇಟ್ಟುಕೊಂಡು ವಿಸ್ತರಿಸಿದರು. ಆ ಸರಣಿ ಚಿತ್ರಗಳೇ ಹೊಸ ಸಂಕಥನಗಳಾಗಿ ಬೆಳೆದವು’ ಎಂದು ಬಣ್ಣಿಸಿದರು.

ಸಿನಿಮಾಕ್ಕೆ ಬಳಸಿಕೊಳ್ಳದ ದೃಶ್ಯ ಸಂರಕ್ಷಿಸಿಡುವ ವ್ಯವಸ್ಥೆ ಅಭಿವೃದ್ಧಿ

‘ವೇವ್ಸ್’ ಶೃಂಗದಲ್ಲಿ ಕಂಡ ಕನ್ನಡಿಗರು

• ವಿಶಾಖ ಎನ್.

ಮುಂಬೈ: ‘ವೇವ್ಸ್’ನಲ್ಲಿ ‘ಭಾರತ್ ಪೆವಿಲಿಯನ್’ ಎಂಬ ವೇದಿಕೆ ಇದೆ. ಅಲ್ಲಿ ನವೋದ್ಯಮಗಳಿಗೆಂದೇ ಒಂದು ನಿರ್ದಿಷ್ಟ ಸ್ಥಳ. ಮನರಂಜನಾ ಮಾಧ್ಯಮಕ್ಕೆ ಸಂಬಂಧಿಸಿದಂತೆ ಹೊಸತನದ ಹುಡುಕಾಟದಲ್ಲಿ ತೊಡಗಿರುವ ಮನಸ್ಸುಗಳು ಅಲ್ಲಿವೆ. ಅಂತಹ ಮನಸ್ಸುಗಳಲ್ಲಿ ಕನ್ನಡದವರೂ ಕಂಡರು. ಒಂದೂವರೆ ದಶಕದ ಹಿಂದೆ ‘ಕಾರಂಜಿ’ ಕನ್ನಡ ಸಿನಿಮಾ ನಿರ್ದೇಶಿಸಿದ್ದ ಶ್ರೀಧರ್ ಈಗ ‘ವಿಷನ್ ಇಂಪ್ಯಾಕ್ಟ್’ ಎಂಬ ನವೋದ್ಯಮದ ಸಿಇಒ ಆಗಿ ಅಲ್ಲಿದ್ದಾರೆ.

ಈಗ ಸಿನಿಮಾಗಳನ್ನು ಅಗತ್ಯಕ್ಕಿಂತ ಅತಿ ಹೆಚ್ಚೇ ಚಿತ್ರೀಕರಿಸುವ ಪರಿಪಾಟವಿದೆ. ಚಿತ್ರೀಕರಿಸಿದ್ದರಲ್ಲಿ

ಮೂರನೇ ಒಂದು ಭಾಗವನ್ನಷ್ಟೆ ಸಿನಿಮಾಕ್ಕೆ ಬಳಸುವವರು ಹೆಚ್ಚು. ಬಾಕಿ ಉಳಿದ ಭಾಗಗಳನ್ನು ಒಂದಿಷ್ಟು ವರ್ಷ ಹಾರ್ಡ್ ಡಿಸ್ಕ್‌ನಲ್ಲಿ ಇಟ್ಟುಕೊಳ್ಳಬಹುದು. ಆಮೇಲೆ ಅವನ್ನು ಡಿಲೀಟ್ ಮಾಡದೇ ವಿಧಿಯಿಲ್ಲ. ಶ್ರೀಧರ್ ಅಂತಹ ದೃಶ್ಯಗಳನ್ನು ಸಂರಕ್ಷಿಸಿ ಇಡುವಂತಹ ಆನ್‌ಲೈನ್ ವ್ಯವಸ್ಥೆ ರೂಪಿಸಿದ್ದಾರೆ. ಅದರ ಪೇಟೆಂಟ್‌ಗೆ ಅರ್ಜಿಯನ್ನೂ ಸಲ್ಲಿಸಿದ್ದಾರೆ.

ಶ್ರೀಧರ್

ಮಹಾವೀರ್

